೪೯-೫೦
ಜುಲೈ-ಡಿಸೆಂ-೦೧
ಸುವರ್ಣ ಸಂಚಿಕೆ

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿ ತ್ರೈಮಾಸಿಕ

ನೋಮ್ ಚಾಮ್‌ಸ್ಕಿ
ಸೂಫೀ ವಿಚಾರಧಾರೆ
ಏಷ್ಯ, ಆಫ್ರಿಕಾ ಮತ್ತು ಮಧ್ಯ ಪ್ರಾಚ್ಯ ಕವಿತೆಗಳು
ಅಮರಾವತಿ ಕಥೆಗಳು
'ತಿಟ್ಹತ್ತಿ ತಿರುಗಿ...' ವಿಚಾರ ಸಂಕಿರಣ



ಇತ್ತೀಚೆಗಿನ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳು

ಶತಮಾನದ ಸಂಕಲನಗಳು

ಒಂದು ಸೆಟ್ಟಿನ ಮುಖಬೆಲೆ : ರೂ. ೧೪೫೦.೦೦

ಶತಮಾನದ ಕಾವ್ಯ : ಸಂ: **ಡಾ. ಎಚ್.ಎಸ್. ವೆಂಕಟೇಶಮೂರ್ತಿ** - ೨೫೦.೦೦
ಶತಮಾನದ ಸಣ್ಣಕಥೆ : ಸಂ: **ಬೊಳುವಾರು ಮಹಮದ್ ಕುಂಞ** - ೨೦೦.೦೦
ಶತಮಾನದ ಸಾಹಿತ್ಯ ವಿಮರ್ಶೆ :
ಸಂ: **ಡಾ. ಎಚ್.ಎಸ್. ರಾಘವೇಂದ್ರರಾವ್** - ೩೭೫.೦೦
ಶತಮಾನದ ಸಂಶೋಧನೆ : ಸಂ: **ಡಾ. ಎನ್.ಎಸ್. ತಾರಾನಾಥ್** - ೩೨೫.೦೦
ಶತಮಾನದ ಲಲಿತ ಪ್ರಬಂಧ : ಸಂ: **ಡಾ. ಗುರುಲಿಂಗ ಕಾಪಸೆ** - ೧೫೦.೦೦
ಶತಮಾನದ ಮಕ್ಕಳ ಸಾಹಿತ್ಯ : ಸಂ. **ಎನ್.ಎಸ್. ರಘುನಾಥ** - ೩೦೦.೦೦

ಸಾಲು ದೀಪಗಳು

ಮುಖಬೆಲೆ : ರೂ. ೩೭೫

ಸಂ : ಪ್ರೊ॥ ಜಿ. ಎಸ್. ಸಿದ್ಧಲಿಂಗಯ್ಯ / ಪ್ರೊ॥ ಎಂ. ಎಚ್. ಕೃಷ್ಣಯ್ಯ

Essays on Modern Kannada Literature

Rs. 200 / Dr. G.S. Amur

ಮಾರಾಟದ ನಿಯಮಗಳು

- ಸಾಲುದೀಪಗಳು ಹಾಗೂ ಶತಮಾನದ ಸಂಕಲನಗಳಿಗೆ ಶೇ. ೩೩ ರಿಯಾಯಿತಿ
- ಉಳಿದ ಎಲ್ಲ ಪ್ರಕಟಣೆಗಳಿಗೆ ಶೇ. ೫೦ ರಷ್ಟು ರಿಯಾಯಿತಿ ನೀಡಲಾಗುವುದು. (ಡಿಸೆಂಬರ್ ೩೧-೨೦೦೨ ರವರೆಗೆ ಮಾತ್ರ)

-ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಸಂಪಾದಕರು

ಪ್ರೊ॥ ವಿ. ಚಂದ್ರಶೇಖರ ನಂಗಲಿ

ಲಕ್ಷ್ಮೀಪತಿ ಕೋಲಾರ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಬೆಂಗಳೂರು

ANIKETHANA : A Literary Journal (Quarterly)
Edited by : Prof. V. Chandrashekhara Nangali
Lakshmipathi Kolara
Published by : Registrar, Karnataka Sahithya Academy
Kannada Bhavana, J.C. Road, Bangalore-2

Pages : xii + 184
Registration No. 45646/88

ಸಂಪುಟ : ೧೩
ಸಂಚಿಕೆ : ೧/೨

ಪ್ರಧಾನ ಸಂಪಾದಕರು
ಡಾ|| ಗುರುಲಿಂಗ ಕಾಪಸೆ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು - ೫೬೦ ೦೦೨

ಪ್ರಕಾಶಕರು
ವಿ. ಎಸ್. ಮಲ್ಲಿಕಾರ್ಜುನ ಸ್ವಾಮಿ
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨

ಬಿಡಿ ಪ್ರತಿ : ರೂ. ೧೫/-
ವಾರ್ಷಿಕ ಚಂದಾ : ರೂ. ೫೦/-
ಆಜೀವ ಚಂದಾ : ರೂ. ೨೦೦/-

ಮುಖಪುಟ ಕಲೆ : ಆದಿಮೂಲಂ
ಹಿಂಬದಿ ಚಿತ್ರಕಲೆ : ಜಿ. ಎಸ್. ಶೆಣೈ
ಕೃಪೆ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
ರಕ್ಷಾಪುಟ ವಿನ್ಯಾಸ : ರಾಥೋಡ್
ಅಕ್ಷರ ಜೋಡಣೆ : ಡಿಟಿಪಿ ಸರ್ವೀಸಸ್, ಕೋಲಾರ

ಲಕ್ಷ್ಮಿ ಮುದ್ರಣಾಲಯ
LAKSHMI MUDRANALAYA
೧೧೭/೨, ೫ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು-೧೮, ✆ : ೬೬೧೩೧೨೩, ೬೬೧೮೭೫೨

ಅಧ್ಯಕ್ಷರ ಮಾತು

ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ 'ಚಂದನ' ಎಂದು ಹೆಸರಿಟ್ಟು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಏಕಕಾಲಕ್ಕೆ ತ್ರೈಮಾಸಿಕ ಪ್ರಕಟಿಸಲು ಪ್ರಾರಂಭಿಸಿದರು.

ಅವರು 'ಚಂದನ'ದ ಮೊದಲ ಸಂಚಿಕೆಗೆ 'ಅಧ್ಯಕ್ಷರ ಮಾತು' ಬರೆಯುತ್ತ "ಕನ್ನಡದಲ್ಲಿ ನಡೆಯುವ ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ತತ್‌ಸಂಬಂಧಿಯಾದ ಚಟುವಟಿಕೆಗಳ ಪರಿಚಯವನ್ನು ಜನತೆಗೆ ಮಾಡಿಕೊಡುವ ಗುರಿಯನ್ನು 'ಚಂದನ' ಹೊಂದಿದೆ" ಎಂದು ಹೇಳಿದ್ದರು. 'ಚಂದನ'ದ ಪ್ರಥಮ ಸಂಚಿಕೆಯಲ್ಲಿ ಕನ್ನಡದ ಹಿರಿಯ ಲೇಖಕರ ಸೃಜನಶೀಲ ಬರವಣಿಗೆಗಳಿರುವುದನ್ನು ಕಾಣಬಹುದು. ಇಂಗ್ಲಿಷ್ 'ಚಂದನ'ದಲ್ಲಿ ಕನ್ನಡದ ಪ್ರಮುಖ ಲೇಖಕರ ಕವಿತೆ, ಕತೆ - ಇತ್ಯಾದಿ ಬರೆಹಗಳ ಅನುವಾದವಿದೆ. ಈ ಇಂಗ್ಲಿಷ್ ತ್ರೈಮಾಸಿಕ ಕನ್ನಡ ತ್ರೈಮಾಸಿಕದ ಅನುವಾದಿತ ಪ್ರತಿಯಲ್ಲ. ಅದಕ್ಕೆ ಸ್ವತಂತ್ರವಾದ ಅಸ್ತಿತ್ವವಿರುವುದನ್ನು ಕಾಣಬಹುದು. ಈ ಎರಡು ತ್ರೈಮಾಸಿಕಗಳು ಪ್ರಾರಂಭವಾದದ್ದು - ೧೯೮೪ರಲ್ಲಿ. ಈ ತ್ರೈಮಾಸಿಕಗಳು ಆಗ ಖಾಸಗಿ ಪ್ರಸಾರದ ಸ್ವರೂಪದಲ್ಲಿದ್ದರೂ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರ ಮಹತ್ವಾಕಾಂಕ್ಷೆಯಾದ ಯೋಜನೆಯದೆಂದು ಧಾರಾಳವಾಗಿ ಹೇಳಬಹುದು.

ಮುಂದೆ ನಾಲ್ಕು ವರ್ಷಗಳ ಅಂತರದಲ್ಲಿ ಡಾ॥ ಜಿ. ಎಸ್. ಶಿವರುದ್ರಪ್ಪನವರು ಅಧ್ಯಕ್ಷರಾದ ಮೇಲೆ ಈ ತ್ರೈಮಾಸಿಕಗಳಿಗೆ ಕ್ರಮಬದ್ಧ ನಿಯತಕಾಲಿಕೆಯ ಸ್ವರೂಪ ತಂದುಕೊಡಲು ಯತ್ನಿಸಿ, ಅದರಲ್ಲಿ ಯಶಸ್ಸನ್ನು ಪಡೆದರು. ಈಗ ಅದು 'ಅನಿಕೇತನ' ಎಂಬ ಹೆಸರನ್ನು ಪಡೆಯಿತು. 'ಅನಿಕೇತನ'ದ ಪ್ರಥಮ ಸಂಚಿಕೆಯಲ್ಲಿ "ಈ ವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಈ ಕನ್ನಡ ತ್ರೈಮಾಸಿಕವು 'ಚಂದನ' ಎಂಬ ಹೆಸರಿನಲ್ಲಿ ಪ್ರಕಟವಾಗುತ್ತಿತ್ತು. ಭಾರತ ವೃತ್ತಪತ್ರಿಕೆಗಳ ನೊಂದಾವಣೆ ಕಛೇರಿಯಿಂದ 'ಅನಿಕೇತನ' ಎಂಬ ಹೆಸರಿಗೆ ನೊಂದಾವಣೆ ದೊರೆತು, ಈಗ ಈ ಹೊಸ ಹೆಸರಿನೊಂದಿಗೆ ಈ ಸಂಚಿಕೆ ಪ್ರಕಟವಾಗುತ್ತಿದೆ" ಎಂದು ಸಂಪಾದಕರು ನಿವೇದಿಸಿಕೊಂಡಿದ್ದಾರೆ. ೧೯೮೮ರಲ್ಲಿ ಪ್ರಾರಂಭವಾದ ಈ 'ಅನಿಕೇತನ' ಈಗ ೪೮ ಸಂಚಿಕೆಗಳನ್ನು ಪ್ರಕಟಿಸಿ ಈಗ ೪೯-೫೦ ಸಂಯುಕ್ತ ಸಂಚಿಕೆ ಪ್ರಕಟಿಸುತ್ತಲಿದೆ.

ಮೂರು ವರ್ಷಕ್ಕೊಮ್ಮೆ ಅಕಾಡೆಮಿ ಬದಲಾವಣೆಯನ್ನು ಹೊಂದುವ ಪ್ರಕ್ರಿಯೆಯಲ್ಲಿ ಒಮ್ಮೊಮ್ಮೆ ತಡವಾಗಿ, ಸಂಯುಕ್ತ ಸಂಚಿಕೆಗಳಾಗಿ ಅದು ಪ್ರಕಟವಾಗುತ್ತಲೇ ಬಂದಿರುವುದು ಮಹತ್ವದ ಮಾತಾಗಿದೆ. ಕನ್ನಡದ ಸೃಜನಶೀಲ ಲೇಖನಗಳನ್ನೊಳಗೊಂಡ 'ಚಂದನ'ವು

‘ಅನಿಕೇತನ’ವಾಗಿ ಹೊಸತನವನ್ನು ಪಡೆದಾಗ ಅದರ ಧೋರಣೆಯಲ್ಲಿಯೂ ಬದಲಾವಣೆಯಾಗಿದ್ದುದನ್ನು ಕಾಣಬಹುದು. ಅದರ ಮುಖಪುಟದಲ್ಲಿಯೇ ಸೂಚಿತವಾದಂತೆ - ‘ಅನುವಾದ ಸಾಹಿತ್ಯಕ್ಕೆ ಮೀಸಲಾದ ಪತ್ರಿಕೆ’ ಅದಾಯಿತು. ಭಾರತೀಯ ಹಾಗೂ ಭಾರತೀಯೇತರ ಸಾಹಿತ್ಯದ ಅನುವಾದಗಳು ಅಲ್ಲಿರುವುದು ಕಂಡುಬರುತ್ತದೆ. ನಿಜವಾದ ಅರ್ಥದಲ್ಲಿ ಇದು ಮಹತ್ವದ ಕಾರ್ಯ ಮತ್ತು ಮಹತ್ವದ ಸಾಧನೆ.

ಆದರೆ ಕಾರಣಾಂತರಗಳಿಂದ ‘ಅನಿಕೇತನ’ ಕನ್ನಡ ತ್ರೈಮಾಸಿಕ ಅನುವಾದಕ್ಕಾಗಿಯೇ ಮೀಸಲಾಗಿ ಉಳಿಯಲಿಲ್ಲ. ಅನಿವಾರ್ಯವಾಗಿ ಸ್ವತಂತ್ರ ಲೇಖನಗಳು ಅದರಲ್ಲಿ ಸೇರಿಕೊಂಡವು. ಈಚೆಗಿನ ಅನಿಕೇತನಗಳಲ್ಲಿ ಕೆಲವು ವಿಚಾರ ಸಂಕಿರಣಗಳಲ್ಲಿ ಮಂಡಿಸಿದ - ಕನ್ನಡ ಸಾಹಿತ್ಯಕ್ಕೇ ಸಂಬಂಧಿಸಿದ - ಲೇಖನಗಳು ಸೇರ್ಪಡೆಯಾಗಿರುವುದನ್ನೂ ಗಮನಿಸಬಹುದು.

ಕನ್ನಡ ಸಾಹಿತ್ಯ ಪ್ರಾಚೀನ ಕಾಲದಿಂದಲೂ ಬೇರೆ ಬೇರೆ ಭಾಷೆಗಳಿಂದ ಪ್ರೇರಣೆ ಪಡೆಯುತ್ತಲೇ ಬಂದಿದೆ. ಹಾಗೆಯೇ ತನ್ನ ಮಹತ್ವದ ಕೃತಿಗಳ ಪ್ರಭಾವವನ್ನು ನೆರೆಯ ಭಾಷೆಗಳ ಮೇಲೆ ಉಂಟುಮಾಡಿದ ಉದಾಹರಣೆಗಳೂ ಇವೆ. ಇಪ್ಪತ್ತನೆಯ ಶತಮಾನದಲ್ಲಿ ಪಾಶ್ಚಾತ್ಯ ಭಾಷೆಗಳಿಂದ ವಿವಿಧ ರೀತಿಯಿಂದ ಪ್ರೇರಣೆಗಳನ್ನು ಅದು ಪಡೆದುಕೊಂಡಿದೆ. ಹಾಗಿದ್ದರೂ ತನ್ನತನವನ್ನು ಸದಾ ಉಳಿಸಿಕೊಂಡು ಬಂದಿದೆ. ಹಿಂದಿನ ಎಲ್ಲ ಶತಮಾನಗಳ ಸಾಧನೆಯನ್ನು ಮೀರಿಸುವಂತೆ ಕನ್ನಡ ಸಾಹಿತ್ಯ ೨೦ನೆಯ ಶತಮಾನದಲ್ಲಿ ವಿವಿಧ ಮುಖವಾಗಿ ಬೆಳೆದದ್ದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಭಾರತೀಯ ಇತರ ಭಾಷೆಗಳ ಸಾಹಿತ್ಯ ಸಾಧನೆಯೂ ಕೂಡ ಅಸಾಧಾರಣವಾಗಿರುವುದನ್ನು ನಾವಿಂದು ಕಾಣುತ್ತಿದ್ದೇವೆ.

ಇತರ ಭಾರತೀಯ ಭಾಷೆಗಳಲ್ಲಿ ನಡೆದ ಸಾಧನೆಯನ್ನು ಹಾಗೂ ಭಾರತೀಯೇತರ ಭಾಷೆಗಳ ಕೊಡುಗೆಯನ್ನು ನಾವು ಗಮನಿಸಬೇಕಾದುದು ಇಂದು ಅನಿವಾರ್ಯವಾಗಿದೆ. ಅವುಗಳನ್ನು ಮೂಲದಲ್ಲಿ ಓದುವುದು ಕಠಿಣ ಕೆಲಸ. ಉಭಯ ಭಾಷೆಗಳಲ್ಲಿ ಸಾಧನೆ ಮಾಡಿದವರು ಅನುವಾದಿಸಿ, ಕನ್ನಡಿಗರ ಜ್ಞಾನದ ಕ್ಷಿತಿಜವನ್ನು ವಿಸ್ತರಿಸುವ ಕಾರ್ಯ ನಡೆಯಬೇಕಾಗಿದೆ. ಹಾಗೆಯೇ ಕನ್ನಡ ಸಾಹಿತ್ಯದ ವೈಶಿಷ್ಟ್ಯವನ್ನು ಇಂಗ್ಲಿಷ್ ಭಾಷೆಯ ಮೂಲಕ ಅನ್ಯ ಭಾಷಿಕರಿಗೆ ತಿಳಿಸಿಕೊಡುವ ಕಾರ್ಯ ನಡೆಯಬೇಕಾಗಿದೆ. ಈ ಕಾರಣದಿಂದ ‘ಅನಿಕೇತನ’ದ ಕಾರ್ಯ ಮಹತ್ವದ್ದಾಗಿದೆಯೆಂದು ಹೇಳಬಹುದು.

೫೦ ಸಂಚಿಕೆಗಳನ್ನು ಪ್ರಕಟಿಸಿದ ‘ಅನಿಕೇತನ’ ತನ್ನ ಸುವರ್ಣ ಮಹೋತ್ಸವವನ್ನು ಯಾವ ಆಡಂಬರವಿಲ್ಲದೆಯೇ ಮಾಡುತ್ತಿದೆಯೆಂದು ಹೇಳಬಹುದು. ಇಷ್ಟು ಸಂಚಿಕೆಗಳು ಹೊರಬರಲು ಕಾರಣರಾಗಿರುವ ಎಲ್ಲ ಲೇಖಕರನ್ನು, ಆ ಆ ಕಾಲದ ಸಂಪಾದಕರನ್ನು ನೆನೆಯುವುದು ನಮ್ಮ ಕರ್ತವ್ಯವಾಗಿದೆ. ಅವರೆಲ್ಲರಿಗೆ ಸಾಹಿತ್ಯ ಅಕಾಡೆಮಿಯು ಕೃತಜ್ಞತೆಗಳನ್ನು ಸಲ್ಲಿಸುವುದರ ಜೊತೆಗೆ ಆಯಾ ಕಾಲದ ಅಧ್ಯಕ್ಷರುಗಳಿಗೆ ಧನ್ಯವಾದಗಳನ್ನು ಸಮರ್ಪಿಸುತ್ತಿದೆ.

ಗುರುಲಿಂಗ ಕಾಪಸೆ

ಸಹಜ ಸಾಮ್ಯದ ನೂರು ದಾರಿಗಳಲ್ಲಿ...

ಆದಿ ಮಾನವ ಅಂದು ಬೀಸಿದ ಮೊದಲ ಕಲ್ಲು ಹಸಿರು ನಳನಳಿಸುವ ಭೂಮಿಗೆ ನೆತ್ತರ ಹನಿಚೆಲ್ಲಿ, ಮುಂದುವರಿದು, ಇಂದಿಗೂ ಸಾಗುತ್ತಲೇ ಇದೆ. ಚರಿತ್ರೆಯಲ್ಲಿನ ಮನುಷ್ಯನ ಸಂಪತ್ತು - ಅಧಿಕಾರದ ದಾಹವೇ ಅದರ ಪಯಣದ ಚಾಲಕಶಕ್ತಿಯಾಗಿ ನೆತ್ತರದಾಹಕ್ಕೆ ಕೊನೆಯೇ ಇಲ್ಲವಾಗಿದೆ. ಅದೇ ಕಲ್ಲು ಅವಸ್ಥಾಂತರಗಳಲ್ಲಿ ಬಾಣವಾಗಿ, ಫಿರಂಗಿಯಾಗಿ, ಬಂದೂಕಾಗಿ, ಅಣುಬಾಂಬಾಗಿ ಕ್ಷಣ ನಿಲ್ಲದೆ ಆಧುನಿಕ ಮಾನವನ ವಿಲಕ್ಷಣ ಕ್ಷೋಭೆಯ ಚಿತ್ತದೇರನ್ನೇರಿ ಕಾಲವನ್ನೆ ಹಿಂದೆ ಸರಿಸುತ್ತ, ಕಾಲಾಂತಕ ಪ್ರಳಯದತ್ತ ಸಾಗುತ್ತಲೇ ಇದೆ ಆ ಕಲ್ಲು. ಮನುಷ್ಯನ ಹಿಂಸೆಯ ತತ್ವವೇ ಅದರ ಮೂಲ ಮನೋಧರ್ಮ. ತತ್ವಾಂಧತೆಯೇ ಅದರ ಶಕ್ತಿ. ನಿಸರ್ಗದ ಸಹಜ ಜೈವಿಕ ವಿವೇಕಕ್ಕೆ ಸೆಡ್ಡು ಹೊಡೆದು ಸಾಗುತ್ತಿರುವ ಈ ನೆತ್ತರದಾಹದ ಕಲ್ಲು ಏನೆಲ್ಲವನ್ನೂ ಗೆಲ್ಲಬೇಕೆಂಬ ಆಧುನಿಕ ಮನುಷ್ಯನ ನಿರರ್ಥಕ ಹಠದ ವಿಕೃತ ಪ್ರತೀಕವಾಗಿದೆ. ತರತಮ ವಿವೇಕವಿಲ್ಲದ ಈ ಪಾಷಾಣ ಆಯುಧ ಪ್ರಯೋಗಕ್ಕೊಳಪಡುವ ಹಾಗೂ ಪ್ರಯೋಗಿಸುವ ಇಬ್ಬರನ್ನೂ ಬಲಿ ಪಡೆಯದವರೆಗೂ ವಿರಮಿಸುವಂತಿಲ್ಲ. ಹುಸಿ ನಾಗರೀಕತೆಯ ಉತ್ತುಂಗಗಳನ್ನು ನಿರಾಲೋಚನೆಯಿಂದ ಕುಟ್ಟಿ ಕೆಡವಿದ ಅದು ಈಗ ಮರುಭೂಮಿಯಲ್ಲಿ ಬಾಂಬುಗಳ ಬೆಳೆ ತೆಗೆಯುತ್ತಿದೆ.

ಇನ್ನೂ ಅದರ ಪಯಣ ನಿಂತಿಲ್ಲ; ನಿಲ್ಲುವಂತೆಯೂ ಇಲ್ಲ. ಹೈಟೆಕ್ ತಂತ್ರಜ್ಞಾನ ಈ ಕಲ್ಲಿನ ಹರಿತ ಅಲಗಿಗೆ ಅಪಾಯಕಾರಿ ಸಾಣೆ ಹಿಡಿಯುತ್ತಿದೆ. ಸಣ್ಣ ಕಲ್ಲಿನ ಚೂರೊಂದು ಈಗ ತನ್ನ ಸೃಷ್ಟಿಕರ್ತನ ಎದುರೇ ದೈತ್ಯಾಕಾರದ ಭೀತಿ ಭೂತವಾಗಿ ಬಾಯ್ದೆರೆದು ನಿಂತು ಇಡೀ ಜೀವಸಂಕುಲದ ನೆತ್ತರ ಬಲಿ ಕೇಳುತ್ತಿದೆ. ಮನುಷ್ಯನಿಗೆ ಇನ್ನೆಲ್ಲಿಯ ನೆಮ್ಮದಿ, ಶಾಂತಿ? ತಾನೇ ಹೆಣೆದುಕೊಳ್ಳುತ್ತ ಬಂದ ವಿಷವ್ಯೂಹದೊಳಗೆ ಸ್ವಯಂಸೆರೆಯಾಗಿ ಬಿಡುಗಡೆಯ ದಾರಿಯೇ ಕಾಣದೆ ದಿಕ್ಕೆಟ್ಟವನಾಗಿದ್ದಾನೆ. ಮನುಷ್ಯನ ಪ್ರಾಕ್ತನ ಇತಿಹಾಸದಲ್ಲೆಂದೋ, ಯಾವ ಮಾನವ ಪ್ರಾಣಿಯೋ ಬೀಸಿದ ಕಲ್ಲೇ ಬೂಮ್‌ರಾಂಗ್ ಆಗಿ ಕವಿಕಾಣ್ಕೆಯಲ್ಲಿ ದುರಂತ ಭವಿಷ್ಯದ ಭಾಷ್ಯವಾಗಿ ಮೂಡಿ ಬಂದಿದೆ.

ಸತ್ಯದ ಬಹುಮುಖೀ ಆಯಾಮಗಳನ್ನು ಹೀಗೆ ಏಕಕಾಲದಲ್ಲೇ, ಅದರ ಕಾಲಾತೀತ ನೆಲೆಗಳಲ್ಲಿ ಹಿಡಿದ ಕವಿ ಅಜರ್‌ಬೈಜಾನಿನ ಅಲಿ ಕರೀಂ. ಕಲ್ಲಿನ ಯಾನದೊಂದಿಗೇ ಸಾಗಿಹೋಗುವ ಕವಿಯ ಈ ಬಗೆಯ ಆತಂಕ ಜೀವಸಂಕುಲದ ಜೀವದೊಟ್ಟಿಲಾಗಿರುವ ಈ ಭೂಮಾತೆಯ ಕಟ್ಟ ಕಡೆಯ ಸಂದೇಶದಂತಿದೆ. ಅದನ್ನು ಆಲಿಸುವ ಸಂಯಮವಿಲ್ಲದ ಕಿವುಡುತನ ನಮ್ಮ ನಾಗರಿಕವೆಂದು ಕರೆದುಕೊಳ್ಳುವ ಜಗತ್ತಿಗೆ ಎಂದೆಂದಿನಿಂದೋ ತಟ್ಟಿದ ಶಾಪವಾಗಿದೆ.

ಅಧಿಕಾರ ಪ್ರಧಾನ ಪದಾರ್ಥಮಯ ಜಗತ್ತಲ್ಲಿ ಅತ್ಯಾಧುನಿಕನಾಗಿರುವೆನೆಂಬ ಹುಸಿ ಹಮ್ಮಿನೊಂದಿಗೆ ಬೀಗುತ್ತಿರುವ ವೇಗಸಂಸ್ಕೃತಿಯ ಮನುಷ್ಯನ ಮನೋಧರ್ಮ ಮಾತ್ರ ಅಂಧಯುಗದಲ್ಲೇ ಕಾಲೂರಿ ಅಧಃಪಾತಾಳದತ್ತ ಕುಸಿಯುತ್ತಿದೆ. ಜೀವ ಸಂಕುಲವನ್ನಿಡೀ ಅದರ ಪಾಡಿಗೆ ಅದರ

ಸಹಜ ಬದುಕಿಗೆ ಬಿಟ್ಟು ತಾನೂ ನೆಮ್ಮದಿಯಿಂದ ಬದುಕುವ ನಿಜವಾದ ಸುಖಕ್ಕೆ ಎರವಾಗಿರುವ ಮನುಷ್ಯ ಅತ್ಯಂತ ಸರಳ ವಿವೇಕಗಳಿಂದ ಕೂಡ ಇಂದು ದೂರವಾಗಿದ್ದಾನೆ. ಮನುಷ್ಯನ ನಾಗರಿಕತೆಯಿಂದು ಯಾವ ಔನ್ನತ್ಯವನ್ನು ತಲುಪಿದೆಯೆಂದರೆ ಜಾಗತಿಕ ಮಟ್ಟದ ಮಾನವ ಹಕ್ಕುಗಳ ಚಳುವಳಿಯೊಂದೇ ನಮ್ಮನ್ನು ರಕ್ಷಿಸಬಲ್ಲದೆಂಬ ಅಭದ್ರ ಸ್ಥಿತಿ ಏರ್ಪಟ್ಟಿದೆ.ಬಹುಶಃ ಮನುಷ್ಯನನ್ನು ಮನುಷ್ಯನೇ ನಿರ್ದಯವಾಗಿ ಬೇಟೆಯಾಡುವ ಬರ್ಬರ ಇತಿಹಾಸ ಮತ್ತು ವರ್ತಮಾನ ಈ ಭೂಮಿಯ ಮೇಲಿನ ಬೇರ್‍ಯಾವ ಜೀವ ಪ್ರಭೇದದಲ್ಲೂ ಕಾಣಬರುವುದಿಲ್ಲ. ಜೀವಕೋಟಿಯಲ್ಲಿನ ಅತಿ ಹೆಚ್ಚು ಮೇಧಾವಿ, ಬುದ್ಧಿಜೀವಿ ಎನಿಸಿದ ಮನುಷ್ಯನ ಇವತ್ತಿನ ಪಾಡಿದು! ಕನಿಷ್ಟ ತಿಳುವಳಿಕೆಯ ಪಾಲಿಗೆ ಇದಕ್ಕಿಂತಲೂ ದುರಂತವೆಂಬುದಿದ್ದೀತೇ ? ಇದೆಂತಹ ವಿಪರ್ಯಾಸ ? ಈ ದಯನೀಯ ಸ್ಥಿತಿಯನ್ನು ನಾಗರಿಕವೆನ್ನಲಾದೀತೇ?

ಇವತ್ತಿನ ಮನುಷ್ಯನ ಇಂತಹ ಅಧಃಪಾತಾಳದತ್ತಲ ಕುಸಿತದ ಬಗ್ಗೆ ಅಮೆರಿಕದ ಖ್ಯಾತ ಭಾಷಾವಿಜ್ಞಾನಿ ನೋಮ್ ಚಾಮ್‌ಸ್ಕಿ ಇಡೀ ಜಗತ್ತಿಗೇ ಎಚ್ಚರಿಕೆ ನೀಡುತ್ತಿದ್ದಾರೆ. ಘನ ಪಂಡಿತ ಲೇಖಕರೆಲ್ಲ ಜಾಣ ಕಿವುಡರಾಗಿರುವ ಸಾಂಸ್ಕೃತಿಕ ಸೂತಕದ ಸಂದರ್ಭದಲ್ಲಿ ಚಾಮ್‌ಸ್ಕಿ ತನ್ನ ತಾಯ್ನೆಲದ ನರಮೇಧದ ಬಗ್ಗೆಯೇ ಮಾತನಾಡುವ ದಿಟ್ಟತನ ಪ್ರದರ್ಶಿಸಿ ಮಾನವ ಕುಲದ ಘನತೆಗೇ ಗರಿ ಮೂಡಿಸಿದ್ದಾರೆ. ಅವರ ಚಿಂತನೆಗಳು ನಮ್ಮೆಲ್ಲರ ಆತಂಕಗಳನ್ನು ಕೊಂಚವಾದರೂ ದೂರಮಾಡಬಲ್ಲಷ್ಟು ಆಶಾದಾಯಕವಾಗಿವೆ.

ಹಣದ ಮೌಲ್ಯವಷ್ಟೇ ಆಗಿರುವ ಪ್ರಶಸ್ತಿಗಳ ಕ್ರೂರ ಹಾಗೂ ಅಸಹ್ಯಕರ ರಾಜಕಾರಣವನ್ನು ಕಡೆಗಣಿಸಿ, ಮಾನವ ಹಕ್ಕುಗಳ ಕುರಿತ ಕಾಳಜಿಯಿಂದಾಗಿ ಜಗತ್ತಿನೆಲ್ಲ ಮಾನವ ಪ್ರೇಮಿಗಳ ಪ್ರೀತಿ, ಗೌರವಗಳಿಗೆ ಪಾತ್ರರಾಗಿ ತನ್ನ ಮನೆಯಂಗಳದ ಕೊಳೆ ತೊಡೆಯಲು ಶ್ರಮಿಸುತ್ತಿರುವ ಚಾಮ್‌ಸ್ಕಿಯ ಪರಿ ಅನನ್ಯವಾದುದಾಗಿದೆ. ಹತಾಶ ಸಮುದಾಯಕ್ಕೆ ಬೆಳಕಿನ ಕೋಲ್ಮಿಂಚಾಗಿದೆ. ದೀಪದ ಬುಡದಲ್ಲೇ ಕತ್ತಲೆಂಬಂತೆ ಅಮೆರಿಕ ಮಾತ್ರ ಅಂಧಯುಗದ ಕರಾಳ ಅಧ್ಯಾಯಗಳಿಗೇ ಹೊರಳಿ ಅಧಃಪಾತಾಳದತ್ತ ಕುಸಿಯುವುದರಲ್ಲೇ ತನ್ನ ಘನ ಪರಮಾರ್ಥವನ್ನು ಪ್ರಕಟಿಸುತ್ತಿದೆ. ಸಾಂಸ್ಕೃತಿಕ ದಾಸ್ಯಕ್ಕೆ ಕೊರಳೊಡ್ಡಿ, ಕುಬ್ಜರಾಗಿ, ಧ್ವನಿಯೇ ಕಳೆದುಕೊಂಡಿರುವ ಲೋಕ ವಿಖ್ಯಾತ ಲೇಖಕರೆದುರು ಚಾಮ್‌ಸ್ಕಿಯ ಸತ್ಯ ನಿಷ್ಟುರ ಮಾತುಗಳು ಕಳೆದುಹೋಗಿರುವ ಮಾನವ ಘನತೆಯನ್ನು ವಾಪಸ್ಸು ತಂದುಕೊಡುವಂತಿವೆ. ಕೊನೆಯುಸಿರಿನ ನಂಬಿಕೆಗಳಿಗೆ ಜೀವದಾಯಕವಾಗಿವೆ.

ಇತ್ತೀಚಿಗಿನ ಚಾಮ್‌ಸ್ಕಿಯ ಭಾರತ ಪ್ರವಾಸ ಸಂದರ್ಭದಲ್ಲಿನ ಎರಡು ಘಟನೆಗಳು ಇಂತಹ ಅಧೋಗತಿ ಮತ್ತು ಮಾನವ ಘನತೆಯನ್ನು ನೆನಪಿಸುವ ಪ್ರತ್ಯಕ್ಷ ನಿದರ್ಶನಗಳಾಗಿವೆ. ಪಶ್ಚಿಮ ಬಂಗಾಳದ ವಾಮಪಂಥೀಯ ಸರ್ಕಾರ ಚಾಮ್‌ಸ್ಕಿಯವರಿಗೆ ಗೌರವ ಡಾಕ್ಟರೇಟ್ ನೀಡಿ ತನ್ನನ್ನು ತಾನೇ ಗೌರವಿಸಿ ಕೊಂಡದ್ದು ಮಾನವ ಘನತೆಯ ವಿಚಾರವಾಗಿದ್ದರೆ, ಕೇರಳದಲ್ಲಿ ಕೋಮುವಾದಿಗಳು ಚಾಮ್‌ಸ್ಕಿಯ ವಿರುದ್ಧ ಪ್ರತಿಭಟನೆಯ ಪ್ರದರ್ಶನ ನೀಡಿದ್ದು ಲಜ್ಜೆಗೇಡಿತನ ಹಾಗೂ ಅಧೋಗತಿಯ ದ್ಯೋತಕವಾಗಿದೆ. ಈ ಎರಡೂ ಪ್ರಸಂಗಗಳು ಕೇವಲ ಆಕಸ್ಮಿಕಗಳಲ್ಲ; ಈ ನೆಲದ ಎರಡು ತತ್ವಪರಂಪರೆಗಳ ಮುಂದುವರಿದ ಸಂಘರ್ಷದ ಅಭಿವ್ಯಕ್ತಿಗಳಾಗಿವೆ. ಇಡೀ ಏಷಿಯಾ ಇಂದು ಸೂತಕದ ಮನೆಯಾಗಿರುವಾಗ ನೆರೆಮನೆಯ ಹಿತೈಷಿಯಾಗಿ ಬಂದ ಚಾಮ್‌ಸ್ಕಿ ಕೇವಲ ಸಾಂತ್ವನದ ನುಡಿಗಳಾಡಿಹೋಗಿಲ್ಲ. ಅಮೆರಿಕದ ಪರವಾದ ಪಶ್ಚಾತ್ತಾಪದ ಧ್ವನಿಯಿತ್ತು ಆತನ ಮಾತುಗಳಲ್ಲಿ. ಕಳೆದು ಐದು ದಶಕಗಳಿಗೂ ಮೀರಿದ ಅವಧಿಯಲ್ಲಿ ಅಮೆರಿಕ ಸಾಮ್ರಾಜ್ಯಶಾಹಿ ನಡೆಸಿದ ಲಕ್ಷಾಂತರ

ನರಮೇಧಗಳಿಗೆ ಅಶ್ರುತರ್ಪಣ ಸಲ್ಲಿಸುವ ಸಹಮಾನವನೊಬ್ಬನ ಸಹಜ ಸ್ಪಂದನವಿತ್ತು. ಇಂತಹ ಉನ್ನತ ನಾಗರಿಕ ತಿಳುವಳಿಕೆಯನ್ನು, ಇಡೀ ಜಗತ್ತಿನ ನೈತಿಕಶಕ್ತಿಯನ್ನು ಕ್ರೋಡೀಕರಿಸುವ ಮಹತ್ವದ ಸಂಕಲ್ಪವನ್ನು ಹಾಗೂ ವಿಶ್ವದ ಅನಾಥ ಸಮುದಾಯದ ಪರವಾದ ಅಪರೂಪದ ಮೇಧಾವಿತನವನ್ನು ವಿರೋಧಿಸುವ ಅಗತ್ಯ ಎಂತಹ ಮನಸ್ತತ್ವಗಳಿಗಿದ್ದೀತೆಂಬ ಸರಳ ಸತ್ಯಗಳು ನಮಗೆ ಅರಿವಾಗದ್ದೇನಲ್ಲ. ಸಾಮ್ರಾಜ್ಯಶಾಹಿ ಹಾಗೂ ಮತಾಂಧ ಶಕ್ತಿಗಳೆರಡಕ್ಕೂ ಏಕಕಾಲದಲ್ಲೇ ನಡುಕ ಹುಟ್ಟಿಸಿದ ಚಾಮ್‌ಸ್ಕಿ ನಮ್ಮೆಲ್ಲರ ನಿಜದನಿಯಾಗಿದ್ದಾರೆ.

ಸಾಂಸ್ಥಿಕ ಗುಣ ಯಾವುದೇ ಧರ್ಮದ ಅವಸಾನ ಲಕ್ಷಣ. ಆದರೆ ಸಾಂಸ್ಥಿಕ ಚೌಕಟ್ಟಿಗೆ ನಿಲುಕದ ಉನ್ನತ ಅಧ್ಯಾತ್ಮತತ್ವಗಳು ಜನಮನದ ದೇಶ, ಕಾಲಾತೀತ ದಾರಿಗಳಲ್ಲಿ ಸಂಚರಿಸುತ್ತ ಅನುಭವಜನ್ಯ ಪಂಥಗಳಾಗಿ ಎಂದೆಂದಿನಿಂದಲೋ ಉಳಿದು ಬಂದಿವೆ. ಝೆನ್, ತಾವೋ ಹಾಗೂ ಸೂಫೀ ತತ್ವ ಪರಂಪರೆಗಳು ಇಂತಹ ಅಪರೂಪದ ಸಾಲಿಗೆ ಸೇರುವಂತಹವು. ನುಡಿಯೇ ನಡೆಯಾಗುವ ಪಾರದರ್ಶಕ ಸಾಧನೆಯ ಬದುಕು - ವ್ಯಕ್ತಿಗಳು ಮಾತ್ರ ಇಲ್ಲಿ ಉಳಿದು ಜೊಳ್ಳು ತಾನಾಗಿಯೇ ತೂರಿ ಹೋಗುವ ಅದ್ಭುತ ಗುಣದಿಂದಾಗಿಯೇ ಇಂದಿಗೂ ಇವು ಜೀವಂತ ಪಂಥಗಳಾಗಿವೆ. ಅಲ್ಲದೆ ನಿಸರ್ಗ ಸ್ವಭಾವಕ್ಕೆ ಹತ್ತಿರವಾಗಿರುವ ಇವು ಆಧುನಿಕ ಸಮಾಜದ ಜಟಿಲ ಸಮಸ್ಯೆಗಳಿಗೂ ಸರಳ ಪರಿಹಾರದ ಅಮೃತ ಸಿಂಚನ ಮಾಡಬಲ್ಲವು. ಮುಗ್ಧ ಮತ್ತ ವಿವೇಕಿಗಳಿಗೆ ಹಾಗೂ ಜೀವಪ್ರೀತಿಯ ಧ್ಯಾನಿಗಳಿಗೆ ಹೃದಯದ ಮೂಲಕ ಪ್ರೇಮಮಯೀ ದಾರಿಯನ್ನು ತೆರೆದು ತೋರಿಸಬಲ್ಲವು. ಸಕಲ ಜೀವಪರವಾದ ಪ್ರೇಮತತ್ವ, ಸರಳ ಜೀವನ ಶೈಲಿ, ಲೌಕಿಕದಲ್ಲೇ ಅಲೌಕಿಕ ಆನಂದವನ್ನು ಕಂಡುಕೊಳ್ಳುವ ಶ್ರದ್ಧಾನಂಬಿಕೆಗಳೇ ಈ ಪಂಥಗಳ ನಿಜವಾದ ಶಕ್ತಿಯಾಗಿದೆ. ಅವು ಸಾರ್ವಕಾಲಿಕ ಮಾನವ ಮೌಲ್ಯಗಳೂ, ಎಲ್ಲ ತತ್ವ, ಧರ್ಮಗಳ ಆದ್ಯಂತದ ಸಾರಸರ್ವಸ್ವವೇ ಆಗಿವೆ. ಹೀಗಾಗಿಯೇ ಈ ಪಂಥಗಳು ಕಾಲ, ದೇಶ, ಸಂಸ್ಕೃತಿ, ಭಾಷೆ, ಜನಾಂಗ ಇತ್ಯಾದಿ ಯಾವುದೇ ಗಡಿಗಳಿಲ್ಲದೆ, ಮೂಲ ಸೊಗಡಿನ ಸತ್ವದೊಂದಿಗೇ ಸಣ್ಣತನದ ಸವಾಲುಗಳನ್ನೆಲ್ಲ ಮೀರಿ ಬೆಳೆದು ಉಳಿದು ಬಂದಿವೆ.

ನಿಸರ್ಗದ ಸೃಷ್ಟಿಯಲ್ಲಿ ಪ್ರತಿ ಜೀವಿಗೂ ಅದರದೇ ಆದ ಬದುಕಿನ ಹಕ್ಕುಗಳು ಮತ್ತು ದಾರಿಗಳಿವೆ. ಹಾಗೆ ಬದುಕುವುದೇ ಅವುಗಳ ಸಹಜ ಧರ್ಮ. ಉಳಿದ ಜೀವಿಗಳೆಲ್ಲ ತಮ್ಮ ಪಾಡಿಗೆ ತಾವಿರಲು ಮನುಷ್ಯನೊಬ್ಬನೇ 'ಹೇಗೆ ಬದುಕುವುದು ಹೆಚ್ಚು ಸರಿ ' ಎಂಬ ನೈತಿಕ ಮಾದರಿಗಳ ಅನಗತ್ಯ ಗೊಂದಲದಲ್ಲಿ ಬಿದ್ದಿದ್ದಾನೆ. ಅಧಿಕಾರ, ಹಣಗಳೇ ಪ್ರಧಾನವಾಗಿ ಮೌಲ್ಯಗಳು ಹಾಗೂ ಸಹಜ ಆನಂದಗಳೆಲ್ಲ ಕಡೆಗಣಿಸಲ್ಪಟ್ಟಿರುವ, ಎದೆ ನಡುಗಿಸುವ ಅಸಮಾನತೆಯ ಜಗತ್ತಲ್ಲಿ ಆಲೋಚನಾ ಜೀವಿಯಾದ ಮನುಷ್ಯನಿಗೆ ನೂರಾರು ಸಾಪೇಕ್ಷ ಆಯ್ಕೆಗಳ ಜಾರವಾಂಛೆಯ ಸಂಕಟಗಳು! ತನ್ನ ಬದುಕನ್ನು ಅನಗತ್ಯವಾಗಿ ಸಂಕೀರ್ಣವಾಗಿಸಿಕೊಂಡಿರುವ ಈ ದಯನೀಯ ಮನುಷ್ಯನಿಗೆ ಕೊನೆಗೆ ಉಳಿಯುವ ಆಯ್ಕೆ ಇಷ್ಟೆ: ಯಾರ ಸಾಧನೆಯ ದಾರಿಗಳನ್ನು ತಮ್ಮ ತಮ್ಮ ಅನುಭವಗಳ ಮೂಲಕ ಅವರವರೇ ಕಂಡು ಕೊಳ್ಳಬೇಕು. ವಿಶೇಷ ಅನುಭವಗಳ ಮೂಲಕ ದಕ್ಕುವ ಮಿಂಚಿನ ಜ್ಞಾನೋದಯವೇ ಸಾಧಕನೊಬ್ಬನಿಗೆ ಸತ್ಯದರ್ಶನ ಮಾಡಿಸುತ್ತದೆಂಬುದು ಕಾಲಾಗ್ನಿ ಪರೀಕ್ಷೆಗಳಲ್ಲಿ ಗೆದ್ದು ಬಂದಿರುವ ಈ ಪಂಥಗಳ ನಂಬಿಕೆ. ಆದರೆ ಅಂತಹ ಮಿಂಚಿನ ಜ್ಞಾನೋದಯವೆಂಬ ಪವಾಡದ ಕಿಂಚಿತ್ತು ಸಾಧ್ಯತೆಯೂ ದೂರವಾಗಿರುವ ಇಂದಿನ ಸರಕು ಸಂಸ್ಕೃತಿಯ ಯುಗದಲ್ಲಿ ಈ ಜಗತ್ತು - ವಿಶೇಷವಾಗಿ ಸಾಮ್ರಾಜ್ಯಶಾಹಿ, ಜನಾಂಗೀಯ ಹಾಗೂ ಮತಾಂಧ ಶಕ್ತಿಗಳು ಝೆನ್,

ತಾವೋ , ಸೂಫೀ ತತ್ವಗಳಿಂದ ಪಡೆಯಬಹುದಾದ್ದು, ಅರಿಯಬಹುದಾದ್ದು ಬಹಳಷ್ಟಿದೆ.ನಾವು ಮತ್ತೆ ಮನುಷ್ಯರಾಗಲು ಇರುವ ಕಡೆಯ ಅವಕಾಶಗಳಿವು.

ಬುದ್ಧ, ಬಸವ, ಅಲ್ಲಮ, ಜೀಸಸ್‌ರ ಪರಂಪರೆ ಮುಂದುವರೆಯುತ್ತಿದೆ.ನಡುವೆ ಬಂದ ಎಷ್ಟೋ ಮಹಾತ್ಮರು ಸರಳ ಸತ್ಯಗಳನ್ನು ವ್ಯಥೆಯಿಂದ ಆಡಿ ಹೋಗಿದ್ದಾರೆ. ಇಂದಿಗೂ ಚಾಮ್‌ಸ್ಕಿ, ಅಣ್ಣಾ ಹಜಾರೆಯಂತಹವರು ಕೂಡ ಸಾವಿರಾರು ಮಂದಿ ನಮ್ಮೊಂದಿಗೆ ಇದ್ದಾರೆ. ಇವರೆಲ್ಲರೂ ಹಿಡಿದ, ಹಿಡಿಯುತ್ತಿರುವ ದಾರಿಯೂ ಒಂದೇ; ಗುರಿಗಳೂ ಒಂದೇ. ವಿವಿಧ ಕಾಲಗಳ, ವಿಚಾರ ವಲಯಗಳಲ್ಲಿ ಹಾದು ಹೋಗುವ ಇವರೆಲ್ಲರ ಶ್ರೇಷ್ಠ ಚಿಂತನೆಗಳ ನಡುವೆ ಆಳವಾದ ಅಂತರ್ ಸಂಬಂಧಗಳಿವೆ. ಬದುಕನ್ನು ಕುರಿತ ಜಿಜ್ಞಾಸೆಗಳಲ್ಲಿ ಅಚ್ಚರಿಗೊಳಿಸುವ ಸಹಜ ಸಾಮ್ಯವಿದೆ. ಅಂತಿಮವಾಗಿ ಇವರೆಲ್ಲರೂ, ಇಂತಹವರೆಲ್ಲರೂ ತಹತಹಿಸಿದ್ದು, ಕಳಕಳಿ ವ್ಯಕ್ತಪಡಿಸುತ್ತಿರುವುದು ಸ್ವಸ್ಥಸಮಾಜಕ್ಕಾಗಿ. ಉನ್ನತ ಸಂಸ್ಕೃತಿ ನಿರ್ಮಾಣಕ್ಕಾಗಿ, ಪರಸ್ಪರವಾದ ನೈತಿಕ ಅರಿವಿಗಾಗಿ, ನಿಜವಾದ ನಾಗರಿಕತೆಯ ಅತ್ಯುನ್ನತ ಸೋಪಾನಕ್ಕಾಗಿ. ಆ ಮೂಲಕ ಇಡೀ ಜೀವ ಸಂಕುಲದ ಪೂರ್ಣ ವಿಕಸನಕ್ಕಾಗಿ.

ಯಾರಿಗೇ ಆದರೂ ಇದಕ್ಕಿಂತ ಬೇಕಾದ್ದು ಬೇರೇನಿದ್ದೀತು ?

ಸೂಫೀ ಲೇಖನ ಮತ್ತು ಕಥೆಗಳು, ನೋಮ್ ಚಾಮ್‌ಸ್ಕಿ, ಅಣ್ಣಾ ಹಜಾರೆಯವರ ವಿಚಾರಗಳು, ಚಂದ್ರಮೋಹನ್‌ರವರ ಭಾವಾನುವಾದದ ಕವಿತೆಗಳು, ಸೀಲ್ ಮರಿಯೊಂದಿಗಿನ ಬಾಲೆಯ ಸಾಂಗತ್ಯ, ಅಮರಾವತಿ ಕಥೆಗಳು, ಎರಡು ಶತಮಾನಗಳಷ್ಟು ಹಿಂದೆಯೇ ನಗರ ಸಂಸ್ಕೃತಿಯ ಮುಂಗಾಣ್ಕೆಯನ್ನು ಮನಗಾಣಿಸಿದ ಗೋಲ್ಡ್ ಸ್ಮಿತ್‌ರ ಪ್ರಬಂಧ.... ಹೀಗೆ ಎಲ್ಲವೂ ಭಿನ್ನ ನೆಲೆಗಳಿಂದ ಹೊರಟರೂ, ಅವು ಉಸುರುವುದು ಕೊನೆಗೆ ಒಂದೇ ನನ್ನಿಯನ್ನು. ಒಟ್ಟಾರೆಯಾಗಿ ಈ ಸಂಚಿಕೆಯಲ್ಲಿನ ಎಲ್ಲಾ ಬರಹಗಳು ಹೀಗೆ ತಮಗೆ ತಾವೇ ಒಂದು ತಾತ್ವಿಕ ಚೌಕಟ್ಟೊಂದನ್ನು ನಿರ್ಮಿಸಿಕೊಂಡಿವೆಯೆಂಬುದು ನಮ್ಮ ನಂಬಿಕೆ. ಮುಂದಿನ ಸಂಚಿಕೆಯನ್ನು ಇನ್ನಷ್ಟು ಉತ್ತಮವಾಗಿ ರೂಪಿಸಬೇಕೆಂಬುದು ನಮ್ಮ ಆಶಯ. ಮುಖ್ಯವಾಗಿ ಸ್ತಬ್ಧಗೊಂಡಂತಿರುವ ವಾತಾವರಣದಲ್ಲಿ ಗಂಭೀರವಾದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂವಾದವೊಂದನ್ನು ಪುನರಾರಂಭಿಸಬೇಕೆಂಬುದು ನಮ್ಮ ಇಷ್ಟ. ಜ್ಞಾನಪೀಠ ಪ್ರಶಸ್ತಿ ವಿಜೇತ ಲೇಖಕಿ ಇಂದಿರಾ ಗೋಸ್ವಾಮಿ ಹಾಗೂ ನೊಬೆಲ್ ಪ್ರಶಸ್ತಿ ವಿಜೇತ ವಿ.ಎಸ್.ನಯಪಾಲ್ ಕುರಿತ ಲೇಖನಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲು ಪ್ರಯತ್ನಿಸುತ್ತೇವೆ. ಈ ಇಬ್ಬರು ಲೇಖಕರಿಗೂ 'ಅನಿಕೇತನ' ದ ಅಭಿನಂದನೆಗಳು.

ಸಾಹಿತ್ಯ ಸಂವಾದ ಹಾಗೂ ಸೃಜನಶೀಲ ಬರವಣಿಗೆಗೆ ಒತ್ತಾಸೆಯಾಗಿ ಹಿಂದೆ ಅನೇಕ ಗಂಭೀರ ಸಾಹಿತ್ಯ ಪತ್ರಿಕೆಗಳಿದ್ದವು. ಸಾಕ್ಷಿ, ಒಡನಾಡಿ, ರುಜುವಾತು, ಅಂಕಣ, ಸಮುದಾಯ ವಾರ್ತಾಪತ್ರದಂತಹ ಪತ್ರಿಕೆಗಳು ನಾನಾ ಕಾರಣಗಳಿಂದಾಗಿ ತಮ್ಮ ಪ್ರಕಟಣೆಗಳನ್ನು ನಿಲ್ಲಿಸಿದವು. ಈಗಲೂ ಪ್ರಕಟವಾಗುತ್ತಿರುವ ಕೆಲವೇ ಪತ್ರಿಕೆಗಳು ತಮ್ಮ ಅಸ್ತಿತ್ವಕ್ಕಾಗಿ ಹೆಣಗಾಡುವಂತಹ ಪರಿಸ್ಥಿತಿಯಿದೆ. ಆರ್ಥಿಕ ಹೊಡೆತಗಳೋ, ಕ್ಷೀಣಿಸಿದ ಸಾಹಿತ್ಯಾಭಿರುಚಿಯೋ ಅಥವ ಅರಿವೇ ಆಗದಂತೆ ಆವರಿಸಿಕೊಂಡಿರುವ ಸಾಹಿತ್ಯ ಸಾಂಸ್ಕೃತಿಕ ಲೋಕದ ಸ್ತಬ್ಧ ವಾತಾವರಣವೋ ಇಲ್ಲವೇ ಕಾಲು ಶತಮಾನದ ಚಳುವಳಿಗಳೆಲ್ಲದರ ಭ್ರಮ ನಿರಸನದ ಬಳುವಳಿಯ ಪ್ರತಿಫಲವೋ - ಅಂತೂ ೭೦-೮೦ ರ ದಶಕಗಳಲ್ಲಿ ಕಂಡುಬರುತ್ತಿದ್ದ ನಿರಂತರ ಸಾಹಿತ್ಯ ಸಾಂಸ್ಕೃತಿಕ ಸಂವಾದದ ಉತ್ಸಾಹ ಮತ್ತು ತೀವ್ರತೆ ಈಗ ಇಲ್ಲವಾಗಿದೆ. ಸೃಜನಶೀಲ ಹಾಗೂ ವಿಚಾರ, ವಿಮರ್ಶೆಯ ಬರಹಗಳಿಗೆ

ವಿಪುಲ ಅವಕಾಶಗಳಿದ್ದ ಹಿನ್ನೆಲೆಯಲ್ಲಿ 'ಅನಿಕೇತನ ' ಪತ್ರಿಕೆಯನ್ನು ಆಗ ಅನ್ಯ ಭಾಷೆಯ ಶ್ರೇಷ್ಠ ಸಾಹಿತ್ಯವನ್ನು ಕನ್ನಡದ ಓದುಗರಿಗೆ ಪರಿಚಯಿಸುವ ಉದ್ದೇಶದಿಂದಾಗಿ ಕೇವಲ ಅನುವಾದ ಸಾಹಿತ್ಯಕ್ಕೆಂದೇ ಮೀಸಲಿರಿಸಲಾಗಿತ್ತು. ಆಗ ಅದು ಸಂದರ್ಭೋಚಿತ ನಿಲುವೂ ಆಗಿತ್ತು. ಆದರೆ ಈಗ ಕನ್ನಡದ ಸೃಜನಶೀಲ ಬರವಣಿಗೆಯೊಂದಿಗೆ ವೈಚಾರಿಕ ಹಾಗೂ ವಿಮರ್ಶಾತ್ಮಕ ಬರಹಗಳಿಗೇ ಸಮರ್ಥ ವೇದಿಕೆಯೊಂದರ ತುರ್ತು ಕಾಣಿಸುತ್ತಿದೆ. ಇಂತಹ ಅತ್ಯಗತ್ಯ ವೇದಿಕೆಯ ಕೊರತೆಯನ್ನು ನೀಗಿಸಬೇಕೆಂಬ ಹಂಬಲ ಕೂಡ ಅನೇಕರನ್ನು ಕಾಡುತ್ತಿದ್ದುದು ಸಹಜವೇ ಆಗಿತ್ತು. ಬಹುಶಃ ಈ ಹಿನ್ನೆಲೆಯಲ್ಲಿಯೇ ಸಾಹಿತ್ಯ ಅಕಾಡೆಮಿಯ ನೂತನ ಸಮಿತಿ ತನ್ನ ಸರ್ವಸದಸ್ಯರ ಸಭೆಯಲ್ಲಿ ಅನ್ಯ ಭಾಷೆಗಳ ಶ್ರೇಷ್ಠ ಸಾಹಿತ್ಯದ ಅನುವಾದಗಳೊಂದಿಗೆ ನಮ್ಮ ಸಂದರ್ಭದ ಸೃಜನ- ವೈಚಾರಿಕ-ವಿಮರ್ಶಾ ಬರಹಗಳಿಗೂ 'ಅನಿಕೇತನ' ಪತ್ರಿಕೆಯಲ್ಲಿ ಅವಕಾಶ ಕಲ್ಪಿಸುವ ಮೂಲಕ ಪತ್ರಿಕೆಯ ಸ್ವರೂಪದಲ್ಲಿ ಗುಣಾತ್ಮಕ ಬದಲಾವಣೆಗಳನ್ನು ತರಬೇಕೆಂಬ ನಿರ್ಧಾರವನ್ನು ಕೈಗೊಂಡಿತು. ಈ ತೀರ್ಮಾನಕ್ಕನುಗುಣವಾಗಿ ಈ ಸಂಚಿಕೆಯಲ್ಲಿ ಕೆಲವು ಕವಿತೆ / ಲೇಖನ / ವಿಮರ್ಶೆಗಳನ್ನು ನೀಡಲಾಗಿದೆ. ಈ ಬದಲಾವಣೆಯನ್ನು 'ಅನಿಕೇತನ' ದ ಓದುಗರು ಸ್ವಾಗತಿಸುತ್ತಾರೆಂದು ಆಶಿಸಿದ್ದೇವೆ. ಹಾಗೆಯೇ ಲೇಖಕರು ಕೂಡ 'ಅನಿಕೇತನ'ದ ಮೂಲಕ ಹೊಸ ಸೃಜನಾತ್ಮಕ ಸಂವಾದವೊಂದನ್ನು ಪ್ರಾರಂಭಿಸುವುದರೊಂದಿಗೆ ನಮ್ಮ ಈ ಬದಲಾವಣೆಯ ನಿರ್ಧಾರಕ್ಕೆ ಸ್ಪಂದಿಸುತ್ತಾರೆಂದೂ ನಂಬಿದ್ದೇವೆ.

'ಅನಿಕೇತನ' ದ ಸ್ವರೂಪದಲ್ಲಿ ಬದಲಾವಣೆಗಳನ್ನು ತರುವ ಪ್ರಯತ್ನದಂಗವಾಗಿಯೇ ಸಾಹಿತ್ಯ ವಲಯದಲ್ಲಿನ ಸ್ತಬ್ಧ ವಾತಾವರಣವನ್ನು ಗಮನದಲ್ಲಿರಿಸಿಕೊಂಡು 'ತಿಟ್ಹತ್ತಿ ತಿರುಗಿ ' ಎಂಬ ಪ್ರಶ್ನೋತ್ತರ ವಿಚಾರಸಂಕಿರಣವನ್ನು ನಡೆಸುವುದರ ಮೂಲಕ ಹೊಸ ಸಂವಾದಕ್ಕೆ ನಾಂದಿ ಹಾಡಲು ನಾವು ನಿರ್ಧರಿಸಿದೆವು. ಕೂಡಲೇ ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸಿ ನಮ್ಮ ಸಂದರ್ಭದ ನಲ್ವತ್ತು ಮಂದಿ ಪ್ರಸಿದ್ಧ ಲೇಖಕರಿಗೆ ಉತ್ತರಿಸುವಂತೆ ಕೋರಿ ಕಳುಹಿಸಿಕೊಟ್ಟೆವು. ನಮಗೆ ದೊರೆತ ಅತ್ಯಲ್ಪ ಪ್ರತಿಕ್ರಿಯೆಯೇ ನಮ್ಮ ಗ್ರಹಿಕೆಯನ್ನು ನಿಜವಾಗಿಸಿತು. ಈ ನೀರಸ ಪ್ರತಿಕ್ರಿಯೆಯೇ ಸಾಹಿತ್ಯ ವಲಯದಲ್ಲಿ ಸ್ತಬ್ಧ ವಾತಾವರಣ ನೆಲೆಗೊಂಡಿದೆಯೆಂಬ ಅಂಶವನ್ನು ಪರೋಕ್ಷವಾಗಿ ಸೂಚಿಸುವಂತಿದೆ. ಆದರೂ ಉತ್ತರಿಸಿದ ಕೆಲವೇ ಲೇಖಕರ ಖಚಿತ ಅಭಿಪ್ರಾಯಗಳು ಮುಂದಿನ ಮಜಲಿನ ಸಂವಾದಕ್ಕೆ ಕೊಂಚ ಮಟ್ಟಿನ ಭೂಮಿಕೆಯನ್ನು ಒದಗಿಸಿದೆಯೆಂದೇ ಭಾವಿಸಿದ್ದೇವೆ. ತಿಟ್ಹತ್ತಿ ತಿರುಗಿ ಪ್ರಶ್ನೋತ್ತರ ವಿಚಾರ ಸಂಕಿರಣ ಇನ್ನಷ್ಟು ವಿಸ್ತೃತ ಚರ್ಚೆಗೆ ದಾರಿಮಾಡಿಕೊಡಲೆಂದು ನಾವು ಆಶಿಸುತ್ತೇವೆ. ಅದು ನಮ್ಮ ಉದ್ದೇಶ ಕೂಡ. ಈ ಸಂವಾದದಲ್ಲಿ ಭಾಗವಹಿಸಿದ ಲೇಖಕರಿಗೆ ನಾವು ಆಭಾರಿಗಳಾಗಿದ್ದೇವೆ.

ಅಕಾಡೆಮಿಯ ನೂತನ ಸಮಿತಿ ಅಧಿಕಾರ ವಹಿಸಿಕೊಂಡು ಎಂದಿನ ಸಾಹಿತ್ಯಕ ಕಾರ್ಯಕ್ರಮಗಳಿಗೆ ಚಾಲನೆ ನೀಡುವ ತಾಂತ್ರಿಕ ಪ್ರಕ್ರಿಯೆಗಳ ನಡುವೆ 'ಅನಿಕೇತನ' ಪತ್ರಿಕೆಯ ಸಂಚಿಕೆ ೪೯ ರ ಅವಧಿ ದಾಟಿಹೋಯಿತು. ಹೀಗಾಗಿ ೪೯ ಹಾಗೂ ೫೦ ರ ಎರಡು ಸಂಚಿಕೆಗಳನ್ನು ಒಟ್ಟಾಗಿಸಿ ಹೊರತರುವುದು ನಮಗೆ ಅನಿವಾರ್ಯವಾಗಿದೆ. ಆ ಕಾರಣದಿಂದಾಗಿಯೇ ಸುಮಾರು ೨೦೦ ಪುಟಗಳ ಸಾಹಿತ್ಯ ಸಂಚಿಕೆ 'ಅನಿಕೇತನ' ರೂಪುಗೊಳ್ಳುವಂತಾಯಿತು. ಇದರ ಜೊತೆಗೇ ಇದು 'ಅನಿಕೇತನ'ದ ೫೦ ರ ವಿಶೇಷ 'ಸುವರ್ಣ ಸಂಚಿಕೆ'ಯೂ ಆದದ್ದರಿಂದ ನಮಗಿದ್ದ ಮಿತಿಗಳ ನಡುವೆಯೇ ಈ ಬಾರಿಯ 'ಅನಿಕೇತನ' ವಿಶೇಷ ಸಂಭ್ರಮದಿಂದಲೇ ಸಜ್ಜುಗೊಂಡಿದೆ. 'ಸುವರ್ಣ ಸಂಚಿಕೆ' ಯನ್ನೇ ರೂಪಿಸಬೇಕೆಂಬ ನಿರ್ಧಾರದ ಹಿಂದಿನ ಪ್ರಯತ್ನ ಅಥವ ಪೂರ್ವಸಿದ್ಧತೆಗಳ್ಯಾವುದೂ

ಇಲ್ಲಿಲ್ಲವಾದರೂ 'ಸುವರ್ಣ ಸ್ಪರ್ಶ'ವನ್ನಷ್ಟೆ ನೀಡಲು ಪ್ರಯತ್ನಿಸಿದ್ದೇವೆ. ನಾವು ಸಂಪಾದಿಸುತ್ತಿರುವ ಮೊದಲ ಸಂಚಿಕೆಯೇ ಹೀಗೆ 'ಸುವರ್ಣ ಸಂಚಿಕೆ'ಯಾಗುವಂತಾದದ್ದು ಕೇವಲ ಕಾಕತಾಳೀಯವೇ ಆದರೂ ಅದರ ಸಂತೋಷ ನಮಗಿದ್ದೇ ಇದೆ.

ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ 'ಅನಿಕೇತನ' ವನ್ನು ಹೊಸ ಸ್ವರೂಪದೊಂದಿಗೆ ಸಂಪಾದಿಸುವ ಹೊಣೆಗಾರಿಕೆಯನ್ನು ನಮಗೆ ವಹಿಸಿದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಗುರುಲಿಂಗ ಕಾಪಸೆ ಹಾಗೂ ಸದಸ್ಯರೆಲ್ಲರಿಗೂ ನಾವು ಋಣಿಗಳಾಗಿದ್ದೇವೆ. ಅವರು ನಮ್ಮ ಮೇಲಿಟ್ಟಿರುವ ವಿಶ್ವಾಸಕ್ಕೆ ತಕ್ಕಂತೆ ಇನ್ನಷ್ಟು ಮೌಲಿಕ ಸಂಚಿಕೆಗಳನ್ನು ರೂಪಿಸಲು ನಾವು ಉತ್ಸುಕರಾಗಿದ್ದೇವೆ.

ಓದುಗರು ಮತ್ತು ಲೇಖಕ ಮಿತ್ರರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇವೆ.

'ಅನಿಕೇತನ' ಸಹೃದಯರೆಲ್ಲರಿಗೂ ಮುಕ್ತ ವೇದಿಕೆಯಾಗಲೆಂದು ಆಶಿಸುತ್ತೇವೆ.

- ಸಂಪಾದಕರು

ಪರಿವಿಡಿ

ಭಾಗ-೧

ಭಾಗ-೨

***

ನೀನೆಂಬ ನಾನು

ಸೂಫೀ ಎಂಬ ಮಾನಸಿಕ ಅವಸ್ಥೆ ಮತ್ತು ಸೂಫೀ ಕತೆಗಳು

- ಜೆ. ಬಾಲಕೃಷ್ಣ

ಇತರ ಎಲ್ಲದರಿಂದ ಭಿನ್ನ
ಈ ಪ್ರೇಮಿಗಳ ಪಂಗಡ
ಅವರಿಗೆ ಅವರದೇ ಧರ್ಮವಿದೆ
ಅವರದ್ದೇ ಆದ ಶ್ರದ್ಧೆಯಿದೆ.

- ರೂಮಿ

ಸೂಫಿಸಂ ಬದುಕಿನ ಒಂದು ರೀತಿ ಅಥವಾ ಬದುಕನ್ನು ಸ್ವಾಸ್ಥ್ಯ ದೃಷ್ಟಿಯಿಂದ ನೋಡುವ ಒಂದು ಮಾನಸಿಕ ಅವಸ್ಥೆ. ಸೂಫಿಸಂ ಯಾವುದೇ ಚೌಕಟ್ಟಿನೊಳಗಣ ಧರ್ಮವಲ್ಲ. ಬದಲಿಗೆ ಅದು ಪ್ರೇಮ ಮತ್ತು ಸತ್ಯಾನ್ವೇಷಣೆಯ ಬದುಕಿನ ಅನುಭಾವದ ಖಾಸಗಿ ಅನುಭವಗಳ ಖಜಾನೆ.

ನಿಜವಾದ ಸೂಫಿಯಾದವ ಯಾವ ಧರ್ಮದ ಹಿಂಬಾಲಕನೂ ಅಲ್ಲ, ಯಾವುದೇ ಧರ್ಮದ ಕಟ್ಟುಪಾಡುಗಳಿಗೂ ಒಳಪಟ್ಟಿರುವುದಿಲ್ಲ. ಕನ್ನಡದ ಪ್ರಖ್ಯಾತ ಮುಸಲ್ಮಾನ ಲೇಖಕರೊಬ್ಬರು ಗುಲಬರ್ಗಾದ ಬಂದೇನವಾಝ್ ದರ್ಗಾದಲ್ಲಿನ ಒಬ್ಬ ಸೂಫಿಯನ್ನು 'ನೀವು ಸುನ್ನಿ ಅಥವಾ ಷಿಯಾ, ಯಾವ ಪಂಗಡಕ್ಕೆ ಸೇರಿದವರು?' ಎಂಬ ಪ್ರಶ್ನೆಗೆ ಆತ, 'ನಾವು ಹಿಂದೂಗಳೂ ಅಲ್ಲ, ಮುಸಲ್ಮಾನರೂ ಅಲ್ಲ, ಸೂಫಿಗಳು ಹೀಗಿರುವಾಗ ಸುನ್ನಿ ಮತ್ತು ಷಿಯಾ ಆಗುವುದು ಹೇಗೆ ಸಾಧ್ಯ?' ಎಂದು ಕೇಳಿದರಂತೆ. ಸೂಫಿ ಲಿಯಾಕತ್ ಹುಸೇನ್ ಶಾ ತಮ್ಮನ್ನು 'ನಾನು ಮುಸಲ್ಮಾನನಲ್ಲ, ನಾನೊಬ್ಬ ಸೂಫಿ' ಎಂದು ಹೇಳಿಕೊಂಡಿದ್ದಾರೆ.

ಸೂಫಿಸಂ ಎನ್ನುವುದು ಪ್ರೇಮದ ಅನುಭಾವದ ಹಾದಿ. ಆ ಹಾದಿಯ ಪಯಣ ಬೇರೆ ಎಲ್ಲಿಗೂ ಅಲ್ಲ, ಬದಲಿಗೆ ತನ್ನದೇ ಆತ್ಮದೆಡೆಗೆ. ಆ ಹಾದಿಯಲ್ಲಿ ಹೊರಟವನು ತನ್ನ ಹೃದಯದಲ್ಲೇ ಸತ್ಯ ಅಥವಾ ದೇವರನ್ನು ಕಂಡುಕೊಳ್ಳುತ್ತಾನೆ. ಆ ಸತ್ಯ ಅಥವಾ ದೇವರು ಬೇರೆ ಯಾರೂ ಅಲ್ಲ, ಅದು 'ನೀನೇ ಎಂಬ ನಾನು'. 'ದೇವರು ಎಲ್ಲೂ ಇಲ್ಲ, ನಾನು ಧರಿಸಿರುವ ನನ್ನ ಧಿರಿಸಿನೊಳಗೇ ಇದ್ದಾನೆ. ನನಗೆ ಅಭಿನಂದನೆಯಿರಲಿ. ನೋಡಿ ಹೇಗಿದೆ ನನ್ನ ವೈಭವತೆ!' ಎಂದು ಸೂಫಿ ಬಯಾಜಿದ್ ಬಸ್ತಮಿ ಹೇಳಿದ್ದಾರೆ. 'ನಿನ್ನ ಹೊರಗಿನದ್ಯಾವುದನ್ನೂ ನೀನು ಅರಿಯಲಾರೆ. ಏಕೆಂದರೆ ಯಾವುದನ್ನಾದರೂ ಸಂಪೂರ್ಣ ಅರಿಯಬೇಕಾದಲ್ಲಿ ಅರಿಯಬೇಕಾದ ವಸ್ತು ನೀನೇ ಆಗಿರಬೇಕು. ಹಾಗಾಗಿ ನಿನ್ನ ಹಲವಾರು ಪ್ರಶ್ನೆಗಳಿಗೆ ಉತ್ತರಗಳನ್ನು ನಿನ್ನೊಳಗಿನ

ಯೋಜಿತ ವ್ಯವಸ್ಥೆಯನ್ನು ಅರಸಬೇಕು' ಎಂಬುದು ಸೂಫಿಸಂನ ಮೂಲಭೂತ ತತ್ವ. ಸೂಫಿಗಳ ಪ್ರಕಾರ ಸತ್ಯವನ್ನು ಕಂಡು ಕೊಳ್ಳಲು ಎಷ್ಟು ಮನುಷ್ಯರಿದ್ದಾರೋ, ಅಷ್ಟೂ ಹಾದಿಗಳಿವೆ.

ಸೂಫಿಸಂ ಅನ್ನು ಇಸ್ಲಾಂನೊಂದಿಗೆ ಗುರುತಿಸಲಾಗಿದ್ದರೂ, ಸೂಫಿಸಂ ಇಸ್ಲಾಂಗಿಂತಲೂ ಹಾಗೂ ಈಗಿನ ಪ್ರಮುಖ ಧರ್ಮಗಳಿಗಿಂತಲೂ ಪ್ರಾಚೀನವಾದುದು. ಅದು ಆತ್ಮಕ್ಕೆ ಸಂಬಂಧಿಸಿದ ಒಂದು ಪ್ರಾಚೀನ ವಿದ್ವತ್ತು. ಅವರನ್ನು ಬಹಳ ಹಿಂದೆ ಸೂಫಿಗಳೆಂದು ಕರೆಯುತ್ತಿರಲಿಲ್ಲ. 'ಕಂಬಲ್ ಫೋಕ್ಸ್' ಗಳೆನ್ನುತ್ತಿದ್ದರು. ಅಂದರೆ 'ಕಂಬಳಿ ಹೊದ್ದವರು' ಎಂದು. ತಮ್ಮ ಹಲವಾರು ಸಂಶಯಗಳ ನಿವಾರಣೆಗೆ ಕಂಡ ಕಂಡ ಸಾಧುಸಂತರ ಬಳಿ ಹೋದರು. ಯಾರೂ ಅವರಿಗೆ ತೃಪ್ತಿಕರ ಉತ್ತರ ಕೊಡಲಿಲ್ಲ. ಅವರು ಯೇಸುವಿನ ಬಳಿಯೂ ಹೋಗಿದ್ದರಂತೆ. ಒಂದು ದಿನ ಪ್ರವಾದಿ ಮುಹಮ್ಮದ್, ತಮ್ಮ ಬಳಿಗೆ ಹಲವಾರು 'ಕಂಬಲ್ ಫೋಕ್ಸ್' ಗಳು ಒಂದು ಸೂಚಿತ ದಿನದಂದು ಬರುತ್ತಾರೆಂದೂ, ಈಗವರು ಇಂತಹ ಸ್ಥಳದಲ್ಲಿದ್ದಾರೆಂದೂ ತಮ್ಮ ಶಿಷ್ಯರಿಗೆ ಹೇಳಿದರು. ಆ ದಿನ 'ಕಂಬಲ್ ಫೋಕ್ಸ್' ಗಳು ಬಂದರು. ಪ್ರವಾದಿ ಏನೂ ಮಾತನಾಡಲಿಲ್ಲ. ಅವರ ಕಡೆ ನೋಡಿದರಷ್ಟೆ. 'ಕಂಬಲ್ ಫೋಕ್ಸ್'ಗಳ ಎಲ್ಲ ಸಂಶಯಗಳಿಗೂ ನಿವಾರಣೆಯಾದುವು ಹಾಗೂ ಅವರಿಗೆ ಸಂಪೂರ್ಣ ತೃಪ್ತಿಯಾಯಿತು.

ಅದು ಹೇಗೆ ಸಾಧ್ಯವಾಯಿತು? ಹೇಗೆಂದರೆ, ಆತ ಅವರ ಹೃದಯಗಳಲ್ಲಿ ಪ್ರೀತಿ, ಪ್ರೇಮ ಸೃಷ್ಟಿಸಿದ. 'ಪ್ರೇಮ ಅಂಕುರಿಸಿದಾಗ, ಅತೃಪ್ತಿ ಹೇಗಿರಲು ಸಾಧ್ಯ?' ಕಂಬಲ್ ಫೋಕ್ಸ್‌ಗಳು ಇಸ್ಲಾಂನಲ್ಲಿ ಬೆರೆತು ಹೋದರು. ಜೈನ ಬೌದ್ಧ ಧರ್ಮದ ರೀತಿ ಸೂಫಿ ಅನುಭಾವವೂ ಒಂದು ರೀತಿಯಲ್ಲಿ ಹಲವಾರು ಧಾರ್ಮಿಕ ಸಂದೇಹಗಳಿಗೆ ಸಾಂಪ್ರದಾಯಿಕ ಉತ್ತರಗಳು ಸಮಾಧಾನಕರವಾಗಿ ಕಾಣದಿದ್ದುದರಿಂದ ಉಗಮವಾಯಿತೆನ್ನಬಹುದು.

ಪ್ರವಾದಿಯ ಮರಣದ ಸುಮಾರು ಒಂದು ಶತಮಾನದ ನಂತರ ಸೂಫಿ ಅನುಭಾವ ಒಂದು ಸ್ಪಷ್ಟ ರೂಪು ಪಡೆಯತೊಡಗಿತು. ಅವರು ಅನುಭಾವದ ಹಾದಿಯ ಪಯಣಿಗರು ಏಕೆಂದರೆ, "ಈ ಜಗತ್ತಿನಲ್ಲಿ ನಿನ್ನ ಧೂಳು ತುಂಬಿದ ಬೂಟುಗಳಿಂದ ಹಾಗೂ ಬಟ್ಟೆಗಳಿಂದ ಪಯಣಿಗನ ಹಾಗೆ, ಹಾದಿಹೋಕನ ಹಾಗಿರು. ಆಗಾಗ ಮರದ ನೆರಳಿನಲ್ಲಿ ಕೂಡು, ಸುಡುವ ಮರುಭೂಮಿಯಲ್ಲಿ ಅಲೆದಾಡು. ಆದರೆ ಯಾವಾಗಲೂ ಹಾದಿಹೋಕನಾಗಿರು; ಏಕೆಂದರೆ ಇದು ನಿನ್ನ ಮನೆಯಲ್ಲ".

ಪ್ರವಾದಿ ತೀರಿಕೊಂಡ ನಂತರ ಅಂತಹವರನ್ನು ಸೂಫಿಗಳೆಂದು ಕರೆಯಲಾಯಿತು. ಬಹುಶಃ ಅವರು ತೊಡುತ್ತಿದ್ದ ಉಣ್ಣೆಯ ಬಿಳಿಯ ಬಟ್ಟೆ (ಸೂಫ್) ಯಿಂದಿರಬಹುದು ಅಥವಾ ಅವರ ಆತ್ಮ ಪರಿಶುದ್ಧತೆ (ಸಫಾ) ಯಿಂದಿರಬಹುದು. ಇಸ್ಲಾಂನ ಮೊದಲ ಶತಮಾನದಲ್ಲಿ ನಿರಂತರ ಆಂತರಿಕ ದಂಗೆ, ರಕ್ತಪಾತ, ರಾಜಕೀಯ ಗುಂಪುಗಳ ಸ್ವಾರ್ಥ, ಅರಾಜಕತೆ, ನೈತಿಕ ಮೌಲ್ಯಗಳ ಅಧಃಪತನಗಳಿಂದಾಗಿ ವಿರಕ್ತತೆ ಬೆಳೆಯಲು ಹೆಚ್ಚು ಅನುಕೂಲಕರವಾಗಿತ್ತು. ಇಸ್ಲಾಂನಲ್ಲಿನ ಅನುಭಾವದ ಉಗಮ ಪ್ರಾಚೀನ ಈರೋಪ್ ಮತ್ತು ಭಾರತದಲ್ಲಿ ಮೊದಲೇ ಆರಂಭಗೊಂಡು ಆದಿ ಇಸ್ಲಾಂನ ಅವಧಿಯಲ್ಲಿ ವಿರಾಗಿಗಳ ರೂಪದಲ್ಲಿ ನೆಲೆಯೂರತೊಡಗಿ ಕ್ರಮೇಣ ಪ್ರವಾದಿಯ ನಂತರದ ಆದಿ ಉಮಯ್ಯಾದ್ ಅವಧಿಯಲ್ಲಿ (ಕ್ರಿ.ಶ. ೬೬೧-೭೫೦)

ಪ್ರವಾದಿಯ ಹಿಂಬಾಲಕರ ಪ್ರಾಪಂಚಿಕ ಆಸ್ಥೆಗಳಿಗೆ ವಿರುದ್ಧವಾಗಿ, ಪ್ರತಿಭಟನೆಯಾಗಿ ಬೆಳೆಯತೊಡಗಿತು. ಪ್ರವಾದಿಯ ನಂತರದ ಅವರ ಉತ್ತರಾಧಿಕಾರಿಗಳ ಸುಖ, ವೈಭೋಗ, ಪ್ರಾಪಂಚಿಕ ಮನೋಭಾವ, ಅವರ ಎಲ್ಲೆ ಮೀರಿದ ಬದುಕಿನ ರೀತಿಗಳ ವಿರುದ್ಧದ ಮೌನ ಪ್ರತಿಭಟನೆ ಸೂಫಿಸಂನ ಆರಂಭವಾಗಿತ್ತು.

ಒಂದು ರೀತಿಯಲ್ಲಿ ಸೂಫಿ ಬದುಕು ಸರ್ಕಾರದ ದಬ್ಬಾಳಿಕೆಯ ವಿರುದ್ಧ, ಸಂಪ್ರದಾಯಬದ್ಧ ಧಾರ್ಮಿಕ ಗುರುಗಳ ವಿರುದ್ಧ ಹಾಗೂ ಪಾರಮಾರ್ಥಿಕತೆಗಿಂತ ಇಹಲೋಕದ ಸುಖ ಸಂಪತ್ತುಗಳ ಬಗೆಗೆ ಹೆಚ್ಚು ಆಸ್ಥೆ ಇರುವ ಮುಸಲ್ಮಾನರ ಯಾಂತ್ರಿಕ ಧಾರ್ಮಿಕ ರೀತಿ ರಿವಾಜುಗಳ ವಿರುದ್ಧದ ಪ್ರತಿಭಟನೆಯಾಗಿತ್ತು. ಯಾವುದೇ ರೀತಿಯ ವಿವೇಚನೆಯಿಂದಾಗಲಿ ಅಥವಾ ಧಾರ್ಮಿಕ ರೀತಿ ರಿವಾಜುಗಳಿಂದಾಗಲೀ ಸಂತೃಪ್ತರಾಗದ ಸೂಫಿಗಳು ತಮ್ಮ ಅಂತರಿಕ ಪಾರಮಾರ್ಥಿಕ ಬದುಕನ್ನು ಉನ್ನತ ಮಟ್ಟಕ್ಕೆ ಒಯ್ಯುವುದರ ಬಗೆಗೆ ಹಾಗೂ ಅದರ ಮೂಲಕ ದೇವರೊಂದಿಗೆ ಸಮ್ಮಿಳಿತಗೊಂಡು, ದೇವರನ್ನು ನೇರವಾಗಿ, ಭಾವುಕವಾಗಿ ಅನುಭವಿಸುವ ಪ್ರಯತ್ನ ನಡೆಸಿದರು. ಸೂಫಿಗಳು ಮಸೀದಿಗಳನ್ನು ಕಟ್ಟಲಿಲ್ಲ. ಬದಲಿಗೆ ತಮ್ಮದೇ ಆದ ಶಿಷ್ಯ ಪರಂಪರೆಯನ್ನು ಹಾಗೂ ತತ್ವ ಪರಂಪರೆಯನ್ನು ಬೆಳೆಸಿದರು. ಉತ್ತರ ಕರ್ನಾಟಕದ ಸೂಫಿ ಸಾಹಿಬಣ್ಣನನ್ನು ಒಮ್ಮೆ ಒಬ್ಬ ಮುಲ್ಲಾ 'ನೀನು ಮಸೂತಿಗೆ ಯಾಕೆ ಬರುವುದಿಲ್ಲ?' ಎಂದು ಕೇಳಿದುದಕ್ಕೆ 'ನನ್ನ ಒಳಗೇ ಮಸೂತಿ ಇರುವಾಗ ನಾನೆಲ್ಲಿ ನಮಾಜು ಮಾಡಬೇಕು?' ಎಂದುತ್ತರಿಸಿದನಂತೆ. ಯಾವುದು ಸಾಂಪ್ರದಾಯಿಕ ಇಸ್ಲಾಂ ಆಗಿತ್ತೋ ಆ ಪರಿಕಲ್ಪನೆಗೆ ಬದಲಾಗಿ, ಪರ್ಯಾಯವಾಗಿ ಚಿಂತಿಸುತ್ತಾ, ಬದುಕುತ್ತಾ ಸೂಫಿಗಳು ಬಂದಿದ್ದಾರೆ.

ಗಲ್ಲಿಯಲ್ಲಿ ಬೊಗಳುವ ನಾಯಿ

'ನಾಯಿಯ ಹಾಗೆ ನಿನ್ನ ಮನೆಯ ಗಲ್ಲಿಯಲ್ಲಿ ದಿನ ನಿತ್ಯ ನಿನಗಾಗಿ ಬೊಗಳುತ್ತಿದ್ದೇನೆ.

ಆದರೆ ಯಾರ ನಾಯಿಯಿದು, ಏಕೆ ಬೊಗಳುತ್ತಿದೆಯೆಂದು ನೀನೊಂದು ದಿನವೂ ಕೇಳಲಿಲ್ಲ'.

ಸೂಫಿಗಳು ಸರಳವಾಗಿ ಹಾಗೂ ಬಡತನದಲ್ಲಿ ಬದುಕುತ್ತಿದ್ದರು. ವೈರಾಗ್ಯದ ಸಂಕೇತವಾಗಿ ಬಣ್ಣ ಹಾಕದ ಉಣ್ಣೆ ಬಟ್ಟೆಯನ್ನವರು ತೊಡುತ್ತಿದ್ದರು. 'ದಾರಿದ್ರ್ಯವೇ ನನ್ನ ಹಿರಿಮೆ' ಎಂದು ಹೇಳಿಕೊಳ್ಳುತ್ತಿದ್ದರು.

'ದೇವರೇ, ಬಡವನಾಗಿ ಬದುಕಲು ನನ್ನನ್ನು ಬಿಡು, ಬಡವನಾಗೇ ಸಾಯಲು ಬಿಡು. ನನ್ನ ಮುಂದಿನ ಜನ್ಮದಲ್ಲೂ ಬಡವರಲ್ಲೇ ಹುಟ್ಟುವಂತೆ ಮಾಡು' ಎಂದು ಪ್ರಾರ್ಥಿಸುತ್ತಿದ್ದರು. ಬಡತನವೆಂದರೆ ಹೇಗಿರಬೇಕು ಎಂಬುದನ್ನು ಸಾರಿ ಅಸ್-ಸಖಾತಿ ಹೀಗೆ ಹೇಳುತ್ತಾನೆ: 'ಯಾರಿಂದಲೂ ಏನನ್ನೂ ಕೇಳಬೇಡ, ಏನನ್ನೂ ಪಡೆಯಬೇಡ. ಇತರರಿಗೆ ಕೊಡಬಹುದಾದಂತಹುದನ್ನೂ ನೀನು ಇಟ್ಟುಕೊಳ್ಳಬೇಡ'. ಸೂಫಿಸಂ ಎಂದರೆ ಏನೆಂದು ಸೂಫಿ ಅಬು ಸೈಯದ್ ಇಬನ್ ಅಬಿ' ಲ್ ಖಯರ್‌ನನ್ನು ಕೇಳಿದಾಗ ಆತ, 'ನಿನ್ನ ಮನಸ್ಸಿನಲ್ಲಿರುವುದನ್ನೆಲ್ಲಾ ಮರೆತುಬಿಡು; ನಿನ್ನ ಕೈಯಲ್ಲಿರುವುದನ್ನೆಲ್ಲಾ ಕೊಟ್ಟು ಬಿಡು ; ನಿನ್ನ ಕರ್ಮವೇನೋ ಅದನ್ನು ಎದುರಿಸು' ಎಂದನಂತೆ.

ಪ್ರೇಮದ ಅಂತಃಸತ್ವವೆಂದರೆ
ಕೊಡುತ್ತಾ ಹೋಗು ನಿನ್ನಲ್ಲಿರುವುದನ್ನೆಲ್ಲಾ
ಬರಿದಾಗುವವರೆಗೆ
ನಿನ್ನ ಚೀಲ

- ಅಲ್ ಖುಶಾಯ್ ರಿ

ಒಮ್ಮೆ ಪರ್ಷಿಯಾದ ರಾಜ ಅಹಮ್ ಖಾನ ಪ್ರಖ್ಯಾತ ಆಸ್ಥಾನ ಕವಿ ಅಬ್ದುಲ್ ಸಿನಾಯ್ ಸೂಫಿಯಾಗಿ ರಾಜನ ಆಸ್ಥಾನ ಬಿಟ್ಟು ಕಾಡಿನಲ್ಲಿ ಒಂಟಿಯಾಗಿ ಜೀವಿಸುತ್ತಿದ್ದ. ಆತನನ್ನು ಬಿಟ್ಟುಕೊಡಲು ತಯಾರಿಲ್ಲದ ರಾಜ ಆತನನ್ನು ಕರೆಸಿ ಆತನಿಗೆ ತನ್ನ ರಾಜ್ಯದಲ್ಲಿನ ಪಾಲು ಕೊಡುವುದಾಗಿ ಹಾಗೂ ತನ್ನ ತಂಗಿಯನ್ನು ಮದುವೆ ಮಾಡಿಕೊಡುವುದಾಗಿ ಹೇಳುತ್ತಾನೆ. ಅದಕ್ಕೆ ಸಿನಾಯ್ 'ನಾನು ಸೂಫಿಯಾದ ದಿನದಿಂದ ಬಡತನವೇ ನನ್ನ ಪತ್ನಿಯಾಗಿದ್ದಾಳೆ' ಎಂದು ರಾಜನ ಕೊಡುಗೆಯನ್ನು ನಿರಾಕರಿಸುತ್ತಾನೆ.

ಸೂಫಿಗಳಾದವರಲ್ಲಿ ಜನಸಾಮಾನ್ಯರ ಜೊತೆಗೆ ಸಂತರೂ, ಕವಿಗಳೂ, ರಾಜರೂ ಇದ್ದರು. ಕೆಲವರು ಅಲೆಮಾರಿಗಳಾಗಿ ಊರೂರು ಅಲೆಯುತ್ತ ಭಿಕ್ಷೆ ಬೇಡುವ 'ದರ್ವೇಶ್' ಗಳಾಗಿ ತಮ್ಮ 'ಉಸ್ತಾದ' ರ ಉಪದೇಶಗಳಿಂದ ಕೇಳುಗರನ್ನು ರೊಚ್ಚಿಗೆಬ್ಬಿಸುತ್ತಿದ್ದರು. ಇನ್ನು ಕೆಲವರು ಊರಿಂದ, ಜನರಿಂದ ದೂರವಾಗಿ ಅಡವಿ, ಬೆಟ್ಟ, ಗುಡ್ಡಗಳನ್ನು ಸೇರಿ, ಗುಹೆಗಳಲ್ಲಿ ವಾಸಿಸುತ್ತ, ಶ್ಮಶಾನ, ಮರಳುಗಾಡುಗಳಲ್ಲಿ ಅಲೆದಾಡುತ್ತ ಏಕಾಂತದಲ್ಲಿ ಆತ್ಮದಂಡನೆಯಿಂದ, ಅಂತರಂಗ ಧ್ಯಾನದಿಂದ ಬದುಕು ನಡೆಸುತ್ತಿದ್ದರು. ಬಾಲ್ಖ್‌ನ ರಾಜಕುಮಾರ ಇಬ್ರಾಹಿಂ ಅದಮ್ (ಕ್ರಿ.ಶ ೭೭೬) ಸೂಫಿಯಾಗಿ ತನ್ನ ರಾಜ್ಯ ತೊರೆದು ಹರಕಲು ಉಣ್ಣೆ ಬಟ್ಟೆ ತೊಟ್ಟು ಸಿರಿಯಾದಲ್ಲೆಲ್ಲಾ ಅಲೆದಾಡುತ್ತ ಅಲ್ಲಲ್ಲಿ ತೋಟಗಳಲ್ಲಿ ಮಾಲಿಯಾಗಿ ಕೆಲಸ ಮಾಡುತ್ತ ಅಥವಾ ಕೂಲಿ ಕೆಲಸ ಮಾಡುತ್ತಿದ್ದನಂತೆ. ಆತನನ್ನು ಗುರುತು ಹಿಡಿದವರ್ಯಾರಾದರೂ 'ರಾಜಕುಮಾರನಾಗಿ ಏಕೆ ಈ ರೀತಿಯ ಕೆಲಸ ಮಾಡುತ್ತೀಯೆ?' ಎಂದು ಕೇಳಿದಾಗ, 'ನನ್ನನ್ನು ಜನ ಜಮಾಲಿ (ಒಂಟೆ ಮೇಯಿಸುವವ) ಎಂದು ಕೊಳ್ಳಲಿ ಅಥವಾ ತುಚ್ಛನೆಂದುಕೊಳ್ಳಲಿ, ನಾನು ನನ್ನ ಧರ್ಮವನ್ನು ಸೈತಾನನಿಂದ ರಕ್ಷಿಸಬೇಕು' ಎನ್ನುತ್ತಿದ್ದನಂತೆ.

ಮಲಾಮತಿಗಳೆಂಬ ಸೂಫಿಗಳು ಜನರ ಮೆಚ್ಚುಗೆಯ ಹೆದರಿಕೆಯಿಂದ ಬೇಕೆಂತಲೇ ಜನ ತಮ್ಮ ಮೇಲೆ ಸಿಟ್ಟಿಗೇಳುವ ಹಾಗೆ, ಅಸಹ್ಯ ಪಡುವ ಹಾಗೆ ನಡೆದುಕೊಳ್ಳುತ್ತಿದ್ದರು.

ನನ್ನ ಮತ್ತು ಈ ಪ್ರಪಂಚದ ನಡುವೆ ದ್ವೇಷದ ಕೊಳ್ಳಿ ಹೊತ್ತಿಸು
ಈ ಪ್ರಾಪಂಚಿಕರ ನಿಷ್ಠೆ ನನ್ನಲ್ಲಿ ಹೇಸಿಗೆ ಬರುವಂತೆ ಮಾಡು
ಇತರ ಎಲ್ಲಾ ವಸ್ತುಗಳಿಗೆ ಬೆನ್ನು ತೋರುವಂತೆ ನನ್ನ
ಹೃದಯವನ್ನು ಮಾಡು
ಏಕೆಂದರೆ ಅದರಲ್ಲಿ ಪ್ರೀತಿ ಪ್ರೇಮ ಮಾತ್ರ ಉಳಿದಿರಲಿ.

- ನೂರದ್-ದಿನ್-ಜಾಮಿ

ಮಾಲಾಮತಿಗಳ ಪಂಗಡ ೮ ನೇ ಶತಮಾನವಲ್ಲಿ ಇರಾನಿನ ಮಸಿದ್ ಪ್ರದೇಶದಲ್ಲಿ ಹೆಚ್ಚು ಪ್ರಚಲಿತದಲ್ಲಿತ್ತು. ಮಾಲಾಮತಿಯ ಪದದ ವ್ಯುತ್ಪತ್ತಿ ಅರಾಬಿಕ್ ಪದ 'ಲಾ ಮಾ' (ನೀಚ, ದುಷ್ಟ) ದಿಂದ ಆಗಿದೆ. ಮಾಲಾಮತಿಗಳ ಸಿದ್ಧಾಂತ, ಆತ್ಮದ ವಿಷಯಲೋಲುಪತೆಯ ತಿರಸ್ಕಾರ ಹಾಗೂ ಅದನ್ನು ಪ್ರಾಪಂಚಿಕ ಆಸೆಗಳಿಗೆ ಬಲಿಯಾಗದಂತೆ ಕಾಯಬೇಕೆಂಬ ನಂಬಿಕೆಯ ಮೇಲೆ ನಿರ್ಮಿತವಾಗಿತ್ತು. ಮಾಲಾಮತಿಗಳು ಆತ್ಮನಿಂದನೆ ಹಾಗೂ ಆತ್ಮದಂಡನೆ ಮಾಡಿಕೊಳ್ಳುತ್ತಿದ್ದರು. ಇದರಿಂದಾಗಿ ಪ್ರಾಪಂಚಿಕ ವಿಷಯಗಳಿಂದ ತಾವು ದೂರಾಗಬಹುದು ಹಾಗೂ ಅದರ ಮೂಲಕ ದೇವರಿಗೆ ಹತ್ತಿರಾಗಬಹುದೆಂದು ನಂಬಿದ್ದರು. ಇತರರ ಹೊಗಳಿಕೆ, ಗೌರವ, ಆದರಗಳಿಗೆ ಹೆದರುತ್ತಿದ್ದರು. 'ಭಕ್ತಿಯೆಂದರೆ ದೇವರು ಹಾಗೂ ನನ್ನ ನಡುವಿನ ಖಾಸಗಿ ವಿಷಯ' ಎಂದು ಮಾಲಾಮತಿಗಳು ಹೇಳುತ್ತಿದ್ದರು. ತನಗೆ ಕೀರ್ತಿ ದೊರಕಬಹುದೆಂದು ಹೆದರಿ ಮುನ್ನೆಚ್ಚರಿಕೆಯಾಗಿ ಮಾಲಾಮತಿ ತನ್ನ ಜ್ಞಾನವನ್ನೂ ಪ್ರದರ್ಶಿಸದೆ ದಡ್ಡನಂತೆ ವರ್ತಿಸುತ್ತಿದ್ದ ಹಾಗೂ ತನ್ನ ದಡ್ಡತನವನ್ನು, ತಪ್ಪುಗಳನ್ನು ಇತರರು ತಿಮ್ಮುವಂತೆ ಮಾಡುತ್ತಿದ್ದ. ತಮ್ಮ ಬಗ್ಗೆ ಎಷ್ಟು ನಿಷ್ಠುರ ಹಾಗೂ ನಿರ್ದಯವಾಗಿರುತ್ತಿದ್ದರೋ ಇತರರ ಬಗ್ಗೆ ಅಷ್ಟೇ ತಾಳ್ಮೆ ಹಾಗೂ ಕ್ಷಮಾ ಮನೋಭಾವ ಹೊಂದಿರುತ್ತಿದ್ದರು. ಇತರ ಸೂಫಿಗಳು ತಮ್ಮ ದೈವ ಭಕ್ತಿ, ಸಾಧನೆಗಳನ್ನು, ಹಾಡಿ ಕುಣಿದು ಆಚರಿಸುತ್ತಿದ್ದರೆ, ಮಾಲಾಮತಿಗಳು ತಮ್ಮ ಸಾಧನೆಗಳನ್ನು, ತಮ್ಮ ಭಕ್ತಿಭಾವನೆಗಳನ್ನು ಅವಿತಿಟ್ಟುಕೊಳ್ಳುತ್ತಿದ್ದರು. ತಾವು ಸೂಫಿಗಳೆಂದೂ ಸಹ ತೋರಿಸಿಕೊಳ್ಳುತ್ತಿರಲಿಲ್ಲ. ಹೊರಗಿನ ಪ್ರಪಂಚದಲ್ಲಿ ಮಾಲಾಮತಿಗಳು ಯಾವ ನಿಯಮವನ್ನೂ ಪಾಲಿಸದೆ ಹೇಗೆ ಜನರ ನಿಂದನೆ ಗಳಿಸುತ್ತಿದ್ದರೋ ಹಾಗೆಯೇ ಖಾಸಗಿ ಬದುಕಿನಲ್ಲಿ ದೈವ ಭಕ್ತಿ ಹಾಗೂ ಆರಾಧನೆಯನ್ನು ಅಷ್ಟೇ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಇವರ ಈ ನಡವಳಿಕೆಗಳಿಂದ ಇತರ ವಿದ್ವಾಂಸರು ಇವರನ್ನು ಸೂಫಿಗಳೆಂದು ಸಹ ಗುರುತಿಸುತ್ತಿರಲಿಲ್ಲ.

ನಿಶ್ಶಬ್ದ ಶೂನ್ಯದ ಜೊತೆ ಮೌನದ ಮಾತು

ಹನ್ನೆರಡನೇ ಶತಮಾನದಿಂದೀಚೆಗೆ ಸೂಫಿಗಳು ವಿವಿಧ ಗುಂಪುಗಳಾಗಿ ರೂಪುಗೊಂಡರು. ಆ ಗುಂಪುಗಳಿಗೆ ಸಾಮಾನ್ಯವಾಗಿ ಅವುಗಳನ್ನು ರೂಪಿಸಿದವರ ಹೆಸರಿನಿಂದಲೇ ಕರೆಯುತ್ತಾರೆ. ಅಂಥವುಗಳಲ್ಲಿ ಬಹಾ ಅದ್ -ದೀನ್ ನಕ್ಷ್ ಬಂದ್ ರೂಪಿಸಿದ 'ನಕ್ಷ್ ಬಂದಿಯ್ಯಾ' ಸಹ ಒಂದು. ಇತರ ಗುಂಪುಗಳು ದೇವರ ಧ್ಯಾನ (ದಿಕ್ರ್) ವನ್ನು ಸಂಗೀತ, ಹಾಡು, ನೃತ್ಯಗಳಿಂದ ಮಾಡಿದರೆ ಇವರು ಮೌನದಿಂದ ಮಾಡುತ್ತಾರೆ. ಏಕೆಂದರೆ ಅವರ ಪ್ರಕಾರ ದೇವರೆಂದರೆ ನಿಶ್ಶಬ್ದ ಶೂನ್ಯ. ಆತನನ್ನು ಮೌನದಿಂದಲೇ ಮಾತನಾಡಿಸುವುದು ಸುಲಭ. ನಕ್ಷ್ ಬಂದಿಗಳ ಮತ್ತೊಂದು ಆಚರಣೆಯೆಂದರೆ, ಜನಜಂಗುಳಿಯಲ್ಲಿ 'ಒಂಟಿ'ಯಾಗಿರುವುದು. ತಮ್ಮ ದಿನನಿತ್ಯದ ಪ್ರಾಪಂಚಿಕ ಕರ್ತವ್ಯಗಳನ್ನು ತಿರಸ್ಕರಿಸಿ ಸನ್ಯಾಸಿಯಾಗುವ ಬದಲು ಬದುಕಿನ ಮೌಲ್ಯಗಳಿಗೆ ಅಂಟಿಕೊಳ್ಳದೆ ಬದುಕಿನಲ್ಲಿ ತೊಡಗಿಸಿಕೊಳ್ಳಲು ನಕ್ಷ್ ಬಂದಿ ಗುರುಗಳು ತಮ್ಮ ಶಿಷ್ಯರಿಗೆ ಬೋಧಿಸುತ್ತಾರೆ. ಹಾಗಾಗಿ ಈ ಗುಂಪಿನ 'ಪಥಿಕರು' ಸಮಾಜದೊಂದಿಗೆ ಬೆರೆತು, ಎಲ್ಲರಂತೆ ಮದುವೆಯಾಗಿ, ಕುಟುಂಬಗಳನ್ನು ಹೊಂದಿ ಉದ್ಯೋಗ ಮಾಡುತ್ತಿರುತ್ತಾರೆ. ನಕ್ಷ್ ಬಂದಿಗಳು ಮೊದಲು ಕುಶಲಕರ್ಮಿಗಳು, ಚಮ್ಮಾರರು, ದರ್ಜಿಗಳು ಮತ್ತು

ನೇಕಾರರಾಗಿದ್ದರು. ಬಹಾ ಅದ್-ದೀನ್ ನಕ್ಶ್ ಬಂದ್ ಕುಂಬಾರನಾಗಿದ್ದನಂತೆ. ನಕ್ಷ್ ಬಂದಿಗಳು ತಮ್ಮ ಸಮಾಜದ ಹಾಗೂ ದರ್ಮದ ಚೌಕಟ್ಟಿನಲ್ಲಿಯೇ ಕೆಲಸ ಮಾಡುತ್ತಿರುತ್ತಾರೆ. ಹಾಗಾಗಿ ಕ್ರಿಶ್ಚಿಯನ್, ಹಿಂದೂ ಹಾಗು ಬೌದ್ಧರಲ್ಲೂ ಸಹ ಸೂಫಿಗಳಿದ್ದಾರೆ. ಇವರೆಲ್ಲಾ ತಮ್ಮ ದಿನನಿತ್ಯದ 'ಸಾಧಾರಣ' ಬದುಕಿನ ಜಂಜಾಟದಲ್ಲಿದ್ದರೂ ಸಹ ಸೂಕ್ಷ್ಮ ಆದರೆ ಅಷ್ಟೇ ಪ್ರಬಲಯುತವಾದ ತಮ್ಮ ಆಂತರಿಕ ಅನುಭಾವದ ಅನುಭವದ ಹಾದಿಯಲ್ಲಿ ಪಯಣಿಸುತ್ತಿರುತ್ತಾರೆ.

ಸೂಫ್ ಅಥವಾ ಸಫಾ?

'ಸೂಫಿ' ಪದದ ವ್ಯುತ್ಪತ್ತಿಯು ಮೊದಲಿನಿಂದಲೂ ಚರ್ಚಾಸ್ಪದ ವಿಷಯವಾಗಿದೆ. ಬಹಳಷ್ಟು ಜನ ಸೂಫಿಗಳು ಹೇಳುವಂತೆ ಸೂಫಿ, 'ಸಫಾ'-ಪರಿಶುದ್ಧತೆ ಎನ್ನುವ ಪದದಿಂದ ವ್ಯುತ್ಪತ್ತಿ ಹೊಂದಿದೆ. ಸೂಫಿ ಪ್ರಾಪಂಚಿಕ ಹೊಲಸುಗಳಿಂದ ಮುಕ್ತನಾಗಿ ಪರಿಶುದ್ಧನಾಗಿರುವವ ಎಂದು ಅವರು ಹೇಳುತ್ತಾರೆ. ಇನ್ನು ಕೆಲವರು ಅದು 'ಸಫ್'-ಶ್ರೇಣಿ / ದರ್ಜೆಯಿಂದ ಬಂದಿದೆ ಎನ್ನುತ್ತಾರೆ. ಅಂದರೆ ಸೂಫಿಗಳು ಧಾರ್ಮಿಕವಾಗಿ ಮೊದಲ ದರ್ಜೆಯಲ್ಲಿ ಇರುವವರು ಎಂದು. ಇನ್ನು ಕೆಲವರು ಹೇಳುವಂತೆ ಆ ಪದದ ಮೂಲ 'ಸುಫಾ'-ಬೆಂಚು. ಅಂದರೆ, ಸೂಫಿ ಬದುಕು ಆರಂಭವಾದದ್ದು 'ಅಹಲ್ ಅಲ್ ಸುಫಾ' -ಬೆಂಚುಗಳ ಜನರಿಂದ. ಅಹಲ್ ಅಲ್ ಸುಫಾಗಳು ಬಡ ಮುಸ್ಲಿಮರು ಹಾಗೂ ತಲೆಯ ಮೇಲೆ ಸೂರಿಲ್ಲದಿದ್ದವರು. ಅವರು ಮದೀನಾದಲ್ಲಿ ಪ್ರವಾದಿ ಕಟ್ಟಿಸಿದ ಮಸೀದಿಯ ಮುಂದಿನ ಬೆಂಚುಗಳ ಮೇಲೆ ಆಶ್ರಯ ಪಡೆಯುತ್ತಿದ್ದುದರಿಂದ ಸೂಫಿ ಪದ ಬಂದಿತೆನ್ನುತ್ತಾರೆ. ಅಧ್ಯಯನಕಾರರ ಪ್ರಕಾರ ಈ ವ್ಯುತ್ಪತ್ತಿಗಳೆಲ್ಲಾ ಶಬ್ದ ರಚನೆಯ ಭಾಷಾಶಾಸ್ತ್ರದ ಪ್ರಕಾರ ಸರಿಯೆಂದು ಹೇಳಲಾಗುವುದಿಲ್ಲ. ಬಹಳಷ್ಟು ಜನ ಸೂಫಿಗಳು ನಂಬುವಂತೆ ಹಾಗೂ ಹೆಚ್ಚು ಪ್ರಚಲಿತದಲ್ಲಿರುವ ನಂಬಿಕೆಯ ಪ್ರಕಾರ 'ಸೂಫಿ' ಪದದ ಮೂಲ 'ಸೂಫ್'-ಉಣ್ಣೆ ಎನ್ನುವುದು. ಸೂಫಿಗಳು ಬಣ್ಣ ಹಾಕದ ಉಣ್ಣೆಯ ಉದ್ದನೆಯ ಗೌನಿನಂತಹ ಉಡುಪು ಧರಿಸುತ್ತಿದ್ದುದರಿಂದ ಸೂಫಿ ಪದ ಬಂದಿತೆಂದು ಹೇಳುತ್ತಾರೆ. ಸೂಫಿಗಳು ಈ ರೀತಿಯ ಉದ್ದನೆಯ ಉಣ್ಣೆಯ ಉಡುಪು ಧರಿಸುವುದನ್ನು ಆಗಿನ ಕ್ರಿಶ್ಚಿಯನ್ ಸನ್ಯಾಸಿಗಳಿಂದ ಕಲಿತರೆಂದು ಹೇಳಲಾಗುತ್ತದೆ. ಈ ರೀತಿ ಬಣ್ಣವಿರದ ಉಣ್ಣೆಯ ಉದ್ದನೆ ಉಡುಪು ಧರಿಸುತ್ತಿದ್ದುದು ಸರಳತೆ ಹಾಗೂ ವಿರಕ್ತತೆಯ ಸಂಕೇತವಾಗಿತ್ತು.

ಸತ್ಯದ ಪಥವನ್ನು ಆಯ್ದುಕೊಂಡವನಿಗೆ ಆತನ ಗುರುಗಳು 'ಖಿರ್ಖಾ' (ಚಿಂದಿ, ಹರಕು ಬಟ್ಟೆ) ತೊಡಿಸುತ್ತಿದ್ದರು. ಖಿರ್ಖಾ 'ಫಕ್ರ್' (ದಾರಿದ್ರ್ಯ, ಬಡತನ) ದ ಸಂಕೇತವಾಗಿರುತ್ತಿತ್ತು. 'ಖಿರ್ಖಾ' ಗೆ ಅರ್ಹನಾಗಬೇಕಾದಲ್ಲಿ ಶೇಖ್ (ಸೂಫಿ ಗುರು) ರ ಮಾರ್ಗದರ್ಶನದಲ್ಲಿ ಹಲವಾರು ವರ್ಷಗಳು ಸಾಧನೆ ಮಾಡಬೇಕಾಗುತ್ತಿತ್ತು. ಆದರೆ ಬಹಳಷ್ಟು ಸೂಫಿಗಳು ಈ ರೀತಿಯ ಧಿರಿಸಿನ ಅವಶ್ಯಕತೆಯನ್ನು ತಿರಸ್ಕರಿಸಿದ್ದರು. 'ಖಿರ್ಖಾ' ಕೇವಲ ಬಾಹ್ಯ ಸಾಂಕೇತಿಕವಷ್ಟೆ. ಆದರೆ ನಿಜವಾದ ಸತ್ಯಾನ್ವೇಷಕನನ್ನು ಗುರುತಿಸುವುದು 'ಖಿರ್ಖಾ' ದಿಂದಲ್ಲ, ಬದಲಿಗೆ ಆತನ 'ಹಿರ್ಖಾ' (ಆಂತರಿಕ ಜ್ವಾಲೆ) ದಿಂದ ಎನ್ನುತ್ತಿದ್ದರು.

ಅನಲ್ ಹಖ್-ನಾನೇ ಪರಮ ಸತ್ಯ

ಅರಸುತ್ತಾ ಹೊರಟೆ
ಆತನನ್ನು ನಾನು
ಆತ ಶಿಲುಬೆಯ ಮೇಲಿರಲಿಲ್ಲ
ವಿಗ್ರಹಗಳಿದ್ದ ದೇವಾಲಯಗಳಲ್ಲೂ ಇರಲಿಲ್ಲ
ಪುರಾತನ ಪಗೋಡಾಗಳಲ್ಲಿಯೂ ಆತನ ಸುಳಿವಿರಲಿಲ್ಲ
ಕಾಬಾದ ನರನಾಡಿಗಳಲ್ಲಿ ಆತ ಕಾಣಲಿಲ್ಲ
ಶಿಶುವಿಹಾರಗಳಲ್ಲಾಗಲಿ, ವೃದ್ಧಾಶ್ರಮಗಳಲ್ಲಾಗಲಿ
ಆತ ಇರಲೇ ಇಲ್ಲ
ಇಬನ್ ಸಿನಾನನ್ನು ಕೇಳಿದೆ
ಆತನ ರಾಜ್ಯದಲ್ಲಿರುವನೇ ಎಂದು
ಅಲ್ಲಿಯೂ ಸಿಗಲಿಲ್ಲ
ಬಳಲಿದ ನಾನು
ತಡಕಾಡಿದೆ ನನ್ನ ಎದೆಯೊಳಗೆ
ಆತ ಮತ್ತೆಲ್ಲೂ ಇರಲಿಲ್ಲ, ನನ್ನಲ್ಲೇ ಇದ್ದ

- ರೂಮಿ

ಗುಲಾಮನೇ ದೊರೆ
ದೊರೆಯೇ ಗುಲಾಮ
ಇವರಲ್ಲಿ ಸಾಲಗಾರನ್ಯಾರೆಂದು
ಹೇಳುವುದು ಹೇಗೆ?

- ಇಬನ್-ಅಲ್-ಅರಾಬಿ

ಸೂಫಿ ಚರಿತ್ರೆಯಲ್ಲಿ ಬಾಗ್ದಾದಿನ ಮನ್ಸೂರ್ ಅಲ್-ಹಲ್ಲಾಜ್‌ನ (ಕ್ರಿ.ಶ ೮೫೮-೯೨೨) ಬದುಕು ಒಂದು ಕ್ರಾಂತಿಕಾರಿ ಅಧ್ಯಾಯ. ಆತ 'ಅನಲ್ ಹಖ್' ತತ್ವವನ್ನು ಮಂಡಿಸಿದ. ಅಂದರೆ ನಾನೇ 'ಪರಮ ಸತ್ಯ' ಎಂಬುದು. ಇದನ್ನು ಡಾ. ರಹಮತ್ ತರೀಕೆರೆ 'ಅಹಂ ಬ್ರಹ್ಮಾಸ್ಮಿ' ಎಂಬ ಅದ್ವೈತ ತತ್ವಕ್ಕೆ ಸಮೀಕರಿಸುತ್ತಾರೆ. 'ಒಬ್ಬ ದೇವರಿಂದ ಮತ್ತೊಬ್ಬ ದೇವರನ್ನು ಅರಸುತ್ತಾ ಹೋದೆ. ಒಳಗಿಂದ ನೀನೇ ನಾನು ಎಂಬ ದನಿ ಬಂತು' ಎಂದು ಸೂಫಿಗಳು ಈ ಅನಲ್ ಹಖ್ ಅವಸ್ಥೆಯನ್ನು ವರ್ಣಿಸುತ್ತಾರೆ. ಅದನ್ನು ಹಲ್ಲಾಜ್ ಈ ರೀತಿ ಹೇಳುತ್ತಾನೆ:

ನಾನು ಪ್ರೀತಿಸುವ ಆತನು ನಾನೆ
ಒಂದೇ ದೇಹದ ಮನೆಯ ಎರಡು ಆತ್ಮಗಳು ನಾವು
ನನ್ನನ್ನು ನೋಡುವವರು ಆತನನ್ನೂ ಕಾಣುತ್ತಾರೆ.
ಆತನನ್ನು ನೋಡುವವರು ನಮ್ಮಿಬ್ಬರನ್ನೂ ಕಾಣುತ್ತಾರೆ.

'ಎಲ್ಲ ಮಾನವರೂ ಆತ್ಮ ರೂಪಿಗಳು, ದೇವರು ಎಲ್ಲೂ ಇಲ್ಲ. ನಮ್ಮಲ್ಲೇ ಇದ್ದಾನೆ, ಆತನನ್ನು ಕಾಣಲು ಹಾಗೂ ಆತನೊಂದಿಗೆ ಬೆರೆಯಲು ನಮಾಜೆಂಬ ರಿವಾಜು ಬೇಕಿಲ್ಲ. ಒಳ್ಳೆಯ ಕೆಲಸ ಮಾಡುತ್ತಾ ದುಡಿದು ಜೀವಿಸಿದರೆ ಸಾಕು' ಎನ್ನುತ್ತಾನೆ ಹಲ್ಲಾಜ್. ನಿಜವಾದ ಮುಸಲ್ಮಾನನು ತನ್ನ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಮೆಕ್ಕಾಗೆ ಹೋಗಿಬರಬೇಕು ಎಂಬ ನಂಬಿಕೆಯನ್ನೂ ಸಹ ಹಲ್ಲಾಜ್ ತಿರಸ್ಕರಿಸಿದ. 'ದೇವರು ನಮ್ಮಲ್ಲೇ ಇರುವಾಗ ಆತನನ್ನು ಅರಸಿ ಮೆಕ್ಕಾಗೆ ಏಕೆ ಹೋಗಬೇಕು? ನಿಜವಾದ ಪ್ರೇಮಿಯ ಪ್ರಾರ್ಥನೆ ಒಂದು ಅಧಾರ್ಮಿಕ ಆಚರಣೆ' ಎಂದು ಹೇಳಿದ. ಹಲ್ಲಾಜನ ಮಾತುಗಳು ಸಾಂಪ್ರದಾಯಿಕ ಮುಸಲ್ಮಾನರನ್ನು ರೊಚ್ಚಿಗೆಬ್ಬಿಸಿದವು. ೯೨೨ ರಲ್ಲಿ ವಿಚಾರಣೆ ನಡೆಸಿ ಆತನನ್ನು ಚಿತ್ರಹಿಂಸೆ ಕೊಟ್ಟು ಕೊಲ್ಲಲಾಯಿತು. ಸಾಯುವ ಸಮಯದಲ್ಲೂ ಸಹ ಹಲ್ಲಾಜನು ಧೃತಿಗೆಡಲಿಲ್ಲವಂತೆ. ಆತನ ದೇಹವನ್ನು ಸುಟ್ಟು ಬೂದಿಯನ್ನು ಟೈಗ್ರಿಸ್ ನದಿಗೆ ಚೆಲ್ಲಿ, ಆತನ ರುಂಡವನ್ನು ಆತನ ಅನುಯಾಯಿಗಳಿಗೆ ತೋರಿಸಲಾಯಿತು.

ಸುಕ್ರ್ ಮೂಲಕ ಫನಾ

ಸೂಫಿ ಅನುಭಾವಕ್ಕೆ ಆಗ ತುರ್ಕಿಸ್ತಾನ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಬೌದ್ಧ ಧರ್ಮ ಪ್ರಭಾವ ಬೀರಿರಬಹುದೆಂದು ನಂಬಲಾಗಿದೆ. ತಮ್ಮ ಅಸ್ತಿತ್ವವನ್ನೇ ಕಡೆಗಣಿಸಿ, ತಮ್ಮ ಎಲ್ಲಾ ಆಸೆ ಆಕಾಂಕ್ಷೆಗಳನ್ನು ದೂರವಾಗಿಸಿಕೊಂಡು ಎಲ್ಲಾ ಪ್ರಾಪಂಚಿಕ ವಸ್ತು ವಿಷಯಗಳಿಂದ ದೂರವಾಗಿ ತಲುಪುವ ಅತ್ಯುನ್ನತ ನೈತಿಕ ಅವಸ್ಥೆಯನ್ನು ಸೂಫಿಗಳು 'ಫನಾ' ಎನ್ನುತ್ತಾರೆ. ಅರಾಬಿಕ್ ಪದ 'ಫನಾ' ಎಂದರೆ ನಶಿಸುಹೋಗು ಅಥವಾ ಅಸ್ತಿತ್ವದಲ್ಲಿಲ್ಲದಂತಾಗು ಎಂದರ್ಥ. ಈ ಅವಸ್ಥೆ ಬೌದ್ಧರ 'ನಿರ್ವಾಣ' ಸ್ಥಿತಿಯನ್ನು ಹೋಲುತ್ತದೆ. ಅಲ್ಲದೆ ಸೂಫಿ ಬದುಕಿನ ಮೇಲೆ ಪ್ಲೇಟೋನ ಆಧ್ಯಾತ್ಮಿಕ ಪ್ರೇಮ ಹಾಗೂ ದಾರ್ಶನಿಕ ತತ್ವಗಳ ಪ್ರಭಾವ, ಗ್ರೀಕರ ಮದ್ಯದೇವತೆ ಡೈಯೊನಿಸಸ್ಸಿನ ಆರಾಧನೆಯ ಬಗೆಗಿನ ಬರಹಗಳ ಪ್ರಭಾವವೂ ಇದೆಯೆನ್ನುತ್ತಾರೆ.

ಸಾಂಪ್ರದಾಯಿಕ ಇಸ್ಲಾಮಿನ ಮೂಲಭೂತ ಅವಶ್ಯಕತೆಗಳಾದ ನಮಾಜು, ಉಪವಾಸ, ಹಜ್ ಇವನ್ನು ಸೂಫಿಗಳು ಬೇರೆ ದೃಷ್ಟಿಯಿಂದ ನೋಡಿದರು. ಇವೆಲ್ಲಕ್ಕಿಂತ ಹೆಚ್ಚಾಗಿ ಹೃದಯದ ಭಾವನೆಗಳಿಗೆ ಅವರು ಪ್ರಾಮುಖ್ಯತೆ ಕೊಟ್ಟರು. ಪ್ರೀತಿ ಪ್ರೇಮಗಳಿಂದ ಮಾತ್ರ ದೇವರನ್ನು ಹತ್ತಿರದಿಂದ ಕಾಣಲು ಸಾಧ್ಯ ಎಂಬುದು ಅವರ ಗ್ರಹಿಕೆಯಾಗಿತ್ತು.

ಪ್ರೇಮ (ಹಬ್) ಎನ್ನುವುದು ನಮಗೆ ಸುಖ ಸಂತೋಷ ಕೊಡುವ ನಮ್ಮ ಒಡಹುಟ್ಟಿದ ಆಸೆ. ಈ ಆಸೆ ಅತಿಯಾದಾಗ ಭಾವೋನ್ಮಾದ (ಇಷ್ಕ್) ವಾಗುತ್ತದೆ. ನಮ್ಮ ದೇಹದ ವಿವಿಧ ಜ್ಞಾನೇಂದ್ರಿಯಗಳು ವಿವಿಧ ಅಂಗಗಳ ಮೂಲಕ ಸುಖ ಪಡೆಯುತ್ತವೆ. ಆದರೆ ದೈವಿಕತೆಯ ದೃಷ್ಟಿಯಲ್ಲಿ ನಮಗೆ ಸುಖ ಕೊಡುವ ಅಂಗ ಹೃದಯ (ಖಲ್ಬ್). ಈ ಅಂಗದ ಮೂಲಕ ದೈವ ಪ್ರೇಮದ, ಯಾವುದೇ ಜ್ಞಾನೇಂದ್ರಿಯದ ಮೂಲಕವೂ ಸಿಗದ ಅವರ್ಣನೀಯ ಆನಂದ ಸಿಗುತ್ತದೆ ಹಾಗೂ ಅದೇ ಜ್ಞಾನದ ಮೂಲಸೆಲೆ ಎನ್ನುತ್ತಾರೆ ಸೂಫಿಗಳು.

ಪ್ರೇಮದ ಹಾದಿಯ ಪಥಿಕ ನಾನು
ಈ ಪ್ರೇಮದ 'ಕಾರವಾನ್' ಎಲ್ಲಿಗೆ ಕರೆದೊಯ್ಯುವುದೋ
ಅಲ್ಲಿದೆ ನನ್ನ ಧರ್ಮ, ನನ್ನ ಶ್ರದ್ಧೆ

- ಇಬನ್-ಅಲ್-ಅರಾಬಿ

ಅಲ್ಲದೆ ಈ ಪ್ರೇಮದ ಉನ್ಮಾದದ (ಸುಕ್ರ್) ಮೂಲಕ ತಮ್ಮನ್ನು ತಾವೇ ಕಳೆದುಕೊಂಡು 'ಫನಾ'ಅವಸ್ಥೆ ತಲುಪುತ್ತಾರೆ. ಈ ಕೆಳಗಿನ ಪದ್ಯ 'ಫನಾ' ಹಾಗೂ 'ಬಖಾ' (ವಿಶ್ವ ಪ್ರಜ್ಞೆ) ಅವಸ್ಥೆಗಳನ್ನು ಸ್ಫುಟವಾಗಿ ಚಿತ್ರಿಸುತ್ತದೆ.

ನನಗೆ ನಾನೇ ಅಪರಿಚಿತ
ಈಗ ದೇವರ ಹೆಸರಲ್ಲಿ ನಾನೇನು ಮಾಡಲಿ?
ಶಿಲುಬೆಯನ್ನು ಹೊಗಳುವುದಿಲ್ಲ
ಅರ್ಧಚಂದಿರನನ್ನೂ ಮೆಚ್ಚುವುದಿಲ್ಲ.
ನಾನು ಕ್ರೈಸ್ತನೂ ಅಲ್ಲ, ಯಹೂದಿಯೂ ಅಲ್ಲ
ನನಗೆ ಪೂರ್ವವಿಲ್ಲ ಪಶ್ಚಿಮವಿಲ್ಲ
ಭೂಮಿಯಾಗಲಿ ಸಾಗರವಾಗಲಿ ನನ್ನ ಮನೆಯಲ್ಲ
ನನಗೆ ಕುಟುಂಬವಿಲ್ಲ
ದೇವತೆಗಳಾಗಲಿ ಭೂತ ಪಿಶಾಚಿಗಳಾಗಲಿ ನನ್ನವರಲ್ಲ
ಬೆಂಕಿಯಿಂದ ನನ್ನನ್ನು ರೂಪಿಸಲಾಗಿಲ್ಲ
ಸಾಗರದ ನೊರೆಯಿಂದಲೂ ಅಲ್ಲ
ನನ್ನ ರೂಪಕ್ಕೆ ಧೂಳು ಕಾರಣವಲ್ಲ
ಮುಂಜಾನೆಯ ಮಂಜಿನ ಹನಿಯೂ ಅಲ್ಲ
ಚೀನಾ ನನ್ನ ತವರು ಮನೆಯಲ್ಲ
ಬುಲ್ಗಾರ್ ಅಥವಾ ಸಕ್ ಸೀನ್ ಸಹ ಅಲ್ಲ
ಪಂಚನದಿಗಳು ಹರಿಯುವ ಇಂಡಿಯಾದಲ್ಲಿ ನಾನು ಬೆಳೆಯಲಿಲ್ಲ
ಇರಾಕ್ ಅಥವಾ ಕೊರಸಾನ್‌ನಲ್ಲೂ ಅಲ್ಲ
ಈ ಪ್ರಪಂಚವೇ ನನ್ನ ನೆಲೆಯಲ್ಲ, ಸ್ವರ್ಗ ನರಕಗಳೂ ಅಲ್ಲ
ಈಡನ್ ಅಥವಾ ರಿಜ್ವಾನ್‌ನಿಂದ ನಾನು ಉದುರಿ ಬೀಳಲಿಲ್ಲ.
ಆದಮ್‌ನ ವಂಶಸ್ಥನೂ ನಾನಲ್ಲ
ಎಲ್ಲ ಜಾಗಗಳನ್ನೂ ಮೀರಿದ ಜಾಗದಲ್ಲಿ
ಯಾವ ಕುರುಹಿನ ನೆರಳೂ ಬೀಳದ ಜಾಡಿನಲ್ಲಿ
ನನ್ನ ದೇಹ ಹಾಗೂ ಆತ್ಮಗಳು
ಅತೀತವಾಗಿ ಜೀವಿಸುತ್ತಿವೆ
ನನ್ನ ಪ್ರಿಯತಮನ ಆತ್ಮದಲ್ಲಿ.

ದೇವರೊಂದಿಗೆ ಸಂಪೂರ್ಣ ಸಮ್ಮಿಳಿತವಾಗುವುದಕ್ಕೆ ತಮ್ಮ ಅಸ್ತಿತ್ವವನ್ನು ಸಂಪೂರ್ಣ ಇಲ್ಲದಂತಾಗಿಸಿಕೊಳ್ಳಬೇಕೆಂದು ಸೂಫಿಗಳು ಹೇಳುತ್ತಿದ್ದರು. ಸೂಫಿಯೊಬ್ಬ ಪ್ರಾಪಂಚಿಕ ವಿಷಯಗಳನ್ನು ದೂರವಾಗಿಸಿಕೊಂಡು, ಸಂಪೂರ್ಣ 'ಕಾಯಾ ವಾಚಾ ಮನಸಾ' ಪರಿಶುದ್ಧನಾಗಿ ದೇವರ ಪ್ರೇಮ ಸಾಗರದಲ್ಲಿ ತನ್ನನ್ನು ತಾನೇ ಕಳೆದುಕೊಂಡಾಗ ಆ ಸೂಫಿಯ ಸ್ವಂತ ಅಸ್ತಿತ್ವ ಇಲ್ಲವಾಗಿದೆ ಅಥವಾ ಆತ 'ಫನಾ' ಅವಸ್ಥೆ ತಲುಪಿದ್ದಾನೆ ಎನ್ನಲಾಗುತ್ತಿತ್ತು.

ಕೆಲವು ಸೂಫಿಗಳ ಪ್ರಕಾರ 'ಫನಾ' ಒಂದು ನಕಾರಾತ್ಮಕ ಅವಸ್ಥೆ. ಪ್ರಾಪಂಚಿಕ ಇಚ್ಛೆಗಳನ್ನು ತ್ಯಜಿಸಿ ಮಾನವ ಗುಣದ ನ್ಯೂನತೆಗಳನ್ನು ತಿರಸ್ಕರಿಸುವುದು ಒಬ್ಬ ವಿರಾಗಿಗೆ ಅತ್ಯವಶ್ಯಕವಾದರೂ, ಸೂಫಿಯು ಸತ್ಯಾನ್ವೇಷಣೆ ಪಥದಲ್ಲಿ ಸಾಗಿ ಹೋಗಲು ಅಷ್ಟು ಮಾತ್ರ ಸಾಲದು. ಸೂಫಿ ಪಥವನ್ನು ಆಯ್ದುಕೊಂಡವನು ತನ್ನ ಸ್ವಂತ ಅಸ್ತಿತ್ವ ಇಲ್ಲವಾಗಿಸಿಕೊಳ್ಳುವ ಮಾನಸಿಕ ಅವಸ್ಥೆಯನ್ನೇ ಇಲ್ಲವಾಗಿಸಿಕೊಳ್ಳಬೇಕು (ಫನಾ 'ಅನ್ ಅಲ್-ಫನಾ') ಈ ರೀತಿ ಎಲ್ಲಾ ಮಾನವ ವಿಶೇಷಣಗಳನ್ನು ತ್ಯಜಿಸಿ, ಪ್ರಾಪಂಚಿಕ ಅಸ್ತಿತ್ವದ ಅರಿವನ್ನೇ ಇಲ್ಲವಾಗಿಸಿಕೊಳ್ಳುವ ಮಾನಸಿಕ ಅವಸ್ಥೆಯನ್ನು ತಲುಪಿದಾಗ ದೇವರ ದಯೆಯಿಂದ ಅವರ ಆತ್ಮ ಬೇರೊಂದು ಆಯಾಮದಲ್ಲೇ ಎಚ್ಚೆತ್ತುಕೊಳ್ಳುತ್ತದೆ ಹಾಗೂ ಆಗ ಅಂಥವರಿಗೆ ದೈವಾಂತರ ರಹಸ್ಯ ವಿಶೇಷಣಗಳು ತನ್ನಿಂತಾನೆ ತೆರೆದುಕೊಳ್ಳುತ್ತವೆ ಎನ್ನುತ್ತಾರೆ. ಈ 'ಬಖಾ' ಅವಸ್ಥೆ ತಲುಪಿದ ನಂತರ ಸೂಫಿ ದೈವದೊಂದಿಗಿನ ನೇರ ಸಮ್ಮಿಳತಕ್ಕೆ ತಯಾರಾಗುತ್ತಾನೆ.

ಪ್ರೇಮದ ಹಾದಿಯ ಪಥಿಕರು

ನಾನು ನಿನ್ನನ್ನು ಚುಂಬಿಸಬೇಕು
ಆ ಚುಂಬನದ ಬೆಲೆ ನನ್ನ ಸಾವೆಂದು ನನಗೆ ಗೊತ್ತಿದೆ.
ನೋಡಿಲ್ಲಿ, ನನ್ನ ಪ್ರೇಮ
ನನ್ನ ಬದುಕಿನೆಡೆಗೆ ಸಂತೋಷದಿಂದ ಓಡಿ ಬರುತಿದೆ
ಕೂಗುತಿದೆ, ನಡೆ ಆ ಸಾವು ಪಡೆ

- ರೂಮಿ

ಧಾರ್ಮಿಕ ಚರಿತ್ರೆಯ ಆರಂಭದಿಂದಲೂ ಕಾಮ ಮತ್ತು ಧರ್ಮಗಳು ಒಂದರಲ್ಲೊಂದು ಹಾಸುಹೊಕ್ಕಾಗಿ ಹರಿದುಬಂದಿದೆ. ಧರ್ಮದ ತಿರುಳಿನಲ್ಲಿ ಕಾಮ ಅಡಗಿರಬಹುದು ಅಥವಾ ಅದಕ್ಕೆ ಧಾರ್ಮಿಕತೆಯ ಮುಸುಕು ಹೊದಿಸಿರಬಹುದು. ಆದರೆ ಧರ್ಮ ಮತ್ತು ಅಧ್ಯಾತ್ಮದ ಅಂತರಂಗದ ಭಾಗವಾಗಿ ಕಾಮವಿರುವುದು ಸತ್ಯ. ಆ ಕಾಮ ದೈಹಿಕ ಕಾಮವನ್ನು ಮೀರಿದುದು; ಅದಕ್ಕೆ ಅಶ್ಲೀಲದ ಯಾವುದೇ ಸೋಂಕಿರುವುದಿಲ್ಲ. ಬದಲಿಗೆ ಕಾಮದ ಅಧ್ಯಾತ್ಮೀಕರಣದ ಹಾದಿಯಲ್ಲಿ ಸೌಂದರ್ಯ ಪ್ರಜ್ಞೆಯ ಬೆಳಕು ಬೀರುವ ದಾರಿದೀಪವಾಗುತ್ತದೆ. ಇಲ್ಲಿ ಕಾಮದ ಮೂಲಭೂತ ವಾಸನೆಗಳು ಭಕ್ತಿ, ಕಾವ್ಯ, ಸಂಗೀತ ಹಾಗೂ ಪ್ರೀತಿ ಪ್ರೇಮಗಳ ಹೂವಾಗಿ ಅರಳುತ್ತದೆ. ಕಾಮ, ದೇವರೊಂದಿಗಿನ ಮಿಲನದ ಭಕ್ತಿ ಪರಾಕಾಷ್ಠೆಯನ್ನು ಸಂಕೇತಿಸುತ್ತದೆ.

ಪವಿತ್ರ ಕುರಾನಿನ ಕೇಂದ್ರ ಬಿಂದುವೂ ಸಹ ಪ್ರೀತಿ ಪ್ರೇಮವಾಗಿದೆ. ಇಸ್ಲಾಂನ ಆರಂಭದ ಸಮಯದಲ್ಲಿಯೇ ತಮ್ಮ ಅನುಭಾವದ ಅನುಭವಗಳಿಗೆ ಸ್ಪಷ್ಟ ರೂಪು ಕೊಡತೊಡಗಿದ

ಸೂಫಿಗಳು ಕ್ರಮೇಣ ಅನುಭಾವದೊಂದಿಗೆ 'ಕಾಮ'ವನ್ನು ನವಿರಾಗಿ ಮಿಶ್ರಮಾಡತೊಡಗಿದರು. ಸೂಫಿಗಳು ತಮ್ಮ ಪರಿಶುದ್ಧ ಹಾಗೂ ಆಧ್ಯಾತ್ಮಿಕ ಅನುಭಾವದ ಅನುಭವಗಳನ್ನು ವರ್ಣಿಸಲು ಶೃಂಗಾರದ / ಪ್ರಣಯದ ಸಂಕೇತಗಳನ್ನು ಅವಿಚ್ಛಿನ್ನವಾಗಿ ಬಳಸುತ್ತಾರೆ. ನಿಜವಾದ ಪ್ರೇಮಿ ಹೇಗೆ ತನ್ನ ಪ್ರಿಯಕರ ಅಥವಾ ಪ್ರಿಯತಮೆಯನ್ನು ಧ್ಯಾನಿಸುತ್ತಿರುತ್ತಾನೆಯೋ ಅದೇ ರೀತಿ ನಿಜವಾದ ಅನುಭಾವಿ ದೇವರನ್ನು ಬಿಟ್ಟು ಮತ್ತೇನನ್ನೂ ಧ್ಯಾನಿಸುವುದಿಲ್ಲ ಎನ್ನುತ್ತಾರೆ. ಸ್ತ್ರೀ ಪ್ರೇಮದ ಪರಿಭಾಷೆಯನ್ನು ಬಳಸಿ ಅನುಭಾವ ತತ್ವವನ್ನು ಸೂಫಿ ಕವಿಗಳು ಬೆಳೆಸುತ್ತ ಹೋದರು. 'ಹೆಣ್ಣನ್ನು ಪ್ರೇಮಿಸದೆ ದೈವವನ್ನು ಪ್ರೇಮಿಸಲು ಸಾಧ್ಯವಿಲ್ಲ' ಎಂದು ಜಲಾಲ್-ಅಲ್-ದಿನ್ ರೂಮಿ ಹೇಳಿದ.

ಸೂಫಿ ತತ್ವಕ್ಕೆ ಪ್ರೀತಿ ಪ್ರೇಮದ ಛಾಪು ಕೊಟ್ಟ ಹಿರಿಮೆ ರಾಬಿಯ ಅಲ್ ಅದವಿಯ್ಯಳಿಗೆ (ಕ್ರಿ.ಶ ೭೧೭-೮೦೧) ಸಲ್ಲುತ್ತದೆ. ಆಕೆಯ ಪ್ರೇಮ ಬರೇ ಭಕ್ತಿ ಪೂರ್ವಕ ಪ್ರೇಮವಷ್ಟೇ ಆಗಿರಲಿಲ್ಲ. ಅವರ ಗುರಿ ದೇವರೊಂದಿಗೆ ಸಂಪೂರ್ಣ ಒಂದಾಗುವ ರಾಗೋದ್ರೇಕದ ಅಭಿಲಾಷೆಯಾಗಿತ್ತು. ಆಕೆ ದೇವನೊಬ್ಬನ ಪ್ರಿಯತಮೆಯಾಗಿದ್ದಳು ಮಾತ್ರ ಹಾಗೂ ತನ್ನ ಪ್ರೇಮವನ್ನು ಯಾರೊಂದಿಗೂ ಹಂಚಿಕೊಳ್ಳಲು ತಯಾರಿರಲಿಲ್ಲ. ಪ್ರವಾದಿಯೊಂದಿಗೂ ಸಹ. ಹಸನ್ ಅಲ್ ಬಸ್ರಿ ಎಂಬಾತ ಆಕೆಯನ್ನು ಮದುವೆಯಾಗಲು ಪ್ರಸ್ತಾಪ ತಂದಾಗ, 'ನಾನು ಸೇರಿರುವುದು ದೇವನೊಬ್ಬನಿಗೆ ಮಾತ್ರ' ಎಂದು ಆತನ ಪ್ರಸ್ತಾಪವನ್ನು ತಿರಸ್ಕರಿಸಿದ್ದಳು. ಆಕೆಯ ಕಾಲದ ಧಾರ್ಮಿಕ ಕಟ್ಟಳೆಗಳನ್ನು ಮೀರಿದ ಆಕೆಯ ಪ್ರಾರ್ಥನೆ ಹೀಗಿತ್ತು. 'ಹೋ, ದೇವರೇ, ನಾನು ನರಕದ ಹೆದರಿಕೆಯಿಂದ ನಿನ್ನನ್ನು ಪೂಜಿಸಿದರೆ ನನ್ನನ್ನು ನರಕದಲ್ಲಿ ಸುಡು; ಸ್ವರ್ಗ ಪಡೆಯುವ ಆಸೆಯಿಂದ ನಿನ್ನನ್ನು ಪೂಜಿಸಿದರೆ ಸ್ವರ್ಗಕ್ಕೆ ನನ್ನನ್ನು ಸೇರಿಸಬೇಡ; ಆದರೆ ನಾನು ನಿನ್ನನ್ನು ನಿನಗಾಗಿ ಮಾತ್ರ ಪೂಜಿಸಿದರೆ ನಿನ್ನ ಅಸೀಮ ಸೌಂದರ್ಯವನ್ನು ನನ್ನಿಂದ ಅವಿತಿಡಬೇಡ.'

ರಾಬಿಯ ಸಣ್ಣ ಹುಡುಗಿಯಾಗಿರುವಾಗಲೇ ಅವಳನ್ನು ಕದ್ದು ಗುಲಾಮಳನ್ನಾಗಿ ಮಾರಾಟ ಮಾಡಿದ್ದರು. ಅವಳು ದೊಡ್ಡವಳಾದ ನಂತರ ಅವಳ ಆತ್ಮಶುದ್ಧತೆ ಹಾಗೂ ದೇವರ ಮೇಲಿನ ನಿಸ್ವಾರ್ಥ ಪ್ರೇಮದಿಂದಾಗಿ ಅವಳನ್ನು ಕೊಂಡಾತ ಆಕೆಯನ್ನು ಗುಲಾಮಗಿರಿಯಿಂದ ಮುಕ್ತಳನ್ನಾಗಿ ಮಾಡಿದ್ದ. ಆಕೆ ಮದುವೆಯಾಗದೆ ಆತ್ಮದಂಡನೆಯಿಂದ ಭಿಕ್ಷೆಯಿಂದ ಬದುಕುತ್ತಿದ್ದಳು. ಆಕೆ ದೇವರನ್ನು, 'ಹೋ ದೇವರೇ, ನನಗೆ ಕೊಡಬೇಕೆಂದಿರುವ ಸುಖ ಸಂತೋಷಗಳನ್ನೆಲ್ಲಾ ನಿನ್ನನ್ನು ದ್ವೇಷಿಸುವವರಿಗೆ ಕೊಟ್ಟುಬಿಡು. ನನಗೆ ಮುಂದಿನ ಜನ್ಮಗಳಲ್ಲಿ ಕೊಡಬೇಕೆಂದಿರುವ ಸುಖ ಸಂತೋಷಗಳನ್ನು ನಿನ್ನನ್ನು ಪ್ರೀತಿಸುವವರಿಗೆ ಕೊಟ್ಟುಬಿಡು. ನೀನೇ ನನಗಿರುವಾಗ ನನಗೆ ಮತ್ತೇನೂ ಬೇಡ' ಎಂದು ಪ್ರಾರ್ಥಿಸುತ್ತಿದ್ದಳಂತೆ.

ಸೂಫಿ ತತ್ವದಲ್ಲಿ ಪ್ರೇಮರಾಗಗಳ ಮಧುರತೆಯನ್ನು ನವಿರಾಗಿ ಬೆರೆಸುವುದನ್ನು ರಾಬಿಯ ಆರಂಭಿಸಿದ್ದರೂ ಸಹ ಅದರ ಅವಿಚ್ಛಿನ್ನ ಬಳಕೆಯಾದದ್ದು ಮನ್ಸೂರ್ ಹಲ್ಲಾಜ್‌ನಿಂದ. ಆತ ಆಗಿನ ಸಾಂಪ್ರದಾಯಿಕತೆ, ಮಡಿವಂತಿಕೆಯನ್ನು ಬದಿಗೊತ್ತಿ ದೇವರೊಂದಿಗಿನ ಮಿಲನದ ಬಗೆಗೆ ನೇರವಾಗಿ ಮಾತನಾಡತೊಡಗಿದ. ತನ್ನನ್ನು ಸೃಷ್ಟಿಸಿದ, ತನಗಿಂತ ವಿಭಿನ್ನವಾಗಿರುವ

ಮತ್ತೊಂದು ಚೈತನ್ಯವನ್ನು ರಾಬಿಯ ಪ್ರೀತಿಸತೊಡಗಿದರೆ, ಹಲ್ಲಾಜ್ ತನ್ನದೇ ಪ್ರತಿ ರೂಪವಾದ ದೇವರನ್ನು ಪ್ರೀತಿಸಿದ-ಒಂದೇ ದೇಹದ ಎರಡು ಆತ್ಮಗಳು ನಾವು ಎಂದ. ಆಗ ಕಣ್ಣೆದುರಿಗಿನ ಮಾನವ ಸೌಂದರ್ಯ ದೈವಿಕ ಸೌಂದರ್ಯ ಪ್ರಜ್ಞೆಯನ್ನು ನವಿರಾಗಿ ಎಚ್ಚರಿಸುವಲ್ಲಿ ಸಹಕಾರಿಯಾಗುತ್ತದೆ ಎಂದು ಭಾವಿಸಲಾಗಿತ್ತು. ಹಲ್ಲಾಜ್ ಹಲವಾರು ಬಾರಿ ಅನುಭಾವಿ ಮತ್ತು ದೇವರ ನಡುವಿನ ಸಂಬಂಧ ಪ್ರೇಮಿಗಳ ನಡುವಿನ ಸಂಬಂಧ ಎಂದು ಹೇಳುತ್ತಿದ್ದ. ಇಬ್ಬರು ಪ್ರೇಮಿಗಳ ಸಂಪೂರ್ಣ ಸಮಾಗಮದ ಪ್ರಜ್ಞೆ (ತವಹಿದ್) ಹಲ್ಲಾಜ್‌ನನ್ನು ದೇವರ ಕುರಿತು ಹೆಚ್ಚು ಮೋಹಪರವಶತೆಯಿಂದ ಮಾತನಾಡಿಸತೊಡಗಿತು. ಹಲ್ಲಾಜ್‌ನ ಹೇಳಿಕೆಗಳಿಂದ ಆಗಿನ ಸಂಪ್ರದಾಯವಾದಿಗಳು ರೊಚ್ಚಿಗೆದ್ದು ಆತನನ್ನು ಕೊಂದುಹಾಕಿದರೆಂದು ಈಗಾಗಲೇ ಹೇಳಲಾಗಿದೆ.

ನಂತರ ಬಂದ ಅಲ್-ಗಜಾಲಿ, 'ಹಲ್ಲಾಜ್ ಹೇಳಿದುದರಲ್ಲಿ ತಪ್ಪಿಲ್ಲ. ಆದರೆ ಅನುಭಾವದ ನಿರಂತರ ಸತ್ಯವನ್ನು ಅರಿತುಕೊಳ್ಳುವ ಮನಃಸ್ಥಿತಿ ತಲುಪಿಲ್ಲದ ಜನರಿಗೆ ಆತ ಬೋಧಿಸಿದುದರಿಂದ ಅವರು ಅದನ್ನು ತಪ್ಪಾಗಿ ಗ್ರಹಿಸಿದರು' ಎಂದು ಹೇಳಿದ.

ಎಲ್ಲ ಧರ್ಮಗಳ ರೀತಿ ರಿವಾಜುಗಳ ಪೂಜೆ ಪುರಸ್ಕಾರಗಳಿಗಿಂತ ಪರಸ್ಪರ ಪ್ರೇಮವೇ ಅತ್ಯುತ್ತಮ ಪೂಜೆ. ಎಲ್ಲ ಧರ್ಮಗಳ ಅಂತರಾಳ ಚೈತನ್ಯವೇ ಪ್ರೇಮ ಎಂದರು ಸೂಫಿಗಳು. ಪರಸ್ಪರ ದೂರ ಸರಿದಿರುವ ಎಲ್ಲ ಧರ್ಮಗಳನ್ನು ಪ್ರೀತಿ ಪ್ರೇಮಗಳು ಒಂದುಗೂಡಿಸಬಲ್ಲವು ಎನ್ನುವುದನ್ನು ರೂಮಿ ತನ್ನ ಪದ್ಯದಲ್ಲಿ ಹೀಗೆ ಹೇಳುತ್ತಾನೆ:

ಎಲ್ಲರೂ ಪೂಜಿಸುವುದು ನಿನ್ನೊಬ್ಬನನ್ನು ಮಾತ್ರ
ಏಕೆಂದರೆ ನೀನಿರುವುದು ಒಬ್ಬನೆ
ಹಾಗಿರುವಾಗ ಎಲ್ಲ ಧರ್ಮಗಳೂ
ಒಂದೇ ಧರ್ಮವಲ್ಲವೆ?

'ಇಸ್ಲಾಂ ಸೇರಿದಂತೆ ಎಲ್ಲ ಧರ್ಮಗಳ ಧಾರ್ಮಿಕ ಮೌಲ್ಯಗಳು ಕೇವಲ ಸಾಪೇಕ್ಷ ಅಸ್ತಿತ್ವವನ್ನು ಹೊಂದಿವೆ ; ಆಯಾ ಧರ್ಮಗಳ ಹಿರಿಮೆ, ಪ್ರೀತಿ ಪ್ರೇಮವನ್ನು ಉತ್ತೇಜಿಸುವುದರಲ್ಲಿದೆ' ಎನ್ನುತ್ತಾರೆ ಸೂಫಿಗಳು.

ಸೂಫಿ ಕಾವ್ಯ ಹಾಗೂ ಬಖಾ

ಇಸ್ಲಾಂನ ಚರಿತ್ರೆಯಲ್ಲಿ ಸೂಫಿ ಸಾಹಿತ್ಯದ ಪ್ರಾಮುಖ್ಯತೆಯನ್ನು ಅಂದಾಜು ಮಾಡುವುದು ಸಾಧ್ಯವಿಲ್ಲ. ಸೂಫಿ ಸಾಹಿತ್ಯ, ಅದರಲ್ಲೂ ಅನುಭಾವದ ಪ್ರೇಮ ಕಾವ್ಯ ಅರಾಬಿಕ್, ಪರ್ಷಿಯನ್, ಟರ್ಕಿಷ್ ಮತ್ತು ಉರ್ದು ಭಾಷೆಗಳಲ್ಲಿ ತನ್ನ ಪದಲಾಲಿತ್ಯ ಅರಳಿಸಿದ್ದು ಆ ಭಾಷೆಗಳ ಸುವರ್ಣಕಾಲವೆಂದು ಹೇಳಬಹುದು. ಸೂಫಿಗಳು ಕಾವ್ಯ ಹಾಗೂ ಸಂಗೀತದಂತಹ ಸೃಜನಶೀಲ ಕಲೆಯನ್ನು ಮನದಲ್ಲಿ ಧಾರ್ಮಿಕ ಭಾವನೆಗಳನ್ನು ನವಿರಾಗಿ ಎಬ್ಬಿಸಲು ಬಳಸುತ್ತಿದ್ದರು. ಅದಕ್ಕಾಗಿ 'ಸಮಾ'ಗಳೆಂಬ ಗೋಷ್ಠಿಗಳನ್ನು ಏರ್ಪಡಿಸುತ್ತಿದ್ದರು. ಕಾವ್ಯ ಹಾಗೂ ಸಂಗೀತ ಕೇಳುತ್ತ ಉನ್ಮಾದಗೊಂಡು ಹುಚ್ಚೆದ್ದು ಕುಣಿಯುತ್ತಿದ್ದರು. ಅವರ ಕಾವ್ಯ ಸಾಮಾನ್ಯವಾಗಿ

ಪ್ರಣಯ / ಶೃಂಗಾರಮಯವಾಗಿರುತ್ತಿದ್ದವು. ಸೂಫಿ ಕಾವ್ಯದ ಓದುಗನಿಗೆ ಅಥವಾ ಕೇಳುಗನಿಗೆ ರಚನಾಕಾರನ ಉದ್ದೇಶ ತಿಳಿದಿರದಿದ್ದಲ್ಲಿ ತಾವು ಓದುತ್ತಿರುವುದು / ಕೇಳುತ್ತಿರುವುದು ದೈವ ಪ್ರೇಮದ ಕಾವ್ಯವೋ ಅಥವಾ ಪ್ರಣಯ ಕಾವ್ಯವೋ ಎಂಬುದು ತಿಳಿಯಲಾರದಂತಿರುತ್ತದೆ. ಆದರೆ ಸೂಫಿಯೊಬ್ಬ ಅದರಲ್ಲಿನ ಅಗಲಿಕೆಯ ನೋವು ಅಥವಾ ಮಿಲನದ ಉನ್ಮಾದವನ್ನು ದೈವದೊಂದಿಗಿನ ಅಗಲಿಕೆ ಅಥವಾ ಮಿಲನಕ್ಕೆ ಸಮೀಕರಿಸಿಕೊಳ್ಳುತ್ತಾನೆ. ಸಂಗೀತ ಮತ್ತು ನೃತ್ಯ ಹೃದಯದಲ್ಲಿ ಸುಪ್ತವಾಗಿರುವ ಪ್ರೀತಿ ಪ್ರೇಮವನ್ನು - ಅದು ಪ್ರಾಪಂಚಿಕ, ದೈಹಿಕ ಸುಖದ ಪ್ರೇಮವಾಗಿರಬಹುದು ಅಥವಾ ದೈವಿಕ, ಅಧ್ಯಾತ್ಮದ ಪ್ರೇಮವಾಗಿರಬಹುದು-ಅವುಗಳನ್ನು ಕೆರಳಿಸುತ್ತದೆಂದು ಅಲ್-ಗಜಾಲಿ ಹೇಳಿದ. ಸೂಫಿಗಳು ಹೇಳುವಂತೆ ದೇವರ ಮೇಲಿನ ಪ್ರೇಮವನ್ನು ವ್ಯಕ್ತಪಡಿಸಲು ಅವರಿಗೆ ಪ್ರಣಯದಂತಹ ಉನ್ಮಾದದ ಸಂಕೇತ ಮತ್ತೊಂದು ಸಿಗುವುದಿಲ್ಲ.

ಮದಿರೆ, ಹಿಲಾಲು ಹಾಗೂ ಸೌಂದರ್ಯ
ವಾಸ್ತವದ ರೂಪಗಳು
ಎಲ್ಲ ರೂಪಗಳ ಅಭಿವ್ಯಕ್ತತೆಯೂ ಅವೇ
ಮದಿರೆ ನಿನ್ನ ಪಯಣದ ಹಾದಿ
ಹಿಲಾಲು ನಿನಗೆ ದಾರಿದೀಪ
ಸೌಂದರ್ಯವನ್ನು ಅಪ್ಪಿಕೋ ಬಿಡಬೇಡ
ಯಾರಿಂದಲೂ ಅದನ್ನು ಅವಿತಿಟ್ಟಿಲ್ಲ
(ಹಿಲಾಲು = ದೊಡ್ಡ ದೀವಟಿಗೆ)

* * *

ಮದಿರೆ, ಹಿಲಾಲು ಮತ್ತು ಸೌಂದರ್ಯ
ಎಲ್ಲವೂ ನಿನ್ನೆದುರಿಗಿದೆ
ಸೌಂದರ್ಯವನ್ನು ಅಪ್ಪಿಕೊಳ್ಳಲು ಉದಾಸೀನ ಬೇಡ
ಸಾವಿನ ಮದಿರೆಯನ್ನು
ನಿನ್ನ ಆತ್ಮಕ್ಕಾಗಿ ಗಟಗಟನೆ ಕುಡಿದುಬಿಡು
ನಿನ್ನ ಆತ್ಮದ ಒಡೆತನದಿಂದ
ಬಿಡುಗಡೆ ಹೊಂದುವೆ
ಮದಿರೆಯನ್ನು ಚಪ್ಪರಿಸು.

ಏಕೆಂದರೆ ಅದರ ಬಟ್ಟಲು ಗೆಳೆಯನ ಮುಖ
ಅದರ ಹಿಡಿ ಅಮಲೇರಿದ ಅವನ ಕಣ್ಣು

* * *

ಗೆಳೆಯಾ
ಎಲ್ಲೆಲ್ಲಿ ನಿನ್ನನ್ನು ಅರಸಿದೆ
ಕೇಳಿದೆ ಕಂಡಕಂಡವರನ್ನೆಲ್ಲಾ
ಕೊನೆಗೆ
ನನ್ನ ಮನದ ಕನ್ನಡಿಯಲ್ಲಿನ ಬಿಂಬ ನೋಡಿದಾಗ
ನೀನೆಂಬುವವನು ನಾನೋ
ಅಥವಾ ನಾನೆಂಬುವವನು ನೀನೋ?
ನಿನ್ನನ್ನು ಹುಡುಕಿದೆನೆಂದು ನೆನಪಾದಾಗಲೆಲ್ಲಾ
ನಾಚಿಕೆಯಾಗುತ್ತದೆ.

- ಫಕ್ರುದ್ದೀನ್ 'ಅರಾಬಿ

ತನ್ನ ಪ್ರಿಯತಮೆಯ ಮನೆಯ ಬಾಗಿಲು ತಟ್ಟಿದ ಆತ
'ಯಾರದು?' ಒಳಗಿನಿಂದ ದನಿ ಕೇಳಿತು.
'ನಾನು' ಎಂದನಾತ
'ಈ ಮನೆಯಲ್ಲಿ ಇಬ್ಬರಿಗೆ ಸ್ಥಳವಿಲ್ಲ'
ಬಾಗಿಲು ತೆರೆಯಲೇ ಇಲ್ಲ
ಹತಾಶ ಪ್ರಿಯಕರ ಮರುಭೂಮಿಗೆ ಹೋಗಿ
ಏಕಾಂತದಲ್ಲಿ ಉಪವಾಸ ತಪಸ್ಸು
ಪ್ರಿಯತಮೆಯನ್ನು ಪಡೆಯಲೇಬೇಕೆಂಬ ಹಠ
ಒಂದು ವರ್ಷದ ನಂತರ ಹಿಂದಿರುಗಿದ
ತಟ್ಟಿದ ಪ್ರಿಯತಮೆಯ ಮನೆಯ ಬಾಗಿಲು
'ಯಾರದು?' ಮತ್ತೆ ಕೇಳಿತು ದನಿ.
'ನೀನೆ' ಹೇಳಿದ ಪ್ರಿಯಕರ
ಬಾಗಿಲು ತೆರೆಯಿತು
ಆತನಿಗಾಗಿ

- ರೂಮಿ

ಸಾಂಪ್ರದಾಯಿಕ ಮುಸಲ್ಮಾನರು ಸೂಫಿಗಳ ಸಂಗೀತ, ಹಾಡುಗಾರಿಕೆ ಮತ್ತು ಕುಣಿತವನ್ನು ಅನೈತಿಕ ಎಂದರು. ಆದರೆ ಸೂಫಿಗಳು ಅಂತಹ ಹೇಳಿಕೆಗಳನ್ನು ನಿರಾಕರಿಸಿ ನಿಜವಾದ ಸೂಫಿ ಸಂಗೀತದ ಪ್ರಾಪಂಚಿಕ ಅಂಶಗಳಿಗೆ ಮಾರು ಹೋಗುವುದಿಲ್ಲ. ಬದಲಿಗೆ 'ಸಮಾ'ಗಳಲ್ಲಿನ ರಾಗ, ಲಯಗಳು ದೈವಿಕ ಸೌಂದರ್ಯವನ್ನು ಅರಿಯಲು ಮತ್ತು ಅನಂತಾಕಾಶದಲ್ಲಿನ ನಿರಂತರ ದೈವ ಸಂಗೀತವನ್ನು ಆನಂದಿಸಲು ಆತನ ಆತ್ಮವನ್ನು ಸಜ್ಜುಗೊಳಿಸುತ್ತವೆ ಹಾಗೂ ಆಧ್ಯಾತ್ಮಿಕ ಉನ್ನತ ಮಜಲುಗಳಿಗೇರಲು 'ಸಮಾ'ಗಳು ಮೆಟ್ಟಲುಗಳಾಗುತ್ತವೆ ಎಂದರು. ಎಲ್ಲ ಸುಂದರ

ವಸ್ತುಗಳ ರೀತಿ ಸಂಗೀತವೂ ಸಹ ಸೂಫಿ ಮತ್ತು ದೇವರ ನಡುವಿನ ಅಂತರವನ್ನು ಕಡಿಮೆಗೊಳಿಸುತ್ತದೆ. ಏಕೆಂದರೆ ಎಲ್ಲಾ ಸೌಂದರ್ಯದ ಸೆಲೆಯೂ ದೇವರೇ ಆಗಿದ್ದಾನೆ.

ಕೆಲವು ಸೂಫಿಗಳು ತಾವು ಸತ್ತಾಗ ಶೋಕಾಚರಣೆ ಮಾಡದೆ ಅನಂತರ ವಿಶ್ವದ 'ನಿರಂತರ ಬದುಕಿಗೆ' ಕಾಲಿಡಲು ಅನುವಾದ ತಮ್ಮ ಸಾವನ್ನು ಆಚರಿಸಲು 'ಸಮಾ' ಗೋಷ್ಠಿಗಳನ್ನು ಏರ್ಪಡಿಸಬೇಕೆಂದು ಹೇಳುತ್ತಿದ್ದರು. 'ಸಮಾ' ದ ಬಗ್ಗೆ ಸೂಫಿಗಳು ಎಚ್ಚರಿಕೆಯೂ ನೀಡಿದರು. 'ಸಮಾ' ದಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳಲು ಕಠಿಣ ವೈರಾಗ್ಯದ ತರಬೇತಿಯ ಅವಶ್ಯಕತೆ ಇದೆಯೆಂದೂ, ಇಲ್ಲವಾದಲ್ಲಿ ಹಾಡು ಮತ್ತು ಸಂಗೀತ ಆಧ್ಯಾತ್ಮಿಕತೆಯನ್ನು ಉತ್ತುಂಗಕ್ಕೆ ಏರಿಸುವ ಬದಲು ಮಾನವನ ಕಾಮನೆಗಳನ್ನು ಬಡಿದೆಬ್ಬಿಸಬಹುದೆಂದರು.

ಸೂಫಿ ಕವಿಗಳಲ್ಲಿ ಮುಖ್ಯರಾದವರು ಅಬು ಸೈಯದ್, ಜಲಾಲ್ ಅಲ್-ದಿನ್ ರೂಮಿ, ಫರೀದುದ್ದೀನ್ ಅತ್ತಾರ್, ಜಾಮಿ, ಮಹಮ್ಮದ್ ಶಬಿಸ್ತಾರಿ, ಇಬನ್-ಅಲ್-ಫರೀದ್ ಹಾಗೂ ಇಬನ್-ಅಲ್-ಅರಾಬಿ. ಸೂಫಿಗಳಿಗೆ ದೇವರು ನಿರಂತರ ಸೌಂದರ್ಯದ ಖನಿ. ದೇವರು ಹಾಗೂ ಮನುಷ್ಯನ ನಡುವಿನ ಅಂತರವನ್ನು ಪ್ರೀತಿಪ್ರೇಮಗಳು ಕಡಿಮೆ ಮಾಡುತ್ತವೆ. ಪಾರಮಾರ್ಥಿಕ ಪ್ರೇಮವೂ ಸಹ ಈ ಅಂತರವನ್ನು ಕಡಿಮೆ ಮಾಡಲು ಸಹಕರಿಸುತ್ತದೆ.

ಸೂಫಿ ಕವಿಗಳಲ್ಲಿ ಅತ್ಯಂತ ಪ್ರಖ್ಯಾತನಾದವನು ಜಲಾಲ್ ಅಲ್-ದಿನ್ ರೂಮಿ (೧೨೦೧-೧೨೭೩). ಆತನ ಮೇರು ಕೃತಿ 'ಮಸ್ನವಿ'. ಅದನ್ನು 'ಪರ್ಷಿಯನ್ ಕುರಾನ್' ಎಂದೂ ಕರೆಯುತ್ತಾರೆ. ರೂಮಿ ಸೂಫಿಗಳ 'ಮೆವ್ಲೆವಿ' ಅಥವಾ 'ಗಿರಗಿರನೆ ತಿರುಗುವ' ದರ್ವೇಷ್‌ಗಳ ಪಂಗಡದ ನಿರ್ಮಾತ. ಮೆವ್ಲೆವಿ ದರ್ವೇಷ್‌ಗಳು ದೇವರೊಂದಿಗೆ ಬೆರೆಯಲು ಉನ್ಮಾದದಿಂದ ಗಿರಗಿರನೆ ತಿರುಗುತ್ತ ಕುಣಿಯುತ್ತಾರೆ.

ಆತ ಬರುತ್ತಾನೆ
ನಿದ್ರೆಯಲ್ಲಾಗಲಿ, ಎಚ್ಚರದಲ್ಲಾಗಲಿ
ಆಕಾಶವೇ ಎಂದೂ ಕಂಡಿರದ ಚಂದಿರನ ಹಾಗೆ
ಆತನ ಕಿರೀಟ
ಯಾವ ಪ್ರವಾಹವೂ ನಂದಿಸಲಾಗದ ನಿರಂತರ ಜ್ವಾಲೆ
ಹೋ ದೇವರೆ
ನಿನ್ನ ಪ್ರೇಮದ ಬಟ್ಟಲಿನಲ್ಲಿ
ನನ್ನ ಆತ್ಮ ಈಜುತ್ತಿದೆ
ನನ್ನ ಮಣ್ಣಿನ ಮನೆಯ ದೇಹ ಕರಗುತ್ತಿದೆ.

ಸೂಫಿ ಕತೆಗಳು

ಸೂಫಿಸಂಗೆ ಸೂಕ್ತ ಪದ ಎಂದರೆ, ಅರಾಬಿಕ್ ಪದ 'ಮರೀಫಾ' ದಿಂದ ವ್ಯುತ್ಪತ್ತಿಗೊಂಡಿರುವ 'ಇರ್ಫಾನ್' ಅಂದರೆ ಗ್ರಹಿಸು, ತಿಳಿ. ಸೂಫಿಸಂ ತನ್ನ ವಿದ್ಯಾರ್ಥಿಗಳ ಸುಪ್ತ ಸಾಮರ್ಥ್ಯ ಮತ್ತು ಪ್ರತಿಭೆಯ ಅನಾವರಣ ವಿಧಾನವನ್ನು ಬೋಧಿಸುತ್ತದೆ; ಅವರ

ಗ್ರಹಣ ಸಾಮರ್ಥ್ಯವನ್ನು ವಿಸ್ತರಿಸುತ್ತದೆ;ಸೀಮಿತ ಎಲ್ಲೆಗಳನ್ನು ಧಿಕ್ಕರಿಸುತ್ತದೆ ಹಾಗೂ ತನ್ಮೂಲಕ ಅವರೊಳಗಿನ ಆತ್ಮಸ್ವರ್ಗದೆಡೆಗಿನ ಪಯಣಕ್ಕೆ ಅನುವು ಮಾಡಿಕೊಡುತ್ತದೆ.

ಸೂಫಿ ಗುರುಗಳು ತಮ್ಮ ಶಿಷ್ಯರಿಗೆ ಶಿಕ್ಷಣದ ಮಾಧ್ಯಮವಾಗಿ ಕತೆಗಳನ್ನು ಹೇಳುತ್ತಿದ್ದರು. ಸೂಫಿಗಳ ಬದುಕಿನ ಘಟನೆಗಳೂ ಸಹ ಕತೆಗಳಾಗಿ ತಲೆತಲೆಮಾರುಗಳಿಂದ ಹರಿದು ಬಂದಿವೆ. ಸೂಫಿ ಕತೆಗಳು ಮನರಂಜಿಸುತ್ತವೆ ಹಾಗೂ ನಿತ್ಯ ಬದುಕಿನ ನೀತಿ ಬೋಧಿಸುತ್ತವೆ. ಈ ಎರಡು ಉದ್ದೇಶಗಳ ಹಿಂದೆ ಅವುಗಳಿಗೆ ಮತ್ತೊಂದು ಉನ್ನತ ಉದ್ದೇಶವಿದೆ. ಅವು ಮನುಷ್ಯನ ಗ್ರಹಿಕೆಯ ಎಲ್ಲೆಗಳನ್ನು ವಿಸ್ತರಿಸುತ್ತವೆ. ಗ್ರಹಿಕೆಗೆ ಹೊಸ ಆಯಾಮಗಳನ್ನು ಕೊಡುತ್ತವೆ. ಎಲ್ಲಾ ಸೂಫಿ ಕತೆಗಳೂ ತಮ್ಮ ಅಂತರಾಳದಲ್ಲಿ ವಿವಿಧ ಆಯಾಮಗಳನ್ನು ಹಾಗೂ ಬಹುಸ್ತರ ಸಾಮರ್ಥ್ಯವನ್ನು ಹೊಂದಿವೆ.

ವಿಜ್ಞಾನಿಗಳ ಪ್ರಕಾರ ಪರಿಕಲ್ಪನೆಯನ್ನು ವಿಸ್ತೃತಗೊಳಿಸುವ ಅಂಗ ಮಿದುಳು. ನಮ್ಮ ಸಂಸ್ಕೃತಿ, ಶಿಕ್ಷಣ ಹಾಗೂ ಆಲೋಚನೆಗಳ ಸಂವಹನ ಮಾಧ್ಯಮವಾಗಿರುವ ಭಾಷೆಯನ್ನು ನಮ್ಮ ಎಡಮಿದುಳು (ಬಹುಪಾಲು ಜನರಲ್ಲಿ) ನಿರ್ವಹಿಸುತ್ತದೆ. ಬಲಮಿದುಳು ಪರಿಕಲ್ಪನೆ ಮತ್ತು ಸ್ಥಾನ ವಿನ್ಯಾಸ (Orientation) ಗಳ ನಿರ್ವಹಣೆಯ ಜವಾಬ್ದಾರಿ ಹೊತ್ತಿದೆ. ಮಿದುಳಿನ ಈ ಎರಡೂ ಭಾಗಗಳು ಭಾಷೆಯನ್ನು ಭಿನ್ನವಾಗಿ ಬಳಸುತ್ತವೆ. ಬಲಮಿದುಳಿಗೆ ಭಾಷೆ ಕಾವ್ಯಮಯವಾಗುತ್ತದೆ. ಎಡಮಿದುಳಿಗೆ ಪೆಟ್ಟು ಬಿದ್ದಿರುವ ಜನರು ಆಘಾತಕ್ಕನುಗುಣವಾಗಿ ಮಾತನಾಡಲು ಹಾಗೂ / ಅಥವಾ ಭಾಷೆಯನ್ನು ಅರಿಯಲು ಅಸಮರ್ಥರಾಗಿರುತ್ತಾರೆ. ಆದರೆ ಬಲಮಿದುಳಿಗೆ ಪೆಟ್ಟು ಬಿದ್ದಿರುವ ಜನರಿಗೆ ಮಾತನಾಡಲು ಸಾಧ್ಯವಾದರೂ ಅವರಿರುವ ಪರಿಸ್ಥಿತಿ ಹಾಗೂ ಇತರ ಜನರೊಂದಿಗಿನ ಸಂಬಂಧ ಮತ್ತು ಸಂಕೀರ್ಣತೆಗಳನ್ನು ಅರ್ಥೈಸಿಕೊಳ್ಳುವಲ್ಲಿ ವಿಫಲರಾಗಿರುತ್ತಾರೆ. ಹಾಗಾಗಿ ಪರಿಕಲ್ಪನೆಯ 'ಅಂಗ'ದ ವಿಸ್ತೃತತೆ ಶಾಬ್ದಿಕ ಮತ್ತು ಶಾಬ್ದಿಕವಲ್ಲದ ಚಟುವಟಿಕೆಗಳ ಹರವು ಹಾಗೂ ಅರ್ಥದ ಪರಿಕಲ್ಪನೆಯ ಉನ್ನತ ಮಟ್ಟದಲ್ಲಿ ಈ ಚಟುವಟಿಕೆಗಳ ಸಮ್ಮಿಳಿತ ಕಾರ್ಯಗಳನ್ನು ಬೆಂಬಲಿಸುವುದನ್ನು ಒಳಗೊಂಡಿದೆ. ಭಾವುಕತೆ ಮತ್ತು ಬೌದ್ಧಿಕತೆಗಳು ಸಮತೋಲನದಲ್ಲಿ ಸಮ್ಮಿಳಿತವಾಗಿರುವಾಗ ಅಂತರ ದೃಷ್ಟಿಯ ಔನ್ನತ್ಯ ಸಾಧ್ಯವಾಗುತ್ತದೆನ್ನುತ್ತಾರೆ ಮನೋವಿಜ್ಞಾನಿಗಳು. ಸೂಫಿಗಳು ಸಾಂಪ್ರದಾಯಿಕವಾಗಿ ಈ ಪರಿಕಲ್ಪನೆಯ ಅಂಗವನ್ನು ವಿಸ್ತೃತಗೊಳಿಸುವ ಬಗೆಗೆ ಮೊದಲಿನಿಂದಲೂ ಹೇಳುತ್ತಾ ಬಂದಿದ್ದಾರೆ.

ಈಗಿನ ಶಿಕ್ಷಣ ಮಕ್ಕಳಲ್ಲಿ ಅಂತರ್‌ದೃಷ್ಟಿಗ್ರಹಿಕೆಯ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವುದಿಲ್ಲ. ನಮ್ಮ ನಂಬಿಕೆಗಳನ್ನು, ತಾವು ತಿಳಿದಿರುವುದೇ ಸರಿ ಎಂದು ನಂಬಿರುವುದನ್ನು ಮಕ್ಕಳ ಮೇಲೆ ಬಲವಂತವಾಗಿ ಹೇರುತ್ತಾರೆ. ವಿಷಯವೊಂದನ್ನು ಅರ್ಥೈಸಿಕೊಳ್ಳುವಲ್ಲಿ ಅಂತರ್‌ದೃಷ್ಟಿಯ ಮತ್ತು ಗ್ರಹಣ ಶಕ್ತಿಯ ಮಹತ್ವದ ಅರಿವು ಅಂತಹ ಬೋಧಕರಿಗಿರುವುದಿಲ್ಲ. ಸೂಫಿಯೊಬ್ಬರು ಹೇಳಿರುವಂತೆ "ಅದನ್ನು ಮಾಡುವುದು ಹೀಗೆ" ಎನ್ನುವುದನ್ನು 'ಅದು ಸತ್ಯವೆಂಬ ನಂಬಿಕೆ ನನಗಿದೆ' ಎಂಬುದು ಎಂದಿಗೂ ಸರಿದೂಗಿಸಲಾಗದು. ಎಲ್ಲ ಮನುಷ್ಯರಲ್ಲಿ

ಅಂತರ್‌ದೃಷ್ಟಿಯ ಗ್ರಹಣಶಕ್ತಿ ಸುಪ್ತವಾಗಿದೆಯೆಂದೂ ಹಾಗೂ ಅದನ್ನು ಅಭಿವೃದ್ಧಿಪಡಿಸಿದಲ್ಲಿ ಮನುಷ್ಯ ತನ್ನನ್ನು ಬದುಕಿನಲ್ಲಿ ಸಂಪೂರ್ಣವಾಗಿ ಮತ್ತು ಫಲಕಾರಿಯಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆಯೆಂಬುದೇ ಸೂಫಿ ಶಿಕ್ಷಣದ ಅಂತರಾಳ. ಈ ಅಂತರಾಳದ ದೀಪದ ಬೆಳಕೇ ಸೂಫಿ ಕತೆಗಳು.

ಸೂಫಿ ಗುರುಗಳು ತಮ್ಮ ಶಿಷ್ಯರನ್ನು ಇಂತಹ ಕಥಾ ಸಾಗರದಲ್ಲಿ ಮುಳುಗುವಂತೆ ಮಾಡುತ್ತಾರೆ. ಆ ಶಿಷ್ಯರಿಗೆ ಆ ಕತೆಗಳ ಕೊಂಚ 'ಅರಿವು' ಕೂಡಲೇ ಸಿಗಬಹುದು. ಆದರೆ ಆ ಕತೆಗಳ ಅಂತರಾಳದ ವಿವಿಧ ಆಯಾಮಗಳು ಆ ಶಿಷ್ಯ ಅವುಗಳಿಗಾಗಿ 'ತಯಾರಾದಾಗ' ಅವು ತನ್ನಿಂತಾನೇ ತೆರೆದುಕೊಳ್ಳುತ್ತವೆ. ಅವರು ತಮ್ಮ ಶಿಷ್ಯರಿಗೆ ಯಾವುದನ್ನೂ ಬಲವಂತವಾಗಿ ಹೇರುವುದಿಲ್ಲ. ಇದೇ ಸತ್ಯ ಎಂದು ಅರಚುವುದಿಲ್ಲ. ಈ ರೀತಿಯ ಹೇರಿಕೆ ಮತ್ತು ನಂಬಿಕೆ ಮನುಕುಲದ ಅಸ್ತಿತ್ವಕ್ಕೇ ಕಂಟಕಕಾರಿ ಎನ್ನುತ್ತಾರೆ ಅವರು.

ಸೂಫಿ ಕತೆಗಳು ಮನರಂಜನಾತ್ಮಕವಾಗಿರುವುದರಿಂದ ಅದರ ಅಂತರಾಳ ಅರಿವಾಗದಿದ್ದರೂ ಜನ ಅವುಗಳನ್ನು ಮತ್ತೆ ಮತ್ತೆ ಹೇಳುತ್ತಾ ಹೋಗುತ್ತಾರೆ. ಶತಶತಮಾನಗಳ ಈ ಹಳೆಯ ಕತೆಗಳು ಯಾವುದೇ ಗುರುವಿಲ್ಲದಿದ್ದರೂ ಒಬ್ಬರಿಂದೊಬ್ಬರಿಗೆ, ಊರಿಂದೂರಿಗೆ, ದೇಶದಿಂದ ದೇಶಕ್ಕೆ, ಸಂಸ್ಕೃತಿಗಳ ಎಲ್ಲೆಗಳನ್ನು ಮೀರಿ ಸುಲಭವಾಗಿ ಹರಡಿಕೊಂಡಿವೆ. ಹಾಗಾಗಿ ಇಂದು ಸೂಫಿ ಕತೆಗಳು ಮಕ್ಕಳ ಕತೆಗಳಲ್ಲಿ, ಪಠ್ಯ ಪುಸ್ತಕಗಳಲ್ಲಿ ಹಾಗೂ 'ಜಾನಪದ' ಕತೆಗಳಲ್ಲೂ ಸಹ ಸೇರಿಕೊಂಡಿವೆ.

ಸೂಫಿ ಕಥೆಗಳು

ಬದುಕೆಂಬ ಸೇತುವೆ

ಬೊಹ್ಲುಲ್ ಸೇತುವೆಯ ಮೇಲೆ ಕೂತು ಹರಿಯುತ್ತಿದ್ದ ನದಿಯನ್ನು ನೋಡುತ್ತಾ ಮೈ ಮರೆತಿದ್ದ. ಅಲ್ಲಿ ಹಾದು ಹೋಗುತ್ತಿದ್ದ ರಾಜ ಬೊಹ್ಲುಲ್‌ನನ್ನು ನೋಡಿ ಕೂಡಲೇ ಆತನನ್ನು ಬಂಧಿಸಿ ತರುವಂತೆ ಆಜ್ಞಾಪಿಸಿದ.

'ಸೇತುವೆ ಇರುವುದು ಹಾದು ಹೋಗಲು, ಅಲ್ಲೇ ಕೂತಿರಲು ಅಲ್ಲ' ಎಂದ ರಾಜ.

ಅದಕ್ಕೆ ಬೊಹ್ಲುಲ್ ಹೇಳಿದ, 'ಒಮ್ಮೆ ನಿನ್ನನ್ನೇ ನೋಡಿಕೊ, ಸೇತುವೆಯೆಂಬ ಈ ಬದುಕಿಗೆ ಹೇಗೆ ಅಂಟಿಕೊಂಡಿದ್ದೀಯೆ'.

ಶ್ರದ್ಧೆಯಿಂದ ನಡೆ

ಒಂದೂರಿನಲ್ಲಿ ಒಬ್ಬ ಮೌಲ್ವಿ ಇದ್ದ. 'ನೀವು ದೇವರ ಹೆಸರನ್ನು ಹೇಳಿದಲ್ಲಿ ಏನು ಬೇಕಾದರು ಸಾಧಿಸಬಹುದು' ಎಂದು ಮೌಲ್ವಿ ಸದಾ ತನ್ನ ಬೋಧನೆಗಳಲ್ಲಿ ತಿಳಿಸುತ್ತಿದ್ದ. ಒಂದು ದಿನ ನದಿಯನ್ನು ದಾಟಲು ದಡದಲ್ಲಿ ದೋಣಿಗಾಗಿ ಕಾಯುತ್ತಿದ್ದಾಗ ಆತನ ಅನಕ್ಷರಸ್ಥ

ಶಿಷ್ಯನೊಬ್ಬ ಮೌಲ್ವಿಯ ಬಳಿ ಬಂದು 'ಸ್ವಾಮಿ, ದೋಣಿ ಬರುವುದು ಇನ್ನೂ ತಡವಾಗುತ್ತದಂತೆ. ನನ್ನ ಮಗುವಿಗೆ ಮೈ ಹುಷಾರಿಲ್ಲ. ಬೇಗ ಹೋಗಬೇಕು. ಏನು ಮಾಡಲಿ?', ಎಂದು ಕೇಳಿದ.

'ದೋಣಿ ಬರದಿದ್ದರೆ ನಾನೇನು ಮಾಡಲಿ? ನಾನೂ ದೋಣಿಗಾಗಿಯೇ ಕಾಯುತ್ತಿದ್ದೇನೆ' ಎಂದ ಮೌಲ್ವಿ ಸಿಡುಕುತ್ತ.

'ಸ್ವಾಮಿ, ನಾನೊಬ್ಬ ಬಡವ, ಏನೂ ಅರಿಯದವ, ನೀವು ಎಲ್ಲಾ ಬಲ್ಲ ಜ್ಞಾನಿಗಳು, ನನಗೊಂದು ದಾರಿ ತೋರಿಸಿ' ಎಂದ ಆತನ ಶಿಷ್ಯ.

'ನಾನು ಎಷ್ಟು ಬಾರಿ ನಿನಗೆ ಹೇಳಿಲ್ಲ, ದೇವರ ಹೆಸರು ಹೇಳಿದಲ್ಲಿ ಏನು ಬೇಕಾದರೂ ಮಾಡಬಹುದೆಂದು. ಈಗ ಹೋಗು, ನನಗೆ ಸುಮ್ಮನೆ ತೊಂದರೆ ಕೊಡಬೇಡ' ಎಂದು ಗದರಿಸಿ ಕಳುಹಿಸಿದ.

ಹಲವಾರು ದಿನಗಳ ನಂತರ ಮೌಲ್ವಿ ಮತ್ತೊಮ್ಮೆ ನದಿಯ ದಡದಲ್ಲಿ ದೋಣಿಗಾಗಿ ಕಾಯುತ್ತ ನಿಂತಿದ್ದ. ಆಗ ಅಲ್ಲಿಗೆ ಅದೇ ಶಿಷ್ಯ ಬಂದು,'ಸ್ವಾಮಿ, ನೀವೇಕೆ ಇಲ್ಲಿ ನಿಂತಿದ್ದೀರಿ? ನದಿಯನ್ನೇಕೆ ದಾಟುತ್ತಿಲ್ಲ?' ಎಂದು ಕೇಳಿದ.

'ನಾನು ಹೇಗೆ ದಾಟಲಿ? ನೀನೊಬ್ಬ ಮೂರ್ಖ. ದಾಟಲು ದೋಣಿಯೇ ಇಲ್ಲವಲ್ಲ. ನಿನಗೇನು ಕಣ್ಣು ಕಾಣುವುದಿಲ್ಲವೆ? ಯಾವಾಗಲೂ ಈ ರೀತಿಯ ಮೂರ್ಖ ಪ್ರಶ್ನೆಗಳನ್ನು ಕೇಳಿ ನನ್ನ ತಲೆ ಏಕೆ ತಿನ್ನುತ್ತೀಯ? ಹೋಗು ಇಲ್ಲಿಂದ' ಎಂದು ಗದರಿದ.

'ನಿಮಗೆ ತೊಂದರೆ ಕೊಟ್ಟಿದ್ದಕ್ಕೆ ನನ್ನನ್ನು ಕ್ಷಮಿಸಿ ಸ್ವಾಮಿ. ನದಿ ದಾಟುವ ದಾರಿಯನ್ನು ನೀವೇ ನನಗೆ ತೋರಿಸಿದ್ದೀರಿ ಹಾಗೂ ಅಂದಿನಿಂದ ನಾನು ನದಿಯನ್ನು ಅದೇ ರೀತಿ ದಾಟುತ್ತಿದ್ದೇನೆ' ಎಂದು ಹೇಳಿ ದೇವರ ಹೆಸರನ್ನು ಧ್ಯಾನಿಸುತ್ತಾ ನದಿಯ ನೀರಿನ ಮೇಲೆ ನಡೆದುಕೊಂಡು ಹೋದ.

ಇದನ್ನು ಕಂಡು ಬೆಕ್ಕಸಬೆರಗಾದ ಮೌಲ್ವಿ. 'ಹೆಚ್ಚು ಕತ್ತಲಿರುವುದು ದೀಪದ ಕೆಳಗೆ ಎನ್ನುವುದು ಎಷ್ಟು ಸತ್ಯ!' ಎಂದುಕೊಂಡ.

ಸರ್ವಾಂತರ್ಯಾಮಿ

ಒಬ್ಬ ಸೂಫಿ ಶಿಷ್ಯ ಹಲವಾರು ವರ್ಷಗಳು ಸತ್ಯ ಹಾಗೂ ಜ್ಞಾನದ ಅನ್ವೇಷಣೆಯಲ್ಲಿ ಪ್ರಾರ್ಥನೆ ಹಾಗೂ ತಪಸ್ಸಿನಲ್ಲಿ ಕಳೆದ. ಆತ ಅಲ್ಲಾಹ್‌ನನ್ನು ಸತ್ಯದ ದರ್ಶನ ಮಾಡಿಸುವಂತೆ ಪ್ರಾರ್ಥನೆ ಮಾಡಿಕೊಂಡ.

ಒಂದು ರಾತ್ರಿ ತಪಸ್ಸಿನಲ್ಲಿ ಗಾಢವಾಗಿ ಮುಳುಗಿದ್ದಾಗ ಸೂಫಿ ಸಂತ ಹಜ್ರತ್ ಖಿಜಿರ್ ಆತನ ಮುಂದೆ ಕಾಣಿಸಿಕೊಂಡ. 'ಹೇಳು ಓ ಸಾಲಿಕ್, ಜಾತ್-ಎ-ಬಾರಿ ಬಗ್ಗೆ ನೀನು ಏನು ತಿಳಿದುಕೊಳ್ಳಬೇಕಾಗಿದೆ? ಹೇಳು' ಎಂದು ಕೇಳಿದರು.

ತನ್ನ ಪ್ರಾರ್ಥನೆ ಹಾಗೂ ತಪಸ್ಸಿಗೆ ಪ್ರತಿಫಲ ಸಿಕ್ಕಿದ್ದರಿಂದ ಸಂತೋಷಗೊಂಡ ಶಿಷ್ಯ 'ಅಲ್ಲಾಹ್ ಎಲ್ಲಿದ್ದಾನೆ ಹೇಳು?' ಎಂದು ಕೇಳಿದ.

ಅದಕ್ಕೆ ಖಿಜಿರ್ ಉತ್ತರಿಸಿದ. 'ಖಿಜಿರ್ ಏನು ಹೇಳಬಲ್ಲ?

ಅಥವಾ, ಏಕಾದರೂ ಹೇಳಬೇಕು?
ಮೀನು ಏನಾದರೂ ಕೇಳಿದರೆ
ಸಾಗರ ಎಲ್ಲಿದೆ ಎಂದು?

ಕಲಿಯುಲು ಕಲಿ

ಒಬ್ಬಾತ ಸೂಫಿ ಗುರುವಿನ ಬಳಿ ಹೋಗಿ, 'ಸ್ವಾಮಿ, ನಾನು ಸತ್ಯ ಹಾಗೂ ವಾಸ್ತವದ ಬಗ್ಗೆ ಅರಿಯಬೇಕೆಂದಿದ್ದೇನೆ. ದಯಮಾಡಿ ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಿ' ಎಂದು ಕೇಳಿದ. ಆತನ ಮಾತನ್ನು ಕೇಳುತ್ತಾ ಕೂತಿದ್ದ ಗುರು ಮೇಲೆದ್ದು, 'ಬಾ ಹೋಗಿ ಸ್ವಲ್ಪ ನೀರು ತರೋಣ' ಎಂದು ಅತನನ್ನು ಕರೆದೊಯ್ದರು. ಆತನನ್ನು ಬಾವಿಯ ಬಳಿ ಕರೆದೊಯ್ದು ಗುರು ತಾನು ತಂದಿದ್ದ ಪಾತ್ರೆಯನ್ನು ಬಾವಿಯ ಅಂಚಿನ ಮೇಲೆ ಇಟ್ಟು ಬಾವಿಯಿಂದ ನೀರು ಸೇದಿ ಆ ಪಾತ್ರೆಗೆ ಹೊಯ್ಯತೊಡಗಿದರು. ಪಾತ್ರೆ ತುಂಬಿ ನೀರು ಹೊರಚೆಲ್ಲುತ್ತಿದ್ದರೂ ನೀರು ಸೇದಿ ಹೊಯ್ಯುತ್ತಲೇ ಇದ್ದರು. ಅದನ್ನು ನೋಡುತ್ತಲೇ ಇದ್ದ ಶಿಷ್ಯನಿಗೆ ಗುರುವಿನ ರೀತಿ ಅರ್ಥವಾಗದೆ, 'ತುಂಬಿರುವ ಪಾತ್ರೆಗೆ ನೀರು ಹೊಯ್ಯುವುದರಲ್ಲಿ ಏನು ಅರ್ಥವಿದೆ? ನೋಡಿ ಪಾತ್ರೆ ತುಂಬಿದೆ. ಇನ್ನು ಹೆಚ್ಚಿನ ನೀರು ಅದರಲ್ಲಿ ಹಿಡಿಸದು' ಎಂದ.

ಅದಕ್ಕೆ ಸೂಫಿ ಗುರು, 'ನೋಡಪ್ಪಾ, ನಿನ್ನ ಮನಸ್ಸು ಸಹ ಈ ಪಾತ್ರೆಯ ತರಹ. ಅದರಲ್ಲಿ ತುಂಬಿರುವ ಪೂರ್ವಾಪರ ಪರಿಕಲ್ಪನೆಗಳನ್ನು, ಬೇಡದ ಮೌಲ್ಯಗಳನ್ನು, ಭಾವನೆಗಳನ್ನು ಖಾಲಿ ಮಾಡದೆ ಅದರಲ್ಲಿ ಸತ್ಯ ಹಾಗೂ ವಾಸ್ತವವನ್ನು ತುಂಬುವುದಾದರೂ ಹೇಗೆ?' ಎಂದರು.

ಛತ್ರ

ಬಾಲ್ಕ್‌ನ ಸುಲ್ತಾನ ಇಬ್ರಾಹಿಂ ಆದಂ ಒಂದು ದಿನ ತನ್ನ ಆಸ್ಥಾನದಲ್ಲಿ ಕೂತಿದ್ದಾಗ ಒಬ್ಬ ಫಕೀರ ಆಸ್ಥಾನವನ್ನು ಪ್ರವೇಶಿಸಿದ. ಆ ಫಕೀರನಲ್ಲಿ ಎಂಥದೋ ತೇಜಸ್ಸು ಇತ್ತು. ಆತನನ್ನು ಆಸ್ಥಾನದ ಭಟರಾಗಲಿ ಸೈನಿಕರಾಗಲಿ ತಡೆದು ನಿಲ್ಲಿಸಲು ಆಗಲಿಲ್ಲ. ಆಸ್ಥಾನಕ್ಕೆ ಪ್ರವೇಶಿಸಿದ ಫಕೀರ ನೇರ ಸುಲ್ತಾನನ ಬಳಿ ಹೋಗಿ ಸಿಂಹಾಸನದ ಪಕ್ಕದಲ್ಲಿ ತನ್ನ ಚಾಪೆಯನ್ನು ಹಾಸಿಕೊಂಡ. ಸುಲ್ತಾನನಿಗೆ ಏನೊಂದೂ ಅರ್ಥವಾಗದೇ, 'ಏನು ಮಾಡುತ್ತಿದ್ದೀಯೆ?' ಎಂದು ಗದರಿಸಿದ.

'ಈ ರಾತ್ರಿ ನಾನು ಈ ಛತ್ರದಲ್ಲಿ ಕಳೆಯಬೇಕಾಗಿದೆ. ಅದಕ್ಕೆ ಚಾಪೆ ಹಾಸಿಕೊಳ್ಳುತ್ತಿದ್ದೇನೆ' ಎಂದ ಫಕೀರ.

'ಇದು ಛತ್ರವಲ್ಲ, ಇದು ನನ್ನ ಅರಮನೆ' ಎಂದ ಇಬ್ರಾಹಿಂ ಸಿಟ್ಟಿನಿಂದ.

'ಹೌದೇನು? ಹಾಗಾದರೆ ನಿನಗಿಂತ ಮೊದಲು ಇಲ್ಲಿ ಯಾರು ವಾಸಿಸುತ್ತಿದ್ದರು ಹೇಳು?' ಎಂದ ಫಕೀರ.

'ನಮ್ಮ ತಂದೆ' ಉತ್ತರಿಸಿದ ಇಬ್ರಾಹಿಂ.

'ಆತನಿಗೂ ಮೊದಲು?' ಪ್ರಶ್ನಿಸಿದ ಫಕೀರ.

"ನನ್ನ ತಾತ" ಎಂದ ಸುಲ್ತಾನ.

'ಆತನಿಗೂ ಮೊದಲು?' ಮತ್ತೆ ಪ್ರಶ್ನಿಸಿದ ಫಕೀರ.

'ನಮ್ಮ ಮುತ್ತಾತ. ಆತನಿಗೂ ಮೊದಲು ನಮ್ಮ ವಂಶದ ಏಳು ತಲೆಮಾರುಗಳು ಈ ಅರಮನೆಯಲ್ಲಿ ಜೀವನ ನಡೆಸಿವೆ' ಎಂದ ಸುಲ್ತಾನ ಹೆಮ್ಮೆಯಿಂದ.

'ನಿನಗಿಂತ ಮೊದಲು ಎಷ್ಟೊಂದು ಜನ ಇಲ್ಲಿ ಇದ್ದು ಹೋಗಿದ್ದಾರೆ. ನಿನ್ನ ನಂತರವೂ ಬಹಳಷ್ಟು ಜನ ಇಲ್ಲಿ ಇದ್ದು ಹೋಗಲಿದ್ದಾರೆ. ಹಾಗಿರುವಾಗ ಇದು ಛತ್ರವಲ್ಲದೆ ಬೇರೇನು?' ಕೇಳಿದ ಫಕೀರ.

ಪಟ್ಟಣದಲ್ಲೊಬ್ಬ ಮೂರ್ಖ

ಶತಮೂರ್ಖನೊಬ್ಬ ಒಂದು ದೊಡ್ಡ ನಗರಕ್ಕೆ ಬಂದ. ಅಲ್ಲಿ ರಸ್ತೆಗಳಲ್ಲಿ ಸಾವಿರಾರು ಜನ ಓಡಾಡುತ್ತಿರುವುದನ್ನು ಕಂಡು ಆತನಿಗೆ ಗಾಬರಿಯಾಯಿತು. 'ಇಲ್ಲಿ ನಾನು ರಾತ್ರಿ ಮಲಗಿ ಬೆಳಿಗ್ಗೆ ಎದ್ದಾಗ ಇಷ್ಟೊಂದು ಜನರ ನಡುವೆ ನನ್ನನ್ನು ನಾನೇ ಗುರುತು ಹಿಡಿಯುವುದು ಕಷ್ಟವಾಗಬಹುದು' ಎಂದನ್ನಿಸಿತು. ಅದಕ್ಕಾಗಿ ಆತ ರಾತ್ರಿ ಛತ್ರವೊಂದರಲ್ಲಿ ಮಲಗುವಾಗ, ಬೆಳಿಗ್ಗೆ ಎದ್ದಾಗ ತನ್ನನ್ನು ತಾನು ಗುರುತು ಹಿಡಿಯಲು ಅನುವಾಗಲೆಂದು ತನ್ನ ಕಾಲಿಗೆ ತನ್ನ ಬಳಿಯಿದ್ದ ಸೋರೆಕಾಯಿ ಬುರುಡೆಯನ್ನು ಕಟ್ಟಿಕೊಂಡ.

ಇದನ್ನು ಗಮನಿಸುತ್ತಿದ್ದ ಒಬ್ಬಾತ ತಮಾಷೆ ಮಾಡೋಣವೆಂದು, ಆ ಮೂರ್ಖ ನಿದ್ದೆ ಮಾಡುವವರೆಗೂ ಕಾಯುತ್ತಿದ್ದು, ನಂತರ ಆ ಸೋರೆಕಾಯಿ ಬುರುಡೆಯನ್ನು ಬಿಚ್ಚಿ ತನ್ನ ಕಾಲಿಗೆ ಕಟ್ಟಿಕೊಂಡು ಮಲಗಿದ.

ಬೆಳಿಗ್ಗೆ ಮೊದಲಿಗೆ ಎದ್ದ ಶತಮೂರ್ಖ, ಸೋರೆಕಾಯಿ ಬುರುಡೆ ಇನ್ನೊಬ್ಬಾತನ ಕಾಲಲ್ಲಿದ್ದುದು ಕಂಡು ಅವನೇ ನಾನು ಎಂದುಕೊಂಡ. ನಂತರ ಏನೋ ಆಲೋಚಿಸಿ ಆತನ ಮೇಲೆ ಕಿರುಚುತ್ತಾ ಎರಗಿಹೋದ, 'ನೀನೇ ನಾನಾದರೆ, ನಾನು ಯಾರು ಹೇಳು?'

ಕನಸು ಹಾಗೂ ರೊಟ್ಟಿ

ಮರುಭೂಮಿಯಲ್ಲಿ ಪ್ರಯಾಣಿಸುತ್ತಿದ್ದ ಮೂರು ಜನ ಪರಸ್ಪರ ಪರಿಚಯ ಮಾಡಿಕೊಂಡು, ಗೆಳೆಯರಾಗಿ ತಮ್ಮಲ್ಲಿದ್ದುದನ್ನೆಲ್ಲಾ ಪರಸ್ಪರ ಹಂಚಿಕೊಂಡು ಪ್ರಯಾಣ ನಡೆಸುತ್ತಿದ್ದರು. ಕೆಲದಿನಗಳ ನಂತರ ತಮ್ಮಲ್ಲಿದ್ದ ಆಹಾರ, ನೀರು ಎಲ್ಲಾ ಮುಗಿದು ಹೋಗಿ, ಕೇವಲ ಒಂದು ರೊಟ್ಟಿಯ ತುಣುಕು ಹಾಗೂ ಒಂದು ಬೊಗಸೆಯಷ್ಟು ನೀರು ಮಾತ್ರ ಉಳಿಯಿತು. ಮೂವರೂ ಅದು ತನಗೆ ಬೇಕು, ತನಗೆ ಬೇಕು ಎಂದು ಕಿತ್ತಾಡತೊಡಗಿದರು. ಏನೂ ತೀರ್ಮಾನವಾಗಲಿಲ್ಲ. ಅಷ್ಟರಲ್ಲಿ ಕತ್ತಲಾಗತೊಡಗಿತು. ಕೊನೆಗೆ ಒಬ್ಬ, ಎಲ್ಲರೂ ಮಲಗೋಣವೆಂದೂ, ಯಾರಿಗಾದರೂ ಕನಸಿನಲ್ಲಿ ರೊಟ್ಟಿ, ನೀರು ಯಾರಿಗೆ ಸಿಗಬೇಕೆಂಬುದರ ಬಗ್ಗೆ ಪರಿಹಾರ ಕಾಣಬಹುದು ಎಂದು ಸೂಚಿಸಿದ.

ಮರುದಿನ ಬೆಳಿಗ್ಗೆ, ಸೂರ್ಯ ಹುಟ್ಟುತ್ತಿರುವಂತೆಯೇ ಮೂವರೂ ಎದ್ದರು.

ಮೊದಲನೆಯವ ತನ್ನ ಕನಸಿನ ಬಗ್ಗೆ ಹೇಳಿದ: 'ನನ್ನ ಕನಸಿನಲ್ಲಿ ನಾನು ಸುಂದರ, ಅದ್ಭುತ ಲೋಕಗಳಿಗೆಲ್ಲಾ ಹೋಗಿ ಬಂದೆ. ಅಲ್ಲಿ ಒಬ್ಬ ಸನ್ಯಾಸಿ ಕಂಡು, ನಿನಗೇ ರೊಟ್ಟಿ, ನೀರು ದಕ್ಕಬೇಕು. ಏಕೆಂದರೆ ನಿನ್ನ ಭೂತ ಹಾಗೂ ಭವಿಷ್ಯದ ಬದುಕು ಅಷ್ಟು ಶ್ಲಾಘನೀಯವಾಗಿದೆ ಎಂದ. ಆದುದರಿಂದ ಆ ರೊಟ್ಟಿ, ನೀರು ನನಗೇ ಕೊಡಿ'.

ಎರಡನೆಯವ, 'ಎಂಥ ವಿಚಿತ್ರ! ನಾನು ನನ್ನ ಕನಸಿನಲ್ಲಿ ನನ್ನ ಭೂತ ಹಾಗೂ ಭವಿಷ್ಯವನ್ನು ಕಣ್ಣಾರೆ ಕಂಡೆ. ನನ್ನ ಭವಿಷ್ಯದಲ್ಲಿ ಒಬ್ಬ ಮೇಧಾವಿ ಕಂಡು, ನಿನ್ನ ಗೆಳೆಯರಿಗಿಂತ ನಿನಗೇ ರೊಟ್ಟಿ ನೀರು ಸಿಗಬೇಕು, ಏಕೆಂದರೆ ನೀನು ಹೆಚ್ಚು ಕಲಿತಿರುವವನೂ ಹಾಗೂ ತಾಳ್ಮೆ ಇರುವವನೂ ಆಗಿದ್ದೀಯ. ಅಲ್ಲದೆ ಮುಂದೆ ನೀನೇ ಜನನಾಯಕನೂ ಆಗುತ್ತೀಯ ಎಂದು. ಆದುದರಿಂದ ರೊಟ್ಟಿ, ನೀರು ನನಗೇ ಸಿಗಬೇಕು' ಎಂದು ಹೇಳಿದ.

ಮೂರನೆಯ ಪ್ರಯಾಣಿಕ, 'ನನ್ನ ಕನಸಿನಲ್ಲಿ ಏನನ್ನೂ ಕಾಣಲಿಲ್ಲ, ಏನನ್ನೂ ಕೇಳಲಿಲ್ಲ, ಆದರೆ ರಾತ್ರಿ ಎಂಥದೋ ಅದ್ವಿತೀಯ ಶಕ್ತಿಯೊಂದು ನನ್ನನ್ನು ಎಚ್ಚರಿಸಿ, ಅದೇ ಕ್ಷಣ ರೊಟ್ಟಿಯನ್ನು ತಿನ್ನುವಂತೆ ಹಾಗೂ ಆ ಬೊಗಸೆ ನೀರನ್ನು ಕುಡಿಯುವಂತೆ ಪ್ರೇರೇಪಿಸಿತು. ನಾನು ಅದನ್ನೇ ಮಾಡಿದೆ' ಎಂದ.

ಸರಿಯಾದ ಪ್ರಾರ್ಥನೆ

ಸನ್ಯಾಸಿಯೊಬ್ಬ ಒಂದು ದಿನ ನದಿ ತೀರದಲ್ಲಿ ನಡೆಯುತ್ತಿದ್ದ. ನೈತಿಕತೆ ಹಾಗೂ ಜ್ಞಾನಾರ್ಜನೆಯ ವಿಷಯಗಳನ್ನು ಆಲೋಚಿಸುತ್ತ ತಾನರಸುತ್ತಿದ್ದ ಅಂತಿಮ ಸತ್ಯದ ಬಗ್ಗೆ ಚಿಂತಿಸುತ್ತಿದ್ದ.

ದೂರದಲ್ಲ್ಯಾರೋ ದೇವರ ಮಂತ್ರಗಳನ್ನು ಹೇಳುತ್ತಿದ್ದುದು ಆತನ ಆಲೋಚನೆಗಳನ್ನು ಕೆಡಿಸಿತು. ಆ ಮಂತ್ರಗಳನ್ನು ಅದ್ಯಾರೋ ತಪ್ಪು ತಪ್ಪಾಗಿ ಉಚ್ಚರಿಸುತ್ತಿದ್ದಾರೆ ಎಂದುಕೊಂಡ. 'ಅಂಥ ತಪ್ಪು ಉಚ್ಚಾರಣೆಯನ್ನು ಸರಿಪಡಿಸುವುದು ನನ್ನ ಆದ್ಯ ಕರ್ತವ್ಯ. ಪಾಪ ಆ ವ್ಯಕ್ತಿಗೆ ಸರಿಯಾಗಿ ಹೇಳಿಕೊಡುವ ಗುರುವಿಲ್ಲದೇ ಇರಬಹುದು. ಮಂತ್ರದ ತಪ್ಪು ಉಚ್ಚಾರಣೆ ಮಾಡುವುದನ್ನು ಸರಿಪಡಿಸುವುದೂ ಸಹ ಧಾರ್ಮಿಕ ಸೇವೆಯೇ' ಎಂದುಕೊಂಡು, ಕೂಡಲೇ ಒಂದು ಸಣ್ಣ ದೋಣಿಯಲ್ಲಿ ಕೂತ. ಮಂತ್ರ ಘೋಷಣೆ ಕೇಳಿ ಬರುತ್ತಿದ್ದ ನದೀ ತೀರದ ಇನ್ನೊಂದು ದಿಕ್ಕಿನೆಡೆಗೆ ನಡೆದ.

ಅಲ್ಲಿ ಒಂದು ಮುರುಕಲು ಗುಡಿಸಿಲಿನಲ್ಲಿ ಸೂಫಿ ಸಂತನಂತೆಯೇ ದಿರುಸು ಧರಿಸಿದ್ದ ಒಬ್ಬಾತ ಮಂತ್ರದ ತಪ್ಪು ತಪ್ಪು ಉಚ್ಚಾರಣೆಯಲ್ಲಿ ತೊಡಗಿದ್ದ. ಈ ಸನ್ಯಾಸಿ ಆತನ ಬಳಿಗೆ ಹೋಗಿ, ಆತನ ಉಚ್ಚಾರಣೆ ಎಲ್ಲಾ ತಪ್ಪು ತಪ್ಪಾಗಿದೆಯೆಂದೂ, ಅದು ಪವಿತ್ರ ಮಂತ್ರವೆಂದೂ, ಆ ಮಂತ್ರವನ್ನು ಸರಿಯಾಗಿ ಜಪಿಸಿದಲ್ಲಿ ಎಂತೆಂಥಾ ಅದ್ಭುತಗಳನ್ನೆಲ್ಲಾ ಸಾಧಿಸಬಹುದೆಂದು ಹೇಳಿ, ಆ ಮಂತ್ರೋಚ್ಚಾರಣೆಯ ಸರಿಯಾದ ರೀತಿಯನ್ನು ತಿಳಿಸಿಕೊಟ್ಟ. ಆ ಮುರುಕಲು ಗುಡಿಸಲ ಸಂತ ನಮ್ರನಾಗಿ ವಂದನೆಗಳನ್ನು ತಿಳಿಸಿದ.

ಈ ಸಂಪ್ರದಾಯಸ್ಥ ಸನ್ಯಾಸಿ ತನ್ನಿಂದೇನೋ ಮಹತ್ಕಾರ್ಯ ನಡೆಯಿತೆಂದು ಹೆಮ್ಮೆಯಿಂದ ಒಂದು ದೋಣಿಯಲ್ಲಿ ಕೂತು ವಾಪಸ್ಸು ಹೊರಟ. ಆತ ಆ ಪವಿತ್ರ ಮಂತ್ರೋಚ್ಚಾರಣೆ ಸಾಧಿಸಿದಲ್ಲಿ ನೀರಿನ ಮೇಲೆ ನಡೆಯಬಹುದೆಂದೂ ತನಗೂ ಸಹ ಒಂದಲ್ಲ ಒಂದು ದಿನ ನೀರಿನ ಮೇಲೆ ನಡೆಯಲು ಸಾಧ್ಯವಾಗಬಹುದೆಂದು ಆಲೋಚಿಸುತ್ತಿರುವಾಗ, ಯಾರೋ ತನ್ನನ್ನು ಕರೆದಂತಾಯಿತು. ಹಿಂತಿರುಗಿ ನೋಡಿದರೆ, ಒಂದು ವಿಸ್ಮಯಕಾರಿ ದೃಶ್ಯ ಕಣ್ಣಿಗೆ ಬಿತ್ತು. ಅದೇ ಮುರುಕಲ ಗುಡಿಸಲ ಸನ್ಯಾಸಿ ನೀರಿನ ಮೇಲೆ ಓಡುತ್ತಾ ಈತನೆಡೆಗೆ ಬರುತ್ತಿದ್ದ. ಈತನೆಡೆಗೆ ನೀರಿನ ಮೇಲೆಯೇ ಓಡಿ ಬಂದ ಆತ, ಕೈ ಜೋಡಿಸಿ, 'ಸ್ವಾಮಿ, ನೀವು ಹೇಳಿಕೊಟ್ಟ ಸರಿಯಾದ ಮಂತ್ರೋಚ್ಚಾರಣೆಯ ರೀತಿ ನನಗೆ ಕಷ್ಟಕರವಾಗುತ್ತಿದೆ. ನಿಮಗೆ ತೊಂದರೆಯಾಗದಿದ್ದಲ್ಲಿ ಮತ್ತೊಮ್ಮೆ ಹೇಳಿಕೊಡುವಿರಾ?' ಎಂದ.

ಬೆಕ್ಕಿನ ಬೆಲೆ

ಒಮ್ಮೆ ಬಹಳ ತೊಂದರೆಗೆ ಸಿಲುಕಿದ ಮನುಷ್ಯ, ತನ್ನ ಎಲ್ಲಾ ತೊಂದರೆಗಳು ನಿವಾರಣೆಯಾದಲ್ಲಿ ಮನೆ ಮಾರಿ ಬಂದ ಹಣವನ್ನು ಬಡಬಗ್ಗರಿಗೆ ಹಂಚುವುದಾಗಿ ಪ್ರಮಾಣ ಮಾಡಿದ. ಕೊನೆಗೊಂದು ದಿನ ಆತನ ಎಲ್ಲ ತೊಂದರೆಗಳಿಗೂ ನಿವಾರಣೆಯಾದವು. ತಾನು ಮಾಡಿದ ಪ್ರಮಾಣವನ್ನು ಉಳಿಸಿಕೊಳ್ಳಬೇಕಾಗಿ ಬಂತು. ಆದರೆ ಮನೆ ಮಾರಿ ಬಂದ ಹಣವನ್ನು ಬಡಬಗ್ಗರಿಗೆ ಹಂಚಲು ಆತನಿಗೆ ಮನಸ್ಸು ಬರಲಿಲ್ಲ. ಅದಕ್ಕಾಗಿ ಆತ ಒಂದು ಉಪಾಯ ಮಾಡಿದ.

ತನ್ನ ಮನೆ ಹಾಗೂ ತನ್ನ ಬೆಕ್ಕನ್ನು ಮಾರಾಟಕ್ಕೆ ಇಟ್ಟ. ಮನೆಯ ಬೆಲೆ ಒಂದು ಬೆಳ್ಳಿಯ ನಾಣ್ಯ, ಬೆಕ್ಕಿನ ಬೆಲೆ ಒಂದು ಸಾವಿರ ಬೆಳ್ಳಿಯ ನಾಣ್ಯ, ಆದರೆ ಕೊಳ್ಳುವವರು ಎರಡನ್ನೂ ಒಟ್ಟಿಗೇ ಕೊಳ್ಳಬೇಕು.

ಯಾರೋ ಒಬ್ಬಾತ ಎರಡನ್ನೂ ಕೊಂಡ. ಈತ ಮನೆ ಮಾರಿ ಬಂದ ಒಂದು ಬೆಳ್ಳಿಯ ನಾಣ್ಯವನ್ನು ಬಡಬಗ್ಗರಿಗೆ ಹಂಚಿ ತಾನು ಮಾಡಿದ ಪ್ರಮಾಣ ಉಳಿಸಿಕೊಂಡ. ಬೆಕ್ಕು ಮಾರಿ ಬಂದ ಹಣದಿಂದ ಹೊಸ ಮನೆ ಕೊಂಡ.

ಮೂರು ಉಪದೇಶಗಳು

ಒಬ್ಬ ಬೇಟೆಗಾರ ಒಮ್ಮೆ ಒಂದು ಸಣ್ಣ ಪಕ್ಷಿಯನ್ನು ಹಿಡಿದ. ಆ ಪಕ್ಷಿ, 'ನಾನು ಬಹಳ ಪುಟ್ಟ ಪಕ್ಷಿ. ನನ್ನಿಂದ ನಿನಗೆ ಉಪಯೋಗವೇನೂ ಇಲ್ಲ. ನಿನ್ನ ಹೊಟ್ಟೆಗೆ ನಾನು ಯಾವ ಮೂಲೆಗೂ ಆಗುವುದಿಲ್ಲ. ನನ್ನನ್ನು ಬಿಟ್ಟು ಬಿಡು. ಅದಕ್ಕೆ ಉಪಕಾರವಾಗಿ ನಿನಗೆ ಮೂರು ಅತ್ಯಮೂಲ್ಯ ಉಪದೇಶ ನೀಡುತ್ತೇನೆ' ಎಂದು ಆತನಿಗೆ ಹೇಳಿತು. ಅಲ್ಲದೆ ಮೊದಲನೆಯ ಉಪದೇಶ ಆತನ ಮುಷ್ಟಿಯಲ್ಲಿರುವಾಗ, ಎರಡನೆಯದು ಹಾರಿ ಮರದ ರೆಂಬೆಯ ಮೇಲೆ ಕೂತನಂತರ ಹಾಗೂ ಮೂರನೆಯದನ್ನು ಪಕ್ಕದ ಬೆಟ್ಟದ ತುದಿಯಲ್ಲಿ ಕೂತ ನಂತರ ಹೇಳುತ್ತೇನೆ ಎಂದೂ ಹೇಳಿತು ಆ ಪಕ್ಷಿ.

'ಈ ಪುಟ್ಟ ಪಕ್ಷಿಯಿಂದ ನನಗೇನೂ ಉಪಯೋಗವಿಲ್ಲ, ನೋಡೋಣ ಏನು ಉಪದೇಶ ನೀಡುತ್ತದೆಯೋ' ಎಂದು ಆಲೋಚಿಸಿ 'ಆಯ್ತು ಬಿಟ್ಟು ಬಿಡುತ್ತೇನೆ, ಹೇಳು' ಎಂದ.

'ನೀನು ಯಾವುದನ್ನಾದರೂ ಕಳೆದುಕೊಂಡಲ್ಲಿ, ಅದು ನಿನ್ನ ಪ್ರಾಣದಷ್ಟೇ ಬೆಲೆಬಾಳುವಂತಹುದಾದರೂ ಸರಿ, ನೀನು ಪಶ್ಚಾತ್ತಾಪ ಪಡಬೇಡ' ಎಂದು ಮೊದಲನೆಯ ಉಪದೇಶ ನೀಡಿತು.

ಬೇಟೆಗಾರ ತನ್ನ ಮುಷ್ಟಿಯಿಂದ ಪಕ್ಷಿಯನ್ನು ಬಿಡುಗಡೆ ಮಾಡಿದ. ಪಕ್ಷಿ ಹಾರಿ ಮರದ ರೆಂಬೆಯ ಮೇಲೆ ಕುಳಿತುಕೊಂಡಿತು.

'ನಿನ್ನ ಜ್ಞಾನೇಂದ್ರಿಯಗಳಿಗೆ ನಿಲುಕದ ಯಾವುದನ್ನೂ ನೀನು ಆಧಾರವಿಲ್ಲದೆ ನಂಬಬೇಡ' ಎಂದು ಎರಡನೆಯ ಉಪದೇಶ ನೀಡಿತು. ನಂತರ ಪಕ್ಷಿ ಹಾರಿ ಬೆಟ್ಟದ ತುದಿಯಲ್ಲಿ ಕುಳಿತುಕೊಂಡಿತು. ಅಲ್ಲಿಂದಲೇ ಆ ಪಕ್ಷಿ 'ಎಂಥ ನತದೃಷ್ಟ ಬೇಟೆಗಾರನಯ್ಯಾ ನೀನು! ನನ್ನ ಹೊಟ್ಟೆಯಲ್ಲಿ ಎರಡು ದೊಡ್ಡ ರತ್ನಗಳಿವೆ. ನೀನು ನನ್ನನ್ನು ಕೊಂದಿದ್ದರೆ ಅವರೆಡೂ ನಿನಗೆ ಸಿಗುತ್ತಿದ್ದವಲ್ಲ!' ಎಂದು ಹೇಳಿತು.

ಬೇಟೆಗಾರನಿಗೆ 'ಅಯ್ಯೋ,ಈ ಪಕ್ಷಿಯ ಮರುಳು ಮಾತು ಕೇಳಿ ಅದನ್ನು ಬಿಟ್ಟುಬಿಟ್ಟೆನಲ್ಲಾ! ಛೆ, ಎಂತಹ ಅವಕಾಶ ಕಳೆದುಕೊಂಡೆ' ಎಂದು ಮರುಗಿದ. ಆದರೂ 'ಆಯಿತು, ಅದೇನೋ ನಿನ್ನ ಮೂರನೆಯ ಉಪದೇಶ ಹೇಳು' ಎಂದ.

ಆದಕ್ಕೆ ಆ ಪಕ್ಷಿ ಹೇಳಿತು, 'ಎಂಥ ಮೂರ್ಖ ನೀನು! ನನ್ನ ಮೊದಲನೆಯ ಉಪದೇಶಗಳೇ ನಿನ್ನ ಅರಿವಿಗೆ ಬಂದಿಲ್ಲ. ಆದರೂ ಮೂರನೆಯದನ್ನು ಕೇಳುತ್ತಿದ್ದೀಯ! ನೀನು ಕಳೆದುಕೊಂಡಿದ್ದರ ಬಗ್ಗೆ ಪಶ್ಚಾತ್ತಾಪ ಪಡಬೇಡ ಹಾಗೂ ಜ್ಞಾನೇಂದ್ರಿಯಗಳಿಗೆ ನಿಲುಕದುದನ್ನು ನಂಬಬೇಡ ಎಂದು ಹೇಳಿದೆ. ಈಗ ನೀನು ಅವರೆಡನ್ನೂ ಮಾಡುತ್ತಿದ್ದೀಯ. ಅಸಂಬದ್ಧವನ್ನು ನಂಬುತ್ತಿದ್ದೀಯ ಹಾಗೂ ಅದನ್ನು ಕಳೆದುಕೊಂಡೆ ಎಂದು ಪಶ್ಚಾತ್ತಾಪ ಬೇರೆ ಪಡುತ್ತಿದ್ದೀಯೆ! ನನ್ನೊಳಗೆ ಎರಡು ದೊಡ್ಡ ವಜ್ರಗಳಿರಲು ಸಾಧ್ಯವೆ? ನನ್ನ ದೇಹ ಅಷ್ಟು ದೊಡ್ಡದಾಗಿವೆಯೇ? ನೀನೊಬ್ಬ ಮೂರ್ಖ. ಮನುಷ್ಯ ತಾನಿರಬೇಕಾದ ಮಿತಿಯೊಳಗೇ ನೀನಿರಬೇಕು. ಅದರಿಂದ ಹೊರಬರಲು ನಿನ್ನಿಂದ ಸಾಧ್ಯವಿಲ್ಲ' ಎಂದು ಹೇಳಿ ಆ ಪುಟ್ಟ ಪಕ್ಷಿ ಹಾರಿಹೋಯಿತು.

ಮಾಲಿಕ್ ದಿನಾರ್ ಸೂಫಿಯಾದದ್ದು

ತತ್ವಜ್ಞಾನದ ಎಲ್ಲಾ ಪುಸ್ತಕಗಳನ್ನು ಜಾಲಾಡಿದ ಮಾಲಿಕ್ ದಿನಾರ್‌ನಿಗೆ ಕೊನೆಗೆ ದಿವ್ಯಜ್ಞಾನದ ಅನ್ವೇಷಣೆಯಲ್ಲಿ ಹೊರಡಬೇಕೆನ್ನಿಸಿತು. 'ನಾನು ಹೊರಡುತ್ತೇನೆ.....ನನ್ನೊಳಗೇ ಇರುವನೆಂದು ಹೇಳಲಾಗುವ ಸುಪ್ತಗುರುವಿನ ಶಿಷ್ಯನಾಗುವ ಹಾದಿ ಹುಡುಕುತ್ತೇನೆ' ಎಂದುಕೊಂಡು ಹೊರಟ.

ಧೂಳಿನ ರಸ್ತೆಯಲ್ಲಿ ದರ್ವೇಶಿಯೊಬ್ಬ ಹೋಗುತ್ತಿದ್ದ. ಮಾಲಿಕ್ ಆತನನ್ನೇ ಹಿಂಬಾಲಿಸಿದ ಮೌನದಿಂದ. ಬಹಳಷ್ಟು ಹೊತ್ತು ಯಾರೂ ಮಾತನಾಡಲಿಲ್ಲ. ಕೊನೆಗೆ ದರ್ವೇಶಿ ಕೇಳಿದ, 'ಯಾರು ನೀನು? ಎಲ್ಲಿಗೆ ಹೋಗುತ್ತಿದ್ದೀಯ?'

'ನನ್ನ ಹೆಸರು ಮಾಲಿಕ್ ದಿನಾರ್. ನಾನು ನನ್ನ ಸುಪ್ತ ಗುರುವಿನ ಅನ್ವೇಷಣೆಯಲ್ಲಿ ಹೊರಟಿದ್ದೇನೆ'.

'ನನ್ನ ಹೆಸರು ಅಲ್-ಮಾಲಿಕ್ ಅಲ್-ಫಕೀ. ನಡೆ ನಾನೂ ನಿನ್ನೊಂದಿಗೆ ನಡೆಯುತ್ತೇನೆ'

'ನನ್ನ ಸುಪ್ತ ಗುರುವಿನ ಅನ್ವೇಷಣೆಯಲ್ಲಿ ನನಗೆ ಸಹಾಯ ಮಾಡುವಿರಾ?'

'ನಾನು ನಿನಗೆ ಸಹಾಯ ಮಾಡುವುದೆ ಅಥವಾ ನೀನು ನನಗೆ ಸಹಾಯ ಮಾಡುವುದೆ?' ಅಲ್-ಮಾಲಿಕ್ ಅಲ್-ಫಕೀ ಎಲ್ಲ ದರ್ವೇಶಿಗಳ ಹಾಗೆ ಸಿಡುಕುತ್ತಾ ಹೇಳಿ, 'ಸುಪ್ತ ಗುರು ಎಂದರೆ ಆಯಾ ಮನುಷ್ಯನ ಆತ್ಮದಲ್ಲೇ ಇರುತ್ತಾನೆ ಎನ್ನುತ್ತಾರೆ. ಆ ಗುರುವನ್ನು ಹೇಗೆ ಹುಡುಕಿಕೊಳ್ಳುತ್ತಾರೆನ್ನುವುದು ಆಯಾ ಮನುಷ್ಯ ತನ್ನ ಬದುಕಿನ ಅನುಭವಗಳನ್ನು ಹೇಗೆ ಉಪಯೋಗಿಸಿಕೊಳ್ಳುತ್ತಾನೆನ್ನುವುದರ ಮೇಲೆ ಅವಲಂಬಿಸಿದೆ. ಈ ಉಪಯೋಗದಲ್ಲಿ ಬೇಕಾದರೆ ಸಂಗಾತಿಯೊಬ್ಬ ಭಾಗಶಃ ಸಹಕರಿಸಬಲ್ಲ ಅಷ್ಟೆ' ಎಂದು ಹೇಳಿದ.

ಹಾಗೆ ನಡೆಯುತ್ತಾ ಹೊರಟರು. ಹಾದಿಯ ಬದಿಯಲ್ಲಿ ಮರವೊಂದು ಕಂಡಿತು. ಅದು ತೂಗಾಡುತ್ತಾ ಶಬ್ದ ಮಾಡುತ್ತಿತ್ತು. ದರ್ವೇಶಿ ಮರದ ಬಳಿ ನಿಂತು, 'ಆ ಮರ ಏನೋ ಹೇಳುತ್ತಿದೆ' ಎಂದು ಹೇಳಿ ಅದರ ಶಬ್ದ ಆಲಿಸುವವನಂತೆ ನಿಂತು ಸ್ವಲ್ಪ ಹೊತ್ತಿನ ನಂತರ, "ನನ್ನಲ್ಲಿರುವುದೇನೋ ನನ್ನನ್ನು ನೋಯಿಸುತ್ತಿದೆ. ಅದನ್ನು ತೆಗೆದು ನನ್ನ ನೋವು ಶಮನ ಮಾಡಿ" ಎನ್ನುತ್ತಿದೆ ಈ ಮರ' ಎಂದ.

ಅದಕ್ಕೆ ಮಾಲಿಕ್ ದಿನಾರ್ ನಗುತ್ತಾ 'ಮರ ಮಾತನಾಡಲು ಸಾಧ್ಯವೇ? ನಾವು ಇಲ್ಲಿ ನಿಂತು ಸಮಯ ಹಾಳು ಮಾಡುವುದು ಬೇಡ. ಹೋಗೋಣ ಬನ್ನಿ' ಎಂದು ಹೇಳಿದ. ಇಬ್ಬರೂ ಅಲ್ಲಿಂದ ಹೊರಟರು.

ಹಲವಾರು ಮೈಲಿ ನಡೆದ ನಂತರ ದರ್ವೇಶಿ, 'ಆ ಮರದ ಬಳಿ ನನಗೆ ಜೇನಿನ ವಾಸನೆ ಬಂದ ಹಾಗಿತ್ತು. ಆ ಮರದ ಪೊಟರೆಯಲ್ಲಿ ಕಾಡುಜೇನು ಗೂಡು ಕಟ್ಟಿರಬಹುದೇನೋ' ಎಂದ.

'ಹೌದೇ' ಮರದ ಬಳಿ ವಾಪಸ್ಸು ಹೋಗೋಣ ಬನ್ನಿ, ಜೇನು ಸಂಗ್ರಹಿಸಿ ನಾವು ತಿನ್ನಬಹುದು ಹಾಗೂ ಹೆಚ್ಚಿನದನ್ನು ಮಾರಾಟ ಮಾಡಿ ಹಣವನ್ನೂ ಗಳಿಸಿಕೊಳ್ಳಬಹುದು. ಹೋಗೋಣ ನಡೆಯಿರಿ' ಎಂದ ಮಾಲಿಕ್ ದಿನಾರ್ ಆತುರದಿಂದ.

'ನಿನ್ನಿಷ್ಟದಂತೆಯೇ ಆಗಲಿ' ಎಂದ ದರ್ವೇಶಿ.

ಇಬ್ಬರೂ ಮರದ ಬಳಿ ಬರುವಷ್ಟರಲ್ಲಿ ಯಾರೋ ಪ್ರಯಾಣಿಕರು ಜೇನೆಲ್ಲಾ ಸಂಗ್ರಹಿಸಿ, ಅದನ್ನು ತಿನ್ನುತ್ತಾ ಚಪ್ಪರಿಸುತ್ತಿದ್ದರು.

'ಹಾಹ! ಎಂಥ ಅದೃಷ್ಟ ನಮ್ಮದು, ಇಡೀ ಊರಿಗಾಗುವಷ್ಟು ಜೇನುತುಪ್ಪವಿದೆ. ಬಡ ಪ್ರಯಾಣಿಕರಾದ ನಾವು ಇದನ್ನು ಮಾರಿ ಸಿರಿವಂತರಾಗಬಹುದು' ಎಂದುಕೊಳ್ಳುತ್ತಿದ್ದರು.

ದರ್ವೇಶಿ ಮತ್ತು ಮಾಲಿಕ್ ದಿನಾರ್‌ಗೆ ಏನೂ ಸಿಗದೆ ಬರಿಗೈಲಿ ಹಿಂದಿರುಗಿದರು. ಹಾಗೇ ನಡೆಯುತ್ತಿದ್ದಂತೆ ಬೆಟ್ಟವೊಂದು ಎದುರಾಯಿತು. ಅದನ್ನು ಹತ್ತುತ್ತಿದ್ದಾಗ ಏನೋ

ಗುಂಯ್ಗುಡುವ ಸದ್ದು ಭೂಮಿಯ ಒಳಗಿನಿಂದ ಕೇಳುತ್ತಿತ್ತು. ದರ್ವೇಶಿ ಭೂಮಿಗೆ ಕಿವಿಕೊಟ್ಟು ಕೇಳಿದ ನಂತರ, 'ಕೆಳಗೆ ಭೂಮಿಯೊಳಗೆ ಗೂಡುಕಟ್ಟುತ್ತಿರುವ ನೂರಾರು ಇರುವೆಗಳಿವೆ. ಅವು ಸಹಾಯಕ್ಕಾಗಿ ಕೂಗುತ್ತಿವೆ. 'ನಾವು ನಮ್ಮ ಗೂಡಿಗಾಗಿ ಅಗೆಯುತ್ತಿದ್ದೇವೆ. ಆದರೆ ವಿಚಿತ್ರದ ಕಲ್ಲುಗಳು ನಮಗೆ ತಡೆಯಾಗಿವೆ. ಅವನ್ನು ಅಗೆಯಲು ಸಹಾಯಮಾಡಿ' ಎಂದು ಮೊರೆಯಿಡುತ್ತಿವೆ. ಸ್ವಲ್ಪ ನಿಂತು ಆ ಕಲ್ಲುಗಳನ್ನು ಅಗೆದು ಇರುವೆಗಳಿಗೆ ಸಹಾಯ ಮಾಡೋಣವೇ?' ಎಂದು ದರ್ವೇಶಿ ದಿನಾರ್‌ನನ್ನು ಕೇಳಿದ.

'ಇರುವೆಗಳ ಹಾಗೂ ಕಲ್ಲುಗಳ ಗೊಡವೆಯೇಕೆ ನಮಗೆ? ನಾನು ಸುಪ್ತ ಗುರುವಿನ ಅನ್ವೇಷಣೆಯಲ್ಲಿದ್ದೇನೆ. ಇವಕ್ಕೆಲ್ಲಾ ಸಮಯವೆಲ್ಲಿದೆ? ಹೋಗೋಣ ನಡೆ" ಎಂದ ದಿನಾರ್.

'ಆಯಿತು ನಿನ್ನಿಷ್ಟದಂತೆ ಆಗಲಿ' ಎಂದ ದರ್ವೇಶಿ. "ಆದರೆ ಹಿರಿಯರು ಹೇಳುತ್ತಾರೆ, ಈ ಜಗತ್ತಿನಲ್ಲಿ ಎಲ್ಲವೂ ಒಂದಲ್ಲ ಒಂದು ರೀತಿ ಪರಸ್ಪರ ಸಂಬಂಧ ಹೊಂದಿವೆ ಎಂದು. ನನಗನ್ನಿಸುತ್ತಿದೆ, ಈ ಇರುವೆಗಳಿಗೂ ನಮಗೂ ಸಂಬಂಧವಿರಬಹುದು" ಎಂದೂ ಹೇಳಿದ.

ದಿನಾರ್ ಆತನ ಮಾತುಗಳನ್ನು ಕೇಳಿಸಿಕೊಳ್ಳಲೇ ಇಲ್ಲ. ಅಲ್ಲಿಂದ ಹೊರಡುವ ಆತುರದಲ್ಲಿದ್ದ. ಇಬ್ಬರೂ ಅಲ್ಲಿಂದ ಹೊರಟರು. ರಾತ್ರಿ ಒಂದು ಕಡೆ ತಂಗಿದ್ದಾಗ, ದಿನಾರ್ ತನ್ನ ಬಳಿಯಿದ್ದ ಚಾಕು ಕಳೆದುಹೋಗಿರುವುದನ್ನು ಗಮನಿಸಿದ. 'ನಾವು ಆ ಇರುವೆ ಗೂಡಿನ ಬಳಿಯಿದ್ದಾಗ ನನ್ನ ಚಾಕು ಬಿದ್ದುಹೋಗಿರಬಹುದು' ಎಂದ. ಬೆಳಿಗ್ಗೆ ಇಬ್ಬರೂ ಇರುವೆಯ ಗೂಡಿನ ಬಳಿ ವಾಪಸ್ಸು ಹೊರಟರು.

ಇರುವೆಯ ಗೂಡಿನ ಬಳಿ ಜನರ ಗುಂಪು ಸೇರಿತ್ತು. ಏನೆಂದು ನೋಡಿದಾಗ ಅವರು ಭೂಮಿಯ ಒಳಗೆ ಹೂತಿಟ್ಟಿದ್ದ ಚಿನ್ನದ ನಾಣ್ಯಗಳನ್ನು ತೆಗೆಯುತ್ತಿದ್ದರು. ಇವರನ್ನು ಕಂಡು, 'ನಾವು ಇಲ್ಲಿ ಹಾದು ಹೋಗುತ್ತಿದ್ದಾಗ ಮುದುಕ ದರ್ವೇಶಿಯೊಬ್ಬ ನಮ್ಮನ್ನು ಕರೆದು 'ಇಲ್ಲಿ ಅಗೆಯಿರಿ, ಕೆಲವರಿಗೆ ಕಲ್ಲು ಎನಿಸಿದ್ದು ಮತ್ತೆ ಕೆಲವರಿಗೆ ಚಿನ್ನವಾಗಿರುವಂಥದು ಸಿಗುತ್ತದೆ' ಎಂದು ಹೇಳಿದ" ಎಂದರು.

ದಿನಾರ್ ತನ್ನ ದುರಾದೃಷ್ಟವನ್ನು ಶಪಿಸಿಕೊಂಡ, 'ನಾವು ನಿನ್ನೆ ಇಲ್ಲಿಯೇ ಇರುವೆಗಳ ಮೊರೆ ಕೇಳಿ ಅಗೆದಿದ್ದರೆ ಇಷ್ಟು ಹೊತ್ತಿಗೆ ಸಿರಿವಂತರಾಗುತ್ತಿದ್ದೆವಲ್ಲಾ ದರ್ವೇಶಿ! ಎಂಥ ಅವಕಾಶ ಹೋಯಿತು! ಎಂದ ಕೈ ಕೈ ಹಿಸುಕಿಕೊಳ್ಳುತ್ತ. ಆ ಜನರ ಗುಂಪಿನಲ್ಲಿನ ಒಬ್ಬಾತ ದರ್ವೇಶಿಯ ಕಡೆ ಕೈ ತೋರಿಸುತ್ತಾ, 'ನಿನ್ನೆ ನಮಗೆ ಹೇಳಿದ ದರ್ವೇಶಿ ನಿನ್ನ ಹಾಗೆಯೇ ಇದ್ದ' ಎಂದ.

'ಎಲ್ಲಾ ದರ್ವೇಶಿಗಳೂ ಒಂದೇ ತರಹ ಇರುತ್ತಾರೆ ಬಿಡು'ಎಂದ ದರ್ವೇಶಿ ಅಲ್-ಮಾಲಿಕ್. ಇಬ್ಬರೂ ಅಲ್ಲಿಂದ ಹೊರಟರು.

ಕೆಲದಿನಗಳ ಪ್ರಯಾಣದ ನಂತರ ಒಂದು ಸುಂದರ ನದಿಯ ದಂಡೆಯ ಬಳಿ ಬಂದರು. ನದಿ ದಾಟಲು ನಾವೆಗಾಗಿ ಅಲ್ಲೇ ದಂಡೆಯ ಬಳಿ ಕಾದು ಕೂತಿದ್ದರು. ಅವರ ಎದುರಿಗೆ ನೀರಿನಲ್ಲಿ ಮೀನೊಂದು ಮೇಲೆ ಮೇಲೆ ಹಾರಿ ಇವರ ಕಡೆ ತಿರುಗಿ ಬಾಯಿ ತೆರೆಯುತ್ತಿತ್ತು. ಅದನ್ನು ನೋಡುತ್ತಿದ್ದ ದರ್ವೇಶಿ.

'ಆ ಮೀನು ಹೇಳುತ್ತಿದೆ, "ನಾನೊಂದು ಕಲ್ಲು ನುಂಗಿಬಿಟ್ಟಿದ್ದೇನೆ, ನೋವು ತಡೆಯಲಾಗುತ್ತಿಲ್ಲ. ನನಗೆ ಸೊಪ್ಪಿನ ಮೂಲಿಕೆ ತಿನ್ನಿಸಿ ಆ ಕಲ್ಲು ಹೊರಬರುವಂತೆ ಮಾಡಿ ನನ್ನ ನೋವು ಶಮನ ಮಾಡಿ" ಎಂದು ಪ್ರಾರ್ಥನೆ ಮಾಡುತ್ತಿದೆ' ಎಂದ ದರ್ವೇಶಿ. ಅಷ್ಟರಲ್ಲಿ ನಾವೆ ಬಂತು. ದರ್ವೇಶಿ ಅಲ್ಲೇ ನಿಂತು ತಡ ಮಾಡುತ್ತಾನೆಂದು ಎಣಿಸಿ ಮಾಲಿಕ್ ದಿನಾರ್ ಆತನನ್ನು ನಾವೆಗೆ ಎಳೆದೊಯ್ದು. ನದಿಯ ಮತ್ತೊಂದು ದಡ ತಲುಪಿದ ಇಬ್ಬರೂ ಅಲ್ಲೇ ಛತ್ರವೊಂದರಲ್ಲಿ ಆ ರಾತ್ರಿ ಉಳಿದುಕೊಂಡರು.

ಬೆಳಿಗ್ಗೆ ಚಹಾ ಕುಡಿಯುತ್ತಿದ್ದಾಗ ನಾವೆ ನಡೆಸುತ್ತಿದ್ದಾತ ಬಂದು ದರ್ವೇಶಿಯ ಕೈ ಚುಂಬಿಸಿ, 'ನಿನ್ನೆ ನನ್ನ ಅದೃಷ್ಟದ ದಿನ. ನೀವು ನನ್ನ ಅದೃಷ್ಟದ ಪ್ರಯಾಣಿಕರು, ನಿನ್ನೆ ನಾನು ನಾವೆಯನ್ನು ಬಿಟ್ಟು ಮನೆಗೆ ಹಿಂದಿರುಗೋಣವೆಂದು ಬಂದಾಗ ಬಡ ಪ್ರಯಾಣಿಕರಾದ ನೀವಿಬ್ಬರೂ ನಾವೆಗಾಗಿ ಕಾದಿದ್ದಿರಿ. ಬಡವರಿಗೆ ಸಹಾಯ ಮಾಡಿದಾಗ ಸಿಗುವ ಆಶೀರ್ವಾದಕ್ಕಷ್ಟೇ ನಾನು ನಿಮಗಾಗಿ ಮತ್ತೇ ನಾವೆ ನಡೆಸಿದೆ, ನಿಮ್ಮನ್ನು ಈ ದಡದಲ್ಲಿ ಬಿಟ್ಟು ಹಿಂದಿರುಗಿದಾಗ ಆ ದಡದಲ್ಲಿ ಮೀನೊಂದು ಬಿದ್ದು ಯಾವುದೊ ಸೊಪ್ಪನ್ನು ನುಂಗಲು ಪ್ರಯತ್ನಿಸುತ್ತಿತ್ತು. ನಾನು ಆ ಸೊಪ್ಪನ್ನು ಆ ಮೀನಿನ ಬಾಯಿಗೆ ಹಾಕಿದೆ. ಆ ಮೀನು ಯಾವುದೋ ಕಲ್ಲನ್ನು ಹೊರಗೆ ಉಗುಳಿ ಮತ್ತೆ ನೀರಿಗೆ ಹಾರಿತು. ಆ ದೊಡ್ಡ ಕಲ್ಲು ಒಂದು ಅಮೂಲ್ಯ ವಜ್ರವಾಗಿತ್ತು' ಎಂದ.

'ನೀನದಕ್ಕೆ ಅರ್ಹ' ಎಂದ ದರ್ವೇಶಿ, ನಾವಿಕನನ್ನು ಆಶೀರ್ವದಿಸುತ್ತ.

'ಇದನ್ನೆಲ್ಲ ನೋಡುತ್ತಿದ್ದ ಮಾಲಿಕ್ ದಿನಾರ್‌ಗೆ ದರ್ವೇಶಿಯ ಮೇಲೆ ಸಿಟ್ಟು ಬಂದು, 'ನೀನೊಬ್ಬ ದೆವ್ವ! ಆ ಮೂರು ಐಶ್ವರ್ಯದ ಬಗ್ಗೆ ಯಾವುದೋ ಮಾಯೆಯಿಂದ ನಿನಗೆ ಮೊದಲೇ ತಿಳಿದಿತ್ತು. ಆದರೂ ನನಗೆ ಹೇಳಲೇ ಇಲ್ಲ. ಇದೇನೇ ನಿನ್ನ ನಿಜವಾದ ಗೆಳೆತನ? ಮೊದಲಿಗೆ ನನ್ನ ದುರದೃಷ್ಟವೆನ್ನಬಹುದು, ಆದರೆ ನೀನಿಲ್ಲದಿದ್ದಲ್ಲಿ ಮರ, ಇರುವೆಗೂಡು ಹಾಗೂ ಮೀನುಗಳಲ್ಲಿ ಅಡಗಿರಬಹುದಾದ ವಸ್ತುಗಳ ಬಗ್ಗೆ ನನಗೆ ತಿಳಿಯುತ್ತಲೇ ಇರಲಿಲ್ಲ' ಎಂದ.

.ತನ್ನ ಮಾತು ಮುಗಿಸುವಷ್ಟರಲ್ಲಿ ಆತನ ಆತ್ಮದಲ್ಲಿ ಭಯಂಕರ ಬಿರುಗಾಳಿ ಬೀಸುತ್ತಿರುವ ಅನುಭವವಾಗತೊಡಗಿತು. ಈಗ ತಾನು ಹೇಳಿದುದರ ವಿರುದ್ಧವೇ ಸತ್ಯವೆಂಬ ಅರಿವು ಮೂಡತೊಡಗಿತು.

ಆಗ ದರ್ವೇಶಿ ಅಲ್-ಮಾಲಿಕ್ ಅಲ್-ಫತಿ (ಅಜೇಯ ಸಾಮ್ರಾಟ) ಮಾಲಿಕ್ ದಿನಾರ್‌ನ ಭುಜವನ್ನು ಲಘುವಾಗಿ ತಟ್ಟಿ ಮುಗುಳ್ನಕ್ಕು, 'ತಮ್ಮಾ, ಅನುಭವದಿಂದ ಕಲಿಯಬಹುದೆಂಬುದು ಈಗ ನಿನ್ನ ಅರಿವಿಗೆ ಬರುತ್ತಿದೆ. ಆ ಸುಪ್ತ ಗುರುವಿನ ಆದೇಶ ಪಾಲಿಸುವವ ನಾನು' ಎಂದು ಹೇಳಿದ.

ದಿನಾರ್ ತನಗಾದ ಅವರ್ಣನೀಯ ಅನುಭವದಿಂದ ಎಚ್ಚೆತ್ತು, ತಲೆಯೆತ್ತಿ ನೋಡಿದಾಗ ತನ್ನ ಗುರು ಯಾರೋ ಪ್ರಯಾಣಿಕರ ಜೊತೆ ಧೂಳಿನ ಹಾದಿಯಲ್ಲಿ ಹೋಗುತ್ತಿದ್ದ. ಆ ಪ್ರಯಾಣಿಕರು ಪ್ರಯಾಣದ ಕಷ್ಟ ತೊಂದರೆಗಳ ಬಗ್ಗೆ ಮಾತನಾಡುತ್ತಿದ್ದರು.

ಇಂದು ಅಪ್ರತಿಮ ದರ್ವೇಶಿಗಳಲ್ಲಿ ಮಾಲಿಕ್ ದಿನಾರ್‌ನ ಹೆಸರೂ ಸಹ ಸೇರಿಕೊಂಡಿದೆ.

ಸ್ವಾತಂತ್ರ್ಯದ ಸಂದೇಶ

ಒಬ್ಬ ವರ್ತಕ ಒಂದು ಸುಂದರ ಪಕ್ಷಿಯನ್ನು ಬಹಳ ಮುದ್ದಿನಿಂದ ಪಂಜರದಲ್ಲಿ ಸಾಕಿದ್ದ. ಒಮ್ಮೆ ಆತ ಭಾರತಕ್ಕೆ ವ್ಯಾಪಾರದ ನಿಮಿತ್ತ ಹೋಗಬೇಕಾಯಿತು. ಆ ಪಕ್ಷಿಯನ್ನು ಆತ ಕಳೆದ ಸಾರಿ ಭಾರತಕ್ಕೆ ಹೋಗಿದ್ದಾಗ ಅಲ್ಲಿಂದ ತಂದಿದ್ದ. ಆದುದರಿಂದ ಈ ಸಾರಿ ಭಾರತಕ್ಕೆ ಹೋದಾಗ ಆ ಪಕ್ಷಿಗೆ ಅದರ ಊರಿನಿಂದ ಏನಾದರೂ ತರಬೇಕೆ ಎಂದು ಕೇಳಿದ. ಆ ಪಕ್ಷಿ ತನಗೆ ಸ್ವಾತಂತ್ರ್ಯ ತಂದುಕೊಡುವಂತೆ ಕೇಳಿತು. ಅದು ಮಾತ್ರ ಸಾಧ್ಯವಿಲ್ಲವೆಂದ ವರ್ತಕ. ಅದಕ್ಕೆ ಪಕ್ಷಿ ತಾನು ಹುಟ್ಟಿ ಬೆಳೆದ ಕಾಡಿನ ವಿವರ ತಿಳಿಸಿ ಅಲ್ಲಿನ ಪಕ್ಷಿಗಳಿಗೆ ತಾನು ಬಂಧಿಯಾಗಿರುವ ವಿಷಯ ತಿಳಿಸುವಂತೆ ಕೋರಿಕೊಂಡಿತು. ಇದೆಂತಹ ವಿಚಿತ್ರ ಬೇಡಿಕೆ ಎಂದುಕೊಂಡ ವರ್ತಕ ಆಯಿತೆಂದು ಒಪ್ಪಿಕೊಂಡ.

ಭಾರತಕ್ಕೆ ಬಂದು ತನ್ನ ವ್ಯಾಪಾರ ವಹಿವಾಟು ಮುಗಿಸಿ ಹಿಂದಿರುಗುವ ಸಮಯ ಬಂದಾಗ ಆ ಪಕ್ಷಿಯ ಬೇಡಿಕೆ ನೆನಪಾಗಿ ಅದು ತಿಳಿಸಿದ ಕಾಡಿಗೆ ಹೋದ. ಅಲ್ಲಿ, ಆ ಕಾಡಿಗೆ ಸೇರಿರುವ ಒಂದು ಪಕ್ಷಿ ತನ್ನ ಬಳಿ ಬಂಧಿಯಾಗಿರುವುದಾಗಿಯೂ, ಆ ವಿಷಯವನ್ನು ಅದರ ಕೋರಿಕೆಯಂತೆ ತಮಗೆ ತಿಳಿಸುತ್ತಿದ್ದೇನೆಂದೂ ಇತರ ಪಕ್ಷಿಗಳಿಗೆ ಕೇಳಿಸುವಂತೆ ಕೂಗಿ ಹೇಳಿದ. ಆ ಮಾತು ಕೇಳಿದ ತಕ್ಷಣ ಮರದ ಮೇಲಿದ್ದ ಒಂದು ಪಕ್ಷಿ ವಿಕಾರವಾಗಿ ಕೂಗಿ ಪಟಪಟನೆ ರೆಕ್ಕೆ ಬಡಿದು ಕೆಳಗೆ ಬಿದ್ದಿತು.

'ಅಯ್ಯೋ ಪಾಪ, ಆ ಪಕ್ಷಿಯ ಸಂಬಂಧಿ ಇರಬಹುದು ಇದು. ಅದು ಬಂಧಿಯಾಗಿರುವ ವಿಷಯ ತಿಳಿದು ದುಃಖ, ನೋವು ತಡೆಯಲಾರದೆ ಸತ್ತು ಹೋಗಿರಬಹುದು' ಎಂದುಕೊಂಡು ತನ್ನ ಊರಿಗೆ ಹಿಂದಿರುಗಿದ.

ಪಂಜರದಲ್ಲಿದ್ದ ಪಕ್ಷಿ ವರ್ತಕನನ್ನು ಕೇಳಿತು, 'ನಮ್ಮೂರಿನಿಂದ ಏನು ಸಮಾಚಾರ ತಂದಿದ್ದೀಯ?'

'ಏನು ಹೇಳಲಿ, ಹೇಗೆ ಹೇಳಲಿ? ಕೆಟ್ಟ ಸಮಾಚಾರವದು, ನೀನು ಬಂಧಿಯಾಗಿರುವ ವಿಷಯ ತಿಳಿದು ನಿಮ್ಮ ಸಂಬಂಧಿ ಪಕ್ಷಿಯೊಂದು ನನ್ನ ಕಾಲ ಬಳಿ ಬಿದ್ದು ಸತ್ತು ಹೋಯಿತು' ಎಂದ.

'ಅಯ್ಯೋ, ನನ್ನಿಂದಾಗಿ ಅದಕ್ಕೆ ಸಾವು ಬಂತೆ!' ಎಂದು ಚೀರಿದ ಪಂಜರದ ಪಕ್ಷಿ ಅಲ್ಲೇ ಕುಸಿದು ಕಣ್ಣು ಮುಚ್ಚಿತು.

'ಛೆ! ಎಂತಹ ಕೆಲಸವಾಯಿತು. ನನ್ನ ಮುದ್ದಿನ ಪಕ್ಷಿಯೂ ಸತ್ತು ಹೋಯಿತಲ್ಲ' ಎಂದು ದುಃಖದಿಂದ ವರ್ತಕ ಪಂಜರದ ಬಾಗಿಲು ತೆರೆದು ಮೃದುವಾಗಿ ಪಕ್ಷಿಯನ್ನು ತನ್ನ ಅಂಗೈಯಲ್ಲಿ ಇಟ್ಟುಕೊಂಡ. ಕೂಡಲೇ ರೆಕ್ಕೆ ಬಡಿದು ಮೇಲಕ್ಕೆ ಹಾರಿದ ಪಕ್ಷಿ, 'ನನಗೆ ಸ್ವಾತಂತ್ರ್ಯದ ಸಂದೇಶ ತಂದುಕೊಟ್ಟಿದ್ದಕ್ಕಾಗಿ ವಂದನೆಗಳು' ಎಂದು ಹೇಳಿ ಪುರ್ರನೆ ಸ್ವಚ್ಛಂದದ ಆಗಸಕ್ಕೆ ಹಾರಿ ಹೋಯಿತು.

ಬಾಗ್ದಾದಿಗೆ ಸಾವಿನ ದೂತ ಬಂದಾಗ

ಬಾಗ್ದಾದಿನ ಸೂಫಿ ಗುರುವಿನ ಶಿಷ್ಯನೊಬ್ಬ ಒಂದು ದಿನ ಉಪಾಹಾರಗೃಹದಲ್ಲಿ ಕೂತಿದ್ದಾಗ ಎರಡು ಆಕೃತಿಗಳು ತಮ್ಮಲ್ಲೇ ಮಾತಾಡಿಕೊಳ್ಳುತ್ತಿರುವುದು ಕೇಳಿಸಿತು. ಅವುಗಳ ಮಾತುಗಳಿಂದ ಆ ಆಕೃತಿಗಳಲ್ಲೊಂದು ಸಾವಿನ ದೂತನೆಂಬುದು ತಿಳಿಯಿತು. 'ಮುಂದಿನ ಮೂರು ವಾರಗಳಲ್ಲಿ ಈ ಊರಿನಿಂದ ಬಹಳಷ್ಟು ಜನರನ್ನು ಕರೆದೊಯ್ಯಬೇಕಿದೆ' ಎಂದ ಸಾವಿನ ದೂತ.

ಆ ಮಾತಿನಿಂದ ಹೆದರಿದ ಶಿಷ್ಯ, ಆ ಆಕೃತಿಗಳು ಹೊರಡುವವರೆಗೂ ಅವುಗಳ ಕಣ್ಣಿಗೆ ಬೀಳಬಾರದೆಂದು ಅಲ್ಲೇ ಅವಿತು ಕೂತ. ನಂತರ ಸ್ವಲ್ಪ ಬುದ್ಧಿ ಉಪಯೋಗಿಸಿ ಮೂರು ವಾರಗಳ ಕಾಲ ಬಾಗ್ದಾದ್ ಬಿಟ್ಟು ಹೋದರೆ ಸಾವಿನ ದೂತನ ಕಣ್ಣಿಗೆ ಬೀಳುವುದೇ ಇಲ್ಲ ಎಂದು ಯೋಚಿಸಿ ಕೂಡಲೆ ಅತ್ಯಂತ ವೇಗವಾಗಿ ಓಡುವ ಕುದುರೆಯೊಂದನ್ನು ಬಾಡಿಗೆಗೆ ಪಡೆದು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಸಮರಕಾಂಡ್‌ಗೆ ನಾಗಾಲೋಟದಿಂದ ಹೊರಟ.

ಇತ್ತ ಸಾವಿನದೂತ ಸೂಫಿ ಗುರುವನ್ನು ಭೇಟಿಯಾಗಿ ಲೋಕಾಭಿರಾಮವಾಗಿ ಮಾತನಾಡುತ್ತ ಕೊನೆಗೆ, 'ಎಲ್ಲಿ ನಿಮ್ಮ ಶಿಷ್ಯ ಕಾಣುತ್ತಿಲ್ಲವಲ್ಲ?' ಎಂದು ಕೇಳಿದ.

'ಇಲ್ಲೇ ಎಲ್ಲೋ ನಗರದಲ್ಲೇ ಪ್ರಾರ್ಥನೆ, ಧ್ಯಾನ ಮಾಡುತ್ತಾ ಇರಬಹುದು' ಎಂದರು ಗುರುಗಳು.

'ಹೌದೆ? ಆತ ನನ್ನ ಪಟ್ಟಿಯಲ್ಲಿದ್ದಾನೆ. ಅದರ ಪ್ರಕಾರ ನಾನು ಆತನನ್ನು ನಾಲ್ಕು ವಾರಗಳಲ್ಲಿ ಸಮರಕಾಂಡ್‌ನಿಂದ ಕೊಂಡೊಯ್ಯಬೇಕಾಗಿದೆ'' ಎಂದ ಸಾವಿನ ದೂತ.

ವ್ಯಾಕರಣ ತಜ್ಞ ಮತ್ತು ದರ್ವೇಶಿ

ಒಂದು ದಿನ ರಾತ್ರಿ ದರ್ವೇಶಿಯೊಬ್ಬ ಒಂದು ಹಾಳು ಬಾವಿಯ ಬಳಿ ಹಾದು ಹೋಗುತ್ತಿದ್ದಾಗ ಯಾರೋ ಬಾವಿಯಿಂದ ಕೂಗಿಕೊಳ್ಳುವುದು ಕೇಳಿಸಿತು. ಆತ ಬಾವಿಯಲ್ಲಿ ಬಗ್ಗಿ ನೋಡಿ, 'ಯಾರಿದ್ದೀರಿ ಬಾವಿಯಲ್ಲಿ?' ಎಂದು ಕರೆದ.

'ನಾನೊಬ್ಬ ವ್ಯಾಕರಣ ತಜ್ಞ. ಕತ್ತಲಲ್ಲಿ ಕಾಣದೆ ಬಾವಿಗೆ ಬಿದ್ದುಬಿಟ್ಟಿದ್ದೇನೆ. ದಯವಿಟ್ಟು ನನ್ನನ್ನು ಕಾಪಾಡಿ' ಎಂದು ಮೊರೆಯಿಟ್ಟ ಬಾವಿಯಲ್ಲಿದ್ದವ.

'ಹೆದರಿಕೊ ಬೇಡ. ಹಾಗೇ ಇರು. ಕೂಡಲೆ ಒಂದು ಏಣಿ ಮತ್ತು ಅಗ್ಗ ತರುತ್ತೇನೆ' ಎಂದ ದರ್ವೇಶಿ.

'ಒಂದು ನಿಮಿಷ ಗೆಳೆಯ. ನಿನ್ನ ಉಚ್ಚಾರ ಮತ್ತು ವ್ಯಾಕರಣ ಸರಿಯಿಲ್ಲ. ಅದನ್ನು ಸರಿಪಡಿಸಿಕೊ' ಎಂದ ಬಾವಿಯೊಳಗಿದ್ದ ವ್ಯಾಕರಣ ತಜ್ಞ. 'ಹೋ, ನಿನಗೆ ವ್ಯಾಕರಣ ಅಷ್ಟು ಮುಖ್ಯವೋ! ಹಾಗಾದರೆ ನಾನು ಉಚ್ಚಾರಣೆ ಮತ್ತು ವ್ಯಾಕರಣ ಕಲಿತು ಬರುವ ದಿನಗಳವರೆಗೂ ಅಲ್ಲೇ ಇರು' ಎಂದ ದರ್ವೇಶಿ ಅಲ್ಲಿಂದ ಹೊರಟು ಹೋದ.

✣ ಜೆ. ಬಾಲಕೃಷ್ಣ, ಸಹಾಯಕ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು - ೫೬೦ ೦೨೪.

ಚಂದ್ರಮೋಹನ್ ಅನುವಾದಿಸಿರುವ ಹತ್ತು ಕವಿತೆಗಳು

ಮಿಕ್ಲೋಸ್ ರದ್ನೋತಿ

(ಹಂಗೇರಿಯಾದ ಯಹೂದಿ ಕವಿ. ಏಳಕ್ಕೂ ಹೆಚ್ಚಿನ ಕಾವ್ಯ ಸಂಕಲನಗಳು ಹಂಗೇರಿಯನ್ ಭಾಷೆಯಲ್ಲಿ ಪ್ರಕಟವಾಗಿವೆ. ಆತನು ಬರೆದ ಕೊನೆಯ ಕೃತಿ ಕ್ಲಾಡಿಸ್ಕೈ ಅಪಾರವಾದ ಪ್ರಸಿದ್ಧಿಯನ್ನು ಕವಿಗೆ ತಂದುಕೊಟ್ಟಿತು. ಈ ಕೃತಿಯನ್ನು ಅವನು ತನ್ನ ಬದುಕಿನ ಅತ್ಯಂತ ದುರ್ಭರ ದಿನಗಳಲ್ಲಿ ಬರೆದಿದ್ದ.

ನಾಜಿಗಳಿಂದ ತೀವ್ರ ತೊಂದರೆ ಮತ್ತು ಹಿಂಸೆಗಳನ್ನು ಅನುಭವಿಸಿದವನು. ೧೯೪೧ ರಿಂದಾಚೆ, ದಾರುಣ ಪರಿಸ್ಥಿತಿಯಲ್ಲಿ ಅವರ ಲೇಬರ್ ಕ್ಯಾಂಪ್‌ಗಳಲ್ಲಿ ದುಡಿಯಬೇಕಾಯಿತು. ನಂತರದಲ್ಲಿ ಯುಗೋಸ್ಲೇವಿಯಾದ ಬೋರ್‌ನಲ್ಲಿನ ಮರಣ ಕೂಪ ಟರ್ಮಿನೇಷನ್ ಕ್ಯಾಂಪ್‌ಗೆ ಅವನನ್ನು ಸ್ಥಳಾಂತರಿಸಲಾಯಿತು. ೧೯೪೪ ರಲ್ಲಿ ಅಲ್ಲಿಯೇ ಅವನು ಕೊಲೆಯಾದ.

ಅವನ ಮರಣಾನಂತರ ೧೯೭೧ ರಲ್ಲಿ ಕ್ಲಾಡಿಸ್ಕೈ ಕೃತಿಯ ಇಂಗ್ಲೀಷ್ ಅನುವಾದ ಪ್ರಕಟಗೊಂಡು ಜಗತ್ತಿನ ಗಮನವನ್ನು ಸೆಳೆಯಿತು. ಬೇರುಗಳು ಕವಿತೆ ಈ ಸಂಕಲನದಿಂದ ಆಯ್ದದ್ದು)

೧. ಬೇರುಗಳು

ಮೇಲೆ ಮಂಜು ಬಿಳುಪಾಗಿ ತೂಗುವ ಸೇಬು
ಕೆಳಗೆ ಮಣ್ಣಲ್ಲಿ ನೀರುಂಡು
ಜೀವಸತ್ವ ಜಿನುಗಿಸುವ ಬೇರುಗಳು

ಬೇರುಗಳ ಬುಡದಲ್ಲಿ ಮನೆ ಮಾಡಿರುವ ಹುಳುಗಳು
ಕಾಲುಗಳನ್ನು ಕಚ್ಚಿ ಹಿಡಿದಿರುವ ಹುಳುಗಳು
ಇಡೀ ಜಗತ್ತೆ ಕೊಳೆತು ಹುಳು ಬಿದ್ದಂತಿದೆ.
ಅದೇನಿದ್ದರೂ, ಬೇರು ಬದುಕುತ್ತಿದೆ
ಹೊರಗಿನ ಜಗತ್ತಿನ ಸಲುವಾಗಿ ಅಲ್ಲ
ಮೇಲೆ, ಹಸಿರುಕ್ಕಿಸುವ ಕೊಂಬೆ ರೆಂಬೆಗಳಿಗಾಗಿ
ಹೂ-ಹಸಿರು ತುಂಬಿದ ರೆಂಬೆಗಳಿಗೆ ಊಡಿಸುತ್ತದೆ
ಇದು, ಹತ್ತಾರು ದಿಕ್ಕುಗಳ ಸವಿಯೆಲ್ಲವನು ಹೀರಿ
ಹಿತವಾಗಿ, ರುಚಿಯಾಗಿ, ತಾನು ಹೀರಿದ್ದೆಲ್ಲವನ್ನ
ಬೇರು, ಮೇಲಕ್ಕೆ ರವಾನಿಸುತ್ತದೆ.

ಸ್ವತಃ ನಾನು ಈಗೊಂದು ಬೇರು
ಕೊಳಕು ಹುಳುಗಳ ನಡುವೆ ಬದುಕಿದ್ದೇನೆ.
ಈ ಪದ್ಯವೂ ಕೂಡ ಅಲ್ಲೇ ಬರೆದದ್ದು.

ಒಂದೊಮ್ಮೆ ಹೂವಾಗಿದ್ದವನು ನಾನು
ಈಗ ಬೇರಾಗಿದ್ದೇನೆ
ಕಪ್ಪುಮಣ್ಣಿನ ಭಾರದಡಿಗೆ

ನನ್ನ ಜೀವದ ಮೇಲೆ
ಕಸಬುದಾರರ ಗಮನ ಬಿದ್ದಾಯಿತು.
ನನ್ನ ನೆತ್ತಿಯ ಮೇಲೆ
ಹರಿತ ಗರಗಸವಂತು
ತೂಗು ಬಿತ್ತು.

ತಹೀರ್ ಸೊಹ್ರಾಬ್

(ಅಜರ್‌ಬೈಜಾನಿನ ಕವಿ. ಸೋವಿಯತ್ ಒಕ್ಕೂಟದಲ್ಲಿದ್ದ ಅಜರ್‌ಬೈಜಾನಿನ ಅಸ್ತಾರ ನಗರದಲ್ಲಿ ೧೯೨೬ ರಲ್ಲಿ ಹುಟ್ಟಿದ. ಇರಾನಿನ ಗಡಿ ಪ್ರದೇಶದ ಬಾಕುವಿನಲ್ಲಿ ಇಪ್ಪತ್ತಕ್ಕೂ ಹೆಚ್ಚಿನ ವರ್ಷಗಳು ವಾಸವಾಗಿದ್ದ ಸೊಹ್ರಾಬ್ ಬಾಕು ವಿಶ್ವವಿದ್ಯಾನಿಲಯದ ಪದವಿ ಪಡೆದ ನಂತರ, ಮಾಸ್ಕೋ ನಗರದಲ್ಲಿನ ಗೋರ್ಕಿ ಲಿಟರರಿ ಇನ್‌ಸ್ಟಿಟ್ಯೂಟ್‌ನಲ್ಲಿ ಎರಡು ವರ್ಷಗಳ ಕಾಲ ಅಧ್ಯಯನ ಮಾಡಿದ್ದ. ತನ್ನ ಬಹುತೇಕ ರಚನೆಗಳಲ್ಲಿ ಸಮಾಜ ಮತ್ತು ಮನುಷ್ಯರ ಸಂಬಂಧಗಳನ್ನು ಕುರಿತು ಚರ್ಚಿಸುವ ಈ ಕವಿಯ ಕವನಗಳಲ್ಲಿ ದಕ್ಷಿಣದ ಅಜರ್‌ಬೈಜಾನಿಯನ್ ಬದುಕು ಮತ್ತು ಆಶಯಗಳು ಸೊಗಸಾಗಿ ವ್ಯಕ್ತವಾಗಿರುತ್ತವೆ. ಕವಿಯು ವಿಯತ್ನಾಂಗೆ ಭೇಟಿಕೊಟ್ಟ ಸಂದರ್ಭದಲ್ಲಿ ರಚಿತವಾದ ಕವನವೊಂದರ ಭಾವಾನುವಾದ ಇಲ್ಲಿದೆ)

೨. ಬೊಂಬೆ ಮತ್ತು ಮಗು

ಅಜೇಯರ ನಾಡಿನಲ್ಲಿ
ಕಪ್ಪು ಕಾಡಿನಂಚಿನಲ್ಲಿ
ತನ್ನ ಊರಿಂದ ದೂರ
ಬೊಂಬೆ ತಬ್ಬಿ ಹಿಡಿದ ಮಗುವು
ತಾನು ಸತ್ತು ಬಿದ್ದಿದೆ.

ಒಂದು ಕೋವಿ ಗುಂಡಿನಿಂದ
ಸಾವು ಕಂಡ ಮುಗ್ಧ ಮಗು

ಆದರದರ ಕೈಯ ಗೊಂಬೆ
ಎಲ್ಲ ಪೆಟ್ಟಿನಿಂದ ಪಾರು
ಅಪ್ಪಿ ಹಿಡಿದ ತೋಳುಗಳಲಿ
ಒಲುಮೆ ರಕ್ಷಣೆ.

ಮುದ್ದು ಮಗುವ ಜೀವ ತೆಗೆದ
ಶತ್ರುವೆಂದು ಮುಟ್ಟಲಾರ
ಬೊಂಬೆ ಮೈಯನು

ಸರಿದು ಹೋಗು ಅತ್ತ ಕಡೆಗೆ
ಹಾಳು ನಗರವೇ
ಕರುಣೆಯಿಂದ ನೋಡು ನೀನು ಮಾನವೀಯತೆ
ಮನುಕುಲವೇ ಅತ್ತು ಬಿಡು
ಮುಗ್ಧ ಮಗುವಿನೆದೆಯ ಒಳಗೆ
ಎಂಥ ಪಕ್ವತೆ !

ನಾಚಿಕೆ ಪಡು ನರ ಕುಲವೇ
ಬೆಳೆದುನಿಂತ ಪ್ರಾಯದವರ
ಹುಡುಗಾಟದ ಕ್ರೌರ್ಯಕೆ

ಮನುಕುಲವೇ ಅತ್ತುಬಿಡು
ಇಲ್ಲಿ ಸತ್ತ ಮಗುವಿಗೆ
ಸತ್ತು ಮಗುವಿನಪ್ಪುಗೆಯಲಿ
ಭದ್ರವಿರುವ ಬೊಂಬೆ ಮಾತ್ರ
ಮಗುವಿನೆದೆಯ ಮಾತೃತ್ವದ
ಚೆಲುವು ಸೂಸಿ ನಗುತಿದೆ.

ತೂರಿ ಬರುವ ಗುಂಡು-ಬಾಂಬು
ಉರಿದು ಮೊರೆವ ಬೆಂಕಿ ಚೆಂಡು
ಸತ್ತ ಮಗುವ ಕಂಡು ನಗುತ
ಸುಳ್ಳುಗಳನು ನಂಬಿಕೊಂಡು
ಸಾವಿಗಾಗಿ ಬರುವ ಜನರು
ಬೊಂಬೆ ಗಾಜು ಕಣ್ಣಿನೊಳಗೆ
ಬಿಂಬವಾಗಿ ಕೂಡಿಕೊಂಡು

ಮಗುವಿನೆದೆಯ ಮಾತೃತ್ವದ
ಚೆಲುವು ತೋರಲೆಂದೆ - ಹೀಗೆ
ಬೊಂಬೆ
ನಗುತಲಿರುವುದು.

ಅಲಿ ಕರೀಂ

(ಸೋವಿಯತ್ ಅಜರ್‌ಬೈಜಾನಿನ ಕವಿ ಮತ್ತು ಗದ್ಯ ಲೇಖಕ. ೧೯೩೧ ರಲ್ಲಿ ಹುಟ್ಟಿದ ಕರೀಂ ಮಾಸ್ಕೋದ ಗೋರ್ಕಿ ಇನ್‌ಸ್ಟಿಟ್ಯೂಟ್‌ನಲ್ಲಿ ಪದವಿ ವ್ಯಾಸಂಗ ಮಾಡಿದ. ಆಶಯ ಮತ್ತು ಆಕೃತಿಗಳೆರಡರಲ್ಲೂ ಆಧುನಿಕತೆಯನ್ನು ಮೈಗೂಡಿಸಿಕೊಂಡ ಅವನ ಕವಿತೆಗಳು ಅತ್ಯಂತ ಆಡಕವಾದ ಮಾತುಗಳಲ್ಲಿ ಮತ್ತು ಸರಳವಾದ ಶೈಲಿಯಲ್ಲಿ ಅಪಾರವಾದ ಅನುಭವ ಮತ್ತು ತಾತ್ವಿಕತೆಯನ್ನು ವ್ಯಕ್ತಪಡಿಸಲು ತವಕಿಸುತ್ತವೆ. ತನ್ನ ಸುತ್ತಲಿನ ಎಲ್ಲ ಆಗು ಹೋಗುಗಳಲ್ಲು ಅವರ ಹಿಂದಲ ತಾತ್ವಿಕ ಮೌಲ್ಯಗಳನ್ನರಸಲು ಕವಿ ಯತ್ನಿಸುತ್ತಾನೆ. ಅಲಿ ಕರೀಂ ಜಾನಪದ ಪರಂಪರೆಯ ಬಗೆಗೂ ಅಭ್ಯಸಿಸಿದ್ದಾನೆ. ವಿದ್ಯಾರ್ಥಿ ಜೀವನವನ್ನಾಧರಿಸಿದ 'ಹಂತಗಳು' ಎಂಬ ಕಾದಂಬರಿಯನ್ನು ರಚಿಸಿದ್ದಾನೆ. ಮತ್ತೊಬ್ಬ ರಷಿಯನ್ ಕವಿ ಅರ್ ಮಂಟೋವ್‌ನ ಜೀವನವನ್ನು ಕುರಿತಂತೆಯೂ ಕಾವ್ಯ ರಚನೆ ಮಾಡಿದ್ದಾನೆ.)

೩. ಕಲ್ಲು

ಅರೆಬೆತ್ತಲೆ ಅನಾಗರಿಕ
ಆದಿ ಮಾನವನೊಬ್ಬ
ಅವನೆಸೆದ ಕಲ್ಲು ಅದು
ಎದುರಾಳಿಯ ತಲೆಯೊಡೆದು
ರಕ್ತ ಚಿಮ್ಮಿಸಿತು
ಆದರೆ, ಅದಷ್ಟಕ್ಕೆ ಆ ಕಲ್ಲು
ಆಮೇಲೆ ನೆಲಕ್ಕೆ ಬೀಳಲಿಲ್ಲ
ಹಾರಿ ಹೋಯಿತು ಹಾಗೇ
ಕ್ಷಿತಿಜದಂಚನು ತಾಗಿ.
ಸುಮ್ಮನದು ಮಾಯವಾಯಿತು
ಎಂದು ತಿಳಿಯಬೇಡ
ಅದು ಬಾಣವಾಯಿತು ಮುಂದೆ
ಕತ್ತಿಯಾಯಿತು - ಕೋವಿಯಾಯಿತು
ಸಿಡಿಗುಂಡು - ಬಾಂಬು - ಗೋಲಿಯಾಯಿತು ನೋಡು
ಒಂದು ಭಾವದ ಹಾಗೆ - ಒಂದು ಚಿಂತೆಯ ಹಾಗೆ

ನಿಲ್ಲದೆಯೆ ಹಾರಿತ್ತು ಅದು, ಹಾಗೇನೆ,
ಮುಂದೆ ಆಗುವ ತನಕ - ಅಟಂಬಾಂಬು.

ದಿವರೇಖೆಯಳಿಸುತ್ತ
ಆಸೆಗಳ ಹೊಸಕುತ್ತ
ಕಡಲುಗಳ ತೀರ ಗಡಿಗಳನು ಮೀರಿ
ಕುದಿ ಉಕ್ಕಿಸುತ
ಅದು ಹಾರುತ್ತಲೇ ಇತ್ತು
ಅದೇ ಅದೇ ಕಲ್ಲು ಹಾರುತ್ತಲಿದೆ ಇಂದೂ-ಈಗಲೂ
ಹೇಗೆ ? ಎಲ್ಲಿ ? ಏನು ?
ನ್ಯೂಟ್ರಾನ್, ಎಲೆಕ್ಟ್ರಾನ್ ಇನ್ನೂ ಏನೆಲ್ಲ ಆಗಿ
ಉರಿಯಾಗಿ, ಧಗೆಯಾಗಿ, ವಿಷವಾಗಿ
ಸಾವಾಗಿ .....
ಇನ್ನೂ ಏನೆಲ್ಲವಾಗಿ.

ಓ ಗೆಳೆಯ-ಸಂಗಾತಿ
ಸತ್ಯಶೋಧನೆಯಲ್ಲಿ ನನ್ನ ಸಹಭಾಗಿ
ಬಂಧು-ಹೇಳು
ಹೇಳು ನೀನೀಗ
ತಡೆಯಲಾರೆಯ ನೀನು ?
ನಿಲ್ಲಿಸಲಾರೆವೆ ನಾವು ?
ಆ ಅದನು-ಅದು
ಅರೆಬೆತ್ತಲೆಯ ಅನಾಗರಿಕ
ಆದಿ ಮಾನವ - ಅವನು
ಅವನೆಸೆದ ಕಲ್ಲು ?

ರ್‍ಯಾಥಲ್ ಅರ್‌ಮತೋ

(ಆಫ್ರಿಕಾದ 'ಘಾನಾ'ದಲ್ಲಿ ಹುಟ್ಟಿದ ರ್‍ಯಾಥಲ್ ಅರ್‌ಮತೋ ವೃತ್ತಿಯಿಂದ ವೈದ್ಯ. ಪರಿಣಿತ ಮಾನವ ಶಾಸ್ತ್ರಜ್ಞನೂ ಹೌದು. ವಿದ್ಯಾಭ್ಯಾಸದ ನಂತರ ಐರ್ಲೆಂಡಿನಲ್ಲಿ ಹತ್ತು ವರ್ಷಗಳ ಕಾಲ ಕೆಲಸ ಮಾಡಿದ. ನಂತರದಲ್ಲಿ ಘಾನಾಕ್ಕೆ ಹಿಂತಿರುಗಿದ. ಅಲ್ಲಿನ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ಒಪ್ಪಿಕೊಳ್ಳಲಾಗದೆ ತಳಮಳಿಸಿದ. ಇತ್ತೀಚೆಗೆ ಜರ್ಮನಿ ದೇಶದಲ್ಲಿ ಘಟಿಸಿದ ಒಂದು ಆಕಸ್ಮಿಕದಲ್ಲಿ ಮೃತನಾದ.)

೪. ಹುಡುಗುತನದ ಕನಸುಗಳು

ಯೋಚಿಸಿದ್ದರು ಅವರು ಜೋರು ತರುಣರ ಹಾಗೆ
ಪ್ರೀತಿ ಪ್ರೇಮದ ಬಗ್ಗೆ, ಕೀರ್ತಿ-ವೈಭವದ ಬಗ್ಗೆ.
ಕಂಡುಕೊಂಡರು ಅವರು ಬಲ್ಲ ಮುದುಕರ ಹಾಗೆ
ಬಾಲಕಥನಗಳೆಲ್ಲ ಬತ್ತಿ ಬಾಡಿ ಹೋಗುವುದನ್ನ
ಆಸೆಪಟ್ಟರು ಅವರು ಪುಟ್ಟ ಮಕ್ಕಳ ಹಾಗೆ
ಬಾಳ ಸೊಗಸೆಲ್ಲವನು ಹೆಕ್ಕಿ, ಬಾಚುವುದಕ್ಕೆ

ಮತ್ತೀಗ -
ಜೋಲುಮುಖ, ಬಾಗಿರುವ ತಲೆ ಹೊತ್ತು
ನಡೆಯುತ್ತಾರವರು
ದಟ್ಟ ಮಳೆಯಲಿ ತೊಯ್ದು
ತೊಪ್ಪಡಿಯಾದವರ ಹಾಗೆ.

೫. ಒಂಟಿ ಜೀವಿ

ಭೆಟ್ಟಿಯಾದಳು ನನಗೆ
ನಿರ್ಜನ ರಸ್ತೆಯಲಿ
ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುತ್ತಿದ್ದ
ಒಬ್ಬ ಮುದುಕಿ

ಹಳ್ಳಿಗಾಡಿನ ರಸ್ತೆಯುದ್ದ ನಡೆಯುತ್ತ
ತನ್ನಷ್ಟಕ್ಕೆ ತಾನೆ ಮಾತಾಡುತಿದ್ದವಳು
ಮುದುಕಿ

ಮಗು ! ನಿನಗೆ ತಿಳಿಯುವುದಿಲ್ಲ.
ಜನ ತಮ್ಮಷ್ಟಕ್ಕೆ ತಾವೆ ಮಾತಾಡಿಕೊಳ್ಳುವುದು
ಏಕೆಂಬ ವಿಷಯ - ನಿನಗೆ ತಿಳಿಯುವುದಿಲ್ಲ

ದಾರಿ ಬಲು ದೂರವಿರುವಾಗ
ಮತ್ತೆ ಜೊತೆಗೊಬ್ಬರಾದರೂ ಸರಿಯೆ-ಇಲ್ಲದಾದಾಗ
ಒಬ್ಬ ತನ್ನೊಡನೆ ತಾನೇ ಮಾತಾಡತೊಡಗುತ್ತಾನೆ
ನೋವುಗಳ ಬಾಣಗಳು ಸುರಿವ ಬಿರುಮಳೆಯಂತೆ
ಎಡೆಬಿಡದೆ ಮೇಲೆರಗುವಾಗ

ಒಬ್ಬಂಟಿ ದಾರಿಗನು
ತನ್ನಷ್ಟಕ್ಕೆ ತಾನೇ ಮಾತಾಡತೊಡಗುತ್ತಾನೆ.

ಹಾಗೆಯೇ ಈ ಒಬ್ಬಂಟಿ ಮುದುಕಿ
ಕಣ್ಣ ನೀರನು ತಡೆದು, ದುಮ್ಮಾನ ಮರೆಯಲಿಕೆ
ನಿರ್ಜನ-ನೀರವದ, ಕಗ್ಗಾಡ ರಸ್ತೆಯಲಿ
ತನ್ನಷ್ಟಕ್ಕೆ ತಾನು ನಗುತ್ತ, ಸಮಾಧಾನಿಸಿಕೊಂಡು
ನಡೆಯುತ್ತಾಳೆ, ತನ್ನೊಳಗೆ ತಾನೆ ಮಾತಾಡುತ್ತ
ಇಲ್ಲಿ, ಈ ನಿರ್ಜನ-ನೀರವ ರಸ್ತೆಯಲ್ಲಿ

ತಾಯೇ ! ದುಃಖಿತಳು ನೀನು !
ನನ್ನ ಸ್ಥಿತಿಯೂ ಕೂಡ ನಿನ್ನ ಹಾಗೆ !

ಎಂ. ಎ. ನುಹುಮನ್

(ಶ್ರೀಲಂಕಾದ ಎಂ.ಎ. ನುಹುಮನ್ ಜಾಫ್ನಾ ವಿಶ್ವವಿದ್ಯಾಲಯದಲ್ಲಿ, ತಮಿಳು ಭಾಷೆ ಮತ್ತು ಭಾಷಾ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರು. ಜಾಫ್ನಾದಿಂದ ಪ್ರಕಟವಾಗುವ ತಮಿಳು ತ್ರೈಮಾಸಿಕ 'ಪೊಯೆಟ್' ಪತ್ರಿಕೆಯ ಸಂಪಾದಕರು. ಅವರ ಕೆಲವು ದೀರ್ಘಕವನಗಳು ಸಂಕಲನ ರೂಪದಲ್ಲಿ ಸಿಂಹಳೀ ಭಾಷೆಯ ಅನುವಾದದಲ್ಲೂ ಪ್ರಕಟವಾಗಿವೆ.)

೬. ಕೊಲೆ

ಕಳೆದ ರಾತ್ರಿ
ನನಗೊಂದು ಕನಸು
ಭಗವಾನ್ ಬುದ್ಧ ಕೊಲೆಯಾಗಿದ್ದ
ಕಾನೂನು ಪಾಲಕರು - ಪೊಲೀಸರು
ಹಾರಿಸಿದ ಗುಂಡಿನಿಂದ
ರಕ್ತದಲಿ ಅದ್ದಿ ಹೋಗಿದ್ದ
ಅವನ ದೇಹ ಬಿದ್ದಿತ್ತು
ಜಾಫ್ನಾದ ಲೈಬ್ರರಿಯ
ಮೆಟ್ಟಲಿನ ಮೇಲೆ

ಮುಚ್ಚು ಮರೆಯಲ್ಲಿ ಬಂದವರು
ಮಂತ್ರಿಮಹೋದಯರು

"ಅವನ ಹೆಸರು ನಮ್ಮ ಪಟ್ಟಿಯಲ್ಲಿದ್ದಿಲ್ಲ
ವೃಥಾ ಅವನ ಮೇಲೇಕೆ ಗುಂಡು ಹಾರಿಸಿ
ಕೊಂದಿರಿ?"
ಕೇಳಿದರು ಕೋಪದಲ್ಲಿ

'ಇಲ್ಲಾ ಸಾರ್....ಹಾಗಲ್ಲ
ಇದು ತಪ್ಪಾಗಿ ಆಗಿದ್ದಲ್ಲ
ಇವನನ್ನು ಮುಗಿಸದ ಹೊರತು,
ಒಂದು ನೊಣವನ್ನೂ ನಾವು
ನೋಯಿಸುವುದು ಸಾಧ್ಯವಿರಲಿಲ್ಲ
ಅದಕ್ಕೇ..... ಅದಕ್ಕೇನೇ ....'
ತೊದಲುತ್ತಿದ್ದರು ಪೊಲೀಸರು.
"ಆಯ್ತು....ಆಯ್ತು ಬಿಡಿ
ಹೆಣವನ್ನ ಎತ್ತಲಾದರು ತೆಗೆದು ಮುಚ್ಚಿ ಹಾಕಿ"
ಅಪ್ಪಣೆಯಿತ್ತು, ಮರೆಯಾಗಿ ಬಿಟ್ಟರು
ಮಂತ್ರಿ ಮಹೋದಯರು

ನಾಗರಿಕ ಉಡುಪಿನಲ್ಲಿದ್ದ ಕೆಲವರು
ಹೆಣವನ್ನ ಎಳೆದು ತಂದು
ಲೈಬ್ರರಿಯೊಳಗೆ
ಒಟ್ಟಿದರು ಪುಸ್ತಕಗಳನ್ನ

ತೊಂಬತ್ತು ಸಾವಿರಕ್ಕೂ ಹೆಚ್ಚು
ಅತ್ಯಮೂಲ್ಯ ಅಲಭ್ಯ ಗ್ರಂಥಗಳು
'ಶಿಕಲೋಕವಾದ ಸುತ್ತ' ದೊಂದಿಗೆ
ಚಿತೆಗೆ ಬೆಂಕಿ ಹಚ್ಚಿದರು.
ಹೀಗೆ ದಯಾಮಯನ ಅಸ್ಥಿ
ಸಮಸ್ತ ಅವಶೇಷವೂ ಸುಟ್ಟು
ಬೂದಿಯಾಗಿತ್ತು
'ಧಮ್ಮಪದ'ವೂ ಸೇರಿದಂತೆ

ಟಿಪ್ಪಣಿ : ಜನಾಂಗೀಯ ದ್ವೇಷ ಮತ್ತು ಹಿಂಸಾಚಾರದ ಘಟನೆಗಳಲ್ಲಿ ಜಾಫ್ನಾದ ಸಾರ್ವಜನಿಕ ಗ್ರಂಥಾಲಯ ಬೆಂಕಿಗೆ ಆಹುತಿಯಾಗಿತ್ತು.

ಫೈಜ್ ಅಹಮದ್ ಫೈಜ್

(ಪಾಕಿಸ್ತಾನೀ ಕವಿ ಫೈಜ್ ಅಹಮದ್ ಫೈಜ್ ೧೯೧೧ ರಲ್ಲಿ ಸಿಯಾಲ್‌ಕೋಟ್‌ನಲ್ಲಿ ಹುಟ್ಟಿದವರು. ಉಪಾಧ್ಯಾಯರಾಗಿ, ಸೇನೆಯಲ್ಲಿ ಅಧಿಕಾರಿಯಾಗಿ, ಪತ್ರಕರ್ತರಾಗಿ ಮತ್ತು ಸುದ್ದಿ ಪ್ರಸಾರಕರಾಗಿ ಅಪಾರವಾದ ಜೀವನಾನುಭವ ಪಡೆದವರು. ಬಹುಮುಖಿ ವ್ಯಕ್ತಿತ್ವದ ಫೈಜ್ ರಾಜಕಾರಣದಲ್ಲೂ ಪಾಲ್ಗೊಂಡವರು. ಅವರ ಕವಿತಾ ಸಂಕಲನಗಳಲ್ಲಿ ಮುಖ್ಯವಾದವು 'ಜಿಂದಾನ್ ನಾಮ' 'ಷಾಮ್ ಎ ಷಹರ್ ಎ ಯಾರಾನ್' 'ಮೇರೆ ದಿಲ್ ಮೇರೆ ಮುಸಾಫಿರ್' ಮತ್ತು 'ಸಾರೆ ಸುಖಾನ್ ಹಮಾರೆ' ಮುಂತಾದುವು. ಇವರ ಅನೇಕ ಕವಿತೆಗಳು ಇಂಗ್ಲೀಷಿಗೆ ಅನುವಾದಗೊಂಡು ಪ್ರಕಟವಾಗಿವೆ. ೧೯೬೨ ರಲ್ಲಿ ಇವರಿಗೆ ಲೆನಿನ್ ಶಾಂತಿಪ್ರಶಸ್ತಿ ಪಾರಿತೋಷಕ ನೀಡಲಾಯಿತು. ಸಮಕಾಲೀನ ಉರ್ದು ಕವಿಗಳಲ್ಲಿ ಅತ್ಯಂತ ಪ್ರಮುಖರು. ೧೯೮೪ ರಲ್ಲಿ ಫೈಜ್ ಕಾಲವಶರಾದರು)

೭. ನೀನು ಇಲ್ಲಿಂದ ನೋಡಿದರೆ ನಗರವನ್ನ

ನೀನು ಇಲ್ಲಿಂದ ನೋಡಿದರೆ ನಗರವನ್ನ
ಗಾಢ ವೃತ್ತಗಳಲ್ಲಿ ಅದು ಹಬ್ಬಿರುವಂತೆ ತೋರುತ್ತದೆ
ಪ್ರತಿಯೊಂದು ವೃತ್ತವನು ಸುತ್ತುವರಿಯುವ ಗೋಡೆ
ತದ್ರೂಪು ಸೆರೆ ಮನೆಯ ಹಾಗೆ
ಎಲ್ಲ ಬೀದಿಗಳಲ್ಲು ದಿಕ್ಕೇಡಿ ನಾಯಿಯ ದೌಡು ಬಂಧಿಗಳಿಗೆ
ಮೈಲಿಗಲ್ಲುಗಳಿಲ್ಲ, ಗಮ್ಯ ಗುರುತುಗಳಿಲ್ಲ.
ಇಲ್ಲವೇ ಇಲ್ಲ ಯಾವುದೇ ಹೊರದಾರಿ - ಕೊನೆಗೆ

ಜೋರು ನಡೆಯುವನೊಬ್ಬ ಯಾವನಾದರೂ ಕಂಡನಾದರೆ ಇಲ್ಲಿ
ಗದರಿಕೆಯ ದನಿಯೊಂದು ಅವನನ್ನು ಅಟಕಾಯಿಸಿಲ್ಲದಕೆ
ನೀನು ಆಶ್ಚರ್ಯ ಪಡಬೇಕು.
ಯಾವನಾದರೂ ಒಬ್ಬ ತನ್ನ ತೋಳುಗಳನ್ನೆತ್ತಿದರೆ ಇಲ್ಲಿ
ಕೋಳ ಸಂಕೋಲೆಗಳ ಕಿಣಿ ಕಿಣಿಯ ದನಿ
ಕೇಳುವುದಕ್ಕೆ ನಿನ್ನ ಕಿವಿ ಕಾತರಿಸಬೇಕು

ನೀನು ಇಲ್ಲಿಂದ ನೋಡಿದರೆ ನಗರವನ್ನ
ಯಾವೊಬ್ಬನಿಗು ಘನತೆ ಗೌರವಗಳಿದ್ದಂತೆ ತೋರುವುದಿಲ್ಲ
ಯಾವೊಬ್ಬನಿಗು ಬುದ್ಧಿ ಸ್ವಾಧೀನವಲ್ಲಿದ್ದಂತೆನಿಸುವುದಿಲ್ಲ

ಹುಟ್ಟು ಕೇಡಿಗರೆಂಬ ಹಣೆಪಟ್ಟಿಯಲ್ಲಿ ಹುಡುಗರು

ದಾಸ್ಯದಪರಾವತಾರದಲ್ಲಿ ಹುಡುಗಿಯರು
ಕಾಣುತ್ತಾರೆ

ದೂರ, ದೀಪದ ಕೆಳಗೆ ನೆರಳುಗಳಾಗಿ ನರ್ತಿಸುತ್ತಿರುವ
ಆ ಜನರ ಗುಂಪು
ಅದು, ಉನ್ಮತ್ತ ಆಮೋದಕರದೋ
ಅಥವ ಶೋಕ ತಪ್ತರದೋ
ಅದನ್ನ ಇಲ್ಲಿಂದ ನೋಡಿ ಹೇಳಲಾರೆ
ಮತ್ತೆ, ಅಲ್ಲಿ ಗೋಡೆಗಳ ಮೇಲೆ ಇಳಿಯುವ ಬಣ್ಣ
ಅದು ಗುಲಾಬಿಯದೋ ಅಥವ ನೆತ್ತರಿನದೋ
ಅದನ್ನಾದರೂ
ನೀನು ಇಲ್ಲಿಂದ ನೋಡಿ
ಸರಿಯಾಗಿ ಹೇಳಲಾರೆ

ಸಾಖಿ ಫಾರೂಖಿ

(ಪಾಕಿಸ್ತಾನಿ ಕವಿ ಸಾಖಿ ಫಾರೂಖಿಯ ನಿಜವಾದ ಹೆಸರು ಖಾಜಿ ಮುಹ್ಮದ್ ಶಮಶದ್ ನಬಿ ಫಾರೂಖಿ ೧೯೩೬ ರಲ್ಲಿ ಗೋರಖ್‌ಪುರದಲ್ಲಿ ಹುಟ್ಟಿದ ಫಾರೂಖಿ ಮುಂದೆ ಕರಾಚಿಯಿಂದ ಲಂಡನ್‌ಗೆ ವಲಸೆ ಹೋದರು. ಇವರ ಕವನ ಸಂಕಲನಗಳಲ್ಲಿ ಪ್ಯಾಸ್ ಕ ಸಹಾರ-ರಾಡಾರ್-ಜೆಹರಾನ್ ಕಿ ಪಾಟ್ಲಿ-ಬ್ಲಡ್ ಬ್ಯಾಂಕ್ ಮತ್ತು ಜಿಂದಾ ಪಾನಿ ಮುಖ್ಯವಾದವು. ಇವರ ಕವಿತೆಗಳು ಇಂಗ್ಲೀಷಿನಲ್ಲಿ ಎ ಲಿಸನಿಂಗ್ ಗೇಮ್ ಎಂಬ ಹೆಸರಿನಲ್ಲಿ ಪ್ರಕಟಗೊಂಡಿವೆ)

೮. ನಂಬಿಕೆಯಲ್ಲಿ

ಒಂದಾನೊಂದು ಹಳ್ಳಿ
ಅದರ ಶಾಲೆಯೊಳಗಡೆ ಇದ್ದವನು
ಒಬ್ಬ ಹುಡುಗ
ಒಂದು ದಿನ
ಹುಮೇದಿನಲ್ಲಿ ಹಾರಾಡುತ್ತಿದ್ದ ಚಿಟ್ಟೆಯೊಂದನ್ನ
ಅವನು ಹಿಡಿದುಕೊಂಡ
ತಪ್ಪಿಸಿಕೊಳ್ಳುವ ಯತ್ನದಲಿ
ಚಡಪಡಿಸಿತ್ತು ಚಿಟ್ಟೆ
ಆಗ ಅದರ ರೆಕ್ಕೆಗಳ ನೀಲ ವರ್ಣವೆಲ್ಲ
ಹಾರಿ ಹೋಯಿತು ಗಾಳಿಯಲ್ಲಿ

ಹುಡುಗ
ಚಿಟ್ಟೆಯನ್ನ ಟೇಬಲ್ಲಿನ ಮೇಲೆ
ಪೇಪರ್ ವೆಯ್ಟಿನ ಭಾರದಡಿ ಒತ್ತಿ ಇಟ್ಟ
ಕಡ್ಡಿ ಗೀರಿ, ಅದರ ಪಕ್ಕಗಳೆರಡಕ್ಕು
ಬೆಂಕಿ ಇಟ್ಟ.
ಹರಿತವಾದ ಚಾಕುವಿನಿಂದ, ಅದರ ಮುಂಡವನ್ನ
ಸಮನಾದ ಎರಡು ಹೋಳುಗಳಾಗಿ
ಕತ್ತರಿಸಿ ಇಟ್ಟ

ಈಗ, ಆ ಹುಡುಗನಿಲ್ಲ
ಹೊರಟು ಹೋಗಿದ್ದಾನೆ
ಆದರೆ ಕಳೆದ ಮೂವತ್ತು ವರ್ಷಗಳಿಂದ
ನನ್ನ ಬಳಿ ಉಳಿದು ಬಿಟ್ಟಿದೆ
ಅವನ ಹೊಲಸು ಚಾಕು
ಅದರ ಮೇಲಿನ ಕಂದು-ಹಳದಿಯ ಮಚ್ಚೆ
ಸದಾ ನನ್ನನ್ನು ಕಾಡುತ್ತಿದೆ
ನನ್ನ ನಾಲಗೆ ಮೇಲೆ, ಅದು
ಎಂಥದೋ ಒಂದು ಅಸಹ್ಯ
ಆಮ್ಲದ ರುಚಿಯನ್ನು ಉಳಿಸಿಬಿಟ್ಟಿದೆ

ಪಾರಾಗುವ ನಿರೀಕ್ಷೆಯಲ್ಲಿ
ನಾನು ಕಂಗಾಲಾಗಿ ಕಾತರಿಸುತ್ತೇನೆ
ನೆಮ್ಮದಿಯ ಒಂದು ನಿದ್ದೆಗಾಗಿ

ಬೋರಿಸ್ ಸ್ಲಟ್‌ಸ್ಕಿ

(೧೯೧೯ ರಲ್ಲಿ ಹುಟ್ಟಿದ ಬೋರಿಸ್ ಸ್ಲಟ್‌ಸ್ಕಿ ವೃತ್ತಿಯಿಂದ ನ್ಯಾಯವಾದಿ. ತನ್ನ ನಲವತ್ತರ ಹರೆಯದಲ್ಲಿ ಕಾವ್ಯ ರಚನೆಗೆ ತೊಡಗಿದ ಈ ಕವಿ, ೧೯೫೭ ರಲ್ಲಿ ತಮ್ಮ ಮೊದಲ ಕವನ ಸಂಕಲನವನ್ನು ಪ್ರಕಟಿಸಿದ ನಂತರ ಸೋವಿಯತ್ ರಶಿಯಾದ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹರಾದರು. ಇಂದು ಮತ್ತು ನಿನ್ನೆ, ನೆನಪುಗಳು-ಇವರ ಪ್ರಮುಖ ಕೃತಿಗಳು. ವಾಸ್ತವವನ್ನು ಸಿಂಗರಿಸಿ ಮೆರುಗಿತ್ತು ಮೆರೆಸುವ ರೂಢಿಯ ವಿರುದ್ಧ ಬಂಡೆದ್ದ ಸೋವಿಯತ್ ಲೇಖಕರುಗಳು, ಆರೋಗ್ಯಕರ ದೃಷ್ಟಿಕೋನವೊಂದನ್ನು ರೂಪಿಸಿಕೊಳ್ಳಲು ಹೆಣಗುತ್ತಿದ್ದ ಸಂದರ್ಭದಲ್ಲಿ ಕಾವ್ಯಕ್ಷೇತ್ರವನ್ನು ಪ್ರವೇಶಿಸಿದ ಈ ಕವಿಯ ಬಹಳಷ್ಟು ಕವಿತೆಗಳು ಯುದ್ಧ ಮತ್ತು ಅದಕ್ಕೆ ಸಂಬಂಧಿಸಿದ ನೆನಪುಗಳನ್ನು ಕುರಿತಂತೆ

ಇರುತ್ತವೆ. ಅನೇಕ ತರುಣ ಕವಿಗಳ ಮೇಲೆ ಗಾಢ ಪರಿಣಾಮ ಬೀರಿರುವ ಸ್ಲಟ್‌ಸ್ಕಿ ಜೆಕ್ ಸೆರ್ಬಿಯನ್ ಮತ್ತು ಪೋಲಿಷ್ ಕವಿಗಳನ್ನು ರಶಿಯನ್ ಭಾಷೆಗೆ ಅನುವಾದಿಸಿದ್ದಾರೆ)

೬. ಸಾಗರದಲ್ಲಿ ಕುದುರೆಗಳು

ಕುದುರೆಗಳು ಈಜ ಬಲ್ಲುವು ಕೂಡ,
ಆದರೆ ಸಾಗಲಾರವು ಬಹಳ ದೂರ
ಇದು ಎಲ್ಲರಿಗೂ ಗೊತ್ತಿರುವ ಸತ್ಯ
ಆದರಿಲ್ಲಿದೆ ಒಂದು ಬೇರೆಯದೇ ಕಥೆ

ಆಗಷ್ಟೇ ಯುದ್ಧ ಮುಗಿದಿತ್ತು. ಈಗ ಶಾಂತಿಯ ಕಾಲ
ಅಲ್ಲೊಂದು ದೊಡ್ಡ ಹಡಗು, ಹೆಸರು ಗ್ಲೋರಿಯಾ
ಅದೊಂದು ಫೆಬ್ರವರಿಯ ದಿನದಲ್ಲಿ, ಹೊರಟಿತ್ತು ಇದು
ಕಡಲ ದಾರಿಯ ಸೀಳಿ, ತನ್ನ ರೇವಿನ ಕಡೆಗೆ

ಉಕ್ಕಿ ಮೊರೆಯುವ ಅಲೆಗಳ ಮೇಲೆ, ಕುಣಿದು ಸಾಗಿದ ನೌಕೆ
ಅದರ ಒಡಲಿನ ಒಳಗೆ ಒಂದು ಸಾವಿರ ಕುದುರೆ
ಅವಶ್ಯವಿದ್ದಲ್ಲಿ, ನಾಗಾಲೋಟದಲ್ಲಿ ಕುಪ್ಪಳಿಸಿ
ದೌಡಾಯಿಸಬಲ್ಲ ನಾಲ್ಕು ಸಾವಿರ ಕಾಲು

ಆದರಯ್ಯೋ ಈಗ ಈ ಹಡಗು
ಸೇರಲಾರದು ತೀರ
ಕಡಲಿನಡಿಯಲ್ಲಿ ಹುದುಗಿಸಿದ ಸ್ಫೋಟಕದ
ಮೇಲೆ ಅಕಸ್ಮಾತ್ ತಾಗಿದ ಹಡಗು
ಆ ಸ್ಫೋಟದಲ್ಲಿ ಒಡೆದು ಹಾಳಾಯಿತು
ಮುರಿದ ನೌಕೆಯು ಈಗ ಮುಳುಗತೊಡಗಿತು
ಅಲ್ಲೇ ಅಪಾರ ಸಾಗರದ ಆಳದಲ್ಲಿ
ಇದ್ದ 'ಜೀವನಾವೆ'ಗಳಂತೂ ಕೆಲವೇ ಕೆಲವು
ನಾವಿಕರ ಸಾಗಣೆಗೆ ಸಾಕಾದವು
ಪಾಪ ಕುದುರೆಗಳ ಪಾಡು
ಇಷ್ಟವಾಗಲಿ ಬಿಡಲಿ, ಅವು ಈಗ ಈಜಬೇಕು
ಈಜಿ ಸಾಗುತ್ತಿದ್ದವು 'ಜೀವನಾವೆ'ಗಳ ಹಿಂದೆ
ಅವು, ಸಾಕಷ್ಟು ದೂರ
'ಜೀವನಾವೆ' ಗಳ ಹಿಂದೆ ಕುದುರೆಗಳು

ಕಂದು ಕೆಂಬಣ್ಣದಲಿ ಮಿರುಗುತ್ತಿದ್ದವು
ವಿಸ್ತಾರ ವಾರಿಧಿಯ ನಡುವೆ
ಒಂದು ದ್ವೀಪದಂತೆ

ಕಡಲಿನಪಾರ ವಿಸ್ತಾರವನು
ಕನಸಲ್ಲು ಸಹ ತಿಳಿಯದ ಕುದುರೆಗಳು
ಕಿರುತೊರೆಯೆಂದೆ ತಿಳಿದು
ಈಜಿದುವು-ನಿರುಮ್ಮಳವಾಗಿ
ಒಂದಿಷ್ಟು ಸಮಯ

ಕೊನೆ ಇರದ ಕೊರೆವ ರಾತ್ರಿಯ ಹಾಗೆ
ಪ್ರತಿ ಕ್ಷಣಕು ಹಿಗ್ಗಿತ್ತು ಸಾಗರದ ಅಪಾರ ದೂರ
ಕಾತರದ ಕಣ್ಣುಗಳು, ಭಯಗೊಂಡು ಹುಡುಕಿದವು
ದಿಟ್ಟಿಗೆಟುಕದ ನೀರಾಚೆಗಿನ ಯಾವುದೇ ತೀರ

ಕಡಲಿನಬ್ಬರಬಿದಿರು ಸೋತು, ಶಕ್ತಿಗುಂದಿದ ಕುದುರೆಗಳು
ದಿಗಿಲಿಂದ ದಿಕ್ಕೆಟ್ಟು, ಬೆದರಿ ಹೌಹಾರಿದವು
ಯಾವುದೇ ದಾರಿ ಇಲ್ಲ

ಕೊನೆಗೆ ಜಲಸಮಾಧಿಗೆ ಇಳಿದ ಬಡಪಾಯಿ ಕುದುರೆಗಳು
ಕೀರಿದವು, ಕಿಳಿರಿದವು ಚಡಪಡಿಸಿ ಏರಿದವು
ಚೂರು ಉಸಿರಿಗಾಗಿ

ಎಷ್ಟೆಲ್ಲ ಘಟನೆಗಳು ಬಲು ಬೇಗ ಮರೆಯುವೆನು
ಆದರೇಕೋ ಏನೋ, ಆ ನತದೃಷ್ಟ ಕುದುರೆಗಳ
ಸಾವಿನ ನೆನಪು
ನನ್ನದೆಯೊಳಗೆಂದಿಗೂ ಮಾಸದ
ನೆನಪು ನೋವು

ನಜೀಂ ಹಿಕ್ಮತ್

(ಟರ್ಕಿಯ ಕವಿ. ೧೬ನೇ ವಯಸ್ಸಿನಲ್ಲಿಯೇ (೧೯೧೮) ಕವನಗಳನ್ನು ಪ್ರಕಟಿಸಿದ್ದಾನೆ. ಕಮ್ಯುನಿಸ್ಟ್ ಪ್ರಭಾವದಿಂದಾಗಿ ೧೯೨೧ ರಲ್ಲಿ ಮಾಸ್ಕೋಗೆ ಭೇಟಿ ಕೊಟ್ಟು ಟರ್ಕಿಯ ಲಷ್ಕರಿ ವ್ಯವಸ್ಥೆಯ ದೃಷ್ಟಿಯಲ್ಲಿ ಅಪರಾಧಿ ಎನಿಸಿಕೊಂಡವನು. ೧೯೨೮ ರಿಂದ ಇಪ್ಪತ್ತೂಮ್ರು ವರ್ಷಗಳಷ್ಟು ಸುದೀರ್ಘ ಕಾಲ ಟರ್ಕಿಯ ಕತ್ತಲೆಯ ಕಾರಾಗೃಹದಲ್ಲಿ ಜೀವ ಸವೆಸಿದವನು. ತನ್ನ ದಿಟ್ಟವಾದ ವ್ಯಕ್ತಿತ್ವ ಮತ್ತು ಕಾವ್ಯ ರಚನೆಯಿಂದ ಜಗತ್ತಿನ ಗಮನ ಸೆಳೆದವನು. ಅಂತರ್‌ರಾಷ್ಟ್ರೀಯ ಶಾಂತಿ

ಪ್ರಶಸ್ತಿಗೆ ಪಾತ್ರನಾದ ಮೇಲೆ ಜಗತ್ತಿನ ಒತ್ತಾಯಕ್ಕೆ ಮಣಿದು ೧೯೫೦ ರಲ್ಲಿ ನಜೀಂ ಹಿಕ್ಮತ್‌ನನ್ನು ಟರ್ಕಿ ಸರ್ಕಾರ ಸೆರೆಮನೆಯಿಂದ ವಿಮೋಚನೆಗೊಳಿಸಿತಾದರೂ ಹೃದ್ರೋಗ ಪೀಡಿತನಾದ್ದರಿಂದ ೧೯೬೩ ರಲ್ಲಿ ನಿಧನವಾದನು)

೧೦. ನಾನು ಸೆರೆಯಾದಾಗಿನಿಂದ

ನಾನು ಸೆರೆಯಾದಾಗಿನಿಂದ
ಭೂಮಿ ಸುತ್ತಿದೆ ಸೂರ್ಯನ ಸುತ್ತ
ಹತ್ತು ಬಾರಿ
ಕೇಳಿದರೆ ನೀನು ಭೂಮಿಯನ್ನ
ಅದಕ್ಕೆ 'ಹೇಳುವಂಥದ್ದೇನಿಲ್ಲ
ಒಂದು ಕ್ಷುದ್ರ ಕಾಲಮಾನ
ಕೇವಲ ಮಾಮೂಲಿ ಅಷ್ಟೆ'
ನನಗೆ 'ನನ್ನ ಇಡೀ ಬದುಕಿನ
ಅತ್ಯಮೂಲ್ಯ ಹತ್ತುವರ್ಷ'

ನಾನು ಸೆರೆಮನೆಗೆ ಬಂದಾಗ
ನನ್ನ ಬಳಿ ಒಂದು ಪೆನ್ಸಿಲ್ ಇತ್ತು
ಬರೆಯುತ್ತ - ಒಂದೇ ವಾರದಲ್ಲಿ
ಅದನ್ನ ನಾನು ಪೂರಯಿಸಿಬಿಟ್ಟೆ
ಪೆನ್ಸಿಲನ್ನು ಕೇಳಿದರೆ
ಅದಕ್ಕೆ ಅದರದು
'ಒಂದಿಡೀ ಬದುಕು'
ನನಗೆ: 'ಅದರಲ್ಲೇನು!
ಕೇವಲ ಒಂದೆರಡು ವಾರ'

ನಾನು ಸೆರೆಯಾದಾಗಿನಿಂದ
ನರಹತ್ಯೆ ಆರೋಪಿ ಉಸ್ಮಾನ್
ಒಂದೆರಡು ದಿನ ಹೊರಗಿದ್ದು
ಮತ್ತೆ ಹಿಂದಿರುಗಿದ್ದ ಸೆರೆಯಾಗಿ
ಕಳ್ಳ ಸಾಗಣೆಗಾಗಿ
ಈಗ ಆರು ತಿಂಗಳ ಸಜೆ ಮುಗಿಸಿ
ಬಿಡುಗಡೆಯಾದ
ನಿನ್ನೆಯಷ್ಟೆ ಅವನ ಪತ್ರ ತಲುಪಿದೆ
'ಬರುವ ವಸಂತಕ್ಕೆ ಅವನು ಅಪ್ಪನಾಗುತ್ತಾನೆ'

ದೂರದ ನನ್ನ ಊರಿನಲ್ಲಿ
ನಾನು ಸೆರೆಯಾದಾಗಿನಿಂದೀಚೆ
ಹೊಸ ರಸ್ತೆಗಳು-ಚೌಕಗಳು ಆಗಿವೆ
ನನ್ನ ಮನೆಯವರೀಗ
ನಾನೆಂದು ಕಂಡಿರದ, ಯಾವುದೋ
ಬೀದಿಯೊಂದರ ಮನೆಯಲ್ಲಿ
ಇದ್ದಾರೆ
ನಾನು ಸೆರೆಯಾದ ವರ್ಷ
ಹತ್ತಿ ಬಿಳುಪಿನ ಬಣ್ಣ ಬ್ರೆಡ್ಡಿಗಿತ್ತು
ಆಮೇಲೆ ಪಡಿತರದ ಕ್ರಮ
ಜಾರಿಗೆ ಬಂತು
ಇಲ್ಲಿ ಜೈಲಿನಲ್ಲಿ ಹೊಡೆದಾಟವಾಗಿತ್ತು
ಒಂದು ಹಿಡಿಯಷ್ಟು ಕಪ್ಪು ರೊಟ್ಟಿಗಾಗಿ

ಈಗ ಮತ್ತೆ ನೀನು
ಮುಕ್ತ ಮಾರಾಟದಲ್ಲಿ ಅದನ್ನು ಕೊಳ್ಳಬಹುದು
ಆದರದು ರುಚಿಯಿರದ
ಬರಿಯ ಕಪ್ಪು ಬ್ರೆಡ್ಡು

ನಾನು ಸೆರೆಯಾದ ವರ್ಷ
ಆಗಷ್ಟೆ ಶುರುವಾಯ್ತು ಎರಡನೆಯ
ವಿಶ್ವ ಯುದ್ಧ
ಆಗಿನ್ನೂ
ಡಬ್ಲಿನಿನ ಚಿತಾಗ್ನಿ ಕುಂಡಗಳು
ಹೊತ್ತಿ ಉರಿದಿರಲಿಲ್ಲ
ಹಿರೋಷಿಮಾದ ಮೇಲೆ
ಅಣುಬಾಂಬುಗಳ ಮಳೆ
ಸುರಿದಿರಲಿಲ್ಲ

ನಂತರದಲ್ಲೀಗ
ಕತ್ತು ಮುರಿದೆಸೆದ ಕೂಸಿನೆಳೆರಕ್ತದ ಹಾಗೆ
ಹರಿದು ಹೋಗಿದೆ ಕಾಲ
ಅಧಿಕೃತವಾಗಿ ಆದರ ಅಧ್ಯಾಯ ಮುಗಿದಿದೆ
ಈಗ ಅಮೆರಿಕೆಯ ಡಾಲರುಗಳು
ಮತ್ತೆ ಮಾತಾಡುತ್ತಿವೆ ಮೂರನೆಯದರ ಬಗ್ಗೆ

ನಾನು ಸೆರೆಯಾದಾಗಿಂದ
ಹೆಚ್ಚು ಹೊಳಪೇನಾಗಿಲ್ಲ
ಹಗಲುಗಳು-ಹೊರಗೆ
ಮತ್ತೆ ಕತ್ತಲಿನಂಚುಗಳಿಂದ
ಚಾಚಿದ್ದಾರವರು
ತಮ್ಮ ರೂಕ್ಷ ಹಸ್ತಗಳನ್ನ
ಒತ್ತಿ ನಿಂತಿದ್ದಾರೆ ಅಡ್ಡ ರಸ್ತೆಗಳ ಮೇಲೆ

ನಾನು ಸೆರೆಯಾದಾಗಿಂದ
ಭೂಮಿ ಸುತ್ತಿದೆ ಸೂರ್ಯನ ಸುತ್ತ
ಹತ್ತು ಬಾರಿ
ಮತ್ತದೇ ಹೇಳಬೇಕಿದೆ ನಾನು
ಸೆರೆಯೊಳಗೆ-ನನ್ನ
ಅದೇ ಹತ್ತು ವರ್ಷ

ನಾನು ಬರೆದದ್ದೆಲ್ಲ ಅವರಿಗಾಗಿ
ಮಣ್ಣೊಳಗಿನ ಇರುವೆಗಳ ಹಾಗೆ
ಸಾಗರದಲ್ಲಿನ ಮೀನುಗಳ ಹಾಗೆ
ಆಗಸದಲ್ಲಿನ ಹಕ್ಕಿಗಳ ಹಾಗೆ
ಯಾರು ಅಗಣಿತರೋ
ಅವರಿಗಾಗಿ

ಹೇಡಿಗಳು - ಧೀರರು-ಮುಗ್ಧರು-ಜಾಣರಾಗಿ
ಮಕ್ಕಳ ಹಾಗೆ
ಕಟ್ಟುವ-ಕೆಡಹುವ
ಅವರಿಗಾಗಿ
ಅವರ ಸಾಹಸವಷ್ಟೆ ನಮ್ಮ ಹಾಡು
ನನ್ನ ಹತ್ತು ವರ್ಷದ ಸೆರೆವಾಸ
ಬರಿ ಪೊಳ್ಳು ಮಾತು

✤ ಪ್ರೊ॥ ಎನ್. ಬಿ. ಚಂದ್ರಮೋಹನ್, ಕನ್ನಡ ವಿಭಾಗ,
ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕೆ. ಆರ್. ಪುರಂ, ಬೆಂಗಳೂರು.

ಭವಿಷ್ಯದ ಅಧಃಪಾತಾಳದತ್ತ...

- ನೋಮ್ ಚಾಮ್‌ಸ್ಕಿ

ಸಂಗ್ರಹಾನುವಾದ : ಆರ್. ವಿಜಯರಾಘವನ್

ಪ್ರಜಾಪ್ರಭುತ್ವಕ್ಕೆ ಸಂಬಂಧಪಟ್ಟ ವಿಚಾರಗಳು, ಮಾನವ ಹಕ್ಕುಗಳು, ಸಾಮಾಜಿಕ-ಆರ್ಥಿಕ ಬೆಳವಣಿಗೆ, ವಿಶ್ವದ ವ್ಯವಹಾರಗಳಲ್ಲಿ ಬಲ ಪ್ರಯೋಗದ ಪರಿಣಾಮ ಇವೇ ಮುಂತಾದ ಸಾಮಾನ್ಯವೆನಿಸುವ ಸಂಗತಿಗಳು ಹೇಗೆ ಮನುಕುಲದ ಭವಿತವ್ಯಕ್ಕೆ ಅಹಿತಕರವೂ, ಕರಾಳವೂ, ಅನಿಷ್ಟಕಾರಕವೂ ಆಗಿ ಪರಿಣಮಿಸಬಲ್ಲವು ಎಂಬುದರ ಬಗ್ಗೆ ಮಾತಾಡಬೇಕು ಎಂದು ನಾನು ಉದ್ದೇಶಿಸಿದ್ದೆ. ಇಲ್ಲಿ ಹುಟ್ಟಿಕೊಳ್ಳುವ ಸಮಸ್ಯೆಗಳು ತುಂಬ ನಿರ್ದಿಷ್ಟವಾಗಿ ಹೇಳಬೇಕೆಂದರೆ ಕಠೋರವಾದವು. ಏಕೆಂದರೆ ಇಲ್ಲಿ ಅನುಸರಿಸಲಾಗುತ್ತಿರುವ ನೀತಿಯು ಪ್ರಸ್ತುತ ಅಸ್ತಿತ್ವದಲ್ಲಿರುವ ಸಮಾಜೋ-ಆರ್ಥಿಕ ಮತ್ತು ಪೂರ್ವನಿಶ್ಚಿತ ಸಿದ್ಧಾಂತದ ಸಂಸ್ಥೆಗಳು ಮೈಗೂಡಿಸಿಕೊಂಡಿರುವ ತಾತ್ವಿಕತೆಯನ್ನು ಬೆನ್ನಿಗಿರಿಸಿಕೊಂಡಿದೆ. ಆದರೂ ಸಹ, ಮೇಲೆ ಪ್ರಸ್ತಾಪಿಸಿದ ಸಂಗತಿಗಳ ಬಗ್ಗೆ ಮೊದಲು ನಾನು ಉದ್ದೇಶಿಸಿದ್ದಷ್ಟು ದೀರ್ಘವಾಗಿ ಅಲ್ಲದಿದ್ದರೂ ಸಂಕ್ಷೇಪವಾಗಿಯಾದರೂ ಮಾತಾಡುತ್ತೇನೆ. ಇದಕ್ಕಿರುವ ಕಾರಣಗಳೇನು ಎಂಬುದು ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ಗೊತ್ತಿದೆ. ಆ ವಿಚಾರಗಳೆಲ್ಲ ನಿಜಕ್ಕೂ ತುಂಬ ಮುಖ್ಯವಾದವು. ಆದರೆ ಸೆಪ್ಟಂಬರ್ ೧೧ ರ ನಂತರ ಅವುಗಳ ಸ್ಥಾನವನ್ನು ಮತ್ತೊಂದು ಆತಂಕವು ಆಕ್ರಮಿಸಿ ಕೂತುಬಿಟ್ಟಿದೆ: ಅದೇ ಜಾಗತಿಕ ಭಯೋತ್ಪಾದನೆ! ಅದು ನಮ್ಮನ್ನು (ನಾನು ಈ ಲೇಖನಕ್ಕೆ ಶಿರೋನಾಮೆಯಾಗಿ ಬಳಸಿರುವ ನ್ಯೂಯಾರ್ಕ್ ಟೈಂಸ್ ನ ಸುದ್ದಿ ಶೀರ್ಷಿಕೆ Peer in to the abyss of the future ಹೇಳುವಂತೆ) ಭವಿಷ್ಯದ ಅಧೋಲೋಕದೊಳಕ್ಕೆ ನಿಟ್ಟಿಸುವಂತೆ ಮಾಡಿದೆ.

ನೋಮ್ ಚಾಮ್‌ಸ್ಕಿ - ವ್ಯಕ್ತಿ, ವಿಚಾರ ಕುರಿತು...

ಚಾಮ್‌ಸ್ಕಿ ಅಮೇರಿಕಾದಲ್ಲಿ ವಾಸಿಸುತ್ತಿರುವ ವಿಶ್ವದ ಅತ್ಯಂತ ಮಹತ್ವದ ಸಾರ್ವಜನಿಕ ವ್ಯಕ್ತಿ. ಕ್ಲಾಸಿಕಲ್ ಮಾದರಿಯ ಅದ್ವಿತೀಯ ಚಿಂತಕ. ಎರಡು ಮೂರು ದಶಕಗಳ ಹಿಂದಿನ ಚಿಂತಕರಿಗೂ ಈಗಿನ ಚಿಂತಕರಿಗೂ ನಡುವೆ ಎಂಥ ವ್ಯತ್ಯಾಸವಿದೆ ಎಂಬುದನ್ನು ಗಮನಿಸಿದರೆ ಚಾಮ್‌ಸ್ಕಿಯಂಥವರನ್ನು ವಿವರಿಸಲು ಈ ಕ್ಲಾಸಿಕಲ್ ಎಂಬ ಪರಿಭಾಷೆಯು ಎಷ್ಟು ಅಗತ್ಯ ಎಂದು ಅರಿವಾಗುತ್ತದೆ. ಅವರು ಮತ್ತಷ್ಟು ಭಿನ್ನರಾಗುವುದು ಇವತ್ತಿನ ಬುದ್ಧಿವಂತರ ಹಾಗೆ ಅಧಿಕಾರದ ಗುಲಾಮರಂತೆ ನಡೆದುಕೊಳ್ಳದೆ ಅಧಿಕಾರದ ಸ್ವತಂತ್ರ ವಿಮರ್ಶಕರಾಗಿರುವುದರಲ್ಲಿ. ಭಾಷಾ ವಿಜ್ಞಾನ ಕ್ಷೇತ್ರಕ್ಕೆ ತಾವು ನೀಡಿದ ಅಮೂಲ್ಯ ಕೊಡುಗೆಯಿಂದಾಗಿ ಚಾಮ್‌ಸ್ಕಿ ಸಾಂಸ್ಕೃತಿಕ ವಿಶ್ವದಲ್ಲಿ ತಮಗೊಂದು ವಿಶಿಷ್ಟ ಸ್ಥಾನ ನಿರ್ಮಿಸಿಕೊಂಡಿದ್ದಾರೆ. ಚಾಮ್‌ಸ್ಕಿಯವರ ರಾಜಕೀಯ ವಿಚಾರಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಉಳ್ಳವರು ಕೂಡಾ ಅವರ ಕರ್ತೃತ್ವ ಶಕ್ತಿ, ವಿಚಾರ ಶಕ್ತಿಗಳ ಬಗ್ಗೆ ಯಾವ ಸಂಶಯವನ್ನೂ ಇರಿಸಿಕೊಳ್ಳಲು

ಆ ಕೃತ್ಯ ಉಂಟುಮಾಡಿದ ಆತಂಕ ನಿಜವಾಗಲೂ ತೀವ್ರತರವಾದದ್ದು. ಯುದ್ಧ ಭೂಮಿಯ ಆಚೆ ಪಟ್ಟನೆ ಸಂಭವಿಸಿದ್ದಿರಬಹುದಾದ ಮಾನವ ಜೀವದ ಸಾವು ನೋವುಗಳಲ್ಲಿ ಇದೇ ಅತ್ಯಂತ ಭೀಕರವಾದದ್ದು ಹಾಗೂ ವಿನಾಶಕಾರಿಯಾದದ್ದು. ಥಟ್ಟನೆ ಎಂಬ ಪ್ರಯೋಗವನ್ನು ಗಮನಿಸದೆ ಇರಲಾಗದು. ಹಿಂಸೆಯ ಪರಿಣಾಮದಲ್ಲಿ ಈ ಪಾತಕ ಕೃತ್ಯ ಯುದ್ಧದ ವ್ಯಾಖ್ಯಾನಕ್ಕೆ ಹತ್ತಿರ ಹತ್ತಿರ ನಿಲ್ಲುವುದಾಗಿದೆ. ಇಲ್ಲಿ ಸಾವು ನೋವುಗಳು ಇನ್ನೂ ದುಪ್ಪಟ್ಟಾಗಲಿದ್ದವು. (ಕಾಲ ಜನರನ್ನು ಕಾಪಾಡಿತು).

ಇನ್ನೊಂದು ಕಡೆಯ ಸಾವು ನೋವುಗಳನ್ನು ಗಮನಿಸಿ. ಬಾಂಬ್ ದಾಳಿಗೆ ಹೆದರಿ ಕಂಗಾಲಾಗಿ ದಿಕ್ಕುಗೆಟ್ಟು ಓಡುತ್ತಿರುವ ಲಕ್ಷಾಂತರ ಮಂದಿ ದುರ್ದೈವಿ ಅಫ್ಘನ್ನರು. ಬಾಂಬ್ ದಾಳಿ ಶುರುವಾದ ಕೂಡಲೇ ಅವರಿಗೆ ಆಹಾರ ಸರಬರಾಜು ನಿಲ್ಲಿಸಲಾಗಿದೆ. ಇನ್ನೂ ಯಾವ್ಯಾವ ದುರ್ದೆಶೆ ಅವರಿಗೆ ಒದಗಿ ಬರಲಿದೆಯೋ ? ಸಾವು ನೋವುಗಳು ಅದೆಷ್ಟು ಪಟ್ಟು ಹೆಚ್ಚಾಗಲಿವೆಯೋ ?

ಸೆಪ್ಟಂಬರ್ ೧೧ ರ ಅತಿರೇಕವನ್ನು ಚಾರಿತ್ರಿಕ ಮಹತ್ವವುಳ್ಳ ದುರಂತ ಘಟನೆಗಳೆಂದು ಬಣ್ಣಿಸಲಾಗುತ್ತಿದೆ. ಪ್ರಮಾಣದ ಮಟ್ಟಿಗೆ ಆ ಮಾತು ನಿಜವಲ್ಲ. ಆದರೆ ಕೋವಿಯ ನಳಿಗೆಗಳು ಈಗ ಯಾರತ್ತ ಗುರಿಮಾಡಿವೆ ಎಂಬುವರಲ್ಲಿ ಅದು ನಿಜ. ಆಧುನಿಕ ಇತಿಹಾಸದಲ್ಲಿ ಮೊತ್ತ ಮೊದಲಿಗೆ ಭಯಂಕರ ಅಪರಾಧಗಳನ್ನು ಎಸಗುತ್ತಿದ್ದ ಯೂರೋಪ್ ಮತ್ತು ಅವರ ಮರಿಗಳು ಈಗ ತಾವೇ ಅಂಥ ಅಪರಾದಕ್ಕೆ ಗುರಿಯಾಗಿವೆ.ಅವುಗಳನ್ನು ಗುರಿ ಮಾಡಿಕೊಳ್ಳಲಾಗಿದೆ. ಈ ವರೆಗೂ ಯೂರೋಪಿಯನ್ನರ ಮೇಲೆ ಅವರ ಪಾರಂಪರಿಕ ಶತ್ರುಗಳು ಯಾರೂ ದಾಳಿ ಮಾಡಿರಲಿಲ್ಲ. ಅವರು ಶತಶತಮಾನಗಳ ಕಾಲ ಒಬ್ಬರನ್ನೊಬ್ಬರು ಕಸಾಯಿ ಮಾಡಿಕೊಳ್ಳುತ್ತಾ ಬಂದಿದ್ದರು. ಈಗ ತಾವೇ 'ಗುರಿ'ಯಾಗಿದ್ದಾರೆ.

ಅಮೇರಿಕಕ್ಕಾಗಲಿ, ಪಶ್ಚಿಮುಂಚೂಣಿಯ ಇತರೆ ರಾಷ್ಟ್ರಗಳಿಗಾಗಲಿ ಭಯೋತ್ಪಾದಕರ ಜೊತೆ ಹೋರಾಡುವುದು ಅನತಿಕಾಲದಲ್ಲಿ ಮುಗಿಯುವ ಕೆಲಸವಲ್ಲ. 'ಭಯೋತ್ಪಾದಕತೆಯ ದುಷ್ಟ ಪಿಡುಗು', 'ನೀತಿಗೆಟ್ಟ ನಾಗರಿಕತೆಯ ಶತ್ರುಗಳಿಂದ ಹರಡಲ್ಪಟ್ಟ ಪ್ಲೇಗು', 'ಇದು ಆಧುನಿಕ ಯುಗದಲ್ಲಿ ಬರ್ಬರತೆಗೆ ಮರಳುವ ಯತ್ನ' ಎಂದು ವರ್ಣಿಸಲಾಗುತ್ತಿರುವ ಭಯೋತ್ಪಾದನೆಯಿಂದ ವಿಮುಕ್ತರಾಗಲು ನಿವಾರಣೋಪಾಯಗಳನ್ನು ಹುಡುಕಬೇಕಾಗಿದೆ. ಪ್ರತಿಷ್ಠಿತ ವಲಯಗಳಲ್ಲಿ ಈ

ಸಾಧ್ಯವಿಲ್ಲ. ೧೯೯೬ ರಲ್ಲಿ ಅವರ Powers and Prospects ಪುಸ್ತಕದ ಬಗ್ಗೆ ಬರೆಯುತ್ತ ಅಚಿನ್ ವನಾಯಕ್ ಚಾಮ್‌ಸ್ಕಿಯವರು ತಮ್ಮ ಅಕಾಡೆಮಿಕ್ ಶಿಸ್ತಿಗೆ ಮಾತ್ರ ಬದ್ಧರಾಗಿದ್ದುಕೊಂಡು ತಮ್ಮ ಓರಗೆಯ ಹಲವು 'ಮಹಾನ್ ಚಿಂತಕ'ರಂತೆ ತಾವೂ ತಮ್ಮ ವಿದ್ವತ್ ವಲಯಕ್ಕೆ ಸೀಮಿತರಾಗಿ ಅದಷ್ಟೂ ರಾಜಕೀಯವಾಗಿ ತೆಪ್ಪಗಿದ್ದಿದ್ದರೆ ಅಂತಹ 'ಮೇಧಾವಿ'ಗಳು ಬಾಚಿಕೊಳ್ಳುವ ನಾನಾ ವಿಧ ಪುರಸ್ಕಾರಗಳ ಸುರಿಮಳೆಗೆ ಪಾತ್ರರಾಗುತ್ತಿದ್ದರೆಂದು ಅಭಿಪ್ರಾಯ ಪಡುತ್ತಾರೆ.ಇವರ ರಾಜಕೀಯ ಚಿಂತನೆಯೂ ವಿವೇಕವನ್ನು ಕುರುಡು ಮಾಡುವ ಪ್ರಖರತೆಯದಲ್ಲ. ಬೆಳಕು ತೋರುವ ರೀತಿಯದು. ಹಾಗಾಗಿ ಚಾಮ್‌ಸ್ಕಿಯವರ ವಿಚಾರಗಳಿಗೆ ತುಂಬ ಮೌಲ್ಯವಿದೆ. ಎಂತಹ ಕಡು ವಿರೋಧಿಯೂ ಅವರ ರಾಜಕೀಯ ವಿಚಾರ ಪರಿಶುದ್ಧತೆ ಮತ್ತು ಪ್ರಾಮಾಣಿಕತೆಯ ಬಗ್ಗೆ ಯಾವುದೇ ಸಂಶಯವನ್ನು ಇರಿಸಿಕೊಳ್ಳಲು ಸಾಧ್ಯವಿಲ್ಲ.

ಭಾಷಾವಿಜ್ಞಾನ, ಅರ್ಥಶಾಸ್ತ್ರ ಮತ್ತು ರಾಜಕೀಯ ಸಂಚಿಕೆಗಳು ಇವುಗಳೊಳಗಿನ ಚಾಮ್‌ಸ್ಕಿ

ಬಗ್ಗೆ ಚಿಂತನೆ ನಡೆಯಬೇಕಾಗಿದೆ. ಯಾವುದನ್ನಿಂದು ಪ್ಲೇಗ್ ಎಂದು ಬಣ್ಣಿಸಲಾಗುತ್ತಿದೆಯೋ ಅದೆಲ್ಲದರ ಹರಡುವಿಕೆಯನ್ನು ತಡೆಯುವ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ನಾವು ಖಂಡಿತವಾಗಲು ವಿಶ್ವವನ್ನು ಬರ್ಬರತೆಯತ್ತ ದೂಡುತ್ತಿರುವ ಪ್ಲೇಗನ್ನು, ಅದನ್ನು ಹರಡುತ್ತಿರುವ ಕ್ರಿಮಿ ಮನಸ್ಸುಗಳನ್ನು ಗುರುತಿಸಿ ಮೂಲೋತ್ಪಾಟನೆಗೊಳಿಸಲು ಕಾರ್ಯೋನ್ಮುಖರಾಗಬೇಕಾಗಿದೆ. ಪ್ಲೇಗಿನ ಶಾಪ ಇಂದಿನದಲ್ಲ. ಹೊಸದಂತೂ ಅಲ್ಲವೇ ಅಲ್ಲ. ನಾನು ಈ ಹಿಂದೆ ಉಲ್ಲೇಖಿಸಿದ ಮಾತುಗಳು ಅಮೆರಿಕಾದ ಹಿಂದಿನ ಅಧ್ಯಕ್ಷ ರೇಗನ್ ಮತ್ತು ಅವರ ವಿದೇಶಾಂಗ ಕಾರ್ಯದರ್ಶಿ ಜಾರ್ಜ್ ಶುಲ್ಟ್ಜ್ ರವರದು. ಜಾಗತಿಕ ಭಯೋತ್ಪಾದನೆಯ ವಿರುದ್ಧದ ಹೋರಾಟ ಅಮೆರಿಕೆಯ ವಿದೇಶಾಂಗ ನೀತಿಯ ತಿರುಳು ಎಂದು ಘೋಷಿಸಿಕೊಂಡು ಇಪ್ಪತ್ತು ವರ್ಷಗಳ ಹಿಂದೆ ರೇಗನ್ ಸರ್ಕಾರ ಅಧಿಕಾರಕ್ಕೆ ಬಂತು. ಅದು ಬಹುಶಃ ಹಿಂದೆಂದೂ ಕಂಡು ಕೇಳಿರದ ಪ್ರಮಾಣದಲ್ಲಿ ಅಂತಾರಾಷ್ಟ್ರೀಯ ಭಯೋತ್ಪಾದನೆಯನ್ನು ಹರಡುವುದರ ಮೂಲಕ ತಮ್ಮ ಘೋಷಣೆಯನ್ನು ಕಾರ್ಯರೂಪಕ್ಕೆ ತಂದಿತು. ಅದರ ಅನೀತಿ ಎಲ್ಲಿಯವರೆಗೆ ಹೋಯಿತು ಎಂದರೆ ವಿಶ್ವ ನ್ಯಾಯಾಲಯವು ಅಮೆರಿಕೆಯನ್ನು ನ್ಯಾಯ ಬಾಹಿರವಾಗಿ ಬಲ ಪ್ರಯೋಗ ಮಾಡಿದ್ದಕ್ಕಾಗಿ ಖಂಡಿಸಿತು. ಭದ್ರತಾ ಮಂಡಳಿಯು ಕೂಡಾ ಸದಸ್ಯ ರಾಷ್ಟ್ರಗಳು ಅಂತರರಾಷ್ಟ್ರೀಯ ನೀತಿನಿಯಮಗಳನ್ನು ತಪ್ಪದೇ ಪಾಲಿಸಬೇಕೆಂದು ಕರೆ ನೀಡಿತು. ಆದರೆ ಇದರ ವಿರುದ್ಧ ಅಮೆರಿಕ ವೀಟೋ ಚಲಾಯಿಸಿತು.

ತಾನು ನಡೆಸಿಕೊಂಡು ಬಂದಿರುವ ಅಂತಾರಾಷ್ಟ್ರೀಯ ಭಯೋತ್ಪಾದಕತೆಯನ್ನು ನಿಲ್ಲಿಸಬೇಕೆಂದು, ತೊಂದರೆಗೀಡಾದವರಿಗೆ ದೊಡ್ಡ ಮೊತ್ತದ ಪರಿಹಾರ ನೀಡಬೇಕೆಂದು ವಿಶ್ವನ್ಯಾಯಾಲಯ ನೀಡಿದ್ದ ತೀರ್ಪನ್ನು ಅಮೆರಿಕ ದುರ್ದಾನವೆಂಬಂತೆ ತಿರಸ್ಕರಿಸಿತು. ತೀರ್ಪಿಗೆ ತನ್ನ ತಕ್ಷಣದ ಪ್ರತಿಕ್ರಿಯೆ ಎಂಬಂತೆ ಭಯೋತ್ಪಾದಕ ಸಮರಗಳನ್ನು ತೀವ್ರಗೊಳಿಸಿತಲ್ಲದೆ ತನ್ನ ಪಾಶವೀ ಸೇನೆಗೆ ಶತ್ರುಗಳೊಂದಿಗೆ ಮುಖಾಮುಖಿ ಹೋರಾಟ ಕಡಿಮೆ ಮಾಡಿ ಅಸಹಾಯಕ ನಾಗರಿಕರ ನೆಲೆಗಳ ಮೇಲೆ ದಾಳಿ ಮಾಡಲು ಅಧಿಕೃತ ಆದೇಶ ನೀಡಿತು.

ಈ ನನ್ನ ಹೇಳಿಕೆಯ ಬಗ್ಗೆ ಯಾವುದೇ ವಿವಾದವಿರಲು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿ

ಬಹಳ ಕುತೂಹಲದ ವಿಚಾರವಾಗಿ ತೋರಬಹುದು. ಆದರೆ ಅವರು ಬಹಳ ಸಲ ತಮ್ಮ ಭಾಷಾವಿಜ್ಞಾನ ಕುರಿತ ಚಿಂತನೆ, ತಾತ್ವಿಕ ವೈಚಾರಿಕತೆ ಹಾಗೂ ಅರಾಜಕ ರಾಜಕೀಯ ನಂಬಿಕೆಗಳ ನಡುವೆ ಯಾವುದೇ ನೇರ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಆದರೆ ಅವೆಲ್ಲಕ್ಕೂ ನಡುವೆ ಆಳದಲ್ಲಿ ಸಂಬಂಧವೊಂದು ಇದ್ದೇ ಇದೆ. ಕೆಲವು ಜ್ಞಾನಧಾತುಗಳು ಜನ್ಮ ಜಾತವಾಗಿ ಎಲ್ಲ ಮಾನವರಿಗೂ ದೊರೆತಿವೆ. ಭಾಷೆಯು ಅದರಲ್ಲಿ ಒಂದು. ಆದ್ದರಿಂದಲೇ ಮಗುವೊಂದಕ್ಕೆ ತಾನು ಹಿಂದೆ ಎಂದೂ ಕೇಳಿರದ ಹಲವಾರು ವಾಕ್ಯಗಳನ್ನು ಸರಿಯಾದ ಸಂರಚನೆಯಲ್ಲಿ ಉಚ್ಚರಿಸಬಲ್ಲ ಶಕ್ತಿ ಪ್ರಾಪ್ತವಾಗಿರುತ್ತದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ.ಇದು ಒಬ್ಬ ಫಿಲಾಸಫಿಕಲ್ ರ್‍ಯಾಷನಲಿಸ್ಟ್‌ರ ಯೋಚನಾ ಕ್ರಮ. ಹಾಗೆಂದು ಅವರು ವ್ಯಕ್ತಿತ್ವ ವಿಕಸನದಲ್ಲಿ ವ್ಯಕ್ತಿಯ ಪರಿಸರ ಮತ್ತು ಅನುಭವಗಳು ಬೀರುವ ಪ್ರಭಾವವನ್ನು ನಿರಾಕರಿಸುವುದಿಲ್ಲ. ಬದಲಿಗೆ ಜ್ಞಾನದ ರೂಪಗಳಾದ ಜನ್ಮಜಾತವಾದ ವಿಚಾರಶಕ್ತಿ, ಯೋಚನಾ ಕ್ರಮ ಮನುಷ್ಯರಲ್ಲಿ ಇರುವಂಥದ್ದೇ ಎಂದು ಪ್ರತಿಪಾದಿಸುತ್ತಾರೆ. ಎಲ್ಲರಲ್ಲು ಎಂದು ನೀಲಿ ನಕ್ಷೆ ಇದೆ.

ಮತ್ತು ಈ ಭೂಮಿಯ ಪರಮೋಚ್ಚ ಅಧಿಕಾರಿಗಳು ನೀಡಿರುವ ತೀರ್ಪು ಕೂಡ ಇದನ್ನೇ ಹೇಳುತ್ತಿದೆ ಎಂಬ ಕಾರಣಕ್ಕಾಗಿ ನಾನು ಇದನ್ನು ಉಲ್ಲೇಖಿಸಿದ್ದೇನೆ. ಇದಕ್ಕಿಂತ ಭೀಕರವಾದ ಉದಾಹರಣೆಗಳು ಬಹಳ ಇವೆ. ಮಧ್ಯ ಅಮೆರಿಕಾ ರಾಷ್ಟ್ರಗಳಲ್ಲಿ ರೇಗನ್ ಆಡಳಿತಾವಧಿಯೊಂದರಲ್ಲೇ ಅಮೆರಿಕ ಎಬ್ಬಿಸಿದ ಹಿಂಸೆಯ ಜ್ವಾಲೆಯಲ್ಲಿ ಲಕ್ಷಗಟ್ಟಲೆ ಹೆಣಗಳು ಬಿದ್ದವು. ದಶಲಕ್ಷಗಳ ಲೆಕ್ಕದಲ್ಲಿ ಜನ ವಿಕಲಾಂಗರಾದರು, ಅನಾಥರಾದರು. ನಾಲ್ಕು ದೇಶಗಳಿಗೆ ದೇಶಗಳೇ ವಿನಾಶಗೊಂಡವು. ದಕ್ಷಿಣ ಆಫ್ರಿಕಾದಲ್ಲಿಯಂತೂ ಈ ಪಶ್ಚಿಮ ರಾಷ್ಟ್ರಗಳ ಬೆಂಬಲ ಪಡೆದ ವಿಚ್ಛಿದ್ರಕಾರಿ ಶಕ್ತಿಗಳು ಆಡಿದ ಬೇಟೆಗೆ ಬಲಿಯಾದವರು ಹದಿನೈದು ಲಕ್ಷಕ್ಕೂ ಹೆಚ್ಚು ಮಂದಿ. ಪಶ್ಚಿಮ ಏಷಿಯಾ ಕುರಿತು, ಉಳಿದ ದೇಶಗಳ ಕುರಿತು ಮಾತಾಡುವುದರ ಅಗತ್ಯ ನನಗೆ ತೋರುತ್ತಿಲ್ಲ. ವಿಪರ್ಯಾಸವೆಂದರೆ ಇವೆಲ್ಲವನ್ನೂ ಭಯೋತ್ಪಾದಕತೆ ಎಂಬ ವ್ಯಾಖ್ಯಾನದಿಂದ ಹೊರಗಿಡಲಾಗಿದೆ. ಈ ಹುನ್ನಾರದಲ್ಲಿ ಬಳಕೆಯಾಗಿರುವುದು ಒಂದೇ ಒಂದು ಸರಳವಾದ ಸಾಧನ. ಅದು ಅಮೆರಿಕಾದ ಪರಿಭಾಷೆಯಲ್ಲಿ ಭಯೋತ್ಪಾದನೆ ಎಂಬ ಶಬ್ದವನ್ನು ವಿವರಿಸುವುದು.

ಎಲ್ಲ ರಾಜಕೀಯ ಪರಿಭಾಷೆಯಲ್ಲಿರುವಂತೆ ಭಯೋತ್ಪಾದನೆ ಎಂಬ ಶಬ್ದಕ್ಕೂ ಎರಡು ಅರ್ಥಗಳಿವೆ. ಒಂದು ನಿಘಂಟಿನಲ್ಲಿ ವಿವರಿಸಲ್ಪಟ್ಟಿರುವುದು-ಶಬ್ದಾಶ್ರಿತ, ಇನ್ನೊಂದು ಪ್ರೊಪಗ್ಯಾಂಡಿಸ್ಟಿಕ್ ಆದದ್ದು. ಶಬ್ದಾಶ್ರಿತ ಅರ್ಥವನ್ನು ಅಮೆರಿಕದ ಅಧಿಕೃತ ದಾಖಲೆಗಳಲ್ಲಿ ಕಾಣಬಹುದಾಗಿದೆ. ಇದು ಭಯೋತ್ಪಾದಕತೆ ಎಂದರೆ ಏನು ಎಂಬುದನ್ನು ನಮಗೆ ತಿಳಿಸಿಕೊಡುತ್ತಿದೆ. ಇದರ ಮಗ್ಗುಲುಗಳು ಮೂರು. ೧. ಅರ್ಥ: ಕೂಡಿ ಕಳೆದು ಲೆಕ್ಕಾಚಾರದಿಂದ ಹಿಂಸೆಯನ್ನು ಪ್ರಯೋಗಿಸುವುದು ೨. ಉದ್ದೇಶ: ತಮ್ಮ ರಾಜಕೀಯ , ಧಾರ್ಮಿಕ, ತಾತ್ವಿಕ ಉದ್ದೇಶಗಳನ್ನು ಸಾಧಿಸುವುದು. ೩. ಮಾರ್ಗ: ಬಲಾತ್ಕಾರ, ಹಿಂಸಾ ಪ್ರಯೋಗ ಮಾಡಿ ಭಯವನ್ನು ಬಿತ್ತುವುದು. ಆದರೆ ಈ ವಿವರಣೆಯನ್ನು ಎರಡು ಕಾರಣಗಳಿಂದ ಒಪ್ಪಲಾಗದು. ಮೊದಲನೆಯದೆಂದರೆ, ಇದು 'ಅಲ್ಪ ತೀವ್ರತೆಯ ಕದನ' ಅಥವಾ 'ಭಯೋತ್ಪಾದನೆಯ ವಿರುದ್ಧದ ಕಾರ್ಯಾಚರಣೆ' ಎಂದು ಹೆಸರಿಟ್ಟು ನಡೆಸುವ ಕಾರ್ಯಗಳಿಗೆ ಸಂಬಂಧಿಸಿದ ಸರ್ಕಾರಿ ನೀತಿಗೆ ಕೊಟ್ಟುಕೊಂಡ ವಿವರಣೆಯಿದ್ದಂತಿದೆ. ಎರಡನೆಯದಾಗಿ, ಅದು ನಾನು ಮೊದಲೇ ಕೊಟ್ಟ ಸಣ್ಣ ಉದಾಹರಣೆಯಂಥ, ವಿಚಾರಶೀಲರು ಯಾರೂ ಒಪ್ಪಲಿಕ್ಕೆ ಸಾಧ್ಯವಿಲ್ಲದಂಥ ತುರ್ತು ನಿರ್ಣಯಗಳನ್ನು ನಮ್ಮ ಮುಂದಿಡುತ್ತದೆ. ಆದ್ದರಿಂದ ಅಮೆರಿಕದ ಮಟ್ಟಿಗೆ ಪ್ರೊಪಗ್ಯಾಂಡಿಸ್ಟಿಕ್,

ಭಾಷೆಗೆ ಸಂಬಂಧಪಟ್ಟಂತೆ ಅದಕ್ಕೆ ಬಂದೂಕಿನ ಕುದುರೆಯಂತಹ ಬಾಹ್ಯ ಚಾಲನೆಯ ಅಗತ್ಯವಿದೆ. ವ್ಯಕ್ತಿಯ ಅನುಭವದ ಮೂಲಕ ಅದು ಖಚಿತವಾಗಿ ರೂಪುಗೊಳ್ಳುತ್ತದೆ. ಆದರೂ ಅದಕ್ಕೊಂದು ಮಿತಿ ಇದೆ. ಭಾಷೆಯ ವಿಕಾಸವು ಭಾಷಾ ಸಾಮರ್ಥ್ಯದ ಬೆಳವಣಿಗೆ, ಪ್ರೌಢತೆ ಹಾಗೂ ಪರಿಪಕ್ವತೆಗೆ ಸಂಬಂಧಪಟ್ಟದ್ದೇ ಹೊರತು ಸಾಂಪ್ರದಾಯಿಕವಾಗಿ ಭಾವಿಸಿದ್ದ ಹಾಗೆ ಕಲಿಕೆಗೆ ಸಂಬಂಧಪಟ್ಟಿರುವುದಲ್ಲ ಎಂದವರು ಅಭಿಪ್ರಾಯಪಡುತ್ತಾರೆ. ಅವರೆನ್ನುವಂತೆ ಭಾಷೆಯ ವಿಚಾರಕ್ಕೆ ಬಂದರೆ ಮುಂದುವರಿದ ಭಾಷೆ ಎಂಬ ಪರಿಕಲ್ಪನೆಗೆ ವಿರುದ್ಧವಾದ ಆದಿಮ ಭಾಷೆ ಎಂಬುವುದು ಯಾವುದೂ ಇಲ್ಲ. ಭಾಷೆಯ ಸಿದ್ಧಾಂತದಿಂದ ಅವರು ಮನಸ್ಸಿನ ಸಿದ್ಧಾಂತವನ್ನು ವಿವರಿಸುತ್ತಾರೆ. ಮನಸ್ಸಿನ ಸಿದ್ಧಾಂತದಿಂದ ಭಾಷೆಯನ್ನಲ್ಲ.

ರಾಜಕೀಯಕ್ಕೆ ಸಂಬಂಧಪಟ್ಟಂತೆ ದಮನಕಾರಿ ನಾಗರಿಕತೆಗಳನ್ನೆಲ್ಲ ವಿರೋಧಿಸುವ ಚಾಮ್‌ಸ್ಕಿಯ ಮುಖ್ಯ ಗಮನವಿರುವುದು ಅಮೇರಿಕದ ಮೂರ್ಖತನಗಳ ಬಗ್ಗೆ. ಆ ದೇಶದಲ್ಲೇ

ರೂಪವನ್ನೇ ಆಯ್ದುಕೊಳ್ಳಬೇಕು. ಇದರ ಪ್ರಕಾರ ಭಯೋತ್ಪಾದನೆ ಎಂದರೆ ಅಮೇರಿಕದ ಹಾಗೂ ಅದರ ಮಿತ್ರಕೂಟದ ರಾಷ್ಟ್ರಗಳ ವಿರುದ್ಧ ನಡೆಸುವ ಭಯೋತ್ಪಾದನೆ ಮಾತ್ರ. ಮೇಲಿನ ವ್ಯಾಖ್ಯಾನವು ಅಮೆರಿಕೆಗಷ್ಟೇ ಮೀಸಲಾಗಿಲ್ಲ ಎಂದರೆ ಆಶ್ಚರ್ಯ ಪಡಬೇಕಾಗಿಲ್ಲ. ಈವರೆಗೆ ದಾಖಲಾಗಿರುವ ವಿದ್ಯಮಾನಗಳನ್ನು ಕುರಿತ ವಿಪುಲ ಸಾಹಿತ್ಯವನ್ನು ಅಭ್ಯಾಸಮಾಡಿದರೆ ಇದು ವಿಶ್ವವ್ಯಾಪಿಯೂ, ಸಾರ್ವತ್ರಿಕವೂ ಆಗಿದೆ ಎಂಬುದು ನಮ್ಮ ಮುಂದೆ ಬಿಚ್ಚಿಕೊಳ್ಳುತ್ತದೆ.

ಭಯೋತ್ಪಾದನೆಯು ತಂದೊಡ್ಡಿರುವ ಆತಂಕದ ಸ್ಥಿತಿಯೊಂದೇ 'ನಾವು ನಿಟ್ಟಿಸಿ ನೋಡುತ್ತಿರುವ ಅಧೋಲೋಕ'ವಲ್ಲ. ಬಾಹ್ಯಾಕಾಶವನ್ನು ವ್ಯಾಪಿಸಿಕೊಳ್ಳುತ್ತಿರುವ ಶಸ್ತಾಸ್ತ್ರ ಪೈಪೋಟಿ ತಂದೊಡ್ಡುತ್ತಿರುವ ಆತಂಕವು ಅದಕ್ಕಿಂತ ದೊಡ್ಡದು. ಇದನ್ನು ಪೈಪೋಟಿ ಎಂದರೆ ಸರಿಯಾಗಲಾರದು. ಏಕೆಂದರೆ ತನ್ನೊಂದಿಗೆ ತಾನೇ ಪೈಪೋಟಿಯಲ್ಲಿರುವ ಅಮೆರಿಕಾ ಮಾತ್ರ ಅಲ್ಲಿ ಪೈಪೋಟಿ ನಡೆಸುತ್ತಿರುವುದು. ಬಾಹ್ಯಾಕಾಶವನ್ನು ಮಿಲಿಟರೀಕರಣಗೊಳಿಸುವುದಕ್ಕೆ ಬ್ಯಾಲಿಸ್ಟಿಕ್ ಮಿಸೈಲ್ ಡಿಫೆನ್ಸ್ (ಬಿ.ಎಂ.ಡಿ) ಎಂಬ ನಾಜೂಕಿನ ನಾಮಕರಣ ಮಾಡಲಾಗಿದೆ. ಇದು ದೊಡ್ಡ ಹುನ್ನಾರವೊಂದರ ಸಣ್ಣ ಅಂಶ ಮಾತ್ರ. ಬಿ.ಎಂ.ಡಿ. ತಾಂತ್ರಿಕವಾಗಿ ಅಸಾಧ್ಯವಾದುದಲ್ಲ. ಆದರೆ ಅದು ಉಪಗ್ರಹ ಸಂಪರ್ಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅವಲಂಬಿಸಿರುತ್ತದೆ. ಉಪಗ್ರಹವನ್ನು ಹೊಡೆದುರುಳಿಸುವುದು ಮಿಸೆಲ್‌ಗಳನ್ನು ಹೊಡೆದುರುಳಿಸುವುದಕ್ಕಿಂತ ಸುಲಭ ಎಂಬುದು ಯಾರಿಗೆ ತಾನೇ ಗೊತ್ತಿಲ್ಲ. ಬಾಹ್ಯಾಕಾಶದ ಮೇಲೆ ಸಂಪೂರ್ಣ ಯಜಮಾನಿಕೆಯನ್ನು ಪಡೆಯುವ ಅಮೆರಿಕದ ಸನ್ನಾಹವು ತನ್ನ ಒಡಲಲ್ಲಿ ಇರಿಸಿಕೊಂಡಿರುವುದು ಈ ದುರಾಲೋಚನೆಯನ್ನೇ. ಇದು ಒಂದಾದರೆ ತನ್ನ ವಿರೋಧಿಗಳಿಗೆ ಕಡುಬಡವನ ಹತ್ಯಾರುಗಳು ಕೂಡಾ ದೊರೆಯಬಾರದು ಎನ್ನುವುದು ಇನ್ನೊಂದು ಸಂಚು. ಇದಕ್ಕೆಲ್ಲ ಅಸದೃಶ ಬಾಹ್ಯಾಕಾಶ ತಂತ್ರಜ್ಞಾನ ಬೇಕು. ಬಾಹ್ಯಾಕಾಶದ ಒಡೆತನ ಬೇಕು.

ಆರ್ಥಿಕ ಜಾಗತೀಕರಣ ಪ್ರಕ್ರಿಯೆಯಿಂದ ಈ ರೀತಿಯ ಸಾರ್ವಭೌಮ ಶಕ್ತಿಯ ಅಗತ್ಯವು ಹೆಚ್ಚಾಗುತ್ತದೆ ಎಂದು ಅಮೆರಿಕದ ವಾಯುಪಡೆ ಭಾವಿಸುತ್ತದೆ. ಜಾಗತೀಕರಣವು ಉಳ್ಳವರ ಇಲ್ಲದವರ ನಡುವೆ ಇರುವ ಕಂದರವನ್ನು ಹಿಗ್ಗಲಿಸುತ್ತಿದೆ. ಇದಕ್ಕೆ ಜಾಗತೀಕರಣವೇ ಕಾರಣ ಎಂದು ಅಮೆರಿಕದ ಬೇಹುಗಾರಿಕಾ ವ್ಯವಸ್ಥೆ ಕೂಡಾ ಹೇಳುತ್ತಿದೆ. ಯೋಜನೆಗಳನ್ನು ಸಿದ್ಧಪಡಿಸುವ

ಇರುವ ಅವರು ಮೊದಲು ತನ್ನ ಮನೆಯ ಅಂಗಳವನ್ನು ಗುಡಿಸುವ ಮೂಲಕ ಶುದ್ಧೀಕರಣವನ್ನು ಜಾಗತಿಕ ಮಟ್ಟದ ಕ್ರಿಯೆಯನ್ನಾಗಿ ಮಾಡುವ ಉದ್ದೇಶ ಹೊಂದಿರುವವರು. ಸಮಾಜವಾದೀ ರಾಷ್ಟ್ರಗಳು ಸ್ಟೇಟ್ ಕ್ಯಾಪಿಟಲಿಸಂ ರಾಷ್ಟ್ರಗಳೆಂದು, ಪಶ್ಚಿಮದ ರಾಷ್ಟ್ರಗಳದ್ದು ಸ್ಟೇಟ್ ಮನಾಪಲಿ ಕ್ಯಾಪಿಟಲಿಸಂ ಎಂದು ಅವರು ವ್ಯಾಖ್ಯಾನಿಸಿದ್ದಾರೆ. ಇವೆಲ್ಲ ತೀರಾ ಸಮಾಜೋ-ಆರ್ಥಿಕ ಸ್ತರಗಳಲ್ಲಿ ಕೆಳಗಿನಂಚಿನಲ್ಲಿರುವ ಮನುಷ್ಯರನ್ನು ನಿರ್ಲಕ್ಷಿಸುವಂಥವು. ರೇಗನ್ ಮತ್ತು ಕ್ಲಿಂಟನ್ ಆಡಳಿತದ ನಿಯೋ ಲಿಬರಲ್ ಅರ್ಥವ್ಯವಸ್ಥೆಯು ಅಮೇರಿಕದ ಕೆಳರೇಖೆಗಳಲ್ಲಿರುವ ಐದರಲ್ಲಿ ಮೂರರಷ್ಟು ಜನರ ಬದುಕನ್ನು ಅಸಹನೀಯಗೊಳಿಸಿವೆ ಎಂಬುದು ಅವರ ಖಚಿತ ವ್ಯಾಖ್ಯಾನ.

ಚಾಮ್‌ಸ್ಕಿಯ ಯಾವತ್ತಿನ ಗಮನವಿರುವುದು ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಆ ದುರ್ಬಳಕೆಯನ್ನೇ ವಿಧಿವತ್ತಾಗಿಸುವ ಚರಿತ್ರಹೀನರ ಮೇಲೆ; ಸ್ವತಃ ತಾನು ಅಪಾರವಾಗಿ ಪ್ರೀತಿಸುವ, ಗೌರವಿಸುವ ಸತ್ಯನಿಷ್ಠುರತೆ, ಸ್ವಾತಂತ್ರ್ಯಪರತೆ, ಸಮಾನತೆ, ಪರವಿಚಾರ ಸಹಿಷ್ಣುತೆ ಹಾಗೂ ಸರಳವಾದ

ಜನರಂತೂ ಈ ಹಿಗ್ಗುತ್ತಿರುವ ಕಂದರದ ದೆಸೆಯಿಂದ 'ಇಲ್ಲದವರಲ್ಲಿ' ಅಶಾಂತಿ ತಲೆದೋರುತ್ತದೆ, [illegible] ವ್ಯವಸ್ಥೆಯನ್ನು ಉಪಯೋಗಿಸಿಕೊಂಡು ಕ್ಷಿಪ್ರವಾದ ವಾಯು ದಾಳಿ ಮಾಡಿ ಈ ಅರಾಜಕತೆಯನ್ನು, ಅಶಾಂತಿಯನ್ನು ಹತ್ತಿಕ್ಕಲು ಅಮೆರಿಕ ಸಿದ್ಧವಿರಬೇಕು ಎಂದು ಚಿಂತಿಸುತ್ತಿದ್ದಾರೆ. ಇವರ ಚಿಂತನೆ ಇನ್ನೂ ಮುಂದೆ ಹೋಗಿ ಅಮೆರಿಕದ ವಾಯು ಸಾಮರ್ಥ್ಯವು ಕೆಲವು ಪುಂಡ ರಾಷ್ಟ್ರಗಳು ವಿಶ್ವವ್ಯಾಪಿಯಾಗಿ ಬಿ.ಎಂ.ಡಿ. ಯನ್ನು ಹರಡುವುದಕ್ಕೆ ಪ್ರತಿಯಾಗಿ ಒಂದು ಕವಚದಂತೆ ಇರಬೇಕು ಎಂಬ ನಿಲುವನ್ನು ತಲುಪಿದೆ. ಇವೆಲ್ಲವೂ ಯೋಜಿತ ಕಾರ್ಯಕ್ರಮಗಳಿದ್ದು ಊಹಿಸಲು ಸಾಧ್ಯವಾಗುವ ಪರಿಣಾಮಗಳು; ಹೇಗೆ ಹಿಗ್ಗುತ್ತಿರುವ ಕಂದರವು ಜಾಗತೀಕರಣದ ನಿರೀಕ್ಷಿತ ಫಲವೋ ಹಾಗೆ. ಚರಿತ್ರೆಯ ಪಾಠಗಳು ಇಂತಹ ಮಾರ್ಗಗಳೆಲ್ಲವೂ ಅಪಾಯಕಾರಿಯಾದವು ಎಂದು ನಮಗೆ ಖಚಿತ ಮಾಹಿತಿ ಒದಗಿಸುತ್ತವೆ. ಇದು ನಿರ್ವಿವಾದವಾಗಿ ಸಾಬೀತಾದ ವಿಚಾರಗಳು. ಈಗಂತೂ ಅವು ಮಾನವ ಕುಲದ ಉಳಿವಿಗೇ ಸಂಚಕಾರ ಎಂಬ ಮಟ್ಟವನ್ನು ತಲುಪಿವೆ. ಆದರೂ ಇವತ್ತು ನೆಲೆ ನಿಂತಿರುವ ಸಾಂಸ್ಥಿಕ ವ್ಯವಸ್ಥೆಯಲ್ಲೇ ಬೇರೂರಿರುವ ಮೌಲ್ಯಗಳ ವ್ಯವಸ್ಥೆಯನ್ನು ನಂಬಿ ಮುಂದುವರಿಯುವುದು ವಿವೇಕಯುತವೇ ಆಗಿದೆ.

ಮತ್ತೊಂದು ವಿಚಾರವಲಯವನ್ನು ಪ್ರವೇಶಿಸೋಣ. ಕ್ಯೋಟೋ ಒಪ್ಪಂದವನ್ನು ಕಡೆಗಣಿಸಿದ್ದಕ್ಕಾಗಿ ಬುಷ್ ಆಡಳಿತವನ್ನು ಟೀಕಿಸಲಾಗುತ್ತಿದೆ. ಅದನ್ನು ಒಪ್ಪಿದ್ದರೆ ಅಮೆರಿಕದ ಹಿತಾಸಕ್ತಿಗೆ ಧಕ್ಕೆ ಬರುತ್ತಿತ್ತೆಂಬ ಟೀಕೆಗಳ ಬಗ್ಗೆ ಆಶ್ಚರ್ಯವಾಗುತ್ತದೆ. ಪ್ರಸಕ್ತ ಸೈದ್ಧಾಂತಿಕತೆಯ ಪರಿಧಿಯಲ್ಲಿ ಟೀಕಾಕಾರರ ವಿಚಾರವು ವೈಚಾರಿಕವಾಗೇ ಇದೆ. ಪ್ರತಿದಿನ ನಮಗೆ ನಿಯೋಕ್ಲಾಸಿಕಲ್ ಮಾರುಕಟ್ಟೆ ವ್ಯವಸ್ಥೆಯಲ್ಲಿ ವಿಶ್ವಾಸವಿಡುವಂತೆ ಪಾಠ ಹೇಳಲಾಗುತ್ತಿದೆ. ಈ ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಬಿಡಿ ಬಿಡಿ ವ್ಯಕ್ತಿಗಳು ಸಂಪದಭಿವೃದ್ಧಿ ಮಾಡಿಕೊಳ್ಳುವವರಾಗಿರುತ್ತಾರೆ. ಹಣದ ರೂಪದಲ್ಲಿ ಅಭಿವ್ಯಕ್ತಗೊಳ್ಳುವ ಅವರ ಆಶಯಗಳಿಗೆ ತಕ್ಕಂತೆ ಮಾರುಕಟ್ಟೆಗಳೂ ವರ್ತಿಸುತ್ತವೆ. ಅವರ ಹಿತಾಸಕ್ತಿಗಳ ಮೌಲ್ಯಮಾಪನವನ್ನು ಮಾಡಲು ಇದೇ ಮಾನದಂಡಗಳನ್ನು ಬಳಸಲಾಗುತ್ತದೆ. ಮಾರುಕಟ್ಟೆ ಮೂಲಭೂತವಾದದ ದುಷ್ಪರಿಣಾಮಗಳಿಂದ ಪಾರಾಗಲಿಕ್ಕೆಂದು ಕಟ್ಟಿಕೊಳ್ಳಲಾಗಿರುವ ಸಾಂಸ್ಥಿಕ ಸಂರಚನೆಗಳನ್ನು ದುರ್ಬಲಗೊಳಿಸಲೆಂದು ಈ ಸಂಸ್ಥೆಗಳ ಪ್ರಧಾನ ಆಶಯವಾದ ಸಹಾನುಭೂತಿಯ ಹಾಗೂ ಏಕತೆಯ ಸಂಸ್ಕೃತಿಯನ್ನು ವಿಚ್ಛಿದ್ರಗೊಳಿಸಲೆಂದು, ವಿಘಟನೆಗೆ ಒಳಪಡಿಸಲೆಂದು 'ಸಮರ್ಪಣಾ

ಮಾನವೀಯ ಸಜ್ಜನಿಕೆಯನ್ನು ಹೇಗೆ ಆ ಜನ ಉಲ್ಲಂಘಿಸುವರೆಂಬುದರ ಮೇಲೆ.

ಈ ತಾತ್ವಿಕ ಹಾಗೂ ಸಾತ್ವಿಕ ಕೋಪವೇ ಚಾಮ್‌ಸ್ಕಿಯ ಎದುರಾಳಿಯನ್ನು ಅವನದೇ ದ್ವಂದ್ವಗಳ, ಹಿಪಾಕ್ರಸಿಯ, ಮೋಸದ ಬಲೆಯಲ್ಲಿ ಕೆಡವಿಬಿಡುತ್ತದೆ. ನೀನು ಆಡಿದ್ದೇನು, ಅಂತಹ ಸನ್ನಿವೇಶದಲ್ಲಿ ಸಿಲುಕಿದಾಗ ಮಾಡಿದ್ದೇನು ಎಂಬ ನಡೆ ನುಡಿಯ ವಿವೇಕದ ಪ್ರಶ್ನೆಗಳನ್ನು ಅವನ ಮುಂದೆ ನಿಲ್ಲಿಸುತ್ತದೆ. ತಾನು ಎದುರು ನಿಲ್ಲಿಸಿದ ಪ್ರಶ್ನೆಗಳಿಗೆ ತನ್ನ ಎದುರಾಳಿಯು ಉತ್ತರಿಸುತ್ತಾನೋ ಇಲ್ಲವೋ ಎಂಬುದು ಚಾಮ್‌ಸ್ಕಿಯ ಪ್ರಶ್ನೆಯಲ್ಲ.

ಚಾಮ್‌ಸ್ಕಿಯ ವಿಚಾರದ ಯಾವ ಯಾವ ಅಂಶಗಳನ್ನು ಇವತ್ತಿನ ನೈಜ ರಾಜಕೀಯ ಸ್ಥಿತಿಯು ಅರಗಿಸಿಕೊಳ್ಳುತ್ತದೆ ಎಂಬುದು ಮುಖ್ಯವಾದ ಪ್ರಶ್ನೆ. ಏಕೆಂದರೆ ಇಂದಿನ ರಾಜಕೀಯ ವಿವೇಕವು ಮುಂದೆ ಪಡೆದುಕೊಳ್ಳಲಿರುವ ಸ್ವರೂಪದ ಬಗ್ಗೆ ಇದು ಖಚಿತ ಮಾಹಿತಿ ನೀಡುತ್ತದೆ.

❑

ಭಾವದಿಂದ' ದುಡಿಯುವವರು ಹೆಚ್ಚಾಗುತ್ತಿದ್ದಾರೆ. ಉಳಿವಿಗಿರುವ ಆತಂಕಗಳನ್ನು ಈ ಪ್ರಯತ್ನಗಳು ಜಾಸ್ತಿ ಮಾಡುತ್ತಿವೆ.

ಭವಿಷ್ಯವು ಎಲ್ಲೆಡೆ ಒಂದೇ ರೀತಿ ಕರಾಳವಾಗಿದೆಯೆಂದು ಸೂಚಿಸಲು ನಾನು ಬಯಸುತ್ತಿಲ್ಲ. ಅದಕ್ಕಿಂತಲೂ ಹೆಚ್ಚು ಸೂಕ್ಷ್ಮವಾಗಿದೆ. ಒಂದು ಆಶಾಜನಕ ಬೆಳವಣಿಗೆಯೆಂದರೆ ಮಾನವ ಹಕ್ಕುಗಳಿಗಾಗಿ ದನಿಯೆತ್ತುವ ಸಂಸ್ಕೃತಿ ನಿಧಾನವಾಗಿ ಸಾರ್ವಜನಿಕರಲ್ಲಿ ಅರಳಿಕೊಳ್ಳುತ್ತಿದೆ. ೧೯೬೦ ರಿಂದಾಚೆ ಇದರ ಗತಿ ತ್ವರಿತಗೊಳ್ಳುತ್ತಿದೆ. ಸಮುದಾಯದ ಮಧ್ಯೆಯ ಈ ಪರಿಪಾಠ ಬೇರೆ ಕ್ಷೇತ್ರಗಳಿಗೂ ಹಬ್ಬಿ, ಹಬ್ಬಿದೆಡೆಯಲ್ಲೆಲ್ಲ ಸಂಭಾವಿತತನದ ಬಿತ್ತನ್ನು ಬಿತ್ತುವಲ್ಲಿ ಪ್ರಮುಖವಾದ ಪಾತ್ರ ವಹಿಸಿದೆ. ಇದರ ಮಹತ್ವದ ಪರಿಣಾಮವೆಂದರೆ ನಾಗರೀಕ ಹಾಗೂ ಮಾನವ ಹಕ್ಕುಗಳ ಬಗ್ಗೆ ಜಾಗೃತವಾಗಿರುವ ಮಾನವಿಕ ಕಳಕಳಿ; ಅಲ್ಪ ಸಂಖ್ಯಾತರ, ಮಹಿಳೆಯರ ಹಾಗೂ ಭವಿಷ್ಯದ ಪೀಳಿಗೆಗಳ ಹಕ್ಕುಗಳ ಬಗ್ಗೆ ಜಾಗೃತವಾಗಿರುವ ಕಳಕಳಿ ಹಾಗೂ ೧೯೬೦ ರಿಂದೀಚೆಗೆ ಬಹಳ ದೊಡ್ಡ ಚಳುವಳಿಯಾಗಿ ಬೆಳೆದು ಬಂದ ಪರಿಸರ ಅಭಿಯಾನಗಳೂ ವಿಕಾಸಗೊಳ್ಳುತ್ತಿವೆ / ಹೆಚ್ಚುತ್ತಿವೆ ಅನ್ನಿಸುತ್ತದೆ.

ಚರಿತ್ರೆಯು ಮಾನವ ಹಕ್ಕುಗಳ ಅಗತ್ಯವನ್ನು ಕುರಿತ ಕಳಕಳಿಯನ್ನು ವ್ಯಕ್ತಪಡಿಸುತ್ತಿದೆ ಎಂದು, ಮಾನವ ಹಕ್ಕುಗಳ ವ್ಯಾಪ್ತಿ ವಿಸ್ತಾರಗೊಳ್ಳುತ್ತಿದೆ ಎಂದು ಆಶಾವಾದಿಯೊಬ್ಬ, ವಾಸ್ತವವಾಗಿಯೇ, ನಂಬಬಹುದು.

ಇದರ ತಿರುವು ಮುರುವುಗಳೂ ಸಾಮಾನ್ಯ; ಅವು ಸತ್ಯವೂ ಹೌದು.

❑

✦ **ಆರ್. ವಿಜಯರಾಘವನ್,** ಸೀನಿಯರ್ ಮ್ಯಾನೇಜರ್,
ಕೋಲಾರ ಗ್ರಾಮೀಣ ಬ್ಯಾಂಕ್, ಕೇಂದ್ರ ಕಛೇರಿ, ಕೋಲಾರ - ೫೬೩ ೧೦೧.

'ಅಮರಾವತಿ' ಯ ಸತ್ಯಂ ಶಂಕರಮಂಚಿ

- ಸ. ರಘುನಾಥ

'ಅಮರಾವತಿ ಕಥಲು' ಕರ್ತೃ ಸತ್ಯಂ ಶಂಕರಮಂಚಿ (೧೯೩೭-೮೭) ವೃತ್ತಿಯಲ್ಲಿ ವಕೀಲರಾಗಿದ್ದವರು. ಆಕಾಶವಾಣಿಯಲ್ಲೂ ಕೆಲಕಾಲ ಉದ್ಯೋಗಿಯಾಗಿದ್ದವರು. 'ಕಾರ್ತೀಕ ದೀಪಾಲು' ಇವರ ಇನ್ನೊಂದು ಕಥಾ ಸಂಕಲನ. 'ರೇಪಟಿ ದಾರಿ', 'ಶೀತ ಸ್ವಾಗತಾಲು', 'ಆಖರಿ ಪ್ರೇಮಲೇಖ' ಹಾಗೂ 'ಎಡಾರಿಲೋ ಕಲುವ ಪೂಲು' ಇವರ ಮುಖ್ಯ ಕಾದಂಬರಿಗಳು. ಅಂಕಣ ಬರಹಗಾರರಾಗಿಯೂ ಇವರು ಖ್ಯಾತರು. ಆದರೂ ಶಂಕರಮಂಚಿಯವರನ್ನು ಆಂಧ್ರದ ಮನೆ ಮಾತಾಗಿಸಿದ್ದು ಅಮರಾವತಿ ಕಥೆಗಳೇ. ಇವರಲ್ಲಿರುವ ಒಂದು ನೂರು ಕಥೆಗಳೂ 'ಆಂಧ್ರ ಜ್ಯೋತಿ' ವಾರ ಪತ್ರಿಕೆಯಲ್ಲಿ ಪ್ರಕಟವಾಗಿ ೧೯೭೮ ರಲ್ಲಿ ಪುಸ್ತಕ ರೂಪಕ್ಕಿಳಿದು, ಜನಪ್ರಿಯವಾಗಿ ಮೂರು ಮುದ್ರಣಗಳನ್ನು ಕಂಡಿತು. ಈ ಕೃತಿಗೆ ೧೯೭೯ ರಲ್ಲಿ ತೆಲುಗು ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ.

ಪ್ರಸಿದ್ಧ ಚಿತ್ರನಿರ್ದೇಶಕ ಶ್ರೀ ಶ್ಯಾಮ್ ಬೆನಗಲ್‌ರವರು ಅಮರಾವತಿ ಕಥೆಗಳನ್ನು ದೂರದರ್ಶನಕ್ಕಾಗಿ ಹಿಂದಿಯಲ್ಲಿ ಚಿತ್ರಿಸಿದ್ದಾರೆ. ಈ ಟಿವಿ ಮೂಲಕ ತೆಲುಗಿನಲ್ಲೂ ಪ್ರದರ್ಶನಗೊಂಡಿದೆ. ಅಮರಾವತಿ ಕಥೆಗಳು ಈಗ ಮರಾಠಿ ಭಾಷೆಗೂ ಅನುವಾದಗೊಳ್ಳುತ್ತಿದೆ.

ಈ ಕಥೆಗಳ ಬಗ್ಗೆ ಖ್ಯಾತ ಸಾಹಿತಿ ಮುಳ್ಳಪೂಡಿ ವೆಂಕಟರಮಣರು ಹೇಳುವಂತೆ, 'ಇವು ತೆಲುಗರನ್ನು ಕುರಿತು, ಈ ನೆಲದ ನದಿ, ದೇವರುಗಳನ್ನು ಕುರಿತು ತೆಲುಗಿನಲ್ಲಿ ರಚಿಸಿದ ಕಥೆಗಳೇ ಆದರೂ ಎಲ್ಲ ದೇಶಗಳ ಕಥೆಗಳೂ ಆಗಿವೆ.'

ಬಿಸಿಲು ಬೆಳದಿಂಗಳ ಸಾಕ್ಷಿಯಾದ, ಚರಿತ್ರೆಯ ಚಿರಂತನ ಗಾಯಕಿಯಾದ ಕೃಷ್ಣೆ ಇಲ್ಲಿದ್ದಾಳೆ. ಚರಿತ್ರೆ - ವರ್ತಮಾನಗಳೆರಡರ ದಂಡೆಯ ನಡುವೆ ಜೀವಾಧಾರ ಜಲವನ್ನು ನಂಬಿ ಬದುಕುವ ಜನರ ಸಂಸ್ಕೃತಿಯೇ ಇಲ್ಲಿ ಕಥೆಗಳಾಗಿ ಹರಿದಿವೆ. ಕೃಷ್ಣೆಯ ನದೀ ನಾಗರಿಕತೆಯ ದಿನಚರಿಯೇ ಕಥೆಯ ಪುಟ ಪುಟಗಳಲ್ಲೂ ಅರಳಿದೆ.

ಸ್ವಯಂ ಕೃಷ್ಣೆಯೇ ಪಾತ್ರವಾಗಿರುವ ಇಲ್ಲಿ ನರನೇ ಶಿವ, ಮಾನವನೇ ಮಾಧವ. ಆಂಧ್ರದ ಗುಂಟೂರು ಜಿಲ್ಲೆಯ ಐತಿಹಾಸಿಕ ಸ್ಥಳವಾದ ಅಮರಾವತಿಯೇ ಕೇಂದ್ರ ಬಿಂದು. ಕೃಷ್ಣೆಯ ನವಿರು ಅಲೆಗಳಂತಹ ಹಾಸ್ಯದೊಂದಿಗೆ ಹೆಣೆದುಕೊಂಡಿರುವ ಅಮರಾವತಿ ಕಥೆಗಳು ೭೦ ರ ದಶಕದ ತೆಲುಗು ಕಥಾಲೋಕದ ಅಲೆಯೊಂದನ್ನು ಅರ್ಥೈಸಿಕೊಳ್ಳಲು ಓದುಗರಿಗೆ ನೆರವಾಗಬಲ್ಲವು.

ರಘುನಾಥ ಅನುವಾದಿಸಿದ ಹತ್ತು ಅಮರಾವತಿ ಕಥೆಗಳು

೧. ಧರ್ಮಪಾಲ

ಅದು ಬ್ರಿಟೀಷರ ಕಾಲ.

ಪಟೇಲ ಹನುಮಯ್ಯನ ಹೆಸರು ಹೇಳಿದರೆ ಊರೇ ನಡುಗಿ ಕೈಕಟ್ಟಿ ನಿಲ್ಲುತ್ತಿತ್ತು. ಧ್ವಜಸ್ತಂಭದಂತೆ ಏಳಡಿಗಳ ಮನುಷ್ಯ. ಕಪ್ಪನೆ ಕಪ್ಪು. ಬಿಚ್ಚಿಕೊಂಡ ಹತ್ತಿಕಾಯಿಯಂಥ ಕಣ್ಣು. ಅದರಲ್ಲಿ ನೆತ್ತರು ಜಿನುಗಿದಂತೆ ಕೆಂಪು. ಉಬ್ಬು ಕೆನ್ನೆಗಳ ಎರಡು ಬದಿಯಲ್ಲೂ ಚಾಮರದಂತೆ ಹರಡಿದ ದಪ್ಪ ಮೀಸೆ. ಹನುಮಯ್ಯ ಒಂದು ಕೈಯಲ್ಲಿ ತೀಡಿಕೊಳ್ಳುತ್ತಿದ್ದರೆ ಇಡೀ ಕೆನ್ನೆಯನ್ನೇ ಸವರಿಕೊಳ್ಳುತ್ತಿರುವಂತೆ ಕಾಣುತ್ತಿತ್ತು. ಅಜಾನುಬಾಹುವಾದ ಹನುಮಯ್ಯ ಒಂದು ಕೈಲಿ ಪಂಚೆಯ ಸೆರಗನ್ನು ಹಿಡಿದು ಇನ್ನೊಂದು ಕೈಲಿ ಅಣಸುಗಳು ಬಿಗಿದ ಕೋಲು ಹಿಡಿದು ದೊಡ್ಡ ಬೀದಿಯಲ್ಲಿ ನಡೆದು ಬರುತ್ತಿದ್ದರೆ ಬೀದಿಯೇ ಗಪ್ ಚುಪ್ ಆಗಿಬಿಡುತ್ತಿತ್ತು. ಬೇವಿನ ಮರದಡಿ ಇಸ್ಪೀಟು ಆಡುತ್ತಿದ್ದವರು ಓಟ ಹೊಡೆಯುತ್ತಿದ್ದರು. ದಣಿವಾರಿಸಿಕೊಳ್ಳಲು ಗಾಡಿ ನಿಲ್ಲಿಸಿದ ಕೂಲಿಗಳು ದಬದಬ ಎದ್ದು ಗಾಡಿ ತಳ್ಳಿಕೊಂಡು ಹೋಗುತ್ತಿದ್ದರು. ಚಿಲ್ಲರೆ ಅಂಗಡಿಗಳಲ್ಲಿ ತೂಕದಲ್ಲಿ ಮೋಸ ಮಾಡದೆ ತೂಗುತ್ತಿದ್ದರು. ಕೊಸರು ಕೇಳಿದರೆ ಸಿಡುಕದೆ ಬೆಲ್ಲದ ಚೂರು ಕೊಡುತ್ತಿದ್ದರು. ಜನ ಪಕ್ಕಕ್ಕೆ ಸರಿದು ಧ್ವನಿ ತಗ್ಗಿಸಿ ಮಾತಾಡಿಕೊಳ್ಳುತ್ತಿದ್ದರು. ಆಳುಗಳು ಮುಂದೆ ನಡೆಯುತ್ತ ಹನುಮಯ್ಯ ಬೀದಿಗಳಲ್ಲಿ ಹಾದು ಹೋಗುತ್ತಿದ್ದರೆ ಊರಿಗೆ ಊರೆ ಮೌನದಲ್ಲಿ ಇದ್ದಂತೆ ತೋರುತ್ತಿತ್ತು. ದೊರೆಗಳ ದೃಷ್ಟಿಯಲ್ಲಿ ಹನುಮಯ್ಯ ದೊಡ್ಡ ವ್ಯಕ್ತಿ. ಆ ಪರಗಣೆಯಲ್ಲಿ ಎಲ್ಲಿಯಾದರೂ ಶಿಸ್ತು ಬಾಕಿ ಇರುತ್ತಿತ್ತೊ ಏನೋ ಆದರೆ ಹನುಮಯ್ಯನ ಅಧಿಕಾರದ ವ್ಯಾಪ್ತಿಯಲ್ಲಿ ಬಾಕಿಯ ಮಾತೇ ಇಲ್ಲ.

ಹನುಮಯ್ಯನ ಶಿಸ್ತು ವಸೂಲಿ ಕ್ರಮ ವಿಚಿತ್ರವಾಗಿತ್ತು. ಓದಿದವರ, ದೊಡ್ಡ ಕುಳಗಳ ಹತ್ತಿರ ವಸೂಲಿಗೆ ಬಂದನೆಂದುಕೊಳ್ಳಿ. ನೇರವಾಗಿ ಬಂದು ವರಾಂಡದಲ್ಲಿ ಕೂತು ಬಿಡುತ್ತಿದ್ದ. "ಏನ್ರಿ ಪುನ್ನಯ್ಯನವರೇ, ನನ್ನನ್ನ ಈ ಊರಲ್ಲಿ ಇರು ಅಂತೀರೊ, ಹೋಗಿಬಿಡು ಅಂತೀರೊ? ಹೇಳಿ, ನೀವೇ ಹೇಳಿ. ಅಮ್ಮಾ ಕೊಂಚ ಮಜ್ಜಿಗೆ ಕೊಡಿ. ಬಾಯಾರಿ ಹೋಗಿದೆ" ಎಂದು ಒಳಕ್ಕೆ ಕೇಳಿಸುವಂತೆ ಕೂಗು ಹಾಕಿ, "ಮೇಲಿನೋರು ನಂಗೆ ನೇಣು ಬಿಗೀತಿದ್ರೆ ನಾನು ಸಾಯ್ತಿದ್ದೀನಿ. ನೀವೇನೋ ಶಿಸ್ತು ಕಟ್ಟೋದಿಲ್ಲ. ಇವತ್ತು ಕಟ್ಟದೆ ಹೋದರೆ ನನ್ನ ಊಟ ಇಲ್ಲೆ" ಅಂದು ಟಿಕಾಣಿ ಹೂಡುತ್ತಿದ್ದ. ಆ ಮಾತಿಗೆ ಪುನ್ನಯ್ಯನವರು ನಕ್ಕು ಶಿಸ್ತು ಕಟ್ಟಿ ಊಟಕ್ಕೆ ಇರು ಎಂದರೆ ಹನುಮಯ್ಯ ನಗುತ್ತ ಮೇಲೆದ್ದು "ಸರಿಯಾಯ್ತು, ಇನ್ನೂ ವಸೂಲಿ ಇಲ್ಲವ?" ಅನ್ನುತ್ತ ಹೊರಟುಬಿಡುತ್ತಿದ್ದ. ಇನ್ನು ಸಾಮಾನ್ಯ ರೈತರಲ್ಲಿಗೆ ಬಂದು "ಸನ್ಯಾಸಿ ಮುಂಡೆಮಕ್ಕಳೆ! ಸರಕಾರದ ಶಿಸ್ತು ಬಿಡ್ತೀರೇನ್ರೋ? ಹೊಟ್ಟೆಗೆ ತಿಂತಿದ್ದೀವಲ್ಲ, ನಮಗೆ ನೀತಿ

ಇಲ್ಲವೇನೋ!" ಅನ್ನುತ್ತ ನಾಟುವಂತೆ ಬೈದು ಶಿಸ್ತು ವಸೂಲಿ ಮಾಡುತ್ತಿದ್ದ. ತನ್ನ ಉಸಿರು ಇರೋತನಕ ತನ್ನ ಊರಿನಲ್ಲಿ ನ್ಯಾಯ ತಪ್ಪುವುದು ಸಾಧ್ಯವಿಲ್ಲ ಅನ್ನುತ್ತಿದ್ದ.

ಒಮ್ಮೆ ಚಲಮಯ್ಯ ಬೇಕೆಂದೆ ತನ್ನ ಎಮ್ಮೆಗಳನ್ನು ರಾಮಯ್ಯನ ಬೀಡಿನಲ್ಲಿ ಮೇಯಲು ಬಿಟ್ಟ. ರಾಮಯ್ಯ ಬಂದು ಹನುಮಯ್ಯನಿಗೆ ಹೇಳಿದ ಕೂಡಲೆ ಅವನು ಆ ಎಮ್ಮೆಗಳನ್ನು ದೊಡ್ಡಿಗೆ ಹೊಡೆಸಿದ. ಸಂಜೆಯಾಯಿತು. ಚಲಮಯ್ಯ ಬಂದು ಗೋಗರೆದ. "ತಪ್ಪಾಯ್ತಯ್ಯ, ನನ್ನ ಎಮ್ಮೆಗಳನ್ನು ಬಿಡಿಸಿಕೊಡಯ್ಯ. ಕರಾವಿನ ಹೊತ್ತಾಯ್ತು. ಹಾಲು ಹಿಂಡಿ ಮಾರಿದರೇನೆ. ಇಲ್ಲಾಂದ್ರೆ ನಾಳೆಗೆ ನುಚ್ಚಿನ ಮುಖ ಕಾಣಲಾಗದಯ್ಯ" ಎಂದು ಹನುಮಯ್ಯನ ಕಾಲು ಕಟ್ಟಿದ. "ತಪ್ಪು ಕೆಲಸ ಮಾಡೋವಾಗ ಈ ಬುದ್ದಿಗೆ ಏನಾಗಿತ್ತೊ?" ಎಂದು ಹೂಂಕರಿಸಿ, ಆಳುಗಳನ್ನು ಕರೆದು "ಆ ಎಮ್ಮೆಗಳ ಹಾಲು ಹಿಂಡಿ ನಮ್ಮನೇಗೆ ಕೊಡ್ರೋ" ಅಂದ ಹನುಮಯ್ಯ.

ಆ ಮರುದಿನ ಎಮ್ಮೆಗಳನ್ನು ಚಲಮಯ್ಯನಿಗೆ ಒಪ್ಪಿಸುತ್ತ "ನೀತಿಯಿಂದ ಬದುಕೊ ಕಳ್ಳಬಡವ. ಇಗೊ, ನಿನ್ನೆಯ ಹಾಲಿನ ಕಾಸು" ಎಂದು ಹಣ ಕೊಟ್ಟು ಕಳುಹಿಸಿದ.

ಒಂದು ಸಲ ಮುತ್ಯಾಲಮ್ಮನ ಮೆರವಣಿಗೆಯಲ್ಲಿ ಕಳುವಾಯಿತು. ಬಲಿಕೊಟ್ಟ ಮಿಗವನ್ನು ಸಮಭಾಗಗಳಾಗಿ ಹಂಚಿಕೊಂಡರು. ಕಡೆಯಲ್ಲಿ ತೆಗೆದುಕೊಳ್ಳುವಾಗ ನೋಡಿದರೆ ಒಂದು ಪಾಲು ಕಡಿಮೆಯಾಗಿತ್ತು. ಯಾರೋ ಕದ್ದಿದ್ದರು. ಹುಡುಕಿ ಎಂದರು. ಚಪ್ಪರವೆಲ್ಲಾ ಹುಡುಕಾಡಿದರು. ಕಂಕುಳಲ್ಲಿ ಗಂಟು ಇಟ್ಟುಕೊಂಡು ಓಡುತ್ತಿದ್ದ ಕಳ್ಳನನ್ನು ಹಿಡಿದುಕೊಂಡರು. ಅವನು ನೆರೆಯೂರಿನ ಪೋಲಯ್ಯ. ಹೆಡೆಮುರಿ ಕಟ್ಟಿ ಅವನನ್ನು ಹನುಮಯ್ಯನ ಬಳಿಗೆ ಕರೆತಂದರು.

"ಕಳ್ಳತನ ಯಾಕೊ ಮಾಡಿದ್ದು?" ಗುಡುಗಿದಂತೆ ಕೇಳಿದ ಹನುಮಯ್ಯ.

"ತಪ್ಪಾಯ್ತು ಅಯ್ಯ, ಮಾಂಸ ಬೇಸಿಕೊಳ್ಳೋಣ ಅಂದುಕೊಂಡೆನಯ್ಯ" ಎಂದು ತಲೆ ತಗ್ಗಿಸಿ ಹೇಳಿದ ಪೋಲಯ್ಯ.

"ಹಾಗಂತ ಕದೀತಿಯೇನೋ ನೀತಿಗೆಟ್ಟಮಗನೆ. ಅವನನ್ನ ಮರಕ್ಕೆ ಕಟ್ಟಿ ಹಾಕಿ ಹೊತ್ತು ಹುಟ್ಟಿದಾಗ ಬಿಡಿರೋ" ಎಂದು ತೀರ್ಪು ನುಡಿದ.

ಹನುಮಯ್ಯನಿಗೆ ರಾತ್ರಿ ಇಡೀ ನಿದ್ದೆ ಹತ್ತಲಿಲ್ಲ. ಬೆಳಿಗ್ಗೆ ಪೋಲಯ್ಯನನ್ನು ಕರೆಸಿಕೊಂಡು "ಸ್ನಾನ ಮಾಡಿ ಬಾ" ಎಂದು ಹೇಳಿ ತನ್ನ ಮನೆಯಲ್ಲಿ ಮಾಂಸದ ಊಟ ಹಾಕಿಸಿ "ಲೇ, ತಿಂಡಿ ಮೇಲೆ ಆಸೆಯಿದ್ರೆ ಮಾಡಬೇಕಾದ್ದು ಕಳ್ಳತನ ಅಲ್ಲ. ದುಡಿದು ಸಂಪಾದ್ನೆ ಮಾಡಿ ತಿನ್ನೊ. ಹೋಗು" ಎಂದು ಕಳುಹಿಸಿದ.

ಕೆಲ ದಿನಗಳಿಗೆ ಬರ ಬಂದಿತು. ಬೆಳೆಗಳು ಬೆಳೆಯಲಿಲ್ಲ. ಹಸುರು ಹೊಲಗಳು ಬಿರುಕು ಬಿಟ್ಟವು. ರೈತರಲ್ಲಿ ಕೆಲವರು ಗುಳೆ ಎದ್ದರು. ತಿನ್ನಲು ಕಾಳಿಲ್ಲ, ದನಗಳಿಗೆ ಮೇವಿಲ್ಲ. ಅನ್ನ

ತಿನ್ನುವವರು ಜೋಳದ ರೊಟ್ಟಿ ತಿನ್ನುತ್ತಿದ್ದರು. ಆದರೆ ಸರಕಾರದವರು ಸಕ್ರಮವಾಗಿ ಶಿಸ್ತು ವಸೂಲು ಮಾಡಬೇಕೆಂದು ಪಟ್ಟು ಹಿಡಿದರು. ಹನುಮಯ್ಯ ದೊಡ್ಡ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡ. ನಯ-ಭಯದಲ್ಲಿ ಹೇಗೆ ವಸೂಲಿ ಮಾಡಿದರೂ ಬಹಳಷ್ಟು ಶಿಸ್ತು ಬಾಕಿ ಉಳಿಯಿತು.

ಮೇಲಧಿಕಾರಿಗಳಿಗೆ ಕೋಪ ಉಂಟಾಯಿತು. ಶಿಸ್ತು ಕಟ್ಟದವರ ಮನೆಗಳನ್ನು ಜಪ್ತಿ ಮಾಡು ಎಂದರು. ಹನುಮಯ್ಯ ಕಣ್ಣೀರಿನೊಂದಿಗೆ ಜಪ್ತಿ ಮಾಡಿದ. ತಂಬಿಗೆ ತಪ್ಪಲೆಗಳನ್ನು ಬೀದಿಗೆ ಹಾಕಿಸಿದ. ಹರಾಜು ಕೂಗಿಸಿದ. ಆದರೆ ಕೊಳ್ಳುವವನೆಲ್ಲಿ? ಶಿಸ್ತಿನ ಬಾಕಿ ಗಿಟ್ಟಲಿಲ್ಲ. ಮೇಲಿನವರು ಉರಿದು ಬಿದ್ದರು. ಬಾಕಿದಾರ ರೈತರನ್ನು ಮರಗಳಿಗೆ ಕಟ್ಟಿ ಇಪ್ಪತ್ತೈದು ಛಡಿ ಏಟು ಹೊಡೆವ ಹುಕುಂ ಹೊರಟಿತು. ಇದು ತಿಳಿದು ಕೆಲವರು ಓಡಿ ಹೋದರು. ಬೆಳಗ್ಗೆ ರೆವಿನ್ಯೂ ಇನ್ಸ್‌ಪೆಕ್ಟರ್ ಬಂದ. ಒಂದಿಪ್ಪತ್ತು ಮಂದಿ ರೈತರನ್ನು ಹುಣಿಸೆ ತೋಪಿಗೆ ಕರೆದೊಯ್ದರು. ಎಲ್ಲರನ್ನೂ ಮರಗಳಿಗೆ ಕಟ್ಟಿಹಾಕುತ್ತಿದ್ದರು. ಹನುಮಯ್ಯನೇ ನಿಂತು ಕಟ್ಟಿಸುತ್ತಿದ್ದ. ಎಲ್ಲರನ್ನು ಕಟ್ಟಿಹಾಕಿದ್ದಾಯಿತು. ತಾನು ಇನ್ನೊಂದು ಮರಕ್ಕೆ ಒರಗಿಕೊಂಡು ನಿಂತು "ನನ್ನನ್ನೂ ಕಟ್ರೋಲೇ" ಅಂದ. "ಅಯ್ಯಾ" ಎಂದು ಆಳುಗಳು ಕಾಲಿಗೆ ಬಿದ್ದರು. "ಕಟ್ರೋ" ಎಂದು ಅಜ್ಞಾಪಿಸಿದ ಹನುಮಯ್ಯ.

ತನ್ನನ್ನೂ ಕಟ್ಟಿಹಾಕಿಸಿಕೊಂಡು ಅಧಿಕಾರಿಗಳಿಗೆ ಕೂಗಿ ಹೇಳುತ್ತಿದ್ದ "ಹೊಡೀರಿ, ನನ್ನನ್ನೂ ಹೊಡೀರಿ! ನನ್ನನ್ನೂ ಹೊಡೀರಯ್ಯಾ. ಒಪ್ಪೊತ್ತಿನ ಗಂಜಿಯಲ್ಲಿ ಬದುಕುತ್ತಿರುವ ಆ ರೈತರಿಗೆ ನಾನೂ ಸಮಾನನೆ. ಅಯ್ಯಾ ನಮ್ಮ ಹತ್ತಿರ ದುಡ್ಡಿಲ್ಲ. ಆದರೆ ಏಟಿಗೆ ಸಿದ್ಧರಿದ್ದೇವಯ್ಯಾ!"

ದಿಗ್ಗನೆದ್ದ ಅಧಿಕಾರಿ ಈ ವರ್ಷಕ್ಕೆ ಶಿಸ್ತು ಮಾಫೀ ಮಾಡಿಸುತ್ತೇನೆಂದು ಹೇಳಿ ಹೊರಟು ಹೋದ.

೨. ಯಾರಿಗೂ ಹೇಳಬೇಡ

ದುರ್ಗಾಂಬ ಹೈಕ್ಲಾಸ್ ಕಾಫಿ ಹೋಟೆಲ್‌ನ ಮಾಲೀಕ ಶಂಕರಯ್ಯ ಆತುರ ಆತುರವಾಗಿ ತಿಂಡಿ ಕೊಡುತ್ತಿದ್ದಾನೆ. ಶಂಕರಯ್ಯ ಹೆಸರಿಗೆ ಯಜಮಾನನೇ ಆದರೂ ಪಾರುಪತ್ಯವೆಲ್ಲ ಅವನ ಹೆಂಡತಿ ಸುಬ್ಬಮ್ಮನದು. ಸುಬ್ಬಮ್ಮ ಪಟ್ಟಣದ ಹೆಣ್ಣಾದುದರಿಂದ ಹಳ್ಳಿಯವನಾದ ಶಂಕರಯ್ಯನಿಗೆ ಏನೇನೂ ತಿಳಿಯದೆಂದು ತೀರ್ಮಾನಿಸಿಕೊಂಡು ಎಲ್ಲದರ ಅಜಮಾಯಿಷಿ ಮಾಡುತ್ತಿರುತ್ತಾಳೆ. ತನ್ನ ಪಟ್ಟಣದ ನಡವಳಿಕೆಗೆ ರುಜುವಾತಾಗಿ ಮಾತಿನ ನಡು ನಡುವೆ ಇಂಗ್ಲೀಷ್ ಪದಗಳನ್ನು ಬಳಸುತ್ತಾಳೆ. ಮೇಲಾಗಿ ದೋಸೆ ಹಾಕೋದು ತಾನು. ಎಂಥಾ ಗಂಡನೇ ಆದರೂ ಕೊಡೋನು ಅಲ್ಲವೆ.

ಶಂಕರಯ್ಯ ಒಳಕ್ಕೆ ಬಂದವರನ್ನು ವರಸೆ ಹಿಡಿದು ಕರೆದು ಕೂರಿಸುತ್ತಿದ್ದಾನೆ. "ಬಾವಾ ಇಲ್ಲಿ ಕೂರು, ಬಾವಾ ಇವತ್ತು ಇಷ್ಟು ತಡ ಆಯಿತೇಕೆ?" ಹೀಗೆಯೆ. ಇನ್ನು ವರಂಡಾದಿಂದ ಅಡುಗೆ ಮನೆಗೆ ಕೇಳಿಸುವಂತೆ ಹಾಕುವ ಕೇಕೆ ಓಗಿರುತ್ತೆ. "ಪುಲ್ಲಾರಾವು ಬಂದರು, ಒಂದು ಅಡೆ....ಶುಂಠಿ, ಹಸಿ ಮೆಣಸಿನಕಾಯಿ ಜಾಸ್ತಿ. ಎಲ್ಲಾರಾವು ಈರುಳ್ಳಿ ರೋಷ್ಟು" ಎಂದು ಶಂಕರಯ್ಯ ಹೇಳುತ್ತಿದ್ದರೆ ಪುಲ್ಲಾರಾವು, ಎಲ್ಲಾರಾವು ಉಬ್ಬಿ ಹೋಗುತ್ತಿದ್ದರು.

ಒಳಗೆ ಸುಬ್ಬಮ್ಮ ಮಗುಚುವ ಕೈಯಿಂದ ಕಾವಲಿಯ ಮೇಲೆ ಠಾಂಗೆಂದು ಬಡಿಯುತ್ತಲೇ 'ದೋಸೆ ರೆಡಿ' ಇಲ್ಲವೆ 'ರೆಡಿ ದೋಸೆ' ಎನ್ನುತ್ತ ಎದುರು ಕೂಗು ಹಾಕುವಳು. ಬಂದವರಿಗೆ ತನ್ನ ಧ್ವನಿ ಕೇಳಿಸುವುದು ಅವಳಿಗೊಂದು ಮೋಜು. ಶಂಕರಯ್ಯ ಓಡೋಡುತ್ತ ಎಲೆಯ ಮೇಲೆ ದೋಸೆ ಹಾಕಿ ತಂದು ಕೊಟ್ಟರೆ ಪುಲ್ಲಾರಾವು, ಎಲ್ಲಾರಾವುಗಳು ತಮ್ಮ ಹೆಸರಿನಲ್ಲಿ ವಿಶೇಷವಾಗಿ ಜೇಯಿಸಿದ ಆ ದೋಸೆಗಳನ್ನು ಸಂಭ್ರಮದಿಂದ ತಿನ್ನುತ್ತಿದ್ದರೆ, ಕೇಳದೆಯೆ ಉಪ್ಪಿಟ್ಟನ್ನು ತಂದು ಬಡಿಸುತ್ತಿದ್ದ. ಚಟ್ನಿ ಉಳಿದು ಬಿಟ್ಟಿದೆಯೆಂದು ಎರಡನೇ ಪ್ಲೇಟು ಉಪ್ಪಿಟ್ಟನ್ನು ಹಾಕಿಬಿಡುತ್ತಿದ್ದ. ಆದರೆ ಅದೇ ಉಪ್ಪಿಟ್ಟು ಉಳಿದಿದ್ದರೆ ಚಟ್ನಿ ಹಾಕಲು ಕೈ ಆಡಿಸುತ್ತಿರಲಿಲ್ಲ.

'ಚಟ್ನಿ ಮುಗಿದು ಹೋದರೆ ಸರಕನ್ನೇನು ಮಾಡಿಕೊಳ್ಳೋದು?' ಅಂದುಕೊಳ್ಳುತ್ತಾ ಚಮಚದಿಂದ ಎರಡು ಹನಿ ಉದುರಿಸುತ್ತಿದ್ದ. ಪ್ರತಿ ಕಾಲುಗಂಟೆಗೊಮ್ಮೆ ಚಟ್ನಿ ಬಟ್ಟಲಿಗೆ ನೀರು ಬೆರೆಸುತ್ತ ಬೀದಿಯತ್ತ ನೋಡುತ್ತಿದ್ದ. ಯಾತ್ರಿಕರು ಕಂಡು ಬಂದರೆ ಥಂಗನೆ ಬೀದಿಗೆ ನೆಗೆದು "ಇಡ್ಲಿ, ದೋಸೆ, ಉಪ್ಪಿಟ್ಟು ರೆಡಿ' ಅನ್ನುತ್ತ ಅವರ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದ.

'ತೆಂಗಿನಕಾಯಿ ತಗೋಬೇಕು, ಸ್ನಾನ ಮಾಡಬೇಕು' ಎಂದು ಅವರೆಂದರೆ ಆ ಮಾತನ್ನು ಕಿವಿಗೆ ಹಾಕಿಕೊಳ್ಳದೆ ರಾಮನಾಮದಂತೆ 'ಇಡ್ಲಿ ದೋಸೆ, ಉಪ್ಪಿಟ್ರೆಡಿ" ಅನ್ನುತ್ತ ಅವರು ಅಡಿ ಮುಂದಿಡಲು ಬಿಡುತ್ತಿರಲಿಲ್ಲ. ಹೋಗಲಿ ಟಿಫಿನ್ ಮಾಡಿಹೋಗೋಣ ಅನ್ನುವ ಸ್ಥಿತಿಗೆ ಅವರನ್ನ ತಂದು, ಮೂಗಿಗೆ ದಾರ ಹಾಕಿ ಹೋಟೆಲಿನೊಳಕ್ಕೆ ಎಳೆದು ತರುತ್ತಿದ್ದ.

ಒಂದು ದಿನ ಒಂದರೆ ಡಜನ್ ಹುಡುಗರು ಹೋಟೆಲಿಗೆ ನುಗ್ಗಿ ಬೇಕಾದಷ್ಟು ತಿಂದು, ಚಟ್ನಿ ಬಗ್ಗೆ ಜಗಳ ಆಡಿ, ತಪ್ಪು ಲೆಕ್ಕ ಹೇಳಿ, ಬೇಕೆಂದೇ ಶಂಕರಯ್ಯನೊಂದಿಗೆ ತಗಾದೆ ತೆಗೆದರು. 'ದೋಸೆಯ ಸೈಜು ಚಿಕ್ಕದು. ಆದ್ದರಿಂದ ಹಾಫ್ ರೇಟ್' ಅಂದರು. 'ಉಪ್ಪಿಟ್ಟಿನಲ್ಲಿ ಗೋಡಂಬಿ ಇರಲಿಲ್ಲವಾದ್ದರಿಂದ ಪೈಸಾ ಕೊಡಲ್ಲ' ಅಂದರು. ಮಾತಿಗೆ ಮಾತು ಬೆಳೆಯಿತು. 'ಟಾಪ್ ಎಬ್ಬಿಸ್ತೀವಿ' ಅಂದರು ಹುಡುಗರು. 'ಎಬ್ಬಿಸಿ ನೋಡೋಣ' ಎಂದು ಎದುರುಬಿದ್ದ ಶಂಕರಯ್ಯ. ಅನ್ನೋದೇನು, ಅವರಲ್ಲಿ ಒಬ್ಬ ಪೆನ್ಸಿಲ್ ಚೀಪಿಕೊಳ್ಳುವ ಚಾಕುವನ್ನು ಹೊರತೆಗೆದು ಚುಳ್ಳನೆ ಮೇಜಿಗೆ ಹೊಡೆದ. ಅದು ಮೇಜಿನ ಮೇಲೆ ಚಕ್ಕನೆ ನಿಂತಿತು. ಶಂಕರಯ್ಯನ ಮೈಯಲ್ಲಿ ಬೆವರೊಡೆಯಿತು. ಹೆಂಡತಿಯನ್ನು ನೋಡಿದರೂ, ಚಾಕುವನ್ನು ನೋಡಿದರೂ ಅವನ ಬಾಯಿಮಾತು ಬಿದ್ದು ಹೋಗುತ್ತೆ. ಅಳುಮುಖಬಿಟ್ಟು 'ಎಷ್ಟೋ ಅಷ್ಟು ಕೊಟ್ಟು ಹೋಗಿರಯ್ಯ' ಅಂದ. ಹುಡುಗರ ಗುಂಪು ತಮಗೆ ತೋಚಿದಷ್ಟು ಕೊಟ್ಟು ಹೋದದ್ದೇ ತಡ, ಮನೆಯೊಳಗಿನಿಂದ ಓಡಿ ಬಂದ ಸುಬ್ಬಮ್ಮ ಗಂಡನನ್ನು ಹೀಗೆ ತರಾಟೆ ತೆಗೆದುಕೊಂಡಳು-'ನೀನು ಗಂಡಸಾ? ಗಂಡಸಾ ನೀನು? ಆ ಫೈಟಿಂಗ್‌ನೋರಿಗೆ ಟಿಫನ್ ಯಾಕೆ ಕೊಟ್ಟೆ? ಆ ಬ್ಲಡೀಸ್ ಹಾಗೆ ಕೂಗಾಡ್ತಿದ್ರೆ ನಿನ್ನ ಬಾಯಿಗೇನಾಗಿತ್ತು. ನೀನು.....ನೀನು ಬ್ಲಡಿ...ನೀನು ಫೂಲ್, ನೀನು ಯೂಜ್ಲೆಸ್. ಹೋಗು ಅಂಗಡಿ ಮುಚ್ಚಿ ಕೃಷ್ಣೆಗೆ ಹೋಗಿ ಸ್ನಾನ ಮಾಡಿ ಬಾ, ಎಂದು ಅಟ್ಟಿಬಿಟ್ಟಳು.

ಶಂಕರಯ್ಯನಿಗೆ ಹೆಂಡತಿ ಬೈದಳೆಂದಲ್ಲ. ಇಂಗ್ಲೀಷಿನಲ್ಲಿ ಬೈದಳಲ್ಲ ಎಂಬ ನೋವು. ಆ ನೋವಿನಲ್ಲೇ ಕೃಷ್ಣೆಯ ದಡದ ಹುಣಿಸೆ ಮರದಡಿ ಕುಳಿತಾಗ ಅಲ್ಲಿ ಪುರಲೆ ಆಯುತ್ತಿದ್ದ ಮಲ್ಲಿ ಕಂಡಳು. ಮಲ್ಲಿ ಒಳ್ಳೇ ವಯಸ್ಸಿನಲ್ಲಿದ್ದಾಳೆ. ಇದ್ದಕ್ಕಿದ್ದಂತೆ ಶಂಕರಯ್ಯನಿಗೆ ಮಲ್ಲಿಯ ಮೇಲೆ ಮನಸ್ಸಾಯಿತು. ಅವಳ ಹತ್ತಿರ ಹೋಗಿ ಮೈ ನುಲಿಯುತ್ತ "ಏನೇ, ಏನು ಮಲ್ಲಿ ದಿನಕ್ಕೆಷ್ಟು ಸಂಪಾದಿಸ್ತಿದ್ದಿ? ಎಂದು ಕೇಳಿದ. 'ಎಷ್ಟು ಬಂದ್ರೇನು, ನೀನು ಆಗ್ತೀಯ? ತೀರುಸ್ತೀಯ?' ಅಂದಳು ಮಲ್ಲಿ.

"ಹೋಟೆಲ್ಲಿಗೆ ಬಾರೆ, ಉಪ್ಪಿಟ್ಟು ಕೊಡ್ತೀನಿ" ಅಂದ ಶಂಕರಯ್ಯ. ಅವನ ಹತ್ತಿರ ಎಂದೂ ಹಣ ಇರದು. ಹಾಗಾಗಿ ಆ ಮಾತು ಹೇಳಿದ. ಮಲ್ಲಿ ಚಕ್ಕನೆ ನೆಗೆದು ನಿಂತು, 'ನಂಗೆ ಉಪ್ಪಿಟ್ಟು ಕೊಡ್ತೀಯೇನೊ....ನನ್ನ ಬಾ ಅಂತ ಕರೀತೀಯೇನೋ....' ಅನ್ನುತ್ತ ಬೈಗುಳದ ರಾಗ ತೆಗೆದಳು. ಆ ಬೈಗುಳದೊಂದಿಗೆ ಅಳುವನ್ನೂ ಕೂಡಿಸಿದಳು. ಈ ಅಳು ಕೃಷ್ಣೆಯಲ್ಲಿ ಮೀಯುತ್ತಿದ್ದ ಪೊಲೀಸನ ಕಿವಿಗೆ ಬಿದ್ದಿತು. ಅವನು ಮೈಯನ್ನೂ ಒರೆಸಿಕೊಳ್ಳದೆ ಓಡಿ ಬಂದು, ಒದ್ದೆ ಬಟ್ಟೆಯಲ್ಲಿ ಶಂಕರಯ್ಯನ ಕೈಗಳನ್ನು ಕಟ್ಟಿ ಪೊಲೀಸ್ ಸ್ಟೇಷನ್ನಿಗೆ ಎಳೆದೊಯ್ದ.

ಗಂಟೆ ಹೊತ್ತು ಕಂಬಿಗಳ ಹಿಂದೆಯೆ. ವಾರದಷ್ಟು ಕಾಲ ತಿಂದ ಟಿಫನ್‌ಗೆ ವ್ಯವಹಾರ ಕುದುರಿದ ಮೇಲೆ ಆ ಪೋಲೀಸು ಶಂಕರಯ್ಯನನ್ನು ಬಿಡುಗಡೆ ಮಾಡಿದ.

ಆ ಮರುದಿನ ಬೆಳಿಗ್ಗೆ ಹೋಟೆಲು ಮುಚ್ಚಿ ಬೀದಿಯಲ್ಲಿ ಬರುತ್ತಿದ್ದಾಗ ಯಾರೋ ಶಂಕರಯ್ಯ ಎಂದು ಕರೆದರು. 'ಶಂಕರಯ್ಯ' ಅವನ ಬಳಿಗೆ ಹೋಗಿ, 'ರಾಮಯ್ಯ ಬಾವ, ಹುಣಸೆ ಮರದ ಅಡಿ ಮಲ್ಲಿಯನ್ನು ಮಾತಾಡಿಸಿದೆ ಅಷ್ಟೆ. ತಾಯಾಣೆ ನಾನೇನೂ ಮಾಡ್ಲಿಲ್ಲ. ಪೋಲೀಸ್ನೋನು ಕರಕೊಂಡು ಹೋದ. ಒಂದು ಗಂಟೆ ಒಳಗಿಟ್ಟು ಬಿಟ್ಟುಬಿಟ್ಟ. ನನ್ನಾಣೆ....ಯಾರಿಗೂ ಹೇಳಬೇಡ' ಅಂದು ಮುಂದಕ್ಕೆ ನಡೆದ.

ಇನ್ನಾರೋ "ಏ ಶಂಕರಯ್ಯ" ಎಂದರೆ ಅವನ ಹತ್ತಿರ ಹೋಗಿ "ಪುಲ್ಲಯ್ಯಣ್ಣ....ಹುಣಿಸೆ ಮರದ ಹತ್ತಿರ....." ಎನ್ನುತ್ತ ತಾನೇ ಪಾಡೆಲ್ಲ ಹಾಡಿ ಯಾರಿಗೂ ಹೇಳಬೇಡವೆಂಬ ಪಲ್ಲವಿಯೊಂದಿಗೆ ಮುಕ್ತಾಯ ಹಾಡಿ ಆಣೆಭಾಷೆ ತೆಗೆದುಕೊಂಡ.

ಹೀಗೆ ಕರೆದವರಿಗೆ, ಕರೆಯದವರಿಗೆ ತಾನಾಗಿಯೆ ಕಥೆಯನ್ನೆಲ್ಲ ಹೇಳುತ್ತ ಊರಿಗೆಲ್ಲ ಸಾರಿಸಿಕೊಂಡ ಮರುದಿನಕ್ಕೆ ವಿಷಯ ಸುಬ್ಬಮ್ಮನ ಕಿವಿಗೆ ಬಿದ್ದಿತು. ಭದ್ರಕಾಳಿಯಾಗಿ ತಿಂಡಿ ಮಾಡುವುದು, ಕೊಡುವುದು ತಾನೇ ಮಾಡಿಕೊಳ್ಳುತ್ತ ಒಂದು ವಾರ ಗಂಡನ ಕೈಲಿ ಮುಸುರೆ ತೊಳೆಸಿದಳು. ಮುಸುರೆ ತಿಕ್ಕುತ್ತ ಶಂಕರಯ್ಯ ಅಚ್ಚರಿಗೊಂಡ. ಯಾರಿಗೂ ಹೇಳಬೇಡ ಎಂದು ಆಣೆಭಾಷೆ ಮಾಡಿಸಿಕೊಂಡಿದ್ದೆನಲ್ಲ....

೩. ಯಾರು ಹೋಗೋದು?

"ಯಾರು ಹೋಗೋದು......?" ಮೊದಲನೇ ಪ್ರಾಕಾರದ ವಿಮಾನ ಗೋಪುರದ ಪಕ್ಕದಿಂದ ಕೊರಳು ಕೇಳಿಬರುವುದು.

'ನಾನೇ ಸ್ವಾಮಿ' ಎಂದು ಸೊಪ್ಪು ಮಾರಲು ಬಂದ ಹುಡುಗ ಉತ್ತರಿಸುವನು.

'ಇಲ್ಲಿ ಬಾರಪ್ಪ' ಎಂದು ಕರೆದ ಸೂರಯ್ಯ ಸ್ವಾಮಿಗಳು, 'ಮಕ್ಕರಿ ಇಳಿಸು' ಅನ್ನುವರು. ಹುಡುಗ ಮಕ್ಕರಿ ಇಳಿಸಿದ ಮೇಲೆ 'ಕುಶಿಕಪಾಡಿನವನೇನು' ಎಂದು ವಿಚಾರಿಸುವರು. 'ಹೌದು ಸ್ವಾಮಿ ಈಗಲೆ ರೇವು ದಾಟಿ ಬಂದದ್ದು' ಅನ್ನುವನು. ಸೂರಯ್ಯ ಸ್ವಾಮಿಗಳು ಅವನನ್ನೆ ದಿಟ್ಟಿಸುತ್ತ 'ಸ್ವಾಮಿಗೆ ದಂಟಿನ ಸೊಪ್ಪು ತಿನ್ನುವ ಇಚ್ಛೆಯಾಗಿದೆ. ನಾಲ್ಕು ಕಟ್ಟು ಅರ್ಪಿಸಿಕೊ' ಅನ್ನುವರು.

ಆಗೋಲ್ಲ ಅನ್ನುವುದಾಗದೆ ಅವನು ನಾಲ್ಕು ಕಟ್ಟು ಕೊಟ್ಟರೇ 'ಇನ್ನೆರಡು ಕಟ್ಟು ಅರ್ಪಿಸಿಕೊ, ವ್ಯಾಪಾರ ಜೋರಾಗಿ ಆಗುತ್ತೆ' ಅನ್ನುವರು. ಅವನು ಮತ್ತೆರಡು ಕಟ್ಟು ಕೊಟ್ಟು ಉಸ್ಸೆಂದು ಮಕ್ಕರಿಯನ್ನು ತಲೆಗಿಟ್ಟು ಹೊರಟಾಗ 'ನಾರಾಯಣ,ನಾರಾಯಣ' ಎಂದು ಆಶೀರ್ವದಿಸುತ್ತಿದ್ದರು.

ಗುಡಿಗೆ ಹೋಗಿಬರುವವರು ಮೊದಲ ಪ್ರಾಕಾರದ ಮೂಲಕವೆ ಹೋಗಿ ಬರಬೇಕಿತ್ತು. ಹಾಗೆ ಬಂದು ಹೋಗುವವರಾರು ಸೂರಯ್ಯಸ್ವಾಮಿಗಳ ಕರೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಚಿಲ್ಲರೆ ಅಂಗಡಿ ಸುಬ್ಬಯ್ಯ ಗುಡಿಯಿಂದ ಹೊರಬರುತ್ತಿದ್ದ.

'ಯಾರು ಹೋಗೋದು.....?' ಸ್ವಾಮಿಗಳು ಕರೆದರು.

ಸುಬ್ಬಯ್ಯನ ಗುಂಡಿಗೆ ಕ್ಷಣ ನಿಂತಿತು. ಇನ್ನು ತಪ್ಪಿಸಿಕೊಳ್ಳಲು ಆಗದೆಂದು ಹೋಗಿ ಕುಳಿತ.

'ವ್ಯಾಪಾರ ಚೆನ್ನಾಗಿ ನಡೆಯುತ್ತ? ಮಕ್ಕಳು ಚೆನ್ನಾಗಿದ್ದಾರ?' ಎಂದು ಕುಶಲ ಪ್ರಶ್ನೆ ಕೇಳಿದ ಸ್ವಾಮಿಯವರು ಕರೆದ ಉದ್ದೇಶವನ್ನು ಪ್ರಕಟಿಸಿದರು.' ಸ್ವಾಮಿಗಿಂದು ವಡೆ ತಿನ್ನುವ ಬಯಕೆಯಾಗಿದೆ' ಎಂದರು.

ಸುಬ್ಬಯ್ಯನ ಎದೆ ಮೇಲೆ ಕಲ್ಲು ಬಿದ್ದಂತಾಯಿತು. 'ಅದ..ದ...ಕ್ಕೇನಂತೆ?' ಅಂದ.

ಸೂರಯ್ಯ ಸ್ವಾಮಿಯವರು ಹರ್ಷಗೊಂಡರು. 'ನನಗೆ ಗೊತ್ತು.... ಸರ್ವ ಸಂಗ ಪರಿತ್ಯಾಗಿಗಳು. ನಮ್ಮ ಬಯಕೆ ಈಡೇರಿಸಲು ನೀನು ಹಿಂದು ಮುಂದು ನೋಡುವುದಿಲ್ಲ. ಸೇರು ಉದ್ದಿನಬೇಳೆ, ಸೀಸೆ ಎಣ್ಣೆ, ಉಳಿದ ಸಾಮಗ್ರಿಗಳನ್ನು ಕಳಿಸಿಕೊಡು. ಹಾಗೇನೇ ಶುಂಠಿ, ಹಸಿಮೆಣಸಿನಕಾಯಿ, ಕೊತ್ತಂಬರಿಸೊಪ್ಪು ಇರಲಿ. ಆ ಕೊಂಚದ ಪುಣ್ಯ ಇನ್ನಾರಿಗೆ ಯಾಕೆ ದಕ್ಕಬೇಕು' ಅಂದರು.

ಸುಬ್ಬಯ್ಯನ ಕೊರಳ ಪಸೆ ಆರಿತು. ಅಲ್ಲಿ ಕುಳಿತಿದ್ದರೆ ಮತ್ತೇನು ಮೇಲೆ ಬೀಳುವುದೊ ಎಂದು ಇಲ್ಲದ ವಿನಯ ನಟಿಸುತ್ತ ಅಂದ - 'ಸ್ವಾಮೀ ಇರೋದು ತಾವೊಬ್ಬರೆ ಅಲ್ಲವೆ? ವಡೆಗೆ ಸೇರು ಬೇಳೆ .....'

ಸೂರಯ್ಯ ಸ್ವಾಮಿಗಳು ನಗೆ ಬೀರುತ್ತ ಹೇಳಿದರು, 'ಹುಚ್ಚಪ್ಪ.....ಎಲ್ಲಾ ನನಗೊಬ್ಬನಿಗೆ ಎಂದುಕೊಂಡೆಯ? ಸ್ವಾಮಿಯ ಪ್ರಸಾದವನ್ನು ನಾಲ್ಕುಮಂದಿ ನಾಲ್ಕು ಚೂರು ತಿಂದರೆ ನಿನಗೆ ಮತ್ತಷ್ಟು ಪುಣ್ಯ ಸಲ್ಲುತ್ತದೆ.' ಸುಬ್ಬಯ್ಯ ಮರು ಮಾತಿಲ್ಲದೆ ಎದ್ದು ಹೊರಟ.

ಸೂರಯ್ಯನವರ ಸಂನ್ಯಾಸ ಸ್ವೀಕಾರದ ವೃತ್ತಾಂತ, ಅದಕ್ಕೆ ಕಾರಣಗಳನ್ನು ಕೆಲವರಷ್ಟೆ ಬಲ್ಲರು. ದಾವೆಗಳಿಂದಾಗಿ ಇದ್ದ ಅಷ್ಟು ಹೊಲ ಕೈತಪ್ಪಿತು. ಬೆಳೆದ ಮಗ ಶೋಕೀಲಾಲನಾಗಿ

ಅಂಡಲೆಯುವುದನ್ನು ಬಿಟ್ಟು ಚಿಕ್ಕಾಸು ಸಂಪಾದಿಸಿದವನಲ್ಲ. ಅವನಿಗೆ ಮದುವೆಯನ್ನೂ ಮಾಡಿದ್ದರು. ಅದರ ಫಲವಾಗಿ ಅವನಿಗೆ ಮೂರು ಮಕ್ಕಳು. ಮನೆಯ ಒಂದು ಭಾಗವನ್ನು ಬಾಡಿಗೆಗೆ ಕೊಟ್ಟರೂ ಬರುವ ಹಣ ಮಕ್ಕಳ ತಂಗಳೂಟಕ್ಕೂ ಸಾಲುತ್ತಿರಲಿಲ್ಲ. ಎಲ್ಲೂ ಒಂದು ಕಾಣಿಯೂ ಸಾಲಕ್ಕೆ ಸಿಗುತ್ತಿರಲಿಲ್ಲ. ಸೂರಯ್ಯನವರ ತಲೆ ಕಾಣಿಸಿದರೆ ಸಾಲಕೇಳುವರೆಂದು ಜನ ಅವರನ್ನು ತಪ್ಪಿಸುವ ದಾರಿ ಹಿಡಿದು ಮರೆಯಾಗುತ್ತಿದ್ದರು. ಒಲೆಯಲ್ಲಿ ಮಲಗಿದ ಬೆಕ್ಕು ಹೊರಬಂದು ಮೂರು ದಿನಗಳಾಗಿತ್ತು. ಊರು ಬೀದಿಯೆಲ್ಲ ಅಲೆದರು. ಎಲ್ಲೂ ಒಂದಾಣೆಯೂ ಹುಟ್ಟಲಿಲ್ಲ. ಹಸಿವೆಯಿಂದ ಮಕ್ಕಳು ಅಳುತ್ತಿದ್ದರು. ಹೆಂಡತಿ, ಸೊಸೆ ಬಾಡಿದ ದಂಟಾಗಿ ಸೆರಗು ಹಾಸಿ ಮಲಗಿಬಿಟ್ಟಿದ್ದರು. ಸೂರಯ್ಯ ಸಂಸಾರದ ಸ್ಥಿತಿಯನ್ನು ನೋಡಿದರು. ವಿರಕ್ತಿಯುಂಟಾಯಿತು. ಛೀ ಅಂದುಕೊಂಡರು. ಕೂಡಲೆ ಎದ್ದು ಸನ್ಯಾಸಾಶ್ರಮ ಸ್ವೀಕರಿಸಿಬಿಟ್ಟರು. ಕಾಷಾಯ ಉಟ್ಟು ಕಮಂಡಲ ಹಿಡಿದ ಕೂಡಲೆ ಊರಿಗೆ ಊರೆ ಬಂದು ಅಡ್ಡಬಿದ್ದಿತು. ಪಾದೋದಕವನ್ನು ತಲೆಗೆ ಪ್ರೋಕ್ಷಿಸಿಕೊಂಡರು. ಗೋಪುರದ ಪಕ್ಕದ ಕೋಣೆಯನ್ನು ಖಾಲಿಮಾಡಿಸಿ ಸ್ವಾಮಿಗಳಿಗೆ ಕೊಟ್ಟರು. ಅಂದಿನಿಂದ ಸೂರಯ್ಯನವರಿಗಾಗಲಿ, ಅವರ ಕುಟುಂಬಕ್ಕಾಗಲಿ ಚಿಂತೆ ಬಾಧೆಗಳಿಲ್ಲ. ಸುಖದಿಂದ ಕಾಲ ಸಾಗುತ್ತಿತ್ತು.

ಸೂರಯ್ಯನವರ ಭಿಕ್ಷೆಯ ವಿಧಾನವೆ ವಿಶಿಷ್ಟವಾದುದು. ಈಗ ಸುಬ್ಬರಾಯ ಕಂಡ ಅಂದುಕೊಳ್ಳಿ. ಆಗ ನಡೆಯುವ ಸಂಭಾಷಣೆ ಹೀಗಿರುತ್ತದೆ.

'ಯಾರು ಹೋಗೋದು? ಸುಬ್ಬರಾಮಯ್ಯನೇನು?'

'ನಾನೇ ಸ್ವಾಮಿ, ಕರೆದಿರಾ?'

'ಕೂತ್ಕೊ ಬಾ, ಬೆಳೆಗಳು ಚೆನ್ನಾಗಿ ಬೆಳೀತಿವೆಯ? ದೊಡ್ಡಮಗಳು ಅತ್ತೆ ಮನೆಗೆ ಹೋದಳ?'

'ತಮ್ಮ ದಯೆಯಿಂದ ಎಲ್ಲ ಸುಸೂರ ಆಯ್ತು'

'ನಾರಾಯಣ,ನಾರಾಯಣ, ಸುಬ್ಬರಾಮಯ್ಯ, ಸ್ವಾಮಿಯವರನ್ನು ಭಿಕ್ಷೆಗೆ ಕರೆದು ಮೂರು ತಿಂಗಳಾದಂತಿದೆಯಲ್ಲ?'

'ತಮ್ಮ ಅಪ್ಪಣೆಯಾದರೆ....'

'ಕರೆಯದೆ ಭಿಕ್ಷೆಗೆ ಬಂದು ಸ್ವಾಮಿಗಳು ಅನುಗ್ರಹಿಸುತ್ತಾರೆ ಅಂದುಕೊಂಡೆಯ?'

'ತಮ್ಮ ದಯೆಯಾದರೆ ಇಂದೇ ಭಿಕ್ಷೆಗೆ ದಯಮಾಡಿಸಿ'.

'ಈಗ ಹೇಳಿದೆಯಲ್ಲ, ಇದು ಸರಿಯಾದ ಮಾತು. ದೊಡ್ಡದಾಗೇನೂ ಏರ್ಪಾಟು ಮಾಡಬೇಡ. ಒಂದೆರಡು ಪಲ್ಯ, ಎರಡು ತರಹದ ಚಟ್ನಿ ಸಾಕು. ತುಪ್ಪದ ಒಗ್ಗರಣೆ ಮರೆಯಬೇಡ. ಹೇಗೂ ವಡೆಮಾಡಿಸುತ್ತಿ. ಇನ್ನು ಸಿಹಿ ತಿಂಡಿ. ಹಾಲೊಬ್ಬಟ್ಟು ಮಾಡಿಸು. ಹಲ್ಲುಗಳು ಗಟ್ಟಿಯಿಲ್ಲ.'

'ಅಪ್ಪಣೆ ಸ್ವಾಮಿ'

'ಹನ್ನೆರಡಕ್ಕೆಲ್ಲ ಬಂದುಬಿಡು. ತಡವಾದರೆ ತಾಳಲಾರೆ. ರಾತ್ರಿಯ ಫಲಾಹಾರದ ಬಗ್ಗೆ ಆಮೇಲೆ ತಿಳಿಸುತ್ತೇನೆ'

ಹೀಗೆ ಪ್ರತಿನಿತ್ಯ ತನ್ನ ಭಿಕ್ಷೆಯ ವ್ಯವಸ್ಥೆ ಮಾಡಿಕೊಳ್ಳುತ್ತ ಕಂಡ ಕಂಡವರಿಂದ ತನಗೆ

ಬೇಕಾದ್ದನ್ನು ರೂಢಿಸಿಕೊಳ್ಳುತ್ತಿದ್ದರು, ಸೂರಯ್ಯಸ್ವಾಮಿಗಳು.

ಒಂದು ದಿನ ಭಿಕ್ಷೆ ಸೀತಾರಾಮಯ್ಯನವರ ಮನೆಯಲ್ಲೆಂದು ಗೊತ್ತಾಯಿತು. ಗಂಟೆ ಹನ್ನೆರಡಾಯಿತು. ಸೂರ್ಯ ನೆತ್ತಿಸುಡುತ್ತಿದ್ದ. ಕರೆಯಲು ಸೀತಾರಾಮಯ್ಯ ಬರಲಿಲ್ಲ. ಹಸಿವೆಯಿಂದ ಕರುಳು ಕೊರಕೊರ ಕೂಗುತ್ತಿತ್ತು. ಒಂದು ಗಂಟೆಯ ವೇಳೆಗೆ ಸೀತಾರಾಮಯ್ಯ ಬಂದ. 'ಸ್ವಾಮಿ ನಮ್ಮ ಮನೆಯಲ್ಲಿ ಮಡಿ ಕೆಟ್ಟಿತು. ಇಂದು ಭಿಕ್ಷೆಗೆ ಅನಾನುಕೂಲವಾಯಿತು' ಅಂದ. ಸ್ವಾಮಿಗಳ ತಲೆಯ ಮೇಲೆ ಸಿಡಿಲು ಬಿದ್ದಂತಾಯಿತು. ಆ ವೇಳೆಯಲ್ಲಿ ಯಾರ ಮನೆಗೆಂದು ಹೋಗುವುದು?

ಬಳಲಿಕೆಯಲ್ಲಿ ಪಾದರಕ್ಷೆ ಮೆಟ್ಟಿ ನೇರ ಮನೆಗೆ ಬಂದರು. ಮನೆಮಂದಿ ಊಟ ಮುಗಿಸಿ ತಾಂಬೂಲ ಮೆಲ್ಲುತ್ತ ಇದ್ದಲ್ಲೆ ಮಲಗಿದ್ದರು. 'ಎಲ್ಲೂ ಭಿಕ್ಷೆಯ ಏರ್ಪಾಟಾಗಲಿಲ್ಲ. ಇವೊತ್ತು ಮನೆಯಲ್ಲೆ' ಅಂದರು.

'ಚೆನ್ನಾಯ್ತು. ಮುಸುರೆ ತೊಳೆದು ಈಗಲೆ ಮಲಗಿದ್ದು. ಈ ಹೊತ್ತಿನಲ್ಲಿ ಯಾವ ಭಿಕ್ಷೆ' ಅಂದಳು ಸೊಸೆ. ಅವಳ ಮಾತು ಕೇಳಿಸಿಕೊಂಡರೂ ಮಗ ಮಗ್ಗುಲು ತಿರುಗಿ ಮಲಗಿದ. ಕೇಳಿಯೂ ಕೇಳದವಳಂತೆ ಮಲಗಿದ್ದ ಹೆಂಡತಿ ಮಣೆಯ ಮೇಲಿನ ತಲೆಯನ್ನು ಎತ್ತಲಿಲ್ಲ. ಸ್ವಾಮಿಗಳ ಹೊಟ್ಟೆಯಲ್ಲಿ ಉರಿ ಜ್ವಾಲೆ. ಹೃದಯದಲ್ಲಿ ವೇದನೆ, ಸಂಕೋಚ ಬಿಟ್ಟು ಹೆಂಡತಿಗೆ ಹೇಳಿದರು, 'ಈವೊತ್ತು ಭಿಕ್ಷೆ ಸಿಗಲಿಲ್ಲ ಕಣೆ, ಒಂದು ತುತ್ತು ಹಾಕು'.

ಹೆಂಡತಿ ಎದ್ದು ಕುಳಿತಳು. 'ನನಗೋ ಸೊಂಟ ನೋವು, ನಾನೆಲ್ಲಿ ಅಡುಗೆ ಮಾಡಲಿ' ಎಂದು, 'ಏನೇ ಒಂದು ಲೋಟ ಮಜ್ಜಿಗೆ ಇದ್ದರೆ ಕೊಡು. ಈ ಹೊತ್ತಿಗೆ ಹೇಗೋ ಆಗಲಿ'. ಎಂದು ಸೊಸೆಗೆ ಹೇಳಿದಳು.

ಸೂರಯ್ಯಸ್ವಾಮಿಗಳ ಕಾಲಡಿಯ ನೆಲ ಕಂಪಿಸಿತು. ಇದೇನಾ ಸಂಸಾರ? ಥೀ, ಅಂದುಕೊಳ್ಳುತ್ತ ಕಾಷಾಯವಸ್ತ್ರವನ್ನು ಪರಪರ ಹರಿದು ಹಾಕಿದರು. ಕಮಂಡಲವನ್ನು 'ಥಾಂ' ಎಂದು ಕುಕ್ಕಿದರು. ದಂಡವನ್ನು ಮುರಿದು ಹಾಕಿದರು. ನಿಜ ವಿರಕ್ತಿಯೊಂದಿಗೆ ಸೀದಾ ಕಾಶಿಗೆ ಹೋಗಿ ನಿಜ ಸನ್ಯಾಸ ಸ್ವೀಕರಿಸಿದರು.

ಅಂದಿನಿಂದ ಮೊದಲ ಪ್ರಾಕಾರದಲ್ಲಿ 'ಯಾರು ಹೋಗೋದು?' ಎಂಬ ಧ್ವನಿ ಕೇಳಿಸದಾಯಿತು. ಕೆಲವು ದಿನ ಏನೋ ಇಲ್ಲವಾದಂತೆ ಅನಿಸುತ್ತಿತ್ತು.

೪. ಟಪಾಲು ಬರಲಿಲ್ಲ, ಕುಂಕುಮ ಅಳಿಸಲಿಲ್ಲ

ಗೆಜ್ಜೆಗಳ ಸಪ್ಪಳ ಮಾಡುತ್ತ ಟಪಾಲಿನೊಂದಿಗೆ ರನ್ನರ್ ಊರಿಗೆ ಬರುತ್ತಲೇ ಅವನ ಹಿಂದೆಯ ಜನ ಪೋಸ್ಟ್‌ಮಾಸ್ಟರ್ ಕೃಷ್ಣಯ್ಯನವರ ಮನೆಗೆ ಬರುವರು. ಕೃಷ್ಣಯ್ಯ ಎಲಿಮೆಂಟರಿ ಶಾಲೆಯ ಶಿಕ್ಷಕರಾಗಿರುತ್ತಲೆ ಪೋಸ್ಟ್ ಮಾಸ್ಟರ್ ಗಿರಿಯನ್ನೂ ಮಾಡುತ್ತಿದ್ದರು.

ಕೃಷ್ಣಯ್ಯನವರಿಗೆ ಐವತ್ತೈದು ವರ್ಷ ವಯಸ್ಸು. ಚಿಕ್ಕವಯಸ್ಸಿಗೇ ತಂದೆಯನ್ನು ಕಳೆದುಕೊಂಡಿದ್ದರು. ತಾಯಿ ಎಷ್ಟೇ ಜಗಳ ಮಾಡಿದರೂ ಮದುವೆಯನ್ನು ಮಾತ್ರ ಮಾಡಿಕೊಳ್ಳಲಿಲ್ಲ.

'ವಂಶ ಬೆಳೆಯಲಿ ಅಂತ ಬೇಡ. ಹೊತ್ತಿಗಷ್ಟು ಅಡುಗೆ ಮಾಡಿ ಹಾಕಲಾದರೂ ಜೊತೆ ಬೇಕೊ' ಎಂದು ಎಷ್ಟು ವಿಧದಲ್ಲಿ ಹೇಳಿದರೂ ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಆ ಕೊರಗಿನಲ್ಲಿ ಆಕೆ ಮಂಚ ಹಿಡಿದು ಕೃಷ್ಣಯ್ಯನವರ ನಲವತ್ತನೇ ವಯಸ್ಸಿನಲ್ಲಿ ಸ್ವರ್ಗಸೇರಿದರು. ತಾಯಿಗೆ ತರ್ಪಣ ಬಿಟ್ಟಮೇಲೂ ಮದುವೆಗೆ ಮನಸ್ಸು ಮಾಡಲಿಲ್ಲ.

ಹತ್ತು ದಿನಗಳ ಕಾಲ ಹೊತ್ತದ ಒಲೆಯೊಂದಿಗೆ ಹೋರಾಡುತ್ತ ಒಂದಿಷ್ಟು ಅನ್ನ ಬೇಸಿಕೊಂಡರೆ, ಯಾರಾದರೂ ಒಂದಿಷ್ಟು ಹುಳಿ, ಸಾರು ಕಳುಹಿಸುತ್ತಿದ್ದರು. ಹನ್ನೊಂದನೆಯ ದಿವಸ ಕೃಷ್ಣಯ್ಯನವರು ಒಲೆ ಹಚ್ಚುತ್ತಿದ್ದಾಗ, 'ಅಯ್ಯಾ ನೀವು ಏಳಿ. ನಾನು ಅಡಿಗೆ ಮಾಡಿಡುತ್ತೇನೆ' ಅನ್ನುತ್ತ ಸೋದೆಮ್ಮನವರು ಬಂದರು. ಕೃಷ್ಣಯ್ಯ ಅಡುಗೆ ಮನೆಯಿಂದ ವರಾಂಡಕ್ಕೆ ಬಂದರು. ಅಂದಿನಿಂದ ಸೋದೆಮ್ಮನವರೆ ಅಡುಗೆ ಮಾಡಿ ಬಡಿಸಿ, ತಾವೂ ಒಂದು ತುತ್ತು ಉಣ್ಣುತ್ತಿದ್ದರು.

ಸೋದೆಮ್ಮನವರ ವಯಸ್ಸೂ ಸುಮಾರು ನಲವತ್ತು ವರ್ಷ ಇದ್ದೀತು. ಬಾಲ್ಯದಲ್ಲೆಂದೋ ಮದುವೆಯಾಗಿ ಗಂಡ ತೀರಿಕೊಂಡಿದ್ದ. ಬಳೆ ಕುಂಕುಮದ ಗುರುತೆ ಇಲ್ಲ. ಅತ್ತಕಡೆಯವರು, ಇತ್ತಕಡೆಯವರೆಲ್ಲ ಹೋದ ಮೇಲೆ ನಿರ್ಲಿಪ್ತವಾಗಿ ಓಡಾಡಿಕೊಂಡಿದ್ದರು. ಯಾರೊಂದಿಗೂ ಮಾತಿಲ್ಲ. ಆ ಮುಖದಲ್ಲಿ ದೀನತೆಯಾಗಲಿ, ದುಃಖವಾಗಲಿ ಇತ್ತು ಅನ್ನೋಣವೆ ಎಂದರೆ ಸಾಧ್ಯವಾಗುತ್ತಿರಲಿಲ್ಲ. ಕೆಲಸ ಯಾರ ಮನೆಯಲ್ಲಿ ಇರಲಿ ಹೋಗಿ ಮಾಡಿಕೊಡುವುದು, ತನಗಿಷ್ಟವಾದವರ ಮನೆಯಲ್ಲಿ ಒಂದು ತುತ್ತು ಉಣ್ಣುವುದು. ಹದಿನೈದು ವರ್ಷಗಳಿಂದ ಅಡುಗೆ ಮಾಡಿ ಕೃಷ್ಣಯ್ಯನವರಿಗೆ ಬಡಿಸುತ್ತಿದ್ದರೂ ಎಲ್ಲರ ಮನೆ ಕೆಲಸಗಳಲ್ಲೂ ನೆರವಾಗುತ್ತಿದ್ದರು. ಕೃಷ್ಣಯ್ಯ ಸೋದೆಮ್ಮನವರೆಂದೂ ಮಾತಾಡಿಕೊಂಡಿದ್ದಿಲ್ಲ.

"ಅಯ್ಯಾ, ಊಟ ಬಡಿಸಿದೆ" ಅನ್ನುವರು ಸೋದೆಮ್ಮ.

ಊಟ ಮುಗಿದ ಮೇಲೆ 'ಹುಣಸೆ ತೊಕ್ಕು ಚೆನ್ನಾಗಿತ್ತು ಸೋದೆಮ್ಮ' ಅನ್ನುತ್ತ ಕೃಷ್ಣಯ್ಯ ಕೈ ತೊಳೆಯುವರು.

ತನಗೆ ಇಂಥದು ಬೇಕೆಂದು ಆತ ಹೇಳುವುದಿಲ್ಲ. ಆಕೆ ಏನು ಬೇಕೆಂದು ಕೇಳುವುದಿಲ್ಲ. ಹೀಗೆ ದಿನ ದೂಡುತ್ತ ಇಬ್ಬರೂ ಐವತ್ತಕ್ಕೆ ಕಾಲಿಟ್ಟರು.

ರನ್ನರ್ ಟಪಾಲು ಚೀಲವನ್ನು ಕೊಡುತ್ತಲೇ ಬಾಗಿಲಲ್ಲಿ ಜನರ ಗದ್ದಲ. ಕೃಷ್ಣಯ್ಯ ಕಾಗದಗಳನ್ನು ಜೋಡಿಸುತ್ತಲೆ ಒಂದೇ ಒಂದು ದಿನ ಪತ್ರಿಕೆಯನ್ನು ಬಾಗಿಲತ್ತ ದೂಡುವರು. ಜನ ಅದರ ಸುತ್ತ ಗುಂಪುಗೂಡುವರು. ಕೈಗೆತ್ತಿಕೊಂಡವನೊಬ್ಬ ರಾಗವಾಗಿ ವಾರ್ತೆಗಳನ್ನು ಓದುತ್ತಿದ್ದರೆ, ನೆರೆದವರು ಆ ವಾರ್ತೆಗಳಿಗನುಗುಣವಾಗಿ ಆಶ್ಚರ್ಯ ವಿಭ್ರಮಗಳನ್ನು ಪ್ರಕಟಿಸುವರು.

ಕೆಲವರಿಗೆ ಕಾಗದಗಳನ್ನು ಬರೆದುಕೊಟ್ಟು, ಮನಿಯಾರ್ಡರುಗಳನ್ನು ಪೂರ್ಣಗೊಳಿಸಿ, ಅಂಚೆ ಚೀಲ ಕಟ್ಟಿ ರನ್ನರನ ಕೈಗೊಪ್ಪಿಸಿ ಕೃಷ್ಣಯ್ಯ ಬಾಗಿಲಿಗೆ ಬರುವರು.

ಕೃಷ್ಣಯ್ಯನವರೇ ಪೋಸ್ಟ್‌ಮ್ಯಾನ್ ಸಹ ಆಗಿದ್ದರು.

ಕೈಯಲ್ಲಿ ಜೋಡಿಸಿಟ್ಟುಕೊಂಡು ಕಾಗದಗಳು.

‘ಸುಬ್ಬಯ್ಯ ನಿಂಗಿವತ್ತು ಕಾಗದ ಬಂದಿಲ್ಲಯ್ಯಾ, ರಂಗಯ್ಯಾ ನಿನ್ನ ಮಗ ನಾಳೆ ಬರ್ತಾನಂತೆ, ತಗೊ ಬೋರಮ್ಮ ನಿನ್ನಮಗ ಹತ್ತು ರೂಪಾಯಿ ಕಳಿಸಿದ್ದಾನೆ. ಇಲ್ಲಿ ಹೆಬ್ಬೆಟ್ಟು ಒತ್ತು......’ ಅನ್ನುತ್ತ ಅಲ್ಲಿದ್ದ ಜನರನ್ನು ಕಳುಹಿಸಿ ಕೊಟ್ಟು ಬೀದಿಗೆ ಇಳಿಯುವರು.

ವೆಂಕಯ್ಯನಮನೆ ಜಗುಲಿಗೆ ಬಂದು ಕೂತು- ‘ವೆಂಕಯ್ಯಾ ಸಕ್ಕರೆ ತಾರೊ!’ ಎಂದು ಕೂಗುವರು.

‘ಹೇಳಿ, ಏನು ಸಮಾಚಾರ’ ಅನ್ನುತ್ತ ವೆಂಕಯ್ಯ ಬರುತ್ತಲೆ, ಮೊದಲು ಸಕ್ಕರೆಯನ್ನು ತೆಗೆದುಕೊಂಡು ‘ನಿನಗೆ ಮೊಮ್ಮಗ ಹುಟ್ಟಿದ್ದಾನೆ’ ಎಂದು ಕಾಗದ ಕೊಡುವರು. ವೆಂಕಯ್ಯನ ಮುಖ ಅರಳುವುದು. ಅದನ್ನು ಕಂಡ ಕೃಷ್ಣಯ್ಯ ಮತ್ತಷ್ಟು ಆನಂದದಿಂದ ಹಿಗ್ಗುವರು.

ಪಕ್ಕದ ಬೀದಿಗೆ ಬರುವರು. ‘ವೆಂಕಾಯಮ್ಮ ನೀನೇನು ಗಾಬರಿಯಾಗಬೇಡ. ನಿನ್ನ ಮಗಳಿಗೆ ಜ್ವರವಂತೆ. ಈ ದಿನಗಳಲ್ಲಿ ಜ್ವರ ಏನು ಮಾಡುತ್ತೆ’ಎಂದು ಧೈರ್ಯ ಹೇಳುತ್ತ, ಕಾಗದ ಓದಿ, ‘ನಾಳೆ ಪಥ್ಯವಾಗುವ ಕಾಗದ ತರುತ್ತೇನಲ್ಲ’ ಎಂದು ಭರವಸೆ ನೀಡಿ ಇನ್ನೊಂದು ಬೀದಿಯತ್ತ ಹೊರಡುವರು. ಹೀಗೆ ಊರ ಬೀದಿಗಳಲ್ಲೆಲ್ಲ ಓಡಾಡಿ ಕಾಗದಗಳನ್ನು ಹಂಚುತ್ತ ಎಲ್ಲರ ಆನಂದವನ್ನೂ ಹಂಚಿಕೊಳ್ಳುತ್ತ, ಕಷ್ಟದಲ್ಲಿರುವವರನ್ನು ಸಾಂತ್ವನಗೊಳಿಸುತ್ತ ಒಳಗೆ ಬರುವರು.

ಪ್ರತಿದಿನ ಕೃಷ್ಣಯ್ಯನವರು ಬರುವ ವೇಳೆಗೆ ಮರಿಯಮ್ಮ ಮರದಡಿ ಕಾಯುತ್ತ ನಿಲ್ಲುವಳು. ಅವಳು ಮಿಲಿಟರಿಯಲ್ಲಿರುವ ತನ್ನ ಗಂಡನ ಕಾಗದಕ್ಕಾಗಿ ಅಲ್ಲಿ ನಿಂತು ಕಾಯುವಳು. ಕಾಗದ ಬಂದಿದ್ದರೆ ಅದನ್ನು ಗಾಳಿಯಲ್ಲಿ ಆಡಿಸುತ್ತ ಕೃಷ್ಣಯ್ಯ ಬರುವರು. ಇಲ್ಲದಿದ್ದರೆ ಮರಿಯಮ್ಮನನ್ನು ಕೂರಿಸಿಕೊಂಡು ‘ಡೇವಿಡ್ ನಿನ್ನನ್ನು ಬಯಸಿ ಮದುವೆಯಾದವನು. ಮರೆಯುವುದಿಲ್ಲ. ನಂಬಿಕೆ ಇಡು. ಸೈನ್ಯ ಅಂದರೆ ಸಾಮಾನ್ಯವ? ಬಿಡುವೆ ಇರದು. ನಾಳೆ ಚರ್ಚಿಗೆ ಹೋಗಿಬಾ. ಸೋಮವಾರಕ್ಕೆ ಕಾಗದ ಬರುತ್ತೆ?’ ಎಂದು ಸಮಾಧಾನಪಡಿಸಿ ಹೊರಡುವರು.

ಹೀಗೆ ಊರಿನವರ ಆತ್ಮಬಂಧುವಾದ ಕೃಷ್ಣಯ್ಯನವರನ್ನು ಯಾರಾದರೂ ರಾತ್ರಿ ಎಂಟಕ್ಕೆ ಬಂದು ಸಾಲ ಪತ್ರದ ಸ್ಟಾಂಪಿಗಾಗಿ ಎಬ್ಬಿಸಿದರೆ ಸಿಡುಕದೆ ಎದ್ದು ಬಂದು ಸ್ಟಾಂಪು ಕೊಟ್ಟು ‘ಸಾಲ ಮಾಡಿ ಹಾಳಾಗಬೇಡ್ರೋ’ ಎಂದು ಹಿತೋಪದೇಶ ಮಾಡುವರು.

ಶುಕ್ರವಾರ ಬೆಳಗ್ಗೆ ಸೋದೆಮ್ಮನವರು ಸ್ನಾನ ಮುಗಿಸಿ ದೇವರಿಗೆ ನಮಸ್ಕಾರ ಹಾಕುತ್ತಿದ್ದರೆ ಕೃಷ್ಣಯ್ಯನವರ ಹೃದಯ ಚುರ್ ಎಂದಿತು.

‘ಇಷ್ಟು ಜನರಿಗೆ ಸಮಾಧಾನದ ಮಾತು ಹೇಳುತ್ತಿರುವೆ. ಈಕೆಗೆ ಏನೂ ಮಾಡದೆ ಹೋದೆನಲ್ಲ’ ಅಂದು ಕೊಂಡರು. ‘ಸೋದೆಮ್ಮನವರೆ’ ಎಂದು ಕರೆದಾಗ ಆಕೆ ಬಂದು ನಿಂತುಕೊಂಡರು.

‘ನಿಮ್ಮ ಹಣೆಯಲ್ಲಿ ಕುಂಕುಮ ಇದ್ದರೆ ಹೇಗಿರುತ್ತಿತ್ತು’ ಅಂದರು ಕೃಷ್ಣಯ್ಯ. ಸೋದೆಮ್ಮ ನಿರಾಸೆಯಲ್ಲಿ ನಗಲೂ ಇಲ್ಲ. ಬೊಗಸೆಯಲ್ಲಿ ಮುಖ ಮುಚ್ಚಿಕೊಳ್ಳಲೂ ಇಲ್ಲ. ಆಕೆಯಲ್ಲಿ ಯಾವ ಚಲನೆಯೂ ಕಂಡುಬರಲಿಲ್ಲ.

‘ನಿಮ್ಮ ಹಣೆಗೆ ನಾನು ಕುಂಕುಮ ಹಚ್ಚುತ್ತೇನೆ’ ಅಂದರು ಕೃಷ್ಣಯ್ಯ.

'ಅಯ್ಯೋ ಕುಂಕುಮ ಇರಲಿ, ಇರದಿರಲಿ ನಾನು ನಾನೇ ಅಲ್ಲವೆ' ಅಂದರು.

'ಅದು ನನ್ನ ಬಯಕೆ. ನೀವು ಆಗದು ಅನ್ನಬೇಡಿ' ಅನ್ನುತ್ತ ದೇವರ ಮುಂದಿದ್ದ ಕುಂಕುಮವನ್ನು ತಂದು ಹಣೆಗಿಟ್ಟರು. ಆಕೆಯ ಮುಖ ಅರಳಿದಂತೆ ಕೃಷ್ಣಯ್ಯನವರಿಗೆ ಕಂಡಿತು. ಆದರೆ ಸೋದೆಮ್ಮ ಸೇಗೆ ಬಂದರೂ ಹಾಗೆ ಅಡುಗೆಮನೆಗೆ ಹೋಗಿ ಕೆಲಸದಲ್ಲಿ ಮುಳುಗಿದರು.

ಮಾರನೇದಿನ ಕಾಗದಗಳಿಗೆಂದು ಬಂದ ಜನರಿಗೆ ಕೃಷ್ಣಯ್ಯ 'ನಾನು ಸೋದೆಮ್ಮನವರ ಹಣೆಗೆ ಕುಂಕುಮ ಹಚ್ಚಿದೆ' ಎಂದು ಹೇಳಿದರು. ಯಾರೂ ಇದೆಂಥ ವಿಚಿತ್ರ ಅನ್ನಲಿಲ್ಲ. ವ್ಯಂಗ್ಯದಿಂದ ನಗಲಿಲ್ಲ. ಮನತುಂಬಿ ಹರ್ಷಿಸಿದರು. ಕಣ್ಣುಗಳಲ್ಲಿ ನೀರಾಡಿ ಭಕ್ತಿಯಿಂದ ಅವರನ್ನು ನೋಡಿದರು.

ಕುಂಕುಮದ ಬೊಟ್ಟಿನೊಂದಿಗೆ ಸೋದೆಮ್ಮನವರು ಓಡಾಡುತ್ತಿದ್ದರಾದರೂ ಅವರಲ್ಲಿ ಯಾವ ಬದಲಾವಣೆಯೂ ಉಂಟಾಗಲಿಲ್ಲ. ಕೃಷ್ಣಯ್ಯನವರೂ ಅಷ್ಟೆ. ಒಂದು ದಿನ ಇದ್ದಕ್ಕಿದ್ದಂತೆ ಕೃಷ್ಣಯ್ಯ ಪ್ರಾಣಬಿಟ್ಟರು. ಊರಿಗೆ ಊರೇ ಶೋಕಿಸಿತು. ಸೋದೆಮ್ಮನವರು ಎಂದಿನಂತೆ ಇದ್ದರು. ದುಃಖವಿರದ ಆ ಮುಖವನ್ನು ನೋಡಿದ ಜನರ ಕಣ್ಣು ತುಂಬಿ ಕೆರೆಯಾಯಿತು. ಗೌರವ ಮರ್ಯಾದೆಯೊಂದಿಗೆ ಅಂತ್ಯಕ್ರಿಯೆ ನೆರವೇರಿಸಿದರು.

ಮರುದಿನ ರನ್ನರ್ ಟಪಾಲು ತರಲಿಲ್ಲ.

ಊರಿನವರೆಲ್ಲರನ್ನೂ ಸಮಾಧಾನ ಪಡಿಸುತ್ತಿದ್ದ ಕೃಷ್ಣಯ್ಯನವರಿಗೆ ಕೃತಜ್ಞತೆ ಸಲ್ಲಿಸಲು, ಸೋದೆಮ್ಮನವರನ್ನು ಸಾಂತ್ವನಗೊಳಿಸಲು ಜನ ಮೆರವಣಿಗೆಯಂತೆ ಬಂದರು. 'ಎಂಥ ಕಷ್ಟ ಬಂದೊದಗಿತು. ಅಯ್ಯಯ್ಯೋ!' ಎಂದು ತಲೆಗೊಂದು ಮಾತನಾಡಿದರು.

ಸೋದೆಮ್ಮನವರಲ್ಲಿ ಯಾವ ಭಾವನೆಯೂ ಇಲ್ಲ.

ಎಂದಿನಂತೆ ಕೃಷ್ಣಯ್ಯನವರ ಮಂಚದ ಬಳಿ ಕುಳಿತಿದ್ದರು.

ಹಣೆಯ ಕುಂಕುಮವನ್ನು ಮಾತ್ರ ಅಳಿಸಲಿಲ್ಲ.

೫. ನೆರೆ

ಅಷ್ಟು ದೂರದಲ್ಲಿ ಮುಗಿಲು ಮುಟ್ಟುವಂತಿರುವ ಗುಡಿಗೋಪುರ. ಅದರ ಹಿಂಬದಿಯಲ್ಲಿ ಸೂರ್ಯಕಿರಣಗಳ ಲೀಲೆಗೆ ಹೊಳೆಯುವ ಕನಕ ಲೇಪಿತ ಅಮರೇಶ್ವರಾಲಯದ ಶಿಖರ. ಆ ಉನ್ನತ ಶಿಖರದ ಸುತ್ತ ಎಷ್ಟೆಷ್ಟೋ ದೇವಾಲಯಗಳು, ಅವುಗಳ ಗೋಪುರಗಳು ಮೂಡಣಕ್ಕೆ ವೈಕುಂಠಪುರ ಪರ್ವತ. ತೆಂಕಣಕ್ಕೆ ಹಾಳುಬಿದ್ದ ಬೌದ್ಧ ಸ್ತೂಪಗಳು. ಪಡುವಣಕ್ಕೆ ಇಂದು ದಿಬ್ಬವಾಗಿ ಮಾರ್ಪಟ್ಟ ಅಂದಿನ ಶಾತವಾಹನರ ರಾಜಧಾನಿ ಧಾನ್ಯಕಟಕ. ಬಡಗಣಕ್ಕೆ ಆ ಸ್ತೂಪಗಳನ್ನು, ಆ ದಿಬ್ಬಗಳನ್ನು, ಅವುಗಳ ನಡುವಿನ ಜನರನ್ನು, ಆ ಊರನ್ನು ಒಡ್ಯಾಣದಂತೆ ಬಳಸಿ ಜುಳುಜುಳು ಹರಿವ ಕೃಷ್ಣಾನದಿ. ಅದೇ ಅಮರಾವತಿ.

ಒಂದು ಕಾಲದಲ್ಲಿ ರಥ ಕುದುರೆಗಳು ಓಡಾಡಿ, ಪದಾತಿದಳ ವಿನ್ಯಾಸಗಳನ್ನು ಪ್ರದರ್ಶಿಸಿದ ರಾಜಬೀದಿ. ಇಂದಲ್ಲಿ ನಾಯಿಗಳು, ಕತ್ತೆಗಳು, ಮೇವು ದಂಡವೆಂದು ಊರ ಮೇಲೆ ಬಿಟ್ಟ

ಸಾಂಬಯ್ಯನವರ ಮುದಿಪಿತ್ತುಗಳು ಅಲೆದಾಡುತ್ತಿವೆ. ರಾಶಿರಾಶಿ ಮುತ್ತು ರತ್ನಗಳನ್ನು ಮೂಟೆಗಳಲ್ಲಿ ತುಂಬಿ ಬಂಡಿಗಳಲ್ಲಿ ಹೇರಿಕೊಂಡು ಹೋದ ಆ ಬೀದಿಯಲ್ಲಿಂದು ಹೊಟ್ಟು ತೌಡಿನ ಮೂಟೆಗಳನ್ನು ಕೈಗಾಡಿಗಳಲ್ಲಿ ಹೇರಿಕೊಂಡ ಕೂಲಿ ಜನ ಎಳೆಯಲಾರದೆ ಎಳೆಯುವರು. ಅಷ್ಟು ದೊಡ್ಡಬೀದಿಯ ಕಸಗುಡಿಸಿ ಶುಚಿಮಾಡುವವರಾದರೂ ಯಾರು? ಅವರವರ ಮನೆಗಳ ಮುಂದೆ ಅವರವರು ಗುಡಿಸಿಕೊಂಡು ಸಾರಿಸಿಕೊಂಡು ಕಸವನ್ನೆಲ್ಲ ನಡುಬೀದಿಗೆ ಎಸೆಯುವರು. ಆ ಕಸದ ರಾಶಿಯ ಮೇಲೆ ನಾಯಿಗಳು ಮುದುಡಿ ಮಲಗಿದರೆ, ಇನ್ನೊಂದೆಡೆ ಕೋಳಿ ಪಿಳ್ಳೆಗಳು ಕಸದ ರಾಶಿಯನ್ನು ಗೆಬರುತ್ತವೆ. ಭೇರಿಗಳು ಮೊಳಗಿದ ಉತ್ತರದ ಗುಡಿ ಗೋಪುರದಲ್ಲಿ ಹುಚ್ಚ ಸೂರಿ ಕಾಲಿಗೆ ಚಿಂದಿಬಟ್ಟೆ ಸುತ್ತಿ ಕುಳಿತು ಗಾಂಜಾ ದಮ್ಮು ಹೊಡೆಯುತ್ತಾನೆ. ಕರ್ಣಮಧುರ ವೇದಗಾನ ಕೇಳಿಬರುತ್ತಿದ್ದ ಆ ವಿಶಾಲ ವಟವೃಕ್ಷದಡಿ ಇಂದು 'ನನ್ಮಗನೆ, ನಂಗೆ ಬೀಳಬೇಕಿದ್ದ ಎಲೇನ ಒಡಕೊಂಡ್ಯಲ್ಲೋ' ಎಂಬ ಬೈಗಳ ಕೇಳಿಬರುತ್ತದೆ. ಬೈಗುಳ ನಡುವೆ ಇಸ್ಪೀಟಿನಾಟ ಜೋರಿಂದ ನಡೆಯುತ್ತದೆ.

ದೇಶ ವಿದೇಶಗಳ ಸಾವಿರಾರು ವಿದ್ಯಾರ್ಥಿಗಳು ಜ್ಞಾನೋಪದೇಶ ಪಡೆದ ಬೌದ್ಧ ವಿಶ್ವವಿದ್ಯಾಲಯವಿಂದು ದಿಬ್ಬಗಳಾಗಿ ಮಾರ್ಪಟ್ಟಿವೆ. ಆ ಅನಾಥ ದಿಬ್ಬಗಳ ಮೇಲೆ ಹಂದಿಗಳನ್ನು ಅಟ್ಟಿ ಮೇಯಿಸುವ ಒಡ್ಡರ ಹುಡುಗರು ಕಂಡುಬರುತ್ತಾರೆ.

ಆತುರಾತುರವಾಗಿ ನೀರಿಗೆಂದು ಕೊಡಹೊತ್ತು ಕೃಷ್ಣೆಗೆ ಹೊರಟ ಯುವತಿಯೊಬ್ಬಳು ಕಾಲಂದುಗೆ ಜಾರಿ ಬಿದ್ದಾಗ ಆತಂಕಗೊಳ್ಳದೆ ಕೃಷ್ಣೆಗೆ ಹೋಗಿ ನೀರು ಹೊತ್ತು ತಂದು, ಕೊಡವನ್ನು ಮನೆಯಲ್ಲಿ ಇಳಿಸಿ ಹಿಂತಿರುಗಿ ಬಂದು, ಬಿದ್ದಲ್ಲೇ ಇದ್ದ ಅಂದುಗೆಯನ್ನು ಕೈಗೆತ್ತಿಕೊಂಡು ಕಾಲಲ್ಲಿ ಧರಿಸಿ ನಿರುಮ್ಮಳ ನಡೆದು ಹೋದಳಂತೆ. ಇಂದು ಕೃಷ್ಣೆಗೆ ನೀರಿಗೆಂದು ಹೊರಟ ಅನೇಕ ಹೆಣ್ಣು ಮಕ್ಕಳ ಕಾಲಿಗೆ ಗೆಜ್ಜೆಗಳಿಲ್ಲ. ಆದರೂ ಅವರು ಸರಬರ ನಡೆದು ಹೋಗುತ್ತಾರೆ. ಎದೆಯಲ್ಲಿ ದಿಗಿಲು ತುಂಬಿದ್ದರೂ ಮುಖಗಳು ನಗತ್ತಲೇ ಇರುತ್ತವೆ.

ಅಂದು ಇಂದಿಗೆ ಸಾಕ್ಷಿ ಆ ಕೃಷ್ಣವೇಣಿ. ಗತವನ್ನು ಗರ್ಭದಲ್ಲಿ ಅಡಗಿಸಿಕೊಂಡು ಏನೂ ಅರಿಯದವಳಂತೆ ತುಂಬಿ ಹರಿಯುತ್ತಾಳೆ. ಕೃಷ್ಣಮ್ಮ ಅಮರೇಶ್ವರನ ಗುಡಿಯ ಗೋಡೆಗಳನ್ನು ಒರೆಸಿಕೊಡು ಹರಿಯುತ್ತಾಳೆ. ಪರಮೇಶ್ವರನ ಪಾದಾಭಿಸೇಚನ ಮಾಡುತ್ತ ಮುಂದಕ್ಕೆ ಸಾಗುತ್ತಾಳೆ. ತುಸುದೂರದಲ್ಲಿ, ರಾತ್ರಿ ವೇಳೆ ಮಲಗಿದ ತಾವಿನಿಂದ ಹೊರಟ ಸೂರ್ಯನು ಓಡೋಡಿ ಅಮರಾವತಿಯತ್ತ ಬರುತ್ತಾನೆ. ಕಣ್ಣು ಚಾಚಿದರೆ ಎರಡು ಕೋಡು ಬೆಟ್ಟಗಳ ನಡುವೆಯಿಂದ ಹರಿದು ಬರುವ ಕೃಷ್ಣಮ್ಮ ಆಪ್ತ ಬಂಧು ಊರಿನಿಂದ ಬರುತ್ತಿರುವಂತೆ ತೋರುತ್ತಾಳೆ. ಕುಣಿಕುಣಿದು, ಏರಿಳಿದು ತೊನೆ ತೊನೆದು ಹರಿಯುತ್ತಾಳೆ. ಎರೆದು ಹರಡಿಕೊಂಡ ಕೂದಲ ಎಳೆ ಎಳೆಯಂತೆ ಹರಿಯುತ್ತಾಳೆ. ಚಾಚಿ ಹೆಣೆದ ವೇಣಿಯಂತೆ ಹರಿಯುತ್ತಾಳೆ.

ಬೆಳಕಿನ್ನು ಹರಿದಿಲ್ಲ. ಹಟ್ಟಿ ಕೇರಿಗಳಲ್ಲಿ ಗದ್ದಲ. ಊರ ತುಂಬ ಅರಚು ಕೂಗಾಟ. ಇದ್ದಕ್ಕಿದ್ದಂತೆ ಉಕ್ಕಿದ್ದಳು ಕೃಷ್ಣೆ. ರಾತ್ರೋರಾತ್ರಿ ನೆರೆ ಬಂದಿತ್ತು. ಪ್ರಳಯ ಹುಟ್ಟಿತ್ತು. ಆ ಮಸಕು ಬೆಳಕಿನಲ್ಲಿ ಉಕ್ಕುಕ್ಕಿ ಘೋರ್ಗರೆಯುತ್ತಿದ್ದಳು. ಅಂಗಳದಲ್ಲಿ ನಡುಮಟ್ಟಕ್ಕೆ ಏರಿತ್ತು ನೀರು. ಜನರ ಗದ್ದಲ. ಆತುರದ ನೂಕು ನುಗ್ಗಾಟ. ಮಣ್ಣಿನ ಗೋಡೆಗಳು ಕುಸಿಯುತ್ತಿವೆ. ಗುಡಿಯ ಪಕ್ಕದ ತಗ್ಗು ಬೀದಿಯ ಮನೆಗಳ ಮೇಲಿನೆಲ್ಲ ವಸ್ತುಗಳು ರಾತ್ರಿಯಲ್ಲಿ ಕೃಷ್ಣೆಯಲ್ಲಿ ಕೊಚ್ಚಿಹೋಗಿದೆ.

ಕೆಳಬೀದಿಯ ಮುಕ್ಕಾಲು ಭಾಗ ನೀರಿನಲ್ಲಿ ಮುಳುಗಿದೆ!

ಮೇಲಿನ ಬೀದಿಗೂ ನೀರೇರಿ ಬರುತ್ತಿದೆ!

ಬಡವರ ಗುಡಿಸಲುಗಳು ಹಾರಿ ಹೋಗುತ್ತಿವೆ!

ಕೊಟ್ಟಿಗೆಯಲ್ಲಿನ ದನಗಳು ಗೊತ್ತುಗಳೊಂದಿಗೆ ಕೃಷ್ಣೆಯ ಪಾಲಾಗಿವೆ!

ರೇವಿನಲ್ಲಿ ನಾವೆಗಳು ಡಿಕ್ಕಿ ಹೊಡೆಯುತ್ತಿವೆ!

ಲಾಂಚು (Ferry) ಗಳ ಲಂಗರು ಹರಿದು ಎತ್ತೆತ್ತಲೊ ಉರುಳಿ ಹೋಗಿವೆ!

ಬೆಳ್ಳನೆ ಬೆಳಕು ಹರಿಯುತ್ತಿದ್ದಂತೆ ಕೃಷ್ಣಮ್ಮನ ಪ್ರಳಯ ರೂಪ ಸ್ಪಷ್ಟವಾಗುತ್ತಿತ್ತು. ಈ ನೆಲವನ್ನು ನುಂಗಿಬಿಡುವಷ್ಟು ಕೋಪಾವೇಶದಲ್ಲಿ ವಿಜೃಂಭಿಸುತ್ತಿದ್ದಾಳೆ. ಆಚಿನ ದಡ ಕಾಣಿಸುತ್ತಿಲ್ಲ. ಎದುರಲ್ಲಿ ಜಲ ಸಾಗರ. ಎದ್ದೆದ್ದು ಅಪ್ಪಳಿಸುವ ಅಲೆಗಳು. ಆ ಮಹಾ ಪ್ರವಾಹದಲ್ಲಿ ಹೋಗುತ್ತಿರುವ ಮನೆ ಮಾಡುಗಳು. ಕ್ಷಣದಲ್ಲಿ ಮನೆಯೊಂದರ ಛಾವಣಿ ನೀರಿನಲ್ಲಿ ಮುಳುಗಿತು. ಮೋರೆ ಎತ್ತಿ ಅಂಬಾ ಎಂದು ಕೂಗುತ್ತಿರುವ ದನಗಳು ಕೊಚ್ಚಿ ಹೋಗುತ್ತಿವೆ. ಅವುಗಳ ಮುಖಗಳು ಮರೆಯಾಗುತ್ತಿವೆ. ಹರಿವಿನ ರಭಸದಲ್ಲಿ ಅವುಗಳ ಕೊಂಬುಗಳು ಮುಳುಗಿ ಹೋಗುತ್ತಿವೆ. ದಿಮ್ಮಿಗಳು, ನೇಗಿಲುಗಳು ತೇಲಿ ಸಾಗುತ್ತಿವೆ. ಊರ ನಾಯಿಯೊಂದು ದಿಮ್ಮಿಯೊಂದರ ಮೇಲೆ ದೀನವಾಗಿ ರಕ್ಷಣೆಗಾಗಿ ಊಳಿಡುತ್ತಿದೆ. ನೀರಿನ ಸೆಳವಿನ ರಭಸಕ್ಕೆ ಆ ದಿಮ್ಮಿ ಗಿರಗಿಟ್ಲೆಯಂತೆ ತಿರುಗುತ್ತಿದ್ದರೆ ಪ್ರಾಣ ಭಯದಿಂದ ಆ ನಾಯಿಯೂ ಗಿರಗಿರ ತಿರಗುತ್ತಿದೆ.

ಅಷ್ಟರಲ್ಲಿ ಪ್ರವಾಹದ ಮಧ್ಯದಿಂದ ಮನುಷ್ಯನೊಬ್ಬನ ಆರ್ತನಾದ. 'ದೇವರೇ, ಕಾಪಾಡು. ಕಾಪಾಡಿ ಕಾಪಾಡಿ' ಎಂಬ ಎದೆ ಬಿರಿಸುವಂತಹ ಕೂಗು. ಕ್ಷಣದಲ್ಲಿ ಆ ಕೂಗು ದೂರವಾಯಿತು. ಮನುಷ್ಯ ಕಾಣಲಿಲ್ಲ. ಯಾರೂ ಏನೂ ಮಾಡಲಾಗಲಿಲ್ಲ. ಯಾರಾದರೂ ನೆರವಿಗೆ ಧಾವಿಸಿದರೆ ಆ ಸೆಳವಿನಿಂದ ಪಾರಾಗಿ ಬರಲಾಗುತ್ತಿರಲಿಲ್ಲ. ದಡದಲ್ಲಿ ನಿಂತ ಜನ ಅಸಹಾಯಕರಾಗಿ ಆ ಭೀಭತ್ಸ, ಭಯಾನಕ ದೃಶ್ಯಗಳನ್ನು ನೋಡುತ್ತಿದ್ದರು. ಎಲ್ಲರ ಎದೆಯಲ್ಲೂ ಭಯ.

ನೀರು ಮನೆ ಮುಂದಕ್ಕೆ ಬಂದುದರಿಂದ ಮಕ್ಕಳು ಕಾಗದದ ದೋಣಿಯಾಟ ಆಡತೊಡಗಿದ್ದರು. ದೋಣಿ ಮಾಡಿಕೊಡೆಂದು ದೊಡ್ಡವರನ್ನು ಕಾಡುತ್ತಿದ್ದರು. ಶಾಲೆಯ ಮಕ್ಕಳು ಗೋಡೆಗಳ ಮೇಲೆ ಇದ್ದಿಲಿನಿಂದ ಗೆರೆಗಳನ್ನು ಬರೆಯುತ್ತಾ ಕ್ಷಣಕ್ಷಣಕ್ಕೆ ಏರುತ್ತಿದ್ದ ನೀರಿನ ಮಟ್ಟವನ್ನು ಅಳೆಯುತ್ತಿದ್ದರು.

'ನಡು ರಾತ್ರಿಯಲ್ಲಿ ಕೆಳಬೀದಿಯ ಸಂಗಯ್ಯನ ಮನೇಲಿ ಮಲಗಿದ್ದ ಎಳೆಗೂಸಿನಡಿಗೆ ನೀರು ಹರಿದು ಥಂಡಿ ತಟ್ಟಿ ಅದು ಅತ್ತಾಗ ಎಲ್ಲರೂ ಎದ್ದು ನೋಡಿದರಂತೆ. ಆಗಲೇ ಗೋಡೆ ಕುಸೀತಂತೆ. ನೀರು ನುಗ್ಗಿ ಬಂತಂತೆ. ಹೇಗೋ ಹೆಂಗಸರು ಮಕ್ಕಳು ಪ್ರಾಣದೊಂದಿಗೆ ಹೊರಬಿದ್ದರಂತೆ.

'ಮೇಕೆ ಮಂದೆ ಕೊಚ್ಚಿಕೊಂಡು ಹೋಗುತ್ತಿದ್ರೆ ದಿನ್ನೆ ಮೇಲಿದ್ದ ವೆಂಕಟಸ್ವಾಮಿ ಏನೂ ಮಾಡಲಾಗದೆ ನೋಡ್ತ ನಿಂತನಂತೆ'.

'ಮನೆಗೆ ನುಗ್ಗಿದ ಪ್ರವಾಹದಲ್ಲಿ ಹೊಡಕೊಂಡು ಬಂದ ಹಾವು ನೇಕಾರ ಪೇಟೆಯ ಸುಬ್ಬಯ್ಯನನ್ನು ಕಚ್ಚಿತಂತೆ?

'ನಡುಗಡ್ಡೆಗೆ ಮೇಯೋಕೆ ಹೋದ ದನಗಳು ಏನಾದವೊ? ಆಳುಗಳು ಏನಾದ್ರೊ?'

ಹೀಗೆ ಭಯಂಕರವಾದ ಕತೆಗಳನ್ನು ಜನ ಹೇಳಿಕೊಳ್ಳುತ್ತಿದ್ದರು. ಕೆಲವರು ಹೆಂಗಸರು ಶಾಂತಳಾಗೆಂದು ಕೃಷ್ಣಮ್ಮನನ್ನು ಬೇಡಿಕೊಳ್ಳುತ್ತ ಬಾಗಿನ ಕೊಡುತ್ತಿದ್ದರು. ಈಡುಗಾಯಿ ಒಡೆಯುತ್ತಿದ್ದರು. ಮಕ್ಕಳು ಕಾಯಿ ಚೂರಿಗಾಗಿ ಮುಗಿಬೀಳುತ್ತಿದ್ದರು. ಅರ್ಧ ಊರು ನೀರಿನಲ್ಲಿ ಮುಳುಗಿತ್ತು. ಕೈಗೆ ಸಿಕ್ಕಿದ ವಸ್ತು ಸಾಮಗ್ರಿಗಳನ್ನು ಬಾಚಿಕೊಂಡ ಜನ ಊರ ಮಧ್ಯದ ಮಾಲಕ್ಷ್ಮಮ್ಮನ ಮರದಡಿ ಸೇರಿದರು. ಮರದ ಕೊಂಬೆಗಳಿಗೆ ಮಕ್ಕಳನ್ನು ಮಲಗಿಸಲು ಜೋಲಿಗಳನ್ನು ಕಟ್ಟಿದರು. ಹತ್ತುಗಂಟೆಯ ಸುಮಾರಿಗೆ ಪ್ರವಾಹ ಇಳಿಮುಖ ಕಂಡಿತು. ಊರಿನ ಹಿರಿಯರಾದ ವೆಂಕಟಸ್ವಾಮಿ, ಪೀರಾಸ್ವಾಮಿ, ಅವಧಾನಿಗಳು, ಎಲ್ಲರು ಮಾಲಕ್ಷ್ಮಮ್ಮನ ಮರದ ಬಳಿಗೆ ಬಂದರು.

'ಈಗೇನು ಮಾಡೋಣ?' 'ಏನು ಮಾಡೋಣ?' ಎಂದು ತಲೆಮೇಲೆ ಕೈ ಹೊತ್ತರು.

ಯಾರೋ ಅಂದರು- 'ಮಾಡೋದೇನಿದೆ? ಮೊದಲು ಈ ಜನಕ್ಕೆ ತಿಂಡಿ ತೀರ್ಥದ ಏರ್ಪಾಡು ಮಾಡಿ.'

ಅಷ್ಟೇ! ಹತ್ತು ಮಂದಿ ಯುವಕರು ಹಾರೆ ಸಲಿಕೆ ಹಿಡಿದು ಗಾಡಿಯೊಲೆ ತೋಡತೊಡಗಿದರು. ಇನ್ನೊಂದಷ್ಟು ಜನ ಗೋಣಿ ಚೀಲ ಹಿಡಿದು ಮನೆಮನೆಗೆ ಹೋಗಿ ಅಕ್ಕಿ ವಸೂಲಿ ಮಾಡಿ ತಂದರು. ಕೋಟೆಯಿಂದ ಅಡುಗೆ ಸಾಮಗ್ರಿಗಳನ್ನು ತಂದರು. ಬೇಳೆ, ಉಪ್ಪು, ತುಪ್ಪ, ಎಣ್ಣೆ ಎಲ್ಲ ಬಂದವು. ಎಸರಿಟ್ಟರು. ಅಕ್ಕಿ ಹಾಕಿದರು. ಅಡುಗೆ ಮಾಡುತ್ತಿದ್ದ ವೆಂಕಟೇಶ್ವರುಲು, ಶೋಭನಾದ್ರಿ 'ಇನ್ನು ಸಾರೊಂದು ಬಾಕಿ' ಅಂದರು. ಅವಧಾನಿಗಳ ಹೆಂಡತಿ, ಕೋಮಟಿಗರ ಸೂರಮ್ಮ, ಬಣಜಿಗರ ವೆಂಕಮ್ಮ, ಗೊಲ್ಲರ ಸುಬ್ಬಮ್ಮ ಈಳಿಗೆಮಣೆ ಮುಂದಿಟ್ಟುಕೊಂಡು ಚಕಚಕ ತರಕಾರಿ ಹೆಚ್ಚಿದರು. ಹನ್ನೆರಡು ಗಂಟೆಗೆಲ್ಲ ಸೌತೇಕಾಯಿ ತೊವ್ವೆ, ಹುಳಿ, ಅನ್ನ ಸಿದ್ಧವಾಯಿತು.

ಶೆಟ್ಟರು ಊಟದೆಲೆಗಳ ಕಟ್ಟುಗಳನ್ನು ಕೊಟ್ಟರು. ನಡುಬೀದಿಯಲ್ಲಿ ಸಾಲು ಎಲೆ ಹಾಕಿದರು. ಸಂಧ್ಯಾವಂದನೆ ಮುಗಿಸಿದ ಶಾಸ್ತ್ರಿಗಳು ತಾವೂ ಬಂದು ಎಲೆಯ ಮುಂದೆ ಕುಳಿತರು. ಇತ್ತ ನೋಡಿದರೆ ಬಣಜಿಗರ ಸುಬ್ಬರಾಯ ಕುಳಿತಿದ್ದ. ಅತ್ತ ನೋಡಿದರೆ ಗೊಲ್ಲರ ರಾಮುಲು ಕೂತಿದ್ದಾನೆ. ಯಾರ ಪಕ್ಕ ಯಾರು ಕೂತಿದ್ದಾರೆಂಬ ಪರಿವೆ ಯಾರಿಗೂ ಇಲ್ಲ. ಭಗವನ್ನಾಮ ಸ್ಮರಣೆ ಸಾಗಿದೆ. ಶಾಸ್ತ್ರಿಗಳು ಆಪೋಶನ ಮಾಡಿ, ತುಪ್ಪಕ್ಕಾಗಿ ಕೈ ಚಾಚಿದರೆ ಬಡಿಸಲು ಬಂದ ತುಪ್ಪದಜಾಡಿ ಚಕ್ಕನೆ ಹಿಂದೆ ಸರಿಯಿತು. ಬಡಿಸುತ್ತಿದ್ದ ಮಾದಿಗರ ಸಂಗ ಶಾಸ್ತ್ರಿಗಳಿಗೆ ಬಡಿಸಲು ಹಿಂಜರಿದು ಓಡುತ್ತಿದ್ದ. ಶಾಸ್ತ್ರಿಗಳು 'ಲೇ ಸಂಗಾ' ಎಂದು ಕೂಗಿ ಕರೆದರು. ಅಂಜುಂಜುತ್ತಲೆ ಬಂದ ಸಂಗನನ್ನು ನೋಡಿ, ಕೈ ಚಾಚಿ 'ಲೇ ಸಂಗಾ, ನಿನಗೂ ಹಸಿವೆಯಾಗುತ್ತೆ, ನನಗೂ ಹಸಿವೆಯಾಗುತ್ತೆ. ಇನ್ನೊಬ್ಬರು ಬಡಿಸಿದರೆ ತುಪ್ಪ, ನೀನು ಬಡಿಸಿದರೆ ಅಲ್ಲವ..... ಬಾ ಬಡಿಸು' ಅಂದರು. ಸಂಗ ಆನಂದದಿಂದ ಬಡಿಸಿದ. 'ನಮಃ ಪಾರ್ವತೀ ಪತೆಯೇ' ಎಂಬ ಧ್ವನಿ ದೇವಾಲಯದ ಶಿಖರ ಮುಟ್ಟಿತು.

ಪ್ರವಾಹ ಬಂದು ಮನುಷ್ಯರ ಮನಸ್ಸುಗಳನ್ನು ತೊಳೆಯಿತು ಎಂದು ಕೊಳ್ಳೋಣವೆ? ಅಯ್ಯೋ, ನನಗಾ ನಂಬಿಕೆ ಇಲ್ಲ. ಸ್ನಾನ ಮಾಡಿದ ಮೈಗೆ ಬೆಳಗಾಗುವ ಹೊತ್ತಿಗೆ ಕೊಳೆ ಹತ್ತುವಂತೆ ಮನಸ್ಸುಗಳಲ್ಲಿ ಮತ್ತೆ ಕೆಸರು ಕೂಡಿಕೊಳ್ಳುತ್ತದೆ. ಎಷ್ಟೇ ಪ್ರವಾಹಗಳು ಬಂದರೂ ಮನುಷ್ಯನ ಮನಸ್ಸನ್ನು ತೊಳೆಯಲಾಗದೆ ಹೋಗುತ್ತವೆ.

೬. ಸಮರ್ಪಣೆ

'ನಾಯುಡುವಿನ ರಾಜ್ಯಭಾರವೇ ರಾಜ್ಯಭಾರ' ಎಂದೆಲ್ಲ ಜನ ಕೊಂಡಾಡುತ್ತಿದ್ದರೂ ವೆಂಕಟಾದ್ರಿನಾಯುಡುವಿಗೆ ಮನಶ್ಶಾಂತಿಯೆ ಇರಲಿಲ್ಲ.

ಅದು ನೆಮ್ಮದಿಗೆ ರಾತ್ರಿ. ಏಕಾಂಗಿ ನಾಯುಡು ಅಂತಃಪುರದಲ್ಲಿ ಕುಳಿತಿದ್ದಾನೆ. ಸರಿಗೆಯಂಚಿನ ಪಂಚೆ ಬದಲಿಸಿಲ್ಲ. ಜರಿ ಉತ್ತರೀಯವನ್ನು ಹೊದ್ದಿಲ್ಲ. ನಿದ್ದೆ ಹತ್ತದ ಕಣ್ಣುಗಳು ಬಗಗುಟ್ಟುತ್ತಿವೆ. ತಲೆಯೆತ್ತಿ ನೋಡಿದ. ಪಾಪಯಾರಾಧ್ಯರು ಬರುತ್ತಿದ್ದರು. ಇಷ್ಟು ಮುಂಜಾವಿಗೆ ಎಂದೂ ಬಂದದ್ದಿಲ್ಲ.

'ಇಷ್ಟು ಬೇಗ ದರ್ಶನವಾಯಿತಲ್ಲ' ಅಭಿವಾದನೆಯೊಂದಿಗೆ ನುಡಿದ ನಾಯುಡು.

'ಪ್ರಭುಗಳ ಕ್ಷೇಮ ತಿಳಿಯೋಣವೆಂದು' ಅಂದರು ಪಾಪಯಾರಾಧ್ಯರು.

ನಿಟ್ಟುಸಿರೊಂದಿಗೆ ನಕ್ಕ ನಾಯುಡು, ಆರಾಧ್ಯರ ನೋಟಕ್ಕೆ ನೋಟ ಕೂಡಿಸಿದ. ಕಣ್ಣಮುಂದೆ ಪರಮಶಿವನು ಅವತರಿಸಿದಂತೆ ಮಹೇಶ್ವರಮೂರ್ತಿ. ಪಾಪಯಾರಾಧ್ಯರು ನಗೆ ಬೀರಿದರು. ಅದು ನಾಯುಡುವಿಗೆ ಉಪಶಮನದ ನಗೆಯಂತೆ ತೋರಿತು.

ಅಷ್ಟರಲ್ಲಿ ಭಟ ಬಳಗದ ಗುಂಪೊಂದು ಆತುರಾತುರವಾಗಿ ಬಂದಿತು.

'ಪ್ರಭೂ ಆಲಯ ನಿರ್ಮಾಣ ಕಾರ್ಯದಲ್ಲಿ ಶಾಸನವೊಂದು ದೊರೆಯಿತು. ಅದರ ಪ್ರಕಾರ ಕೃಷ್ಣದೇವರಾಯರು ಕೊಂಡವೀಡನ್ನು ಜಯಿಸಿ, ಅಮರೇಶ್ವರನ ದರ್ಶನ ಮಾಡಿ, ಸ್ವರ್ಣ ತುಲಾಭಾರವನ್ನು ನಡೆಸಿದರಂತೆ' ಎಂದು ನಿವೇದಿಸಿದರು.

ನಾಯುಡುವಿನ ಶರೀರದಲ್ಲಿ ರಾಜಸತ್ವದ ಸಂಚಾರವಾಯಿತು. ಅರಿವಿಗೆ ಬಾರದಂತೆ ಕೈ ಮೀಸೆಯ ಮೇಲಾಡಿತು.

'ಕೃಷ್ಣದೇವರಾಯರು ಆ ಕಾಲಕ್ಕೆ ಮಹಾಪ್ರಭುಗಳು....' ಠೀವಿಯಿಂದ ನುಡಿದ ನಾಯುಡು. ಉಳಿದವರು ಅವನ ಮಾತನ್ನು ಪೂರ್ಣಗೊಳಿಸಿದರು. 'ಈ ಕಾಲಕ್ಕೆ ತಾವು ಮಹಾಪ್ರಭುಗಳು.'

ಅಂತಃಪುರದಲ್ಲಿ ವಿಜಯ ಧುಂದುಬಿ ಮೊಳಗಿದಂತಾಯಿತು. ನಾಯುಡು ಮುಖದಲ್ಲಿ ಹಿಗ್ಗಿನ ಬುಗ್ಗೆ ನಲಿದಾಡಿತು. ಜನ ಮತ್ತೆ ನುಡಿದರು -'ಕವಿ ಪೋಷಣೆಯಲ್ಲೇನು, ಶೌರ್ಯ ಪರಾಕ್ರಮದಲ್ಲೇನು ತಾವು ರಾಯರಿಗೆ ಸರಿಸಮರು. ಪ್ರಭುಗಳೂ ಸಹ ಸ್ವರ್ಣ ತುಲಾಭಾರ ನಡೆಸಿದರೆ....'

ನಾಯುಡು ಕಣ್ಣುಗಳು ಗರ್ವದಿಂದ ಮಿನುಗಿದವು. ಅಂಗೀಕಾರವೆಂಬಂತೆ ಕೈ ಮೇಲಕ್ಕೆತ್ತಿದ. ಆ ಕ್ಷಣದಲ್ಲೆ ಗುಣಿಸಿ ತುಲಾಭಾರಕ್ಕೆ ಮುಹೂರ್ತ ನಿರ್ಣಯಿಸಿದರು. ಈ ಶುಭವಾರ್ತೆಯನ್ನು ನಗರಕ್ಕೆ ಸಾರಲು ಜನ ಓಡಿದರು. ಅಲ್ಲಿ ಪಾಪಯಾರಾಧ್ಯರು ಮತ್ತು ನಾಯುಡು ಇಬ್ಬರೇ ಉಳಿದರು. ಆ ತನಕ ಮೌನದಿಂದಿದ್ದ ಆರಾಧ್ಯರು ಮಾತಾಡಲೆಂದೇ ನಾಯುಡು ಹೇಳಿದ - 'ಭಂಡಾರದಲ್ಲಿ ಕನಕ ರಾಶಿ, ರತ್ನ ಮಾಣಿಕ್ಯಗಳು ಉಂಟಲ್ಲವೆ ದಾನಕ್ಕೆ'

'ಮತ್ತೆ ಆರ್ಜನೆಯಾದರೂ ಯಾತಕ್ಕಾಗಿ?' ಅಂದರು ಪಾಪಯಾರಾಧ್ಯರು.

'ನೀಡಲು' ಅಂದ ನಾಯುಡು.

ಸ್ವರ್ಣ ತುಲಾಭಾರ ಅತ್ಯಂತ ವೈಭವದಿಂದ ನೆರವೇರಿತು. ಊರು ನಾಡು ಒಂದಾಗಿ ದೇವಾಲಯದಲ್ಲಿ ನೆರೆಯಿತು. ನಾಯುಡುವಿನೆತ್ತರದ ಬಂಗಾರವನ್ನು ತೂಗಿ ಬಡವರಿಗೆ ದಾನ ಮಾಡಿದರು. ಅಲ್ಲಿ ಕರುಣೆಯ ಸಾಗರವೇ ಉಕ್ಕಿ ಹರಿದಂತಿತ್ತು. ಎಲ್ಲರ ಬಾಯಲ್ಲೂ ಆ ಉತ್ಸವದ ಮಾತುಗಳೇ ತುಂಬಿಕೊಂಡಿದ್ದವು. ನದಿದಡ, ಹೊಲಗದ್ದೆ, ಮಕ್ಕಳ ಆಟಪಾಟಗಳಲ್ಲಿ ತುಲಾಭಾರದ ಮಾತೇ ಮಾತು. ಮುಂದಿನ ಕೆಲವು ತಿಂಗಳುಗಳ ಕಾಲ ಇದೇ ಕಥೆ.

ಆದರೂ ನಾಯುಡುವಿನ ಮನದಾಳದ ಅಶಾಂತಿ ದೂರಾಗಲಿಲ್ಲ. ಮತ್ತೆ ಏನನ್ನಾದರೂ ದಾನ ಮಾಡಿ ಶಾಂತಿ ಪಡೆಯಬೇಕೆಂದುಕೊಂಡ. ಸ್ವರ್ಣಧೇನುವಿನ ಗರ್ಭ ಪ್ರವೇಶಮಾಡಿ ಆ ಬಂಗಾರವನ್ನು ಬ್ರಾಹ್ಮಣರಿಗೆ ದಾನ ಮಾಡುವುದರಿಂದ ಶಾಂತಿ ಪ್ರಾಪ್ತಿಯೆಂಬ ಸಲಹೆಯೊಂದು ಹೊರಟಿತು.

ಅದರಂತೆ ಎಲ್ಲ ಏರ್ಪಾಟುಗಳು ನಡೆದವು. ಉತ್ಸವಕ್ಕೆ ದೇಶದ ನಾಲ್ಕು ದಿಕ್ಕುಗಳಿಂದಲೂ ಜನ ಬಂದರು. ನಾಯುಡು ಮಂಗಳ ಸ್ನಾನ ಮಾಡಿದ. ಗೋಗರ್ಭ ಪ್ರವೇಶಮಾಡಿ ಹೊರಬಂದ. ಆ ಬಂಗಾರದ ಆಕಳನ್ನು ಕಡಿದು ಬ್ರಾಹ್ಮಣರಿಗೆ ದಾನ ನೀಡಲು ಮುಂದಾದಾಗ ಪಂಚಮರು ಅಡ್ಡಬಂದರು. 'ಮಹಾಪ್ರಭೋ ಅದು ಸತ್ತ ಆಕಳು, ನಮಗೆ ಸೇರಬೇಕಾದ್ದು' ಎಂದರು. ನೆರೆದ ಜನಸ್ತೋಮ ಬೆಕ್ಕಸಬೆರಗಾದರು. ಪಂಚಮರು ಮತ್ತೆ ಹೇಳಿದರು. 'ಈ ಬಂಗಾರವನ್ನೇನಾದರೂ ದಾನ ಮಾಡಿದ್ದೇ ಆದರೆ, ನಾಳೆಯಿಂದ ಊರಿನಲ್ಲಿ ಸಾಯುವ ದನಗಳನ್ನು ಅವರೇ ನೋಡಿಕೊಳ್ಳಬೇಕಾಗುತ್ತದೆ. ಅದಕ್ಕೂ ನಮಗೂ ಯಾವ ಸಂಬಂಧವೂ ಇರದು.'

ಈ ಚಮತ್ಕಾರಕ್ಕೆ ನಕ್ಕ ನಾಯುಡು ಆ ಬಂಗಾರದ ಆಕಳನ್ನು ಪಂಚಮರಿಗೆ ಹಂಚಿಕೊಟ್ಟ. ಜನ ಇದನ್ನು ಕುರಿತು ಆರು ತಿಂಗಳ ಕಾಲ ಮಾತಾಡಿಕೊಂಡರು.

ಜನ ಎಷ್ಟೆಲ್ಲ ಕೊಂಡಾಡಿ, ತನ್ನ ಗುಣಗಾನ ಮಾಡಿದರೂ ನಾಯುಡುವಿಗೆ ಬಯಸಿದ ಮನಶ್ಶಾಂತಿ ಸಿಗದಾಯಿತು. ರಾತ್ರಿಗಳಲ್ಲಿ ಕಣ್ಣಿಗೆ ನಿದ್ದೆ ಹತ್ತಿದ್ದೇ ಇಲ್ಲ. ಒಂದು ದಿನ ಅರ್ಧರಾತ್ರಿ ವೇಳೆಯಲ್ಲಿ ಇದ್ದಕ್ಕಿದ್ದಂತೆ ಎದ್ದ ನಾಯುಡು ಅರಮನೆಯಿಂದ ಹೊರನಡೆದ. ಮಾನವ ಸಂಚಾರವಿಲ್ಲದ ಅಂತಃಪುರವನ್ನು ದಾಟಿದ. ಕೋಟೆ ಬಾಗಿಲಲ್ಲಿ ನಿಂತ. ಊರಿಗೆ ಊರೇ ನಿದ್ರೆಯಲ್ಲಿತ್ತು. ಆ ಕತ್ತಲೆಯಲ್ಲಿ ಲೋಕ ಹಾಯಾದ ವಿಶ್ರಾಂತಿಯಲ್ಲಿ ಮುಳುಗಿತ್ತು. ಆದರೆ ತನಗೆ ನೆಮ್ಮದಿ ಇಲ್ಲ. ಶಾಂತಿಯಿಲ್ಲ. ಆತಂಕದಲ್ಲಿ ಒದ್ದಾಡಿದ ನಾಯುಡು.

ನಾಯುಡು ನೋಡಿದ. ಎದುರಲ್ಲಿ ಪಾಪಯಾರಾಧ್ಯರು!

ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ತನ್ನೊಡನೆ ಬರುವಂತೆ ಆರಾಧ್ಯರು ಕರೆದರು. ಎಳೆಬಾಲಕನಂತೆ ಬರಿಗಾಲಲ್ಲಿ ಹಿಂಬಾಲಿಸಿದ ನಾಯುಡು. ಕಲ್ಲು ಮುಳ್ಳಿನ ದಾರಿ. ನಾಯುಡು ಕಾಲಿಗೆ ಒತ್ತಿ ಚುಚ್ಚುತ್ತಿದ್ದವು. ಇಬ್ಬರೂ ದೇವಾಲಯದ ಮೊದಲ ಪ್ರಾಕಾರವನ್ನು ತಲುಪಿದರು. ಪಾಪಾಯಾರಾಧ್ಯರು ಬಿಲ್ವವೃಕ್ಷಗಳನ್ನು ಮುಟ್ಟಿಮುಟ್ಟಿ ಪ್ರದಕ್ಷಿಣೆ ಮಾಡುತ್ತಿದ್ದರು. ನಾಯುಡು ಅವನ್ನು ತಾಕುತ್ತ ಮುನ್ನಡೆಯುತ್ತಿದ್ದ. ಆ ಸ್ಪರ್ಶ, ಆ ಗಾಳಿ, ಆ ಕತ್ತಲು ಅವನಿಗೆ ವಿಚಿತ್ರವಾಗಿ ತೋರುತ್ತಿತ್ತು. ಅವನ ಹೃದಯದಲ್ಲಿ ಎಂಥೆಂಥವೋ ನೆನಪುಗಳು ಮೂಡಿ ಕರಗುತ್ತಿದ್ದವು. ಕಣಿಗಲೆ ಗಿಡಗಳು ಮಾತಾಡಿಸುತ್ತಿದ್ದವು, ಬನ್ನಿಮರದ ಕೊಂಬೆಗಳು ಚಾಮರ ಬೀಸುತ್ತಿದ್ದವು. ಇಬ್ಬರು ಮೇಲಿನ ಪ್ರಾಕಾರಕ್ಕೆ

ಬಂದರು. ನಾಯುಡುವನ್ನು ಅಲ್ಲಿ ನಿಲ್ಲಲು ಹೇಳಿದ ಆರಾಧ್ಯರು ಮುಂದಕ್ಕೆ ಬೆರಳು ನೀಡಿ ತೋರಿಸಿದರು. ಮುಚ್ಚಿದ ದ್ವಾರದ ಆಚೆಗೆ ನಂದಿ. ಆ ನಂದಿ ಮೇಲಿನಿಂದ ನೋಟ ಹಾಯಿಸಿದರೆ ಅಮರೇಶ್ವರ. ಬಾಗಿಲು ಮುಚ್ಚಿದ್ದರೂ ದೇವರ ಮೂರ್ತಿ ಕಾಣುತ್ತಿತ್ತು. ನಿಂತ ನಾಯುಡುವಿನ ಕಿವಿಯಲ್ಲಿ ಆರಾಧ್ಯರು ಪಂಚಾಕ್ಷರಿಯನ್ನು ನುಡಿದರು. ನಾಯುಡು ಆ ಪಂಚಾಕ್ಷರಿಯನ್ನು ಸ್ಮರಣೆ ಮಾಡುತ್ತ ಕೈಮುಗಿದು ನಿಂತ. ಹೃದಯ ಹಗುರಗೊಂಡು ಕರಗುತ್ತಿತ್ತು. ಸ್ವಾಮಿ ಕೇಳಿದಂತಾಯಿತು. 'ಈ ದಾನ ಧರ್ಮಗಳೆಲ್ಲ ಏಕಯ್ಯಾ? ನಾನು ನಿನಗೆ ಕರುಣಿಸಿದ್ದನ್ನು ನೀನು ದಾನಮಾಡುತ್ತ ಮಹಾಘನನೆಂದು ಭ್ರಮಿಸುತ್ತಿರುವೆ. ನೀನು ನನಗೆಂದು ಕೊಟ್ಟುದೇನು?' ನಾಯುಡು ಕಣ್ಣೀರಿನಲ್ಲಿ ಕರಗಿದ. ಅದು ನಿದ್ದೆಯ ಸ್ಥಿತಿಯಲ್ಲ. ಎಚ್ಚರವಂತೂ ಅಲ್ಲವೇ ಅಲ್ಲ. ಮನಸ್ಸಿಗೆ ತಂಪಿನ ಅನುಭವ.

ಬೆಳಕು ಹರಿಯುತ್ತಿತ್ತು. ಭಟರು ಗದ್ದಲ ಮಾಡುತ್ತ ಹುಡುಕಿಕೊಂಡು ಬಂದರು. ಅವರ ಗದ್ದಲದಿಂದ ನಾಯುಡು ಮನಸ್ಸು ಚಂಚಲಗೊಂಡಿತು. ಕಣ್ಣು ತೆರೆದ. ಎದುರಲ್ಲಿ ಅನುಷ್ಠಾನ ಪೂರ್ಣಗೊಳಿಸಿದ ಪಾಪಯಾರಾಧ್ಯರು ನಗುತ್ತ ನಿಂತಿದ್ದರು.

ನಾಯುಡು ತಾನು ನಿಂತಿದ್ದ ಸ್ಥಳದಲ್ಲಿ ಕೈಮುಗಿದು ಪ್ರಾರ್ಥಿಸುತ್ತ ನಿಂತ ತನ್ನ ಪ್ರತಿಮೆಯನ್ನು ಕೆತ್ತಿಸಿದ.

೭. ಒಣಗ ಹಾಕಿದ ಸೀರೆ

ದೋಬಿಗಳು ಕಲ್ಲಿನ ಮೇಲೆ ಬಟ್ಟೆ ಒಗೆಯುತ್ತಿದ್ದಾರೆ

ಹುಪ್....ಹುಪ್.

ಉಷ್....ಉಷ್.

ಪಂಚೆ, ಸೀರೆ, ದುಪ್ಪಟಿ, ಜಮಖಾನೆಗಳನ್ನು ತಿರುವಿ ತಿರುವಿ ಬಂಡೆಗೆ ಹಾಕಿ ಕುಕ್ಕುತ್ತಿದ್ದಾರೆ.

ಒಂದು ಕಡೆ ಮುದಿ ವೆಂಕಾಯಿ ದೊಡ್ಡ ಬಾನೆಯಲ್ಲಿ ನೀಲಿ ಕಲೆಸುತ್ತ, "ಅರೆ ಇದರಯ್ಯನ್! ಯಾವೋನೇ ಕತ್ತೆ ಇದಕೆ ತೂತೊಡದವನಲ್ಲ" ಅಂದ, ಹೆಂಡತಿ ಪೋಲೇರಮ್ಮನೊಂದಿಗೆ.

"ಇನ್ನಾರು? ಆ ಪೂಜಾರಪ್ಪ ಐಕ್ಳೇ ಕಲ್ಲಿಕ್ಕಿರ್ತಾರೆ. ಆದ್ರೂ ಜನಕ್ಕೆಲ್ಲ ಈ ಓಟಿ ಬಾನೇನಾ? ಕುಂಬಾರಪ್ಪನಕೇಳಿ ವಸಾದು ಮಾಡಿಸ್ಬಾರ್ದಾ" ಬಟ್ಟೆ ಹಿಂಡುತ್ತ ಅಂದಳು ಪೋಲೇರಮ್ಮ.

" ಲೇ ಪೋಲಿ, ಜನಮ ಎಲ್ಲ ನಿನ್ನೊಂದ್ಗೆ ವಗತನ ಮಾಡ್ತಿಲ್ವ! ನೀನೂವೆ ಓಟಿ ಬಾನೆ ಆಗೋದಿ. ಇನ್ನೊಬ್ಬಳನ ಕಟ್ಟಿಕೊಳ್ಳಲೇನು?" ಅಂದ ಬೊಚ್ಚು ಬಾಯ ವೆಂಕಾಯಿ.

"ಓಯಬ್ಬೋ ಆಸೆ ನೋಡು ಆಸೇಯ ..." ಅಂದು ಮೂತಿ ಸೊಟ್ಟು ಮಾಡಿದಳು ಪೋಲೇರಮ್ಮ.

"ಏನೇ, ಈ ಬಾನೆ ನಮ್ಮಪ್ಪನ ಕಾಲದ್ದು. ಆಟು ಸಲೀಸಾಗಿ ಬಿಡ್ತೇನಿ ಅಂದ್ಕೊಂಡ್ಯಾ?" ಅಂದ ಅದರ ಮೂತಿಗೆ ತುಂಡು ಬಟ್ಟೆ ತೂರಿಸುತ್ತ.

ದೋಬಿಗಳು ಬಟ್ಟೆ ಮೂಟೆಗಳೊಂದಿಗೆ ತಮ್ಮ ತಮ್ಮ ಬಂಡೆಗಲ್ಲಿಗೆ ಬರುತ್ತಿದ್ದಾರೆ. ಅತ್ತಕಡೆ ಹೊಸದಾಗಿ ಮದುವೆಯಾದ ಲಚ್ಚಿ, ಸಾಂಬುಡು ಮೂಟೆಗಳೊಂದಿಗೆ ಬಂದರು. ಅವರ ನಡುವೆ ಕ್ಷಣಕ್ಕೂ ಹೊಂದಾಣಿಕೆಯಿಲ್ಲ, ಯಾವಾಗಲೂ ಜಗಳವೆ.

"ಅಲ್ಲಿ ತಿರುಗಿ ಇಲ್ಲಿ ತಿರುಗಿ ಈಟೊತ್ತುಕ ಬಂದಿ. ಹೊತ್ತು ಕಾಣ್ತದ?' ಅಂದ ಸಾಂಬಡು.

"ನೀ ಬಂದುದೂ ಇವಾಗೇಯ. ನನ್ನ ದಬಾಯಿಸ್ತೀಯೆ? ಅವರು ಬಟ್ಟೆಗಳು ಹಾಕೋದು ಬೇಡವಾ?" ಎದುರು ಮಾತಿಕ್ಕಿದಳು ಲಚ್ಚಿ.

"ತಿರುಗೋದೆ ಅಲ್ವ, ಮಾತುಗುಳನು ಕಲ್ತ್ಕೊಂಡಿದ್ದೀಯೇನ್ಲೆ?" ಹಲ್ಲು ಕಡಿದ ಸಾಂಬಡು.

"ತಿರುಗೋದೆಲ್ಲ ನಾಸ್ತಾಕ. ಮೀಸಿಗಳು ಬುಟ್ಟಿರೊ ಜಲಸಾ ರಾಯನಲ್ವ ನೀನು. ಅದೆಲ್ಲ ನಿನಕ."

"ಏನೆಲೇ ನನ್ನೇ ದಬಾಯಿಸ್ತಿ. ದರ್ವೇಸಿ ಮಕದೋಳೆ"

"ಓಯಬ್ಬೋ ಬಾಂಡ್ಲಿಸಾಗಿನ ಹಳ್ಳಂಗೆ ಎಗರಾಡ್ತಾನಲ್ಲಪ್ಪೋ."

"ಪಕ್ಕೆ ಮುರೀತೀನಿ ಬಾಂಚೋತ್" ಎಂದ ಸಾಂಬಡು ಲಚ್ಚಿಯ ಜುಟ್ಟಿಗೆ ಕೈ ಹಾಕಿದ.

"ಅಯ್ಯಯ್ಯೋ" ಎಂದು ಬಾಯಿ ಬಡಕೊಂಡಳು ಲಚ್ಚಿ.

ವೆಂಕಾಯಿ, ಪೋಲೇರಮ್ಮ ಓಡಿ ಬಂದು, "ಅಯ್ಯೋ ನೀವು ನೆಗೆದು ಬೀಳ. ಬಟ್ಟೆ ನೆನಸದೀರಾನೇ ಜಗಳ ಏನ್ರಲೆ?" ಎಂದು ಬಿಡಿಸಿ ಇಬ್ಬರನ್ನೂ ಕೆಲಸಕ್ಕೆ ಹಚ್ಚಿದರು.

ಲಚ್ಚಿ, ಸಾಂಬಡು ಮಾತಿರದೆ ಬಟ್ಟೆ ಒಗೆಯುತ್ತಿದ್ದಾರೆ. ಏಕೋ ಏನೋ ಇಬ್ಬರ ಮನಸ್ಸಿನಲ್ಲೂ ಮುನಿಸು. ಈ ಮದುವೆ ಇಬ್ಬರಿಗೂ ಇಷ್ಟವಿರಲಿಲ್ಲ. ದೊಡ್ಡವರು ಪಟ್ಟು ಬಿಡದೆ ಇಬ್ಬರಿಗೂ ಗಂಟು ಹಾಕಿದ್ದರು. ಲಚ್ಚಿ ಸಣಕಲಿ, ಸಾಂಬಡುವಿಗೆ ದಪ್ಪ ಮೈಯ ಹೆಣ್ಣೆಂದರೆ ಇಷ್ಟ. ಲಚ್ಚಿಯದು ಗಿಡ್ಡಜಡೆ. ಉದ್ದಜಡೆಯ ಹೆಣ್ಣೆಂದರೆ ಸಾಂಬಡುವಿಗೆ ಪ್ರೀತಿ, ಕಾಲಿಗೆ ಗೆಜ್ಜೆ ಸರ ಕಟ್ಟಿ ಹೆಣ್ಣು ನಡೆದರೆ ಅವನ ಗುಂಡಿಗೆಯಲ್ಲಿ ಆ ಗೆಜ್ಜೆಗಳು ಘಲ್ ಘಲಿರೆನ್ನುತ್ತವೆ. ಆದರೆ ಲಚ್ಚಿ ಸಾಂಬಡು ತಂದು ಕೊಟ್ಟ ಗೆಜ್ಜೆಸರವನ್ನು ಪೆಟ್ಟಿಗೆಗೆ ಎಸೆದು ಅಂದುಗೆ ಹಾಕಿಕೊಂಡು "ಟಂಗು ಟಂಗು " ಸದ್ದು ಮಾಡುತ್ತ ಓಡಾಡುವಳು. ಲಚ್ಚಿಯ ಮೂಗುಬೊಟ್ಟು, ಕೆನ್ನೆಸರ ಸಾಂಬಡುವಿಗೆ ಪಸಂದು ಅನ್ನಿಸಿದ್ದಿಲ್ಲ. ಆದರಿಂದಲೆ ಲಚ್ಚಿಯೆಂದರೆ ಅವನಿಗೆ ಅಸಹನೆ.....ಕೋಪ.....ಅಸಡ್ಡೆ.....ಅವಳ ಮಾತು, ನಗೆ, ಅವಳು ಮಾಡಿದ ಪಚ್ಚಡಿ ಛೀ.ಛೀ.

ಸಾಂಬಡು ಕೋಪದಲ್ಲಿ ಸೀರೆ ಒಗೆಯುತ್ತಿದ್ದಾನೆ. ಆ ಸೀರೆ ಸೀತಾಲು ಉಟ್ಟಿದ್ದು. ಸೀತಾಲು ಕಣ್ಣಲ್ಲಿ ಅಡಿದಳು. ಅದು ನವಿಲುರಂಗಿನ ಸೀರೆ. ಅವಳು ಆ ಸೀರೆಯುಟ್ಟು ಚೆಂಡು ಹೂವಿನಂತೆ ಒಯ್ಯಾರದಿಂದ ನಡೆಯುತ್ತಿದ್ದರೆ ಕಣ್ಣು ಚದುರಿ ಮೈಮರೆಯುತ್ತಿದ್ದ. ಹೆಂಗಸೆಂದರೆ ಸೀತಾಲು! ಅವಳ ನಗೆ, ಅವಳ ಮಾತು, ಅವಳ ನಡಿಗೆ....ಅಬ್ಬಾ ಜೀವ ಹಿಂಡುತ್ತಾಳೆ.....ಅಂದುಕೊಳ್ಳುತ್ತಾ, ಸೀರೆಯಲ್ಲಿ ಸೀತಾಲುವನ್ನು ಊಹಿಸಿಕೊಳ್ಳುತ್ತ ಮೃದುವಾಗಿ ಒಗೆಯುತ್ತಿದ್ದಾನೆ.

ಲಚ್ಚಿ ಗಿಳಿಯಂಚಿನ ಪಂಚೆ ಒಗೆಯುತ್ತಿದ್ದಾಳೆ. ಅದು ಕೋಟೇಶುವಿನ ಪಂಚೆ. ಗಂಡೆಂದರೆ ಕೋಟೇಶುವೇ! ಅಂದು ಕೊಂಡಳು. 'ಇವನೂ ಇದ್ದಾನೆ ಯಾತಕ್ಕೆ ಒರಟ. ಕೋಟೇಶು ಎಷ್ಟೊಂದು

ನಾಜೂಕಾಗಿದ್ದಾನೆ. ಒಂದು ಓರೆ ನೋಟ ಬೀರಿದರೆ ಗುಂಡಿಗೆ ಝಲ್ಲೆನ್ನುತ್ತೆ. ಮೊನ್ನೆ ಹಬ್ಬದ ದಿನ ಈ ಗಿಳಿಯಂಚಿನ ಪಂಚೆಯುಟ್ಟು, ತಲೆಗೆ ರುಮಾಲು ಸುತ್ತಿಕೊಂಡು ಪೇಟೇಲಿ ನಡೀತಿದ್ರೆ ಕಾರ್ಯವರ್ಧಿರಾಜನಂತಿದ್ದ. ಎಲ್ಲರ ಕಣ್ಣೂ ಅವನ ಮೇಲೇನೆ.....' ಅಂದುಕೊಳ್ಳುತ್ತ ಖುಷಿಯಿಂದ ಒಗೆಯುತ್ತಿದ್ದಾಳೆ.

ಸಾಂಬಡುವಿಗೆ ಸೀತಾಲು ಸಿಗಲಿಲ್ಲ.

ಲಚ್ಚಿಗೆ ಕೋಟೇಶು ಸಿಗಲಿಲ್ಲ.

ಮಧ್ಯಾಹ್ನದ ಹೊತ್ತಿಗೆ ಬಟ್ಟೆಗಳನ್ನೆಲ್ಲ ಒಗೆದು, ಕಟ್ಟಿ ತಂದುಕೊಂಡ ಅನ್ನಕ್ಕೆ ಪೂಜಾರರ ಬೀದಿಯಿಂದ ಕೇಳಿ ತಂದ ಸಾರನ್ನು ಕಲೆಸಿ ಎದುರೆದುರು ಕೂತು ಮಾತಿಲ್ಲದೆ ಉಂಡರು. ಆಮೇಲೆ ಒಗೆದ ಬಟ್ಟೆಗಳನ್ನೆಲ್ಲ ಗಿಡದ ಮೇಲೆ ಆರಲು ಹಾಕಿದರು. ಒಬ್ಬರು ಒಂದು ತುದಿ ಇನ್ನೊಬ್ಬರು ಇನ್ನೊಂದು ತುದಿ ಹಿಡಿದು ಹರಡುತ್ತಿದ್ದರೆ ಹೊರತು ಇಬ್ಬರ ಮನಸ್ಸು ಎಲ್ಲೆಲ್ಲಿಯೊ ಇತ್ತು. ನವಿಲು ರಂಗಿನ ಸೀರೆ ಒಣಗಿ ಹಾಕುತ್ತಿದ್ದಾಗ ಸಾಂಬಡುವಿನ ಮೈಯಲ್ಲಿ ನೆತ್ತರು ಜಿಲ್ಲೆಂದು ಉಕ್ಕುತ್ತಿತ್ತು. ಗಿಳಿಯಂಚಿನ ಪಂಚೆ ಗಾಳಿಗೆ ಹಾರದಂತೆ ಕಲ್ಲುಗಳನ್ನು ಇರಿಸುತ್ತಿದ್ದರೆ ಲಚ್ಚಿಯ ಸ್ತನಗಳು ಬಿಗಿದುಕೊಳ್ಳುತ್ತಿದ್ದವು.

ಸಂಜೆ ಹೊತ್ತಿಗೆ ಒಣಗಿದ ಬಟ್ಟೆಗಳನ್ನು ಲಚ್ಚಿ, ಸಾಂಬಡು ಮಡಚಿ ಇಟ್ಟರು. ಸೂರ್ಯ ಮುಳುಗುತ್ತಿದ್ದ ಹೊತ್ತಿನಲ್ಲಿ ಇಬ್ಬರೂ ಒಗೆದ ಬಟ್ಟೆಗಳಲ್ಲಿ ತಮಗೆ ಇಷ್ಟವಾದ ಬಟ್ಟೆಗಳನ್ನು ಆಯ್ದು ಉಟ್ಟು ಕೊಂಡರು.

ಆಶ್ಚರ್ಯ!

ಸೀತಾಲುವಿನ ನವಿಲು ರಂಗಿನ ಸೀರೆಯಲ್ಲಿ ಲಚ್ಚಿ ಸಾಂಬಡುನಿಗೆ ಸುಂದರವಾಗಿ ಕಂಡಳು. ಕೋಟೇಶುವಿನ ಗಿಳಿಯಂಚು ಪಂಚೆಯ ಸಾಂಬಡುವಿನತ್ತ ಬಯಕೆಯ ನೋಟ ಬೀರಿದಳು ಲಚ್ಚಿ.

"ಮೂಟೆ ಎತ್ತು" ಅಂದಳು ಲಚ್ಚಿ.

ಮೂಟೆ ಎತ್ತಿ ಲಚ್ಚಿಯ ತಲೆಯ ಮೇಲಿಟ್ಟ ಸಾಂಬಡು ಬಾಗಿ ಲಚ್ಚಿಗೆ ಮುತ್ತುಕೊಟ್ಟ. ಲಚ್ಚಿ ಅವನನ್ನು ದೂಡಲಿಲ್ಲ. ತುಟಿಯನ್ನು ನೀಡಿ ತೃಪ್ತಿಯಿಂದ ನಕ್ಕಳು.

೮. ಹಾಗಲಕಾಯಿ - ಬೇವಿನಕಾಯಿ

ನೆರೆ ಬಂದಾಗಲೆಲ್ಲ ಚಿಂತಲರೇವಿನಲ್ಲಿ ಜೇಡಿಮಣ್ಣು ಸಂಗ್ರಹವಾಗುವುದು. ಇಟ್ಟಿಗೆ ತಯಾರಿಸಲು ಆ ಮಣ್ಣು ಶ್ರೇಷ್ಠ. ಇಟ್ಟಿಗೆ ತಯಾರಿಸಿ ಜೀವನ ನಡೆಸುವ ಜನ ಅಲ್ಲಿ ಇಟ್ಟಿಗೆ ಹಾಕುತ್ತಿದ್ದರು. ಊರಿಗೆ ಹಿರಿಯನಾದ ಭೂಷಯ್ಯ ಅಲ್ಲಿಗೆ ಬಂದ. "ಕೇಳದೆ ಮಾಡದೆ ಯಾರಪ್ಪನ ಮನೆ ಗಂಟು ಅಂತ ಇಟ್ಟಿಗೆ ಹಾಕ್ತಿದ್ದಿರ್ರೋ' ಎಂದು ದಬಾಯಿಸಿದ.

'ಆದೇಕಯ್ಯ ಹಂಗಂತೀರಿ? ಕೃಷ್ಣೆ ಪರ್ರಾಗ ಹೊಡಕೊಂಡು ಬಂದ ಮಣ್ಣಲ್ವಾ?' ಅಂದರು ಆ ಜನ.

'ಇರಬಹುದು. ಆದರೆ ಈ ಜಾಗ ನಂದು. ಅಂದಮೇಲೆ ಈ ಜೇಡಿಮಣ್ಣು ನಂದೆ ತಾನೆ' ಅಂದ ಭೂಷಯ್ಯ, ಹಕ್ಕಿನ ಗತ್ತಿನಲ್ಲಿ.

ಅವರು ಪೆಚಾಗಿ, 'ಈಗ ಏನು ಮಾಡಂತೀರಿ?' ಅಂದರು.

'ಏನೂ ಮಾಡಬೇಡಿ. ಮಣ್ಣಿಗೆ ಇನ್ನೂರು ಕೊಡಿ' ಅಂದ.

'ಅಷ್ಟೊಂದು ಜಾಸ್ತಿ ಆಯ್ತು ಬಿಡ್ರಿ' ಅಂಗಲಾಚಿದರು.

ಕಡೆಗೆ ನೂರೈವತ್ತಕ್ಕೆ ವ್ಯಾಪಾರ ಕುದುರಿತು.

ರೇಪಿನ ಪಕ್ಕದಲ್ಲಿದ್ದ ಖಾಲಿ ಜಾಗವನ್ನು ತೋರಿಸಿ 'ಇದೂ ನಿಮ್ದೇನ ಅಪ್ಪಾರೇ? ಇಲ್ಲಿ ಇಟ್ಟಿಗೆ ಗೂಡಾಕಿ ಸುಟ್ಕಂತೀವಿ' ಅಂದರು.

'ಅದೂ ನಂದೆ, ಅಡ್ಡಿಯಿಲ್ಲ ನೂರಕ್ಕೆ ಹತ್ತು ಇಟ್ಟಿಗೆ ಕೊಡಿ ಸರಿಹೋಗುತ್ತೆ' ಅಂದ.

'ಆಯ್ತು' ಅಂತಂದು ಒಪ್ಪಿಕೊಂಡರು.

ರೇಪಿನ ಮಣ್ಣು ತನ್ನದೆಂದರೆ ಕೇಳುವವರಾರು? ನನ್ನದು ಎಂದು ಇನ್ನೊಬ್ಬರು ಬಂದರಲ್ಲವೆ ವ್ಯವಹಾರ? ಹೀಗೆ ಪ್ರತಿವರ್ಷ ಆ ಮಣ್ಣನ್ನು ಮಾರಿಕೊಂಡು ಇಟ್ಟಿಗೆಗಳನ್ನು ಮಾರಿ ಸಾಕಷ್ಟು ಹಣ ಮಾಡಿಕೊಂಡ ಭೂಷಯ್ಯ.

ರಾಮಯ್ಯ ಭೂಷಯ್ಯನ ಗೆಳೆಯ. ಒಂದು ಸಲ ಯಾವುದೋ ಕೆಲಸದ ಮೇಲೆ ಗುಂಟೂರಿಗೆ ಹೋದವನು ಪೇರಯ್ಯನ ಬಳಿ ಸಾಲ ತೆಗೆದುಕೊಂಡ. ಪೇರಯ್ಯ ಏನಾದರೂ ಆಧಾರವಿಲ್ಲದೆ ಸಾಲ ಕೊಡಲಾಗದು ಅಂದ.

'ಅದಕ್ಕೇನಂತೆ ನನ್ನ ಜಮೀನಿದೆ, ಅದನ್ನೆ ಆಧಾರಮಾಡಿಕೊಡುತ್ತೇನೆ'ಂದ ರಾಮಯ್ಯ.

'ಆಯ್ತು ಪತ್ರ ಬರೆದುಕೊಡು' ಅಂದ. ರಾಮಯ್ಯ ಬರೆದುಕೊಟ್ಟ.

'ಪೂರ್ವಕ್ಕೆ ಸುಬ್ಬರಾಮಯ್ಯನವರ ಹೊಲವು, ಪಶ್ಚಿಮಕ್ಕೆ ಸೀತಾರಾಮಯ್ಯನವರ ಹೊಲವು, ದಕ್ಷಿಣಕ್ಕೆ ವೆಂಕಟ್ರಾಮಯ್ಯನವರ ಹೊಲವು, ಉತ್ತರಕ್ಕೆ ಕೃಷ್ಣಾತೀರ... ಇಂಥ ಸರ್ವೆನಂಬರಿನ ನನ್ನ ಸ್ವಂತ ಸ್ಥಳವನ್ನು ಆಧಾರಮಾಡಿಕೊಡಲಾಗಿದೆ.

ಒಂದು ವರ್ಷವಾಯಿತು, ಎರಡು ವರ್ಷವಾಯಿತು, ರಾಮಯ್ಯ ಬರಲಿಲ್ಲ, ಸಾಲ ತೀರಿಸಲಿಲ್ಲ.

ಸ್ವಾಮಿ ದರ್ಶನ ಮಾಡಿದ ಹಾಗು ಆಗುತ್ತದೆ, ಕ್ಷೇತ್ರವನ್ನು ನೋಡಿಬಂದಂತೂ ಆಗುತ್ತದೆಂದು ಕೊಂಡ ಪೇರಯ್ಯ ಪ್ರಥಮ ಏಕಾದಶಿಯ ದಿನ ಅಮರಾವತಿಗೆ ಬಂದಿಳಿದ. ದೇವರಿಗೆ ಅಭಿಷೇಕ ಮಾಡಿಸಿ, ಅಮ್ಮನವರಿಗೆ ಪೂಜೆ ಸಲ್ಲಿಸಿ, ಪರಿಚಯದವರೊಬ್ಬರನ್ನು ಹಿಂದಿಟ್ಟುಕೊಂಡು ಆ ಚಕ್ಕುಬಂದಿಯ ಸ್ಥಳಕ್ಕೆ ಬಂದ.

ನೋಡುತ್ತಾನೆ ಅದು ಸ್ಮಶಾನ!

ಒಂದು ಕಡೆ ಹೆಣವೊಂದು ಸುಡುತ್ತಿದ್ದರೆ, ಇನ್ನೊಂದೆಡೆ ಯಾರೋ ಅಸ್ಥಿ ಸಂಗ್ರಹ ಮಾಡುತ್ತಿದ್ದರು.

ಪೇರಯ್ಯ ದಿವಾಳಿ ಎದ್ದವನಂತೆ ಒದ್ದಾಡಿದ. ಓಡೋಡುತ್ತಾ ರಾಮಯ್ಯನ ಮನೆಗೆ ಬಂದ. ರಾಮಯ್ಯ ಊರಿನಲ್ಲಿ ಇಲ್ಲವೆಂದು ತಿಳಿಯಿತು. ಸುದ್ದಿ ತಿಳಿದವರು 'ರಾಮಯ್ಯ ನಿನಗೊಬ್ಬನಿಗೇ ಅಲ್ಲ, ಯಾರು ಯಾರಿಗೋ ಸ್ಮಶಾನವನ್ನು ಆಧಾರ ಮಾಡಿ ಸಾಲ ತೆಗೆದುಕೊಂಡಿದ್ದಾನೆ' ಎಂದು ಹೇಳಿದರು.

ಆಂಜನೇಯಸ್ವಾಮಿ ಘಟ್ಟದಲ್ಲಿ ರಾಮಯ್ಯನೊಂದಿಗೆ ಸ್ನಾನಮಾಡುತ್ತ 'ಕೃಷ್ಣೆ ಕೊಚ್ಚಿತಂದ ಜೇಡಿಮಣ್ಣನ್ನ ಮಾರಿಬಿಟ್ಟೆ' ಎಂದು ಭೂಷಯ್ಯ ಹೇಳಿದ. 'ನಾನು ಮತ್ತೆ ಸ್ಮಶಾನವನ್ನು ಭೋಗ್ಯಕ್ಕೆ ಹಾಕಿದೆ' ಅಂದ ರಾಮಯ್ಯ. ಇಬ್ಬರೂ ಒಟ್ಟಿಗೆ ನಕ್ಕರು. 'ಆಯ್ತು ನಾನು ಪಂಚಾಯ್ತಿ ಅಧ್ಯಕ್ಷ ಚುನಾವಣೆಗೆ ನಿಲ್ಲಬೇಕು ಅಂತಿದ್ದೀನಿ' ಅಂದ ಭೂಷಯ್ಯ.

'ಅರೆರೆ, ಮೊದಲೆ ಯಾಕೆ ಹೇಳಲಿಲ್ಲ. ನಾನು ನಿಲ್ತೀನಿ ಅಂತ ಎಲ್ಲರಿಗೂ ಹೇಳಿಬಿಟ್ಟಿದ್ದೀನಲ್ಲ' ಅಂದ ರಾಮಯ್ಯ.

'ಅಂದರೆ ನಮ್ಮಿಬ್ಬರ ಮಧ್ಯೆ ಸ್ಪರ್ಧೆ ಅಂತಾಯ್ತು' ಎಂದು ಚುರಚುರ ನೋಡಿದ ಭೂಷಯ್ಯ.

'ಏನು ಮಾಡೋಕೆ ಆಗುತ್ತೆ. ಅಮರೇಶ್ವರನ - ಚಿತ್ತ ಹಾಗಿದೆ' ಅಂದ ರಾಮಯ್ಯ.

ಇಬ್ಬರು ಮೈ ಒರೆಸಿಕೊಂಡು ಮನೆಗಳಿಗೆ ಹೊರಟರು.

ರಾಮಯ್ಯ ನೇರವಾಗಿ ಸೀತಯ್ಯನ ಮನೆಗೆ ಹೋದ. ತಾನೇ ಚಾಪೆ ಹಾಸಿಕೊಂಡು ಕುಳಿತ. 'ಬಾವಾ, ಭೂಷಯ್ಯ ಪಂಚಾಯ್ತಿ ಪ್ರೆಸಿಡೆಂಟಾದ್ರೆ ನಾವು ಉಳೀತೀವ?' ಅಂದ.

'ಛೇ ಛೇ ಮೀಸೆ ಬೋಳಿಸಿಕೋಬೇಕಷ್ಟೆ' ಅಂದ ಸೀತಯ್ಯ, ತನ್ನ ಪೊದೆ ಮೀಸೆಯನ್ನು ತೀಡುತ್ತ.

'ಹಾಗಾದರೆ ನೀನೇ ಏಕೆ ನಿಲ್ಲಬಾರದು?' ಅಂದ ರಾಮಯ್ಯ.

'ನಾವು ಗೆಲ್ತೀವಿ ಅಂತೀಯಾ?' ಅನುಮಾನದಿಂದ ನುಡಿದ ಸೀತಯ್ಯ.

'ಎಲ್ಲಿ ಒಂದು ಸಾವಿರ ಇತ್ತ ತಳ್ಳು. ಭೂಷಯ್ಯ ಏಳದ ಹಾಗೆ ಮಾಡ್ತೀನಿ' ಅಂದ ರಾಮಯ್ಯ.

'ಆಯ್ತು' ಅಂದ ಸೀತಯ್ಯ.

ಅಲ್ಲಿಂದ ವೆಂಕಯ್ಯನ ಮನೆಗೆ ಹೋದ ಭೂಷಯ್ಯ. 'ಅಳಿಮಯ್ಯಾ ನಾವು ಈ ಊರಿಂದ ಗಂಟು ಮೂಟೆ ಕಟ್ಟಬೇಕಾದ್ದೆ' ಅಂದ.

'ಅಂಥಾದ್ದೇನಪ್ಪ ಬಂತು?' ಅಂದ ವೆಂಕಯ್ಯ.

'ಇನ್ನೇನಪ್ಪಾ ಬರಬೇಕು? ಆ ರಾಮಯ್ಯ ಪಂಚಾಯ್ತಿ ಪ್ರೆಸಿಡೆಂಟ್ ಆಗಾಕೆ ಹೊರಟಿದ್ದಾನೆ' ಅಂದ.

'ಆ ಸುಡುಗಾಡಿನ ಹೆಣಾನ!'

'ಆ ಹೆಣಾನೆ'

'ನಾವು ಬದುಕಿ ಏನು ಬಂತು?'

'ಹಾಗೆ ಅಂದು ಕೊಳ್ಳೋದಲ್ಲ. ನೀನು ನಿಂತು ಅವನನ್ನು ಸೋಲಿಸಿ ಸುಣ್ಣಮಾಡಿ, ಸುಡುಗಾಡಿಗೆ ಕಳಿಸಬೇಕು' ಅಂದ ಭೂಷಯ್ಯ.

'ಆಯ್ತು'

'ಆಯ್ತುಬಿಡು'

ಭೂಷಯ್ಯ ಅವನಿಂದ ಎರಡು ಸಾವಿರ ಕಿತ್ತ.

ಕಡೆಗೆ ವೆಂಕಯ್ಯ, ಸೀತಯ್ಯ ರಂಗದಲ್ಲಿ ಉಳಿದರು. ಒಬ್ಬೊಬ್ಬರು ಐದೈದು ಸಾವಿರ ಹಾಳುಮಾಡಿಕೊಂಡು ರಾಜಿಯಾಗಿ ಒಬ್ಬ ಪ್ರೆಸಿಡೆಂಟಾದ. ಇನ್ನೊಬ್ಬ ವೈಸ್ ಪ್ರೆಸಿಡೆಂಟಾದ.

ಭೂಷಯ್ಯ ಆಂಜನೇಯಸ್ವಾಮಿ ಸ್ನಾನದ ಘಟ್ಟಕ್ಕೆ ಸ್ನಾನ ಮಾಡಲು ಬಂದ. ರಾಮಯ್ಯನೂ ಬಂದ. ಇಬ್ಬರ ಭೇಟಿಯಾಯಿತು.

'ಏನು ಚೆನ್ನಾಗಿದ್ದೀಯ' ಎಂದ ಭೂಷಯ್ಯ. 'ನೀನು ಚೆನ್ನಾಗಿದ್ದೀಯ' ಅಂದ ರಾಮಯ್ಯ.

'ನೋಡು, ಇನ್ನು ಮುಂದೆ ಅದಕ್ಕೆ ಇದಕ್ಕೆ ಅಂತ ನಿಲ್ಲೋದಾದ್ರೆ ಮೊದಲೆ ನನಗೊಂದು ಮಾತು ಹೇಳು' ಅಂದ ಭೂಷಯ್ಯ.

'ನೀನೂ ಅಷ್ಟೆ' ಅಂದ ರಾಮಯ್ಯ.

'ನಾವಿಬ್ಬರು ಒಂದಾಗಿ ಕೆಲಸ ಮಾಡಿದ್ರೆ ಹೇಗಿರುತ್ತೆ ಅಂತೀಯ'

ಅಂದ ಭೂಷಯ್ಯ.

'ಅದ್ಭುತವಾಗಿರುತ್ತೆ' ಅಂದ ರಾಮಯ್ಯ. ಇಬ್ಬರೂ ನಕ್ಕು ಪರಸ್ಪರ ಬೆನ್ನು ತಟ್ಟಿಕೊಂಡರು.

ಆಲೋಚನೆ ಮಾಡೀ ಮಾಡಿ, ರೈತರಿಗೆ ಸಾಲಕೊಡುವ ಬ್ಯಾಂಕನ್ನು ಪ್ರಾರಂಭ ಮಾಡಿಸಿ, ಭೂಷಯ್ಯ ಅಧ್ಯಕ್ಷನಾಗಿ, ರಾಮಯ್ಯ ಕಾರ್ಯದರ್ಶಿಯಾಗಿ ಕಳ್ಳಹೆಬ್ಬೆಟ್ಟು ಒತ್ತಿ, ಫೋರ್ಜರಿ ರುಜುಗಳನ್ನು ಮಾಡುತ್ತ ತಣ್ಣಗೆ ಊರನ್ನು ಆಳಿದರು.

೯. ಕಾಗೆ ಸಂದೇಶ

ಆ ಬೇವಿನ ಮರದಡಿ ಮುಸುರೆ ತೊಳೆಯುವ ಆ ಹುಡುಗಿಯ ಹೆಸರು ಜುಪ್ಪಿ. "ಮನ್ಸರಂಗೆ ಬದ್ಕೋದ್ಕಿಂತ ಮರದಂಗೆ ಬದುಕು, ಸುಕಾ ಪಡ್ತಿ" ಅಂದುಕೊಂಡು ಅವಳ ಅಮ್ಮ ಆ ಹೆಸರಿಟ್ಟಳೇನೊ ಗೊತ್ತಿಲ್ಲ. ಆದರೆ ಜುಪ್ಪಿ ಮನುಷ್ಯರಂತೆ ಬದುಕುವ, ನಗುವ, ಅಳುವ ಕನಸು ಕಾಣುವವಳು."

ಜುಪ್ಪಿ ಹಿತ್ತಲಿಗೆ ಬರುವುದೆ ತಡ, ಮರದಲ್ಲಿದ್ದ ಕಾಗೆಗಳು ಹಾರಿ ಬರುತ್ತವೆ. ಕೊಂಬೆಗಳ ಪೊಟರೆಗಳಿಂದ ಅಳಿಲುಗಳು ಓಡೋಡಿ ಬರುತ್ತವೆ. ಮೇಲಿನ ಕೊಂಬೆಗಳಲ್ಲಿದ್ದ ಗಿಳಿಗಳು ಬಂದು ಕೆಳಗಿನ ಕೊಂಬೆಗಳಲ್ಲಿ ಕೂರುತ್ತವೆ. ಜುಪ್ಪಿ ಒಂದೊಂದೆ ಪಾತ್ರೆ ತಂದುಹಾಕುತ್ತಿದ್ದರೆ, ಕಾಗೆಗಳು ಕುಪ್ಪಳಿಸಿ ಇನ್ನೂ ಹತ್ತಿರ ಬರುತ್ತವೆ. 'ಇರೆ ಇರ್ರೇ... ಯಾವಾಗಲು ಒಂದೆ ಅವಸರ!' ಎಂದು ಸಿಡುಕುತ್ತಾಳೆ ಜುಪ್ಪಿ. ಕಾಗೆಗಳು ಕೊಕ್ಕುಗಳನ್ನು ತೀಡಿಕೊಳ್ಳುತ್ತ, ಪಟಪಟ ರೆಕ್ಕೆ ಬಡಿಯುತ್ತ ಮತ್ತೂ

ಹತ್ತಿರಕ್ಕೆ ಬರುತ್ತವೆ. ಪಾತ್ರೆಗಳ ಅಡಿಯಲ್ಲಿದ್ದ ಅಗುಳುಗಳನ್ನು ಕಲ್ಲಿನ ಮೇಲೆ ಹಾಕುವುದೆ ತಡ, ಕಾಗೆಗಳು ಕಚ್ಚಾಡುತ್ತ ತಿನ್ನತೊಡಗುತ್ತವೆ. 'ಇರೋ ಇಷ್ಟಕ್ಕೆ ಕಚ್ಚಾಡಿ ಸಾಯೋದೇಕ್ರೆ" ಎಂದು ಜುಪ್ಪಿ ಗದರಿಸುತ್ತಾಳೆ. ತರಕಾರಿಯ ಹೋಳನ್ನು ಪೊಟರೆಯಿಂದ ಇಣುಕಿ ನೋಡುವ ಅಳಿಲಿಗೆ ಎಸೆಯುತ್ತಾಳೆ. ಕೊಂಬೆ ಮೇಲೆ ಕುಳಿತ ಗಿಳಿಯನ್ನು ನೋಡಿ, 'ನೀನು ರಾಣಿವಾಸದ ಹಕ್ಕಿಯಮ್ಮ! ನೀನು ಎಂಜಲ ಅಗುಳಿಗೆಲ್ಲಿ ಬರ್ತಿ. ತಕೊ" ಎಂದು ದಾರಿಯಲ್ಲಿ ಬರುವಾಗ ಆರಿಸಿ ತಂದ ಹುಣಿಸೆಕಾಯಿಗಳನ್ನು ಎಸೆಯುತ್ತಾಳೆ. ಗಿಳಿ ಕೊಕ್ಕು ಚಾಚಿ ಕಾಯೊಂದನ್ನು ಹಿಡಿದುಕೊಂಡರೆ, ಕೆಳಗೆ ಬಿದ್ದ ಕಾಯಿಗಾಗಿ ಅಳಿಲು ಓಡುತ್ತದೆ.

ಏನೋ ತಿಂದಾಯ್ತಲ್ಲ ಎಂದು ಹಾರಿ ಹೋಗುವುದಿಲ್ಲ. ಜುಪ್ಪಿ ಮುಸುರೆ ತೊಳೆಯುತ್ತಿದ್ದರೆ ಸಭೆ ನಡೆಸುವಂತೆ ಸುತ್ತ ನೆರೆಯುತ್ತವೆ. ಒಂದು ಕಾಗೆ ಕಲ್ಲಿನ ಮೇಲೆ, ಇನ್ನೊಂದು ಪಕ್ಕದ ಗುಂಡಿನ ಮೇಲೆ, ಮತ್ತೊಂದು ಬೋರಲು ಬಿದ್ದ ಬಟ್ಟಲಿನ ಮೇಲೆ ಕುಳಿತು ಜುಪ್ಪಿ ಹೇಳುವುದನ್ನು ಆಲಿಸುತ್ತವೆ. ಅವಳು ಪಾತ್ರೆಗಳನ್ನು ಬೆಳಗುತ್ತ ತನ್ನ ಮನದ ಮಾತುಗಳನ್ನು ಹೇಳಿಕೊಳ್ಳುತ್ತಾಳೆ.

'ನಮ್ಮ ಚಿಂತಾಲು ಮಾವ ಯಾವ ರೇವಿನಲ್ಲಿದ್ದಾನೆ ಅಂತ ನೋಡಿಕೊಂಡು ಬರಬಾರದೇನ್ರೇ? ಅವನ ದೋಣಿ ಅಮರಾವತಿ ದಡ ಮುಟ್ಟಿ ತಿಂಗಳಾಯ್ತು. ನನ್ನ ಕೊರಳಿಗೆ ತಾಳಿ ಕಟ್ಟಿದ್ರೆ ಸೊಗಸಾದ ಅಡಿಗೆ ಮಾಡಿ ಹಾಕ್ತಿರಲಿಲ್ವ? ದೋಣಿಗಳಲ್ಲಿ ಹೋಗಿ ಅವರಿವರಿಗೆ ಬೇಸಿ ಹಾಕೊ ಕರ್ಮ ಯಾಕೆ? ಅವನ ತಪ್ಪು ಏನಿದೆ ಬಿಡು. ತಪ್ಪೆಲ್ಲ ನಮ್ಮಪ್ಪನದೆ. 'ಸಂಪಾದ್ನೆ ಇಲ್ಲದೋನಿಗೆ ಮಗಳನ್ನು ಕೊಡ್ತೀನ?' ಅಂದಿದ್ದ ಅಪ್ಪ. ಅವನು ಹೋಗಿ ದೋಣಿಗಳಲ್ಲಿ ಅಡುಗೆ ಮಾಡೊ ಕೆಲಸಕ್ಕೆ ಸೇರಿಕೊಂಡ. ಅಮ್ಮ ಹೋದಮೇಲೆ ಅಪ್ಪನನ್ನ ಬಿಟ್ಟು ಇರೋಕಾಗ್ದೆ ಇದ್ದೀನಿ. ಅವನಿಗೆ ನನ್ನ ಅನ್ನಬೇಕು. ಅದಕ್ಕಾಗಿ ನನ್ನನ್ನ ಬಿಟ್ಟಿರೊಲ್ಲ ಅಂತಾನೆ. ನನ್ನಪ್ಪ ಅಲ್ವ ಅವನು. ತಿಂದ್ಕೊಂಡು ಇರ್‍ಲಿ ಬಿಡು. ಆದರೆ ಅವರಿವರ ಹತ್ರ ಕಾಸು ಬೇಡಿ ಕುಡಿಯೋದು ಯಾಕಂತೀನಿ? ಏನು ಮಾಡೋದು ಹೇಳು ! ಕುಡಿದ್ರೂ ಬಡಿದ್ರೂ ಅಪ್ಪ ಅಪ್ಪಾನೆ ಅಲ್ವ. ನಾನು ನನ್ನ ಮಾವನ ಹಿಂದೆ ಹೊರಟು ಹೋದ್ರೆ ಅವನಿಗಾರು ದಿಕ್ಕು?'

"ಮಾವ ದೊಂಡಪಾಡು ರೇಪಿನಲ್ಲಿದ್ದಾನೆ ಅಂತಾರೆ ಜನ. ನೀವು ಹೋಗಿ ಅವನೆಲ್ಲಿದ್ದಾನೆ ಅಂತ ನೋಡಿಕೊಂಡು ಬರಬಾರದೇನ್ರೇ? ದೊಡ್ಡ ದೋಣಿ (ಫೆರ್‍ರಿ) ಸೇರ್‍ತಾನೆ ಅಂತ ಯಾರೊ ಹೇಳಿದರು. ಹೋಗಿ ಬೇಡ ಅಂತ ಹೇಳಿ ಬರ್‍ರೆ. ಆ ದೋಣೇಲಿ ಸೇರಿಕೊಂಡೆ ಕೃಷ್ಣೇನ ಬಿಟ್ಟು ಗೋದಾವರಿಗೆ ಹೊರಟು ಹೋಗ್ತಾನೆ. ಈಗಲೆ ಅವನ ಪಾಡು ನೋಡೋಕೆ ಆಗ್ತಿಲ್ಲ."

ದಿನವೂ ಇದೇ ರಾಗ. ಜುಪ್ಪಿ ಹೇಳಿದ್ದನ್ನೆ ಹೇಳುವುದನ್ನು ಕೇಳಿಸಿಕೊಳ್ಳುತ್ತ ಕೂತ ಕಾಗೆಗಳು ಗೊತ್ತಾಯ್ತು ಅನ್ನುವಂತೆ, ' ಆಯ್ತು ಆಲೋಚನೆ ಮಾಡೋಣ' ಎಂಬಂತೆ ಕೊಕ್ಕಿನಿಂದ ರೆಕ್ಕೆಗಳನ್ನು ಕೆರೆದುಕೊಳ್ಳುತ್ತವೆ. ಆಗ ಮನೆಯಾಕೆ 'ಏನೆ ಜುಪ್ಪಿ, ಅದಾರ ಜೊತೇಲೆ ಮಾತಾಡ್ತಿರೋದು' ಅನ್ನುವಳು. 'ಏನಿಲ್ಲಮ್ಮಾ ಈ ಕಾಗೇಗಳು ಇದ್ದಾವಲ್ಲ ಒಂದೇ ಗಲಾಟೆ. ಉಷ್ ಉಷ್' ಎಂದು ಕಾಗೆಗಳನ್ನು ಓಡಿಸಿ, ತೊಳೆದ ಪಾತ್ರೆಗಳನ್ನು ಒಳಗೆ ತಂದಿಡುವಳು. ಇದು ದಿನದ ಮಾಮೂಲು.

ಅಂದು ಮನೆಯಾಕೆ ಎಲೆಯಲ್ಲಿ ಶಾವಿಗೆ ಹಿಟ್ಟಿನ ಮುದ್ದೆಯನ್ನು ತಂದು ಜುಪ್ಪಿಗೆ ಕೊಟ್ಟು 'ತಿನ್ನೆ' ಅಂದಳು. ಜುಪ್ಪಿಗೆ ಏನನ್ನೇ ಕೊಡಲಿ ಅದನ್ನು ಕೈಗೆತ್ತಿಕೊಂಡು ಅಳುವಳು.

ಜುಪ್ಪಿಯ ಅಮ್ಮನೂ ಮುಸುರೆ ತೊಳೆಯುವ ಕೆಲಸ ಮಾಡುತ್ತಿದ್ದಳು. ಮನೆಯವರು ಏನನ್ನಾದರೂ ತಿನ್ನೆಂದು ಕೊಟ್ಟರೆ ಅದನ್ನು ಸೆರಗಿನಲ್ಲಿಟ್ಟು ತಂದು ಗಂಡಸಿಗೆ ಕಾಣದಂತೆ ಐದು ವರ್ಷದ ಮಗಳಿಗೆ ಕೊಡದೆ ತಾನು ತಿನ್ನುತ್ತಿರಲಿಲ್ಲ. 'ತಿನ್ನೆ' ಎಂದು ತಾಯಿ ಬಲವಂತ ಮಾಡಿದರೆ 'ಅಪ್ಪನಿಗೆ?' ಎಂದು ಅಳುತ್ತಿದ್ದಳು. ಇಂದೂ ಅಷ್ಟೆ.

ಜುಪ್ಪಿಯ ಅಳುವನ್ನು ಬಲ್ಲ ಮನೆಯಾಕೆ 'ಅಳೋದೇಕೆ ಜುಪ್ಪಿ' ಎಂದು ಸಮಾಧಾನ ಪಡಿಸುವಳು. ಕಣ್ಣು ಒರೆಸಿಕೊಳ್ಳುತ್ತ 'ಮನೇಲಿ ತಿಂತೀನಮ್ಮ' ಅನ್ನುವಳು. 'ನೀನು ನಿಜಕ್ಕೂ ಜುಪ್ಪೀನೆ. ಆಯ್ತು, ನಿನ್ನಪ್ಪನಿಗೆ ಬೇರೆ ಕೊಡ್ತೀನಿ. ನೀನಿದನ್ನ ತಿನ್ನು' ಅನ್ನುವಳು. ಆ ಮಾತಿನಿಂದ ಜುಪ್ಪಿಯ ಮುಖ ಅರಳುವುದು. ಕೊಟ್ಟಿದ್ದನ್ನು ಸೆರಗಿನಲ್ಲಿಟ್ಟುಕೊಂಡು ನಸುನಗುತ್ತ ಮನೆಗೆ ಓಡುವಳು.

ಶ್ರಾವಣ ಮಾಸದಲ್ಲಿ ಕೃಷ್ಣೆ ತುಂಬಿ ದಡ ಸವರಿಕೊಂಡು ಹರಿಯುವಳು. ಪೂಜಾರರ ಬೀದಿಯ ಮನೆ ಗೋಡೆಗಳನ್ನು ತಾಕಿ ಹರಿಯುತ್ತಿದ್ದರೆ, ಯಾವ ದೋಣಿಯೂ ಕೃಷ್ಣೆಯ ಒಡಲಲ್ಲಿ ಹಾದು ಹೋಗುತ್ತಿರಲಿಲ್ಲ. ಎಲ್ಲ ದೋಣಿಗಳೂ ದಡದ ಅಂಚಿನಲ್ಲೆ ಸಾಗುತ್ತಿದ್ದವು. ಹಾಗೆ ಸಾಗುವ ದೋಣಿಗಳು ಹಿತ್ತಲಿನಿಂದ ಹೊರಟವೇನೊ ಅನ್ನಿಸುತ್ತಿತ್ತು.

ಅಂದು ಜುಪ್ಪಿ ಬೆಳಕು ಹರಿಯುತ್ತಲೆ ಬಂದದ್ದು ದೋಣಿಗಳಿಗಾಗಿ. ಅವಳೊಂದಿಗೆ ಕಾಗೆಗಳು, ಅಳಿಲುಗಳು, ಗಿಳಿಗಳು ಹಿತ್ತಲಿಗೆ ಬಂದವು. ಮುಸುರೆ ತೊಳೆಯುತ್ತಿದ್ದರೂ ಅವಳ ಧ್ಯಾನವೆಲ್ಲ ದೋಣಿಗಳ ಮೇಲೆಯೆ. ಓಡಿ ಹೋಗಿ ಬರುವ ಪ್ರತಿ ದೋಣಿಯನ್ನು ನೋಡುವಳು. ಚಿಂತಾಲು ಮಾವನ ದೋಣಿ ಬರಲಿಲ್ಲ. ಕಾಗೆಗಳು ಕಾವು ಕಾವು ಅನ್ನುತ್ತ ಕೃಷ್ಣೆಯತ್ತ ಹಾರಿದವು. ಅಂದರೆ ಆ ದೋಣಿ ಬರುತ್ತಿದೆ. ಜುಪ್ಪಿ ಮುಸುರೆ ಪಾತ್ರೆಯೊಂದಿಗೆ ಓಡಿದಳು. ತೇಪೆ ಹಾಕಿದ ಹಾಯಿದೋಣಿ ಬರುತ್ತಿತ್ತು. ಹತ್ತಿರವಾಗುತ್ತಿತ್ತು. ಜುಪ್ಪಿಯ ಹೃದಯದ ಬಡಿತ ಜೋರಾಯಿತು. ಚುಕ್ಕಾಣಿಯ ಹತ್ತಿರ ಚಿಂತಾಲು ಮಾವ! ಅಡುಗೆ ಪಾತ್ರೆ ಹಿಡಿದ ಕೈಯನ್ನು ಎತ್ತಿ ಆಡಿಸುತ್ತಿದ್ದಾನೆ. ಜುಪ್ಪಿ ಮುಸುರೆ ಪಾತ್ರೆಯಿದ್ದ ಕೈಯೆತ್ತಿ ಆಡಿಸಿದಳು. ದೋಣಿ ಹತ್ತಿರಕ್ಕೆ ಬರುತ್ತಿತ್ತು. ಅವಳ ಕಣ್ಣು ಅರಳಿತು. ಮೈ ನವಿರೆದ್ದಿತು. ಕೃಷ್ಣೆ ಕಣ್ಣಲ್ಲಿ ತುಂಬಿ ಬಂದಳು. ದೋಣಿ ಜುಪ್ಪಿಯನ್ನು ಸಮೀಪಿಸಿತು. ಚಿಂತಾಲು ನಗುತ್ತ ಜುಪ್ಪಿಯನ್ನು ಕಣ್ಣಲ್ಲಿ ತುಂಬಿಕೊಳ್ಳುತ್ತಿದ್ದ. ಜುಪ್ಪಿ ಏನೋ ಹೇಳಬೇಕೆಂದುಕೊಂಡಳು. ಮಾತು ಹೊರಡಲಿಲ್ಲ. ಅವನಿಗೂ ಏನೋ ಹೇಳಬೇಕೆನ್ನಿಸುತ್ತಿತ್ತು. ಧ್ವನಿ ಹೊರಡಲಿಲ್ಲ. ದೋಣಿ ಜುಪ್ಪಿಯನ್ನು ದಾಟಿ ಹೊರಟಿತು. ಚಿಂತಾಲು ನಡುಗಡ್ಡೆಯ ತೋಟದಿಂದ ಕಿತ್ತು ತಂದಿದ್ದ ಸೀಬೇಕಾಯನ್ನು ದಡದತ್ತ ಎಸೆದ. ಜುಪ್ಪಿ ಚಂಗನೆ ನೆಗೆದು ಹಿಡಿದುಕೊಂಡಳು. ತೇಪೆಯ ಹಾಯಿ ದೂರವಾಯಿತು. ಚಿಂತಾಲು ಮಾವ ಹೊರಟುಹೋದ. ಮನೆಯಾಕೆ 'ಜುಪ್ಪಿ' ಎಂದು ಕೂಗಿದಾಗ ಅವಳ ಮನಸ್ಸು ಹಿತ್ತಲ ಪ್ರಪಂಚಕ್ಕೆ ಮರಳಿತು.

ಜುಪ್ಪಿ ಕುಣಿಯುತ್ತ ಹಿತ್ತಲಿಗೆ ಬಂದಳು. ಸಡಗರದಿಂದ ಒಂದು ಕೈಯಲ್ಲಿ ಪಾತ್ರೆ ತೊಳೆಯುತ್ತ ಇನ್ನೊಂದು ಕೈಲಿದ್ದ ಚಿಂತಾಲು ಮಾವ ಅಕ್ಕರೆಯಿಂದ ಎಸೆದ ಸೀಬೇಕಾಯನ್ನು ಕಚ್ಚಿ ತಿನ್ನತೊಡಗಿದಳು. ತಾನಷ್ಟು ಕಚ್ಚಿ ತಿಂದು, ಚೂರೊಂದನ್ನು ಕಾಗೆಗಳಿಗೆ ಹಾಕಿದಳು. ಇನ್ನೊಂದು ಚೂರು ಕಡಿದು ಅಳಿಲಿಗೆ ಕೊಟ್ಟಳು. ಉಳಿದಿದ್ದನ್ನು ಗಿಳಿಯತ್ತ ಎಸೆದಳು.

ಕೆಲಸವೆಲ್ಲ ಮುಗಿಯಿತು. ಮನೆಯಾಕೆ ತಂಬಿಟ್ಟು ಕೊಟ್ಟಳು. ಆ ಎಲೆಯನ್ನು ಕೈಯಲ್ಲಿ ಹಿಡಿದು ಅಳತೊಡಗಿದಳು. 'ಅಳಬೇಡ. ನಿನ್ನಪ್ಪನಿಗೆ ಬೇರೆ ಕೊಡ್ತೀನಿ" ಅಂದರೂ ಅವಳು ಅಳು ನಿಲ್ಲಿಸಲಿಲ್ಲ. ಅವಳು ತನ್ನ ಚಿಂತಾಲು ಮಾವನಿಗಾಗಿ ಅಳುತ್ತಿದ್ದಳು.

ಕಣ್ಣೊರೆಸಿಕೊಂಡ ಜುಪ್ಪಿ ಹೊರಬಂದಳು. ಕಾಗೆ, ಅಳಿಲು, ಗಿಳಿಗಳು ಅವಳ ಸುತ್ತ ನೆರೆದವು. ಜುಪ್ಪಿ ಅವುಗಳಿಗೆ ಹೇಳಿದಳು - 'ಮಾವನ ದೋಣಿ ಧರಣೇಕೋಟೆಯ ರೇವಿನಲ್ಲಿರುತ್ತೆ. ನೀವು ಹೋಗಿ, ನಾನು ಮಾವನಿಗಾಗಿ ಅಳಲಿಲ್ಲವೆಂದು ಹೇಳಿರೆ. ನಾನು ನಕ್ಕೆನೆಂದು ಹೇಳಿ ಬನ್ನಿರೆ' ಎಂದು ಕಿಲಿಕಿಲ ನಗತೊಡಗಿದಳು.

೧೦. ಗುಗ್ಗರಿ ಬುಟ್ಟಿಯಲ್ಲಿ ಭಾಗ್ಯಲಕ್ಷ್ಮಿ

ಅಮರಾವತಿಗೂ ಧರಣೇಕೋಟೆಗೂ ಮಧ್ಯೆ ಕೃಷ್ಣೆಯ ದಡದಲ್ಲೊಂದು ದೊಡ್ಡ ಹುಣಿಸೆಮರ ಉಂಟು. ರಾತ್ರಿ ವೇಳೆಯಲ್ಲಿ ಯಾರೂ ಅದರ ಹತ್ತಿರಕ್ಕೂ ಹೋಗುವುದಿಲ್ಲ. ಅಲ್ಲಿ ದೆವ್ವಗಳು ಓಡಾಡುತ್ತವೆಂಬ ಭಯ. ಆ ಮರದ ವಯಸ್ಸು ಎಷ್ಟೆಂಬುದು ಯಾರಿಗೂ ತಿಳಿಯದು. ಎಂದೊ ಗೊಡ್ಡುಬಿದ್ದಮರ. ಹಿಂದೆ ಅವಧಾನಿಗಳು ಪ್ರತಿದಿನ ಬೆಳಿಗ್ಗೆ ಕೃಷ್ಣೆಗೆ ಸ್ನಾನಕ್ಕೆ ಹೊರಟಾಗ ಕೈನೋಯುವವರೆಗೆ ಕಲ್ಲು ಬೀರಿ ಬೀರಿ ಬಳಲಿದಾಗ ಒಂದು ಹಿಡಿ ಕಾಯಿ ಉದುರುತ್ತಿತ್ತು. ಅದನ್ನು ಪಂಚೆಯ ಒದ್ದೆಯ ಸೆರಗಿನಲ್ಲಿ ಭದ್ರವಾಗಿ ಗಂಟುಹಾಕಿ ತಂದು ಹೆಂಡತಿಗೆ ಕೊಟ್ಟರೆ ಆಕೆ 'ಇವತ್ತು ಕೃಷ್ಣಮ್ಮ ತೊಕ್ಕಿಗೆ ಕೊಟ್ಟಳಾ?' ಅಂದರೆ, ಅವದಾನಿಗಳು ಆ ಮಾತನ್ನೆ ಬದಲಿಸಿ 'ನಾಳೆ ಹುಳಿ ಮಾಡಿಕೊ ಅಂದಳು' ಅನ್ನುವರು.

ಹತ್ತರ ಸುಮಾರಿಗೆ ಆ ಮರದಡಿ ಗದ್ದಲ ಪ್ರಾರಂಭವಾಗುತ್ತಿತ್ತು. ಗುಡಿಗೆ ಬರುವ ಇರುವೆಗಳಂತೆ ಒಬ್ಬರ ಹಿಂದೆ ಒಬ್ಬರು ಬಂದು ಅಲ್ಲಿ ಸೇರುತ್ತಿದ್ದರು. ಎರಡು ಮೂರು ಗುಂಪುಗಳಾಗುವರು. ನೆಲದ ಮೇಲೆ ಕುಳಿತು ಇಸ್ಪೇಟು ಆಟ ಶುರುಮಾಡುವರು.

ಕೊಂಬೆಗಳ ಮಧ್ಯದಿಂದ ಬಿಸಿಲ ಹೊಡೆ ಚುರುಕಾಗಿದ್ದರೂ ಗಮನ ಕೊಡದೆ ದೀಕ್ಷೆಯಲ್ಲಿ ಸಾಗುವ ಇಸ್ಪೇಟು ಯಜ್ಞವೇದಿಯ ಬಳಿಗೆ ನಿಧಾನವಾಗಿ ನಡೆದು ಬರುತ್ತಾನೆ ಗುಗ್ಗರಿ ಸುಬ್ಬರಾಯ. ಬಲಗೈಲಿ ಬಿಸಿಬಿಸಿ ಗುಗ್ಗರಿಯ ಬುಟ್ಟಿ ಹೊತ್ತು, ಅದು ಘಮಘಮಾಡುತ್ತಿದ್ದರೆ ಎಡಗೈಲಿ ಹಳೆ ಬಟ್ಟೆಯೊಂದನ್ನು ಹಿಡಿದು, ಅದನ್ನು ಬುಟ್ಟಿಯ ಮೇಲೆ ಅತ್ತ ಇತ್ತ ಆಡಿಸುತ್ತ ಸುಬ್ಬರಾಯ ಪ್ರತ್ಯಕ್ಷವಾಗುವನು. ಆ ಮಾಸಲು ಬಟ್ಟೆಯನ್ನು ಹಾಗೆ ಗಾಳಿಯಲ್ಲಿ ಬೀಸುವುದರಲ್ಲಿ ಸೊಳ್ಳೆ ನೊಣಗಳನ್ನು ಓಡಿಸುವುದೊಂದು ಪ್ರಯತ್ನದೊಂದಿಗೆ ಗುಗ್ಗರಿಯ ಘಮಘಮಲನ್ನು ನಾಲ್ಕು ದಿಕ್ಕುಗಳಿಗೂ ಹರಡುವ ಹುನ್ನಾರೂ ಇರುವುದು.

ಆ ಘಮಘಮ ಗಾಳಿಯೊಂದಿಗೆ ಬೀಸಿಬಂದು ಮೂಗಿಗೆ ಬಡಿಯುವುದರೊಂದಿಗೆ ಅಲ್ಲಿನ ಜನರ ಮೈಯಲ್ಲಿ ಹಸಿವಿನ ನಡುಕ ಉಂಟಾಗಿ ಹೊಟ್ಟೆಯಲ್ಲಿ ಜಠರಾಗ್ನಿ ಭುಗಿಲೇಳುತ್ತಿತ್ತು.

'ಓ ಸುಬ್ಬಯ್ಯೋ'

'ಮೊದಲಲ್ಲಿ ಕೊಡೊ'

'ನಂಗೆ ಕೊಟ್ಟು ಹೋಗೊ'

'ಇಲ್ಲಿ ಬಾರೊ ಅಂದ್ರೆ'

ಹೀಗೆ ಎಲ್ಲ ದಿಕ್ಕುಗಳಿಂದ ಕರೆ ಬರುತ್ತಿತ್ತು. ಕರೆ ಕೇಳಿಸಿಕೊಂಡ ಸುಬ್ಬರಾಯ-

'ಬಂದೆನಪ್ಪಾ ಬಂದೆ'

'ಇದೊ ಇಲ್ಲೋ'

'ನಿಮಗೇ ಮೊದಲು'

'ಎಲೆ ತಗೊಳ್ಳಿ' ಅನ್ನುತ್ತ, ಅಲ್ಲಿಗಲ್ಲಿಗೆ ತಕ್ಕ ಉತ್ತರ ಕೊಡುತ್ತ ಮಿಂಚಿನಂತೆ ಓಡಾಡುತ್ತ, ಮಳೆಯಲ್ಲಿ ಕುದುರೆಯನ್ನು ಓಡಿಸುವ ಜಾಕ ಚಕ್ಯತೆಯಿಂದ ಎಲ್ಲರಿಗೂ ಕ್ಷಣದಲ್ಲಿ ಗುಗ್ಗರಿ ಕೊಡುತ್ತಿದ್ದ. ಆದರೆ ಪಚ್ಚಡಿ ಹಾಕುವಾಗ ಮಹಾಜಿಪುಣತನವನ್ನು ತೋರುತ್ತಿದ್ದ. ಯಾರಾದರು ಇನ್ನೂ ಕೊಂಚ ಪಚ್ಚಡಿ ಹಾಕು' ಅಂದರೆ 'ಏ ಬಿಡಿ, ಗುಗ್ಗರಿ ತಿಂದ್ರೇನೆ ಬಲ. ಪಚ್ಚಡಿ ತಿಂದ್ರೆ ಏನು ಬರುತ್ತೆ' ಅಂತ ಸಿಡುಕೀ ಸಿಡುಕದ ಹಾಗೆ ಒಂದಿಷ್ಟು ಉದುರಿಸುತ್ತಿದ್ದ. ಎಷ್ಟು ಬೇಗ ಗುಗ್ಗರಿ ಕೊಡುತ್ತಿದ್ದನೊ ಅಷ್ಟೇ ಬೇಗ ದುಡ್ಡು ವಸೂಲು ಮಾಡುತ್ತಿದ್ದ. ಎಲೆ ಕಲಸಲು ಬಿಡುತ್ತಿರಲಿಲ್ಲ. ಅದನ್ನು ಹಂಚಲು ಅವಕಾಶ ಕೊಡುತ್ತಿರಲಿಲ್ಲ. 'ಆಟದಲ್ಲಿ ಮುಳುಗಿ ಮರೆತು ಹೋಗ್ತೀರಯ್ಯ' ಎನ್ನುತ್ತಾ ಹುಚ್ಚುಚ್ಚಾಗಿ ನಗುತ್ತ ವಿನಯದಿಂದಲೆ ಎದೆಯ ಮೇಲೆ ಕೂರುತ್ತಿದ್ದ. ಅಷ್ಟರಲ್ಲಿ ಆ ದಡದಿಂದ ಈ ದಡಕ್ಕೆ ದೋಣಿ ಬರುತ್ತಿತ್ತು. ಸುಬ್ಬರಾಯ ಸುಂಯನೆ ಬಾಣದಂತೆ ರೇವಿನತ್ತ ಓಡುತ್ತಿದ್ದ. 'ಗುಗ್ಗರಿ, ಬಿಸಿ ಬಿಸಿ ಗುಗ್ಗರಿ' ಅನ್ನುತ್ತ ಇಳಿಯುವವರ ಸುತ್ತ ತಿರುಗುತ್ತಿದ್ದ. ಅವರು ಗಂಟುಮೂಟೆ ಇಳಿಸಿಕೊಳ್ಳುವ ಮೊದಲೆ ಗುಗ್ಗರಿ ಕೊಳ್ಳುವಂತೆ ಮಾಡುತ್ತಿದ್ದ. ಕೊಳ್ಳದವರು ಯಾರಾದರೂ ಇದ್ದರೆ ಅವರ ಮಕ್ಕಳ ಸುತ್ತ ಪ್ರದಕ್ಷಿಣೆ ಮಾಡುತ್ತ ಬುಟ್ಟಿ ತೆರೆದು ತೋರಿಸುತ್ತಿದ್ದ. ಮಕ್ಕಳ ಕಾಟ ತಡೆಯಲಾಗದೆ ಅವರು ಕೊಳ್ಳುತ್ತಿದ್ದರು. ರೇವಿಗೆ, ಹುಣಿಸೆ ಮರದಡಿಗೆ ಮೂರು ಸಲ ಓಡಾಡುವಷ್ಟರಲ್ಲಿ ಅರ್ಧಕ್ಕೂ ಹೆಚ್ಚು ಖಾಲಿಯಾಗುತ್ತಿತ್ತು.

ವ್ಯಾಪಾರ ಸ್ವಲ್ಪ ತಗ್ಗಿದಾಗ ಆಡುವವರ ಹಿಂದೆ ಸೇರಿ 'ಪೋಲಯ್ಯನವರೆ ಎಲೆ ಎಳೀರಿ. ತಕ್ಕಂತ ಆಟ ಆಗಿ ಹೋಗಬೇಕು' ಅನ್ನುತ್ತಿದ್ದ. ಆ ಎಲೆಯಿಂದ ಆಟ ಆಯಿತು ಅಂದುಕೊಳ್ಳಿ, ಪೋಲಯ್ಯ ಕೇಳದೇನೇ ಎಲೆಗೆ ಗುಗ್ಗರಿ ಹಾಕಿಕೊಟ್ಟು ಕಾಸು ವಸೂಲಿ ಮಾಡುತ್ತಿದ್ದ. ಆಟ ಬಿಟ್ಟುಕೂತವರ ಬಳಿಗೆ ಹೋಗಿ 'ಬೇಡವೋ' ಅನ್ನುತ್ತಿದ್ದರು 'ಜಾಸ್ತಿ ಪಚ್ಚಡಿ ಹಾಕಿದ್ದೀನಿ, ತಗೊಳ್ಳಿ. ಮತ್ತೆ ಎಲೆ ಹಾಕೋತನಕ ಸುಮ್ಮನೆ ಕೂತಿರೋದೆ ತಾನೆ' ಎಂದು ಕೈಗಿಡುತ್ತಿದ್ದ.

ಗಂಟೆ ಮೂರಾಗುವ ವೇಳೆಗೆ ಬುಟ್ಟಿ ಖಾಲಿಯಾದರೂ ಸುಬ್ಬರಾಯ ಅಲ್ಲಿಂದ ಹೊರಡುತ್ತಿರಲಿಲ್ಲ. ಅಸಲು ವ್ಯಾಪಾರ ನಡೆಯುತ್ತಿದ್ದುದೆ ಆನಂತರ. ಇಸ್ಪೀಟಿನ ಕುರುಕ್ಷೇತ್ರದಲ್ಲಿ ಕೈಕಾಲು ಮುರಿದು, ತಲೆಯುರುಳಿ ಬಿದ್ದ ಜನ ದೀನರಾಗಿ ಸುಬ್ಬರಾಯನತ್ತ ನೋಡಿ ' ಒಂದೆರಡು ರೂಪಾಯಿ ಸಾಲ ಕೊಡೊ' ಎಂದು ಯಾರಾದರೂ ಕೇಳಿದರೆ 'ನನ್ನ ಹತ್ತಿರ ಎಲ್ಲೀದಯ್ಯಾ? ಗುಗ್ಗರಿ ಮಾರಿಕೊಳ್ಳೋನು' ಅನ್ನುತ್ತಿದ್ದ. ಯಾರೇ ಕೇಳಲಿ ಮೊದಲು ಈ ವಾಕ್ಯವನ್ನು ಒಪ್ಪಿಸುತ್ತಿದ್ದ. ಆನಂತರ ಮಾತು ಹೀಗೆ ಸಾಗುತ್ತಿತ್ತು.

'ಮಾರಿದ್ದರಲ್ಲಿ ಕೊಡೊ'

'ಅಯ್ಯಮ್ಮೋ! ಇದರಲ್ಲಿ ಕೊಟ್ಟರೆ ಅಕ್ಕಿಗೇನು ಮಾಡಲಿ?'

'ಸಾಯಂಕಾಲಕ್ಕೆ ಕೊಡ್ತಿನಲ್ಲೊ?'

'ಈಗ ನಿಮಗೆ ಕೊಟ್ಟುಬಿಟ್ಟರೆ ನಾಳೆ ಸರಕು ತರಬೇಡವಾ? ಬೆಲೆ ಕೈ ಸುಡುತ್ತಿದೆ'

'ನಿನ್ನ ಪಾವಲಿ ಬಡ್ಡಿ ತಗೊಳ್ಳೊ'

'ನಿಮ್ಮ ಹತ್ತಿರ ಅಸಲು ಬಡ್ಡಿ ಎಲ್ಲಿ ಹೋಗುತ್ತೆ. ನನ್ನ ಇಕ್ಕಟ್ಟು ಅಂದ್ರೆ ....' ಅನ್ನುತ್ತ ಅವರಿಂದ ಕಾಡಿಸಿಕೊಂಡು, ಬೇಡಿಸಿಕೊಂಡು ಸಾಲ ಕೊಡುತ್ತಿದ್ದ. ಗುಗ್ಗರಿ ಮಾರಿದರೆ ಐದು ರೂಪಾಯಿ ಲಾಭ ಬಂದರೆ, ಪಾವಲಿ ಬಡ್ಡಿಯಂತೆ ಹತ್ತು ರೂಪಾಯಿ ಬರುತ್ತಿತ್ತು. ಹೊತ್ತು ಮುಳುಗುವ ಹೊತ್ತಿಗೆ ಎಲ್ಲ ವಸೂಲಿ ಮಾಡಿಕೊಂಡು ಕತ್ತಲಾಗುವ ವೇಳೆಗೆ ಸಾರಾಯಿ ಅಂಗಡಿ ಹತ್ತಿರಕ್ಕೆ ಹೋಗುತ್ತಿದ್ದ. ಸಾರಾಯಿ ಬಾಲೆ ಮುತ್ತೊಂದನ್ನು ಕೊಟ್ಟು ಹೋದಾಗ ಮೈ ಜಿಲ್ ಎಂದು, ಅವಳನ್ನು ಅನಾಮತ್ತಾಗಿ ಅಪ್ಪಲು ದುಡ್ಡಿಲ್ಲದೆ ಒದ್ದಾಡುವ ಸಾರಾಯಿ ಸರಸಗಾರರಿಗೆ ಅರ್ಧರೂಪಾಯಿ ಬಡ್ಡಿಗೆ ಸಾಲ ಕೊಡುತ್ತಿದ್ದ, ಸುಬ್ಬರಾಯ. ಆ ಸಾಲವನ್ನು ಕೂಲಿ ಬಟವಾಡೆಯಾಗುವಾಗ, ಬೆಳೆ ಬಂದಾಗ ವಸೂಲು ಮಾಡಕೊಳ್ಳುತ್ತಿದ್ದ.

ಮೂರು ವರ್ಷದಲ್ಲಿ ಸುಬ್ಬರಾಯಿ ಚಿಲ್ಲರೆ ಅಂಗಡಿ ಇಟ್ಟ. ಒಡವೆ ಕುದುವಿಟ್ಟವರಲ್ಲಿ ಅರ್ಧಜನ ಸಾಲ ತೀರಿಸಲಾಗದೆ ಬಿಟ್ಟು ಬಿಡುತ್ತಿದ್ದರು. ಜಮೀನು ಅಡ ಇಟ್ಟವರ ಸ್ವತ್ತು ಇವನದೇ ಆಗಿ ಸುಬ್ಬರಾಜನೀಗ ನಲವತ್ತು ಎಕರೆಗಳು ಒಡೆಯ. ಮೇಲಾಗಿ ಮೂರು ಬಂಗಲೆಗಳ ಯಜಮಾನ. ಲಕ್ಷಗಳಲ್ಲಿ ಬಡ್ಡಿವ್ಯಾಪಾರ.

ಈಗ ಅವನನ್ನು ಯಾರೂ ಸುಬ್ಬರಾಯ ಎಂದು ಕರೆಯುವುದಿಲ್ಲ. ಅವನ ಕುಲದವರು 'ಸುಬ್ಬಯ್ಯ' ಅಂದರೆ ಉಳಿದವರು 'ಸುಬ್ಬರಾಯರೆ' ಎಂದು ಕರೆಯುವರು. ಮೊಮ್ಮಕ್ಕಳೊಂದಿಗೆ ವೈಭವದಿಂದ ಜೀವಿಸುತ್ತಿರುವ ಸುಬ್ಬರಾಯ ಯಾರನ್ನೂ ನಂಬುವುದಿಲ್ಲ. ಬೆಳಗಿನ ಜಾವಕ್ಕೇ ಎದ್ದು ಬಾಗಿಲು ಹಾಕಿಕೊಂಡು ಗುಟ್ಟಾಗಿ ಒಂದು ಗಂಟೆ ಕಾಲ ಪ್ರಾರ್ಥನೆ ಮಾಡುತ್ತಾನೆ. 'ನನ್ನ ಪ್ರಾರ್ಥನೆಯೆ ನನ್ನ ಭಾಗ್ಯ' ಎಂದು ಎಲ್ಲರಿಗೂ ಹೇಳುತ್ತಾನೆ.

ನಗರದ ಕಾಲೇಜಿನಲ್ಲಿ ಓದುತ್ತಿರುವ ಸುಬ್ಬರಾಯನ ಮೊಮ್ಮಗ ತಾತ, ಅಪ್ಪ ಇಟ್ಟ ಬುಚ್ಚಯ್ಯ ಎಂಬ ಹೆಸರನ್ನು ಹೇಮಂತಕುಮಾರ್ ಎಂದು ಬದಲಿಸಿಕೊಂಡು ರಜೆಯಲ್ಲಿ ಮನೆಗೆ ಬಂದ. ತಾತನ ಪ್ರಾರ್ಥನೆಯ ರಹಸ್ಯವನ್ನು, ಭಾಗ್ಯದ ಮರ್ಮವನ್ನು ತಿಳಿಯಲು ಹೊಂಚು ಹಾಕಿ, ಒಂದು ದಿನ ಬಾಗಿಲ ಸಂದಿಗೆ ಬೈನಾಕ್ಯುಲರ್ ಹೊಂದಿಸಿ ನೋಡಿದ. ಗುಟ್ಟು ರಟ್ಟಾಯಿತು.

ಸುಬ್ಬರಾಯರು ಅಂದು ಗುಗ್ಗರಿ ಬುಟ್ಟಿಯ ಮೇಲೆ ಆಡಿಸುತ್ತಿದ್ದ ಮಾಸಿದ ಹಳೇ ಬಟ್ಟೆಯನ್ನು ಪೂಜಿಸುತ್ತಿದ್ದರು.

❑

✤ **ಸ. ರಘುನಾಥ,** ಬಾಲಾಂಜನೇಯಸ್ವಾಮಿ ಗುಡಿಯ ಪೂರ್ವ,
ರಾಮಕೃಷ್ಣ ಬಡಾವಣೆ, ಶ್ರೀನಿವಾಸಪುರ - ೫೬೩ ೧೩೫, ಕೋಲಾರ ಜಿಲ್ಲೆ.

ಸೀಲ್‌ಮರಿಗೆ ಬದುಕುಕೊಟ್ಟ ಬಾಲೆ

- ಎಚ್.ಸ್. ಸೋಮಶೇಖರಗೌಡ

ಅದೊಂದು ಬೇಸಗೆಯ ಸಂಜೆ, ೧೯೯೧ ರ ಜೂನ್ ತಿಂಗಳು. ನಾರ್ವೆಯ ಪಶ್ಚಿಮ ಸಮುದ್ರ ತೀರದಲ್ಲಿ ತನ್ನ ತಂದೆಯೊಂದಿಗೆ ದೋಣಿ ವಿಹಾರದಲ್ಲಿದ್ದ ೧೭ ರ ಹರೆಯದ ಬಾಲಕಿ ಕ್ಯಾಥರೀನಳಿಗೆ ಸಾಗರದ ನಡುಗಡ್ಡೆಯಲ್ಲಿ ಕಪ್ಪನೆಯ ಆಕೃತಿಯೊಂದು ಕಣ್ಣಿಗೆ ಬಿತ್ತು. ಬಹುಶಃ ಅದೊಂದು ಬಂಡೆಯಿರಬಹುದೆಂದು ಕೊಂಡವಳಿಗೆ ಅದರಲ್ಲಿ ಚಲನೆ ಕಂಡಂತಾಗಿ ಕುತೂಹಲವಾಯಿತು. ದೋಣಿ ನಡೆಸುತ್ತಿದ್ದ ತನ್ನ ತಂದೆಗೆ ದೋಣಿಯನ್ನು ಅತ್ತ ತಿರುಗಿಸಲು ಒತ್ತಾಯಿಸಿ ತನ್ನ ಬಳಿಯಿದ್ದ ದುರ್ಬೀನಿನಲ್ಲಿ ದೃಷ್ಟಿ ಹಾಯಿಸಿದಾಗ ಯಾವುದೋ ಪುಟ್ಟ ಪ್ರಾಣಿಯೊಂದು ಬಂಡೆಯ ಮೇಲೆ ಕುಳಿತಿರುವುದು ಕಂಡು ಬಂತು. ಮತ್ತೂ ಹತ್ತಿರ ಹೋಗಿ ನೋಡಿದರೆ ಅದೊಂದು ಪುಟ್ಟ "ಸೀಲ್ ಮರಿ".

ತೀರದಲ್ಲಿ ಕಾಯುತ್ತಿದ್ದ ತನ್ನ ತಾಯಿ ಮತ್ತು ತಮ್ಮನನ್ನು ಕೂಡಿಕೊಳ್ಳಲು ವಾಪಸಾಗುವಾಗ ಅವಳು ತನ್ನ ತಂದೆಯೊಡನೆ ಕೇಳಿದಳು ; ಆ ಮರಿ ಯಾಕೆ ಹಾಗೆ ಒಂಟಿಯಾಗಿ ಬಿದ್ದುಕೊಂಡಿದೆ? ಬಹುಶಃ ಅದರ ತಾಯಿ ಕಳೆದು ಹೋಗಿರಬಹುದು, ಅಥವಾ ಸತ್ತುಹೋಗಿರಬಹುದು, ತಂದೆ ನಿರುದ್ವಿಗ್ನವಾಗಿ ಉತ್ತರಿಸಿದ.

೪೩ ವರ್ಷ ಪ್ರಾಯದ 'ಟ್ರಿಗ್ವೆ ಬರ್ಜ್' ಬೇಸಗೆಯ ದಿನಗಳನ್ನು ಕಳೆಯಲು ಮಡದಿ 'ಅನಾ' ಮಗಳು 'ಕ್ಯಾಥರೀನ್' ಹಾಗೂ ಮಗ 'ಕ್ರಿಶ್ಚಿಯನ್' ಜೊತೆ ತನ್ನ ಬೇಸಗೆಯ ದ್ವೀಪದ ಮನೆಗೆ ಬಂದಿದ್ದ.

ರಾತ್ರಿಯಿಡೀ ಕ್ಯಾಥರೀನಳ ಕಣ್ಣಿಗೆ ನಿದ್ದೆ ಹತ್ತಲಿಲ್ಲ. ಬೆಳಗಾಗುತ್ತಲೇ ಬೈನಾಕ್ಯುಲರ್ ಹೆಗಲಿಗೇರಿಸಿ ಸಮೀಪದ ಗುಡ್ಡ ಹತ್ತಿ ನಡುಗಡ್ಡೆಯ ಕಡೆ ಕಣ್ಣು ನೆಟ್ಟಳು. ಆ ಪುಟ್ಟ ಮರಿ ಅದೇ ಜಾಗದಲ್ಲೇ ನಿಶ್ಚಲವಾಗಿ ಬಿದ್ದುಕೊಂಡಿತ್ತು. ಕ್ಯಾಥರೀನ್ ಆ ಸೀಲ್ ಮರಿಯ ಸ್ಥಿತಿ ಕುರಿತಂತೆ ತಂದೆಯೊಡನೆ ಪ್ರಸ್ತಾಪಿಸಿದಳು. ಅವಳ ಆತಂಕಕ್ಕೆ ಸ್ಪಂದಿಸಿದ ಬರ್ಜ್ ಆ ಕ್ಷಣವೇ ಅಕ್ವೇರಿಯಮ್‌ನ ಅಧಿಕಾರಿ ಎನಾರ್ಸೆನ್‌ನನ್ನು ಸಂಪರ್ಕಿಸಿದ. ಆ ಮರಿಯನ್ನು ಇನ್ನೂ ಎರಡು ದಿನದ ನಂತರ ನೋಡಿ ಅದು ಅಲ್ಲೇ ಇದ್ದರೆ ಆನಂತರ ಅದರ ಕುರಿತು ಯೋಚಿಸುವಾ, ಎನ್ನುವ ಉತ್ತರ ಆತನಿಂದ ಬಂತು. ಆನಂತರದ ಎರಡು ದಿನವೂ ಕೂಡಾ ಕ್ಯಾಥರೀನಳಿಗೆ ಅದೇ ಧ್ಯಾನವಾಗಿತ್ತು. ಸೀಲ್‌ಮರಿ ಆ ಜಾಗವನ್ನು ಬಿಟ್ಟು ಕದಲಿರಲೇ ಇಲ್ಲ. ನಂತರ ಕ್ಯಾಥರೀನ್ ತಂದೆಯೊಡನೆ ಆ ನಡುಗಡ್ಡೆಯನ್ನರಸಿ ಹೊರಟಳು. ದಡದಲ್ಲಿ - ದೋಣಿಯನ್ನು ನಿಲ್ಲಿಸಿ ತೆವಳುತ್ತಾ ಅದರ ಬಳಿ ಹೋಗುತ್ತಿದ್ದಂತೆ ಆ ಪುಟ್ಟ ಸೀಲ್ ಮರಿ ಪಿಳಪಿಳನೆ ಕಣ್ಣು

ನಿಡುತ್ತ ಅವಳನ್ನೇ ನೋಡುತ್ತಿತ್ತು. "ಹೆದರಬೇಡ ನಾವು ನಿನಗೆ ಸಹಾಯ ಮಾಡಲು ಎಂದಿದ್ದೇವೆ" ಎನ್ನುತ್ತಾ ಕ್ಯಾಥರೀನ್ ಅದರ ಮೃದುವಾದ ತುಪ್ಪುಳವನ್ನು ನೇವರಿಸಿದಳು. ಅವಳ ಹೃದಯ ಅರ್ಥವಾಯಿತೇನೋ ಎಂಬಂತೆ ಆ ಪುಟ್ಟಮರಿ ಅವರ ಬೆರಳುಗಳನ್ನು ಆಪ್ಯಾಯತೆಯಿಂದ ನೆಕ್ಕಿತು.

ಪುಟ್ಟ ನಾಯಿಮರಿಯಷ್ಟಿದ್ದ ಅದರ ಕಣ್ಣುಗಳು ಗಾತ್ರಕ್ಕೆ ಅತಿಯಾಯಿತೇನೋ ಎಂಬಷ್ಟು ದೊಡ್ಡವಾಗಿದ್ದವು. ಬೂದು ಬಣ್ಣದ ಮೈಮೇಲೆ ಕಂದು ಚುಕ್ಕೆಗಳು ಹೊಳೆಯುತ್ತಿದ್ದವು. ಅದರ ತುಪ್ಪುಳ ರೇಷ್ಮೆಯಷ್ಟೇ ನುಣುಪಾಗಿತ್ತು. ಕಿವಿಗಳು ಕಂಡೂ ಕಾಣದಷ್ಟು ಚಿಕ್ಕವಾಗಿದ್ದವು. ಅದರ ಮೈ ನೇವರಿಸುತ್ತಾ ಮರಿಯನ್ನು ತೆಕ್ಕೆಗೆ ತೆಗೆದುಕೊಂಡ ಕ್ಯಾಥರೀನ್ ದೋಣಿಯನ್ನೇರಿ ಆಕ್ವೇರಿಯಮ್‌ನ ನಿರ್ದೇಶಕ ಎನಾರ್ಸೆನ್‌ನ ಬಳಿ ಬಂದಳು.

ಆತ ಮರಿಯನ್ನು ಕೂಲಂಕುಶವಾಗಿ ಪರಿಶೀಲಿಸಿದ. ಹುಟ್ಟಿ ಆರು ದಿನಗಳಷ್ಟೇ ಆಗಿರಬಹುದಾದ, ಗಂಡು ಮರಿ ಎಂದು ತಿಳಿಸಿದ. ಅದು ೮ ಕೆ.ಜಿ. ತೂಗುತ್ತಿತ್ತು. ಆದರೆ, ಅದನ್ನು ಉಳಿಸುವುದು ಹೇಗೆ ಎನ್ನುವುದೇ ಅವನ ಚಿಂತೆಯಾಗಿತ್ತು. ತಾಯಿಯಿಲ್ಲದ ಸೀಲ್ ಮರಿಯನ್ನು ಪೋಷಿಸುವುದು ತುಂಬಾ ಕಷ್ಟದ ಕೆಲಸವೆಂದು ತಿಳಿಸಿದ ಆತ, ಅದಕ್ಕೆ ತಾಯಿಯ ಸ್ಥಾನದಲ್ಲಿ ನಿಂತು ಅದರ ಜವಾಬ್ದಾರಿಯನ್ನು ಹೊರಬಲ್ಲವರಿಂದ ಮಾತ್ರ ಅದನ್ನು ಉಳಿಸಲು ಸಾಧ್ಯ, ಅದು ತನ್ನಷ್ಟಕ್ಕೆ ತಾನೇ ಬದುಕಲು ಕಲಿಯಲಿಕ್ಕೆ ಕನಿಷ್ಟ ಮೂರು ತಿಂಗಳಾದರೂ ಆಗಬಹುದು, ಅಷ್ಟು ದೀರ್ಘಕಾಲ ಅದಕ್ಕಾಗಿಯೇ ಸಮಯ ಮೀಸಲಿರಿಸಲು ನಮ್ಮಿಂದ ಸಾಧ್ಯವಾಗದೆಂದು ಕೈಚೆಲ್ಲಿದ.

ಆದರೆ, ಕ್ಯಾಥರೀನಳಿಗೆ ಆ ಮರಿಯನ್ನು ಹಾಗೆಯೇ ಸಾಯಬಿಡಲು ಮನಸ್ಸಾಗಲಿಲ್ಲ. ಅದನ್ನು ತಾನೇ ಪೋಷಿಸುವ ಆಸೆ ವ್ಯಕ್ತಪಡಿಸಿದಳು. ತಂದೆ ಬರ್ಜ್ ಕೂಡ ಮಗಳ ಆಸೆಗೆ ತನ್ನ ಸಹಮತ ಸೂಚಿಸಿದ. ಆತನ ತಲೆಯೊಳಗೆ ಬೇರೆಯದೇ ಯೋಜನೆ ರೂಪುಗೊಳ್ಳುತ್ತಿತ್ತು. ಸಿನಿಮಾ ನಿರ್ದೇಶಕನಾಗಿ ಸಾಕಷ್ಟು ಹೆಸರು ಮಾಡಿದ್ದ ಆತನಿಗೆ, ತನ್ನ ಮಗಳು ಸೀಲ್ ಮರಿಯನ್ನು ಬೆಳೆಸುವುದನ್ನು ಚಿತ್ರೀಕರಿಸಲು ಯೋಚಿಸಿದ್ದ.

ಅಂದಿನಿಂದ ಆರಂಭವಾಯಿತು ಕ್ಯಾಥರೀನ್ ಮತ್ತು ಸೀಲ್ ಮರಿಯ ಒಡನಾಟ. ಅದಕ್ಕವಳು 'ಸೆಲಿಕ್' ಎನ್ನುವ ಹೆಸರಿಟ್ಟಳು. ಅದಕ್ಕೆ ತಾಯಿಯ ಹಾಲಿಗೆ ಪರ್ಯಾಯವಾಗಿ ಹೆರ್ರಿಂಗ್ ಮೀನುಗಳನ್ನು ನುಣ್ಣಗೆ ಅರೆದು ಸಮುದ್ರದ ನೀರಿನೊಡನೆ ಬೆರೆಸಿ ಗಂಜಿಯಂಥ ಪದಾರ್ಥವನ್ನು ತಯಾರಿಸಿ ಪ್ಲಾಸ್ಟಿಕ್ ಕೊಳವೆ ಮೂಲಕ ಕುಡಿಸುವುದನ್ನು ಎನಾರ್ಸೆನ್ ತೋರಿಸಿಕೊಟ್ಟ. ಪ್ರತಿ ನಾಲ್ಕು ಗಂಟೆಗಳಿಗೊಮ್ಮೆ ಈ ದ್ರವ ಪದಾರ್ಥವನ್ನು ಅದಕ್ಕೆ ಕುಡಿಸಬೇಕಿತ್ತು. ಆಹಾರ ಹೊಟ್ಟೆ ಸೇರಿದ ಮೇಲೆ ಮರಿ ಚೇತರಿಸಿಕೊಂಡಿತು. ಕ್ಯಾಥರೀನಳಿಗಂತೂ ಹಗಲೂ ರಾತ್ರಿ ಅದರದೇ ಧ್ಯಾನವಾಗಿತ್ತು. ರಾತ್ರಿಯ ವೇಳೆ ಕೂಡಾ ನಾಲ್ಕು ಗಂಟೆಗಳಿಗೊಮ್ಮೆ ನಿದ್ರೆಯಿಂದೆದ್ದು ಅದಕ್ಕೆ ಆಹಾರ ಕುಡಿಸಬೇಕಿತ್ತು. ಬಂಡೆಗಳ ಮೇಲೆಲ್ಲಾ ತೆವಳುತ್ತಾ ಹೋಗಿ ಚೂಪು ಕಲ್ಲಿನಿಂದ ಅದು ಮಾಡಿಕೊಳ್ಳುವ ಗಾಯಗಳನ್ನು ತೊಳೆದು ಅದಕ್ಕೆ ಔಷಧಿ ಹಚ್ಚುವುದು,

ಹಾಗೆಯೇ ಅದು ಮನೆಯೆಲ್ಲಾ ತೆವಳುತ್ತಾ ಮಾಡುವ ಕೊಳಕನ್ನೆಲ್ಲಾ ತೊಳೆಯುವ ಕೆಲಸ ಅವಳ ದಿನಚರಿಯಾಯ್ತು.

ನಾಲ್ಕಾರು ವಾರಗಳ ನಂತರ ಅದು ಸಾಕಷ್ಟು ಚೇತರಿಸಿಕೊಂಡಿತ್ತು. ತೂಕ ಕೂಡಾ ಹೆಚ್ಚಾಗಿತ್ತು. ಅತ್ಯಂತ ಚಟುವಟಿಕೆಯಿಂದ ಕೂಡಿದ್ದ ಅದು ಕ್ಷಣ ಕೂಡಾ ಮನೆಯಲ್ಲಿ ಇರುತ್ತಿರಲಿಲ್ಲ. ತೋಟದಲ್ಲಿ ಹಾರುವ ಚಿಟ್ಟೆಗಳನ್ನು ಅಟ್ಟಿಸಿ ಹಿಡಿಯಲು ಪ್ರಯತ್ನಿಸುತ್ತಿತ್ತು. ತೋಟ, ಸಮುದ್ರ ತೀರದ ಬಂಡೆಗಳ ಮೇಲೆಲ್ಲಾ ಅಲೆದಾಡಿ ಹಸಿವಾದಾಗ ಮಾತ್ರ ಮನೆಯ ಬಳಿ ಬಂದು ಅರಚುತ್ತಿತ್ತು. ರಾತ್ರಿಯ ವೇಳೆ ಅದಕ್ಕಾಗಿಯೇ ಅವರ ದೋಣಿಯ ಗ್ಯಾರೇಜಿನಲ್ಲಿ ಕಟ್ಟಲಾಗಿದ್ದ ಗೂಡೊಂದರಲ್ಲಿ ಮಲಗುತ್ತಿತ್ತು.

ದಿನಕಳೆದಂತೆ ಅದು ದ್ರವ ಆಹಾರ ಬಿಟ್ಟು ಸಣ್ಣ ಪುಟ್ಟ ಹೆರ್ರಿಂಗ್ ಮೀನುಗಳನ್ನು ಹಾಗೆಯೇ ತಿನ್ನುವ ಅಭ್ಯಾಸ ಬೆಳೆಸಿಕೊಂಡಿತ್ತು. ಆದರೆ ಅದಕ್ಕಿನ್ನೂ ಈಜುವುದಾಗಲೀ ತನ್ನ ಮೀನುಗಳನ್ನು ತಾನೇ ಹಿಡಿಯುವುದಾಗಲೀ ಅಭ್ಯಾಸವಾಗಿರಲಿಲ್ಲ. ಕ್ಯಾಥರೀನ್ ಈಗದನ್ನು ಈಜು ಕಲಿಸಲು ಸಮುದ್ರಕ್ಕೆ ಕರೆದೊಯ್ದಳು.

ಎಷ್ಟೇ ಪ್ರಯತ್ನಪಟ್ಟರೂ ಅದು ನೀರಿಗೆ ಇಳಿಯಲೇ ಇಲ್ಲ. 'ಇದೇ ನಿನ್ನ ಮನೆ, ಒಂದಲ್ಲಾ ಒಂದು ದಿನ ನೀನಿಲ್ಲಿಯೇ ಜೀವಿಸಬೇಕು.' ಎನ್ನುತ್ತಾ ಬಲವಂತವಾಗಿ ಕ್ಯಾಥರೀನ್ ಅದನ್ನು ನೀರಿಗೆ ನೂಕಿದರೂ ಗಾಭರಿಯಿಂದ ಅದು ದಡಕ್ಕೆ ಓಡಿ ಬರುತ್ತಿತ್ತು. ನೀರಿನಲ್ಲಿಯೇ ಜೀವಿಸುವ ಸೀಲ್ ಪ್ರಾಣಿ ನೀರನ್ನು ಕಂಡರೇನೇ ಹೆದರುವುದು ಕಂಡು ಕ್ಯಾಥರೀನಳಿಗೆ ಆಶ್ಚರ್ಯವಾಗಿತ್ತು. ಆದರೂ ನಿರಾಶಳಾಗದೆ ಅವಳು ಅದನ್ನು ಪ್ರತಿದಿನವೂ ಈಜುವ ಅಭ್ಯಾಸ ಮಾಡಿಸಲಿಕ್ಕಾಗಿ ತೀರದಲ್ಲಿ ಎರಡು ಬಂಡೆಗಳ ನಡುವೆ ನಿರ್ಮಾಣವಾಗಿದ್ದ ಕಾಲುವೆಯೊಂದಕ್ಕೆ ಕರೆದೊಯ್ಯುತ್ತಿದ್ದಳು. ದಿನಕಳೆದಂತೆ ನಿಧ ನಿಧಾನವಾಗಿ ಅದು ಕ್ಯಾಥರೀನಳೊಂದಿಗೆ ಈಜುವುದನ್ನು ಅಭ್ಯಾಸ ಮಾಡಿತು. ಆದರೆ, ಕ್ಯಾಥರೀನಳ ಜೊತೆ ಬಿಟ್ಟು ದೂರ ಹೋಗುತ್ತಿರಲಿಲ್ಲ. ಒಂದು ದಿನ ತೀರದಲ್ಲೇ ಈಜುತ್ತಿದ್ದ ಅದನ್ನು ಆಳ ಸಮುದ್ರಕ್ಕೆ ಕೊಂಡೊಯ್ಯಲು ನಿರ್ಧರಿಸಿ ಅವಳು ದೋಣಿಯನ್ನೇರಿ ಹೊರಟಳು. ತೀರದಿಂದ ಬಹುದೂರದ ಪ್ರಶಾಂತ ಸಮುದ್ರದಲ್ಲಿ ಈಜುಡುಗೆ ಹಾಗೂ ಮುಖಗವಚ ತೊಟ್ಟು ಸೆಲಿಕ್‌ನೊಂದಿಗೆ ನೀರಿಗಿಳಿದಳು. ಸಮುದ್ರದ ಆಳದಲ್ಲಿ ಈಜುತ್ತಿದ್ದಂತೆ ಅವಳಿಗೇ ಆಶ್ಚರ್ಯವೆನಿಸುವಂತೆ ಆ ಸೀಲ್ ಮರಿ ಅವಳಿಂದ ದೂರದೂರಕ್ಕೆ ಈಜುತ್ತಾ ಹೋಯಿತು. ಅದರ ಸರಿಸಮಕ್ಕೆ ತನಗೆ ಈಜಲಿಕ್ಕೆ ಸಾಧ್ಯವೇ ಇಲ್ಲ ಎಂಬಷ್ಟು ತೀವ್ರ ಗತಿಯಲ್ಲಿ ಹೊರಳುತ್ತಾ, ಬಳುಕುತ್ತಾ ಈಜುತ್ತಿದ್ದ ಅದು ತನ್ನ ಪ್ರಾಣಿ ಸಹಜ ಸ್ವಭಾವವನ್ನು ಪಡೆದುಕೊಂಡಿತ್ತು. ಆ ದಿನ ಹೆಚ್ಚು ಖುಷಿಯಿಂದ ತೀರಕ್ಕೆ ವಾಪಸಾಗಿದ್ದಳು ಕ್ಯಾಥರೀನ್.

ಒಮ್ಮೆ ಕ್ಯಾಥರೀನಳಿಗೆ ಸೆಲಿಕ್ ಸಮುದ್ರದ ಬೃಹತ್ ಅಲೆಗಳೊಂದಿಗೆ ಈಜಬಲ್ಲದೇ ಎನ್ನುವ ಕುತೂಹಲವಾಯ್ತು. ಅವಳು ಈ ಬಗ್ಗೆ ತಂದೆಯೊಡನೆ ಚರ್ಚಿಸಿದಳು. ಆತ ಅವಳ ಕುತೂಹಲವನ್ನು ಪರೀಕ್ಷೆಗೊಳಪಡಿಸಲು ನಿರ್ಧರಿಸಿ, ಒಂದು ದಿನ ಸೆಲಿಕ್‌ನೊಡನೆ ಮೊದಲ ಬಾರಿ ಅದು ಅನಾಥವಾಗಿ ಬಿದ್ದುಕೊಂಡಿದ್ದ ಆ ನಡುಗಡ್ಡೆಗೆ ಬಂದರು. ಆ ದಿನ ಸಮುದ್ರ ಎಂದಿಗಿಂತಲೂ ಹೆಚ್ಚು ಪ್ರಕ್ಷುಬ್ಧವಾಗಿತ್ತು. ಕ್ಯಾಥರೀನ್ ಸೆಲಿಕ್‌ನನ್ನು ದೋಣಿಯಿಂದ ನೀರಿನೊಳಕ್ಕೆ

ಬಿಟ್ಟಳು. ನೋಡ ನೋಡುತ್ತಿದ್ದಂತೆ ಅದು, ಬೃಹತ್ ಅಲೆಗಳೊಂದಿಗೆ ಕೊಚ್ಚಿಕೊಂಡು ಹೋಗುತ್ತಿತ್ತು. ಪಾಪ! ಆ ಪುಟ್ಟ ಮರಿ ಅಲೆಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗದೆ ನೀರಿನಿಂದ ಮೇಲೆ ತನ್ನ ತಲೆಯಿಡಲೂ ಆಗದೆ ಉಸಿರಿಗಾಗಿ ಒದ್ದಾಡುತ್ತಿತ್ತು. ಕ್ಯಾಥರೀನಳು ಆತಂಕದಿಂದ ನೋಡುತ್ತಿದ್ದಳು. ಇನ್ನು ಸೆಲಿಕ್ ನಮ್ಮ ಪಾಲಿಗೆ ಇಲ್ಲವಾಯಿತೇನೋ ಎನ್ನುವ ನೋವು ಅವಳನ್ನು ಕ್ಷಣ ಕ್ಷಣಕ್ಕೂ ಬಾಧಿಸುತ್ತಿತ್ತು. ದೋಣಿಯಲ್ಲಿ ಹೋಗಿ ರಕ್ಷಿಸಲಿಕ್ಕೂ ಆಗದಂಥ ಅಪಾಯಕಾರಿಯಾದ ಜಾಗವದಾಗಿತ್ತು. ಸುತ್ತ ಬಂಡೆಗಳಿಗೆ ಬಡಿದು ಬರುತ್ತಿದ್ದ ಬೃಹತ್ ಅಲೆಗಳು, ಅವರ ದೋಣಿಯನ್ನೇ ನುಚ್ಚುನೂರು ಮಾಡುವಂತಿತ್ತು. ತಂದೆಯೊಡನೆ ಕ್ಯಾಥರೀನ್ ಅಸಹಾಯಕಳಾಗಿ ನೋಡುತ್ತಲೇ ಇದ್ದಳು. ಸೆಲಿಕ್ ತನ್ನ ಬದುಕಿಗಾಗಿ ಆ ಬಂಡೆಗಳ ನಡುವೆ, ಅಲೆಗಳ ನಡುವೆ ಹೋರಾಟ ನಡೆಸಿತ್ತು. ಹೀಗೇ ಸುಮಾರು ಒಂದು ಗಂಟೆ ಕಳೆದಿತ್ತು. ಕಡೆಗೊಮ್ಮೆ ಅದೃಷ್ಟವಶಾತ್ ಸೆಲಿಕ್‌ನೊಳಗೇ ಯಾವುದೋ ಶಕ್ತಿ ಸಂಚಯವಾದಂತೆ ತನ್ನೆಡೆಯಿಂದ ವಾಪಸಾಗುತ್ತಿದ್ದ ಬೃಹತ್ ಅಲೆಯೊಂದನ್ನೇರಿ ಆ ಪುಟ್ಟ ಮರಿ ಮೃತ್ಯುಸದೃಶವಾದ ಆ ಶಿಲಾವ್ಯೂಹದಿಂದ ಪಾರಾಗಿ ಬಂದಿತ್ತು. ಕ್ಯಾಥರೀನ್ ಕ್ಷಣ ಕೂಡಾ ತಡಮಾಡದೆ ತಾನೂ ಅಲೆಗಳೊಳಗೆ ಮುನ್ನುಗ್ಗಿ ಅದನ್ನು ತೆಕ್ಕೆಗೆ ತೆಗೆದುಕೊಂಡು ತೀರಕ್ಕೆ ತಂದಳು. ಸಾವಿನ ದವಡೆಯಿಂದ ಪಾರಾಗಿ ಬಂದ ಅದನ್ನು ತಬ್ಬಿಕೊಂಡು, ಇಂಥಾ ಅಪಾಯಕಾರಿ ಪ್ರಯೋಗಕ್ಕೆ ಅದನ್ನು ದೂಡಿದ್ದಕ್ಕಾಗಿ ತನ್ನನ್ನು ಶಪಿಸಿಕೊಳ್ಳುತ್ತಾ, ಅದರೊಡನೆ ಕ್ಷಮೆ ಯಾಚಿಸಿದಳು.

ಈಗಾಗಲೇ ಎರಡು ತಿಂಗಳು ಕಳೆದುಹೋಗಿತ್ತು. ಈಗದು ಮೂವತ್ತು ಕೆ.ಜಿ.ಗಳಷ್ಟು ತೂಗುತ್ತಿತ್ತು. ಸ್ವಾಭಾವಿಕ ಸ್ಥಿತಿಯಲ್ಲದು ಈ ವೇಳೆಗಾಗಲೇ ತನ್ನ ತಾಯಿಯನ್ನು ತೊರೆದು ತನ್ನಷ್ಟಕ್ಕೆ ಬದುಕುವ ಕೌಶಲ್ಯವನ್ನು ಬೆಳೆಸಿಕೊಂಡಿರುತ್ತಿತ್ತು. ಆದರೆ, ಈಗದರ ಸ್ಥಿತಿಯೇ ಬೇರೆಯಾಗಿತ್ತು. ಅದಿನ್ನೂ ತನ್ನ ಆಹಾರವನ್ನು ತಾನೇ ಸಂಪಾದಿಸಿಕೊಳ್ಳುವ ಸ್ಥಿತಿಯನ್ನೇ ತಲುಪಿರಲಿಲ್ಲ. ಅದು ಮೀನುಗಳನ್ನೇನೋ ತಿನ್ನುತ್ತಿತ್ತು. ಆದರೆ ಅದನ್ನು ಮಕ್ಕಳಿಗೆ ತಿನಿಸುವ ಹಾಗೆ ಅದರ ಬಾಯಿಯವರೆಗೂ ಒಯ್ಯಬೇಕಿತ್ತು. ಅದು ತಾನೇ ಮೀನು ಹಿಡಿದು ತಿನ್ನುವ ಅಭ್ಯಾಸ ಮಾಡಿಸಲಿಕ್ಕಾಗಿ ಎನಾರ್ಸನ್‌ನ ಸಲಹೆಯಂತೆ ತಂದೆಯೊಡನೆ ಸೇರಿ ಒಂದು ದೊಡ್ಡ ಪ್ಲಾಸ್ಟಿಕ್ ತೊಟ್ಟಿಯೊಂದನ್ನು ತಂದರು. ಮೂರು ಸಾವಿರ ಲೀಟರ್‌ನಷ್ಟು ಸಮುದ್ರದ ನೀರನ್ನು ಅದಕ್ಕೆ ತುಂಬಿಸಿ ಅದರೊಳಗೆ ಆ ಮರಿಯನ್ನು ಬಿಟ್ಟಳು. ಅದರಲ್ಲಿ ಜೀವಂತವಾದ ಸಾಲ್ಮನ್ ಮೀನುಗಳನ್ನು ಸುರಿಯಲಾಯಿತು. ಆ ಸೀಲ್ ಮರಿಗೆ ಈಜುತ್ತಿದ್ದ ಆ ಮೀನುಗಳನ್ನು ಅಟ್ಟಿಸಿಕೊಂಡು ಹಿಡಿಯುವುದು ಒಂದು ಮೋಜಿನ ಆಟವಾಯಿತೇ ಹೊರತು, ಒಂದು ಮೀನನ್ನು ಕೂಡಾ ತಿನ್ನುತ್ತಿರಲಿಲ್ಲ. ತೊಟ್ಟಿಯ ಬಳಿ ನಿಂತ ಕ್ಯಾಥರೀನ್ 'ಸೆಲಿಕ್, ಅದು ನಿನ್ನ ಆಹಾರ, ತಿನ್ನು ತಿನ್ನು' ಎಂದರೂ ಕೂಡ ಅರ್ಥವಾಗುತ್ತಿರಲಿಲ್ಲ. ಮೀನುಗಳನ್ನು ಹಿಡಿಯುವುದು, ಅದನ್ನು ಏನು ಮಾಡುವುದೆಂದು ಅರ್ಥವಾಗದೆ ಬಿಡುವುದು, ಮತ್ತೆ ಹಿಡಿಯುವುದು. ಹೀಗೇ ಆಟವಾಡಿ ಬೇಸರವಾದರೆ ತೊಟ್ಟಿಯ ದಡದ ಮೇಲೆ ತಲೆಯಿಟ್ಟು ತನ್ನನ್ನು ಹೊರತೆಗೆಯುವಂತೆ ಅರಚುತ್ತಿತ್ತು. ಆದರೂ, ತಾಳ್ಮೆಗೆಡದೆ ಕ್ಯಾಥರೀನ್ ಪ್ರತಿದಿನವೂ ಅದನ್ನು ತೊಟ್ಟಿಯಲ್ಲಿ ಬಿಟ್ಟು ಅದರ ಮೀನಿನ ಬೇಟೆಯ ಅಭ್ಯಾಸ ನಡೆಸಿಯೇ ಇದ್ದಳು.

ಕಡೆಗೂ ಒಂದು ದಿನ ಈ ಸೀಲ್ ಮರಿಯ ಮೂಲ ಸ್ವಭಾವ ಜಾಗೃತಗೊಂಡಿತೇನೋ, ಆ ದಿನ ಹಿಡಿದ ಮೀನನ್ನು ಬಿಡದೆ ಗುಳುಂ ಮಾಡಿತು. ಆ ಕ್ಷಣಕ್ಕಾಗೇ ಕಾದಿದ್ದ ಕ್ಯಾಥರೀನ್ ಸೆಲಿಕ್ ತನ್ನ ಆಹಾರವನ್ನು ತಾನೇ ಸಂಪಾದಿಸಿದ ಎನ್ನುತ್ತಾ ಕುಣಿದಾಡಿಳು. ಆ ನಂತರ ಅದು ಹಿಡಿದ ಯಾವ ಮೀನನ್ನೂ ಬಿಡಲಿಲ್ಲ.

ಮೀನಿನ ಬೇಟೆಯಲ್ಲಿ ಇನ್ನೂ ಹೆಚ್ಚಿನ ಅಭ್ಯಾಸ ಮಾಡಿಸಲಿಕ್ಕಾಗಿ, ಕ್ಯಾಥರೀನ್ ಸೆಲಿಕ್‌ನನ್ನು ತೀರಕ್ಕೆ ಕರೆದೊಯ್ಯುತ್ತಿದ್ದಳು. ಪ್ರಾರಂಭದಲ್ಲಿ ಅದಕ್ಕೆ ಈಜುವ ಅಭ್ಯಾಸ ಮಾಡಿಸಿದ ಬಂಡೆಗಳ ನಡುವಿನ ಕಾಲುವೆಯಲ್ಲಿ ಅದನ್ನು ಬಿಟ್ಟು, ಒಂದೊಂದೇ ಸಾಲ್ಮನ್ ಮೀನುಗಳನ್ನು ನೀರಿನಲ್ಲಿ ಹಾಕುತ್ತಿದ್ದಳು. ಆ ವಿಶಾಲವಾದ ಸ್ಥಳದಲ್ಲಿ ಸೆಲಿಕ್ ಮೀನಿನ ಬೇಟೆಯಲ್ಲಿ ಇನ್ನಷ್ಟು ಹೆಚ್ಚಿನ ಕೌಶಲ್ಯವನ್ನು ಪಡೆದುಕೊಂಡಿತ್ತು. ದಿನವೊಂದಕ್ಕೆ ೧೦-೧೫ ಮೀನುಗಳನ್ನು ತಾನೇ ಬೇಟೆಯಾಡಿ ತಿನ್ನುವಂತಾಗಿತ್ತು.

ಇಷ್ಟರಲ್ಲಾಗಲೇ ಸೀಲ್ ಮರಿಯೊಂದಿಗೆ ಕ್ಯಾಥರೀನಳ ಒಡನಾಟದ ಮೂರು ತಿಂಗಳು ಕಳೆದುಹೋಗಿತ್ತು. ಅದು ತನ್ನ ತೂಕವನ್ನು ೩೦ ಕೆ.ಜಿ.ಗಳಿಗೆ ಹೆಚ್ಚಿಸಿಕೊಂಡಿತ್ತು. ಅದು ತನ್ನಷ್ಟಕ್ಕೆ ಬದುಕುವ ಶಕ್ತಿಯನ್ನು ಸಂಪಾದಿಸಿಕೊಂಡಿತ್ತು. ಈಗದನ್ನು ಸ್ವತಂತ್ರವಾಗಿ ಸಮುದ್ರಕ್ಕೆ ಬಿಡುವ ಸಮಯವಾಗಿತ್ತು.

ಸೆಪ್ಟಂಬರ್ ತಿಂಗಳ ಕಡೆಯವಾರದ ಆ ದಿನ ಕ್ಯಾಥರೀನ್ ಅತ್ಯಂತ ಖಿನ್ನಳಾಗಿದ್ದಳು. ಮೂರು ತಿಂಗಳ ಕಾಲ ಹಗಲು ರಾತ್ರಿ ಕಣ್ಣಿಟ್ಟು ಕಾದ ತನ್ನ ಪುಟ್ಟ ಸೆಲಿಕ್‌ನನ್ನು ವಿಶಾಲ ಸಮುದ್ರದಲ್ಲಿ ಬಿಟ್ಟು ಬರಬೇಕಿತ್ತು. ಅವಳಿಗದು ಅತ್ಯಂತ ನೋವಿನ ಸಂಗತಿಯಾಗಿದ್ದರೂ ಕೂಡ ಸೆಲಿಕ್‌ನ ಬದುಕು ಸಮುದ್ರದೊಂದಿಗೇ ಬೆಸೆದುಕೊಂಡದ್ದಾಗಿತ್ತು.

ಅಂದು ತಂದೆಯೊಂದಿಗೆ ದೋಣಿಯಲ್ಲಿ ತೀರದಿಂದ ಬಹುದೂರದ ಸಮುದ್ರಕ್ಕೆ ಸೆಲಿಕ್‌ನನ್ನು ಕೊಂಡೊಯ್ದಳು. ದೋಣಿಯಲ್ಲಿ ಉದ್ದಕ್ಕೂ ಹನಿಗಣ್ಣಿನಲ್ಲಿ ಸೆಲಿಕ್‌ನೊಂದಿಗೆ ಮಾತಾಡುತ್ತಲೇ ಇದ್ದಳು. ಪುಟ್ಟ ಕಂದನನ್ನು ಅಪರಿಚಿತ ನಾಡೊಂದರಲ್ಲಿ ಬಿಟ್ಟು ಬರುವ ತಾಯಿಯ ಆತಂಕ ಅವಳಲ್ಲಿ ತುಂಬಿಕೊಂಡಿತ್ತು. ಸೆಲಿಕ್‌ನನ್ನು ನೀರಿನಲ್ಲಿ ಬಿಡುತ್ತಾ "ಹೋಗು ಸೆಲಿಕ್, ನೀನೀಗ ನಿನ್ನಷ್ಟಕ್ಕೇ ಬದುಕುವುದನ್ನು ಕಲಿತಿರುವೆ. ಇನ್ನು ಮುಂದೆ ಇದೇ ನಿನ್ನ ಮನೆ" ಎಂದಳು. ಆದರೆ ಆ ಪುಟ್ಟ ಮರಿಗೆ ಅವಳ ಮಾತುಗಳಾವುವೂ ಅರ್ಥವಾಗುವಂತಿರಲಿಲ್ಲ. ಎಂದಿನಂತೆಯೇ ಇಂದು ಯಾಕೆ ಅವಳೂ ಕೂಡಾ ನನ್ನೊಂದಿಗೆ ಈಜಲು ಬರುತ್ತಿಲ್ಲ ಎನ್ನುತ್ತಾ ದೋಣಿಯ ದಡದ ಮೇಲೆ ತಲೆಯಿಟ್ಟು ಅವಳ ಕಾಲುಗಳನ್ನು ನೆಕ್ಕುತ್ತಾ ತನ್ನೊಡನೆ ಈಜಲು ಬರುವಂತೆ ಒತ್ತಾಯಿಸುತ್ತಿತ್ತು. ಕ್ಯಾಥರೀನ್ ಕಣ್ಣೀರ್ಗರೆಯುತ್ತಾ "ಹೋಗು ಸೆಲಿಕ್....ಹೋಗು ಸೆಲಿಕ್, ಈ ಸಮುದ್ರವೇ ನಿನ್ನ ಮನೆ.....ಇಲ್ಲೇ ನಿನ್ನ ಬದುಕು" ಎನ್ನುತ್ತಾ ಬಿಕ್ಕುತ್ತಿದ್ದಳು. ಆದರೂ, ಆ ಪುಟ್ಟ ಮರಿ ದೋಣಿಗೆ ಜೋತು ಬಿದ್ದಿತ್ತು. ಕಡೆಗೂ ಅನಿವಾರ್ಯವೆಂಬಂತೆ ತಂದೆ ಬರ್ಜ್ ನಿರ್ದಾಕ್ಷಿಣ್ಯವಾಗಿ ತನ್ನ ಕಾಲಿನಿಂದ ಅದನ್ನು ದೋಣಿಯಿಂದ ಸಮುದ್ರದೊಳಕ್ಕೆ ನೂಕಿದ. ಅವರ ನಿಷ್ಠುರತೆ ಈಗ ಅರ್ಥವಾಯಿತೇನೋ ಎನ್ನುವಂತೆ, ಈಜುತ್ತಾ ಕ್ಯಾಥರೀನಳನ್ನೇ ದಿಟ್ಟಿಸಿ ನೋಡುತ್ತಾ ಇದ್ದ ಅದು, ದೋಣಿಗೆ ಬೆನ್ನು ತಿರುಗಿಸಿ ವಿಶಾಲ ಸಮುದ್ರದೆಡೆಗೆ

ಈಜುತ್ತಾ ಹೋಯಿತು. ಮತ್ತೆ... ಮತ್ತೆ... ಅದು ಹಿಂದೆ ತಿರುಗಿ ನೋಡುತ್ತಲೇ ಇತ್ತು. ಕಡೆಗೆ, ಅದರ ತಲೆ ಕಪ್ಪು ಚುಕ್ಕೆಯಂತೆ ಕಂಡು ಕಣ್ಮರೆಯಾಯಿತು.

ಕ್ಯಾಥರೀನ್ ತೀರದಲ್ಲಿ ನಿಂತು ಸಮುದ್ರದಲ್ಲಿಯೇ ದೃಷ್ಟಿ ನೆಟ್ಟು ಕಣ್ಣೀರ್ಗರೆಯುತ್ತಿದ್ದಳು. ತಂದೆ ಅವಳಿಗೆ ಸಮಾಧಾನಪಡಿಸಿ ಮನೆಗೆ ಕರೆತಂದ. ಸಂಜೆ ಮನೆಯ ಬಳಿಯ ಗುಡ್ಡವೇರಿ, ವಿಶಾಲ ಸಾಗರದಲ್ಲಿ ಅವಳ ಹನಿಗಣ್ಣು ಸೆಲಿಕ್‌ಗಾಗಿ ಹುಡುಕುತ್ತಿತ್ತು. ಕತ್ತಲು ಕವಿದು ಸಮುದ್ರ ಕಾಣದಾಗುವವರೆಗೂ ಅವಳ ಹುಡುಕಾಟ ನಿಲ್ಲಲಿಲ್ಲ. ಅವಳ ಹೃದಯ ಸೆಲಿಕ್‌ಗಾಗಿ ಚಡಪಡಿಸುತ್ತಾ ನನ್ನ ಸೆಲಿಕ್ ಈ ವಿಶಾಲ ಸಮುದ್ರದಲ್ಲಿ ಒಂಟಿತನವನ್ನನುಭವಿಸುತ್ತಿರಬಹುದೇ? ಮತ್ತೊಮ್ಮೆ ನಾನು ಸೆಲಿಕ್‌ನನ್ನು ಕಾಣುವೆನೇ? ಇವೇ ಪ್ರಶ್ನೆಗಳು ಅವಳನ್ನು ಕಾಡುತ್ತಿದ್ದವು.

ಇದಾಗಿ, ಸುಮಾರು ಒಂದೂವರೆ ವರ್ಷ ಕಳೆದುಹೋಗಿತ್ತು. ಸೆಲಿಕ್‌ಗೆ ವಿದಾಯ ಹೇಳಿ ೧೯೯೩ ರ ಏಪ್ರಿಲ್‌ನಲ್ಲಿ ಮತ್ತೊಮ್ಮೆ ಕ್ಯಾಥರೀನ್ ತನ್ನ ತಂದೆಯೊಂದಿಗೆ ಅದೇ ಸಮುದ್ರ ತೀರದ, ಮೊಟ್ಟಮೊದಲು ಸೆಲಿಕ್‌ನನ್ನು ಕಂಡ ನಡುಗಡ್ಡೆಗೆ ಬಂದಳು. ಆ ಸೀಲ್ ಮರಿ ಬಿದ್ದುಕೊಂಡಿದ್ದ ಅದೇ ಬಂಡೆಯ ಮೇಲೆ ನಿಂತು, ‘ಸೆಲಿಕ್... ಸೆಲಿಕ್...’ ಎಂದು ನಾಲ್ಕಾರು ಬಾರಿ ಕೂಗಿದಳು. ಆಶ್ಚರ್ಯವೆನ್ನುವಂತೆ ಸಮುದ್ರದೊಳಗಿಂದ ತಲೆಯೊಂದು ಮೇಲೆದ್ದಿತು. ಈಜುತ್ತಾ ಹತ್ತಿರ ಹತ್ತಿರಕ್ಕೆ ಬಂದ ಆ ಸೀಲ್ ಪ್ರಾಣಿ ಯಾವುದೋ ಪೂರ್ವ ಸ್ಮೃತಿಯೊಂದು ಜಾಗ್ರತವಾಯಿತೇನೋ ಎನ್ನುವಂತೆ, ಎದೆಯವರೆಗೂ ಮೇಲೆದ್ದು ನಿಂತು ಅವಳನ್ನೇ ಕ್ಷಣಗಳ ಕಾಲ ದಿಟ್ಟಿಸುತ್ತಾ ಇದ್ದು ನಿಧಾನವಾಗಿ ನೀರಲ್ಲಿ ಕಣ್ಮರೆಯಾಯಿತು. ಕ್ಯಾಥರೀನ್ ಕಣ್ಣಲ್ಲಿ ನೀರು ತುಂಬಿ, ‘ಅವನೇ ನನ್ನ ಸೆಲಿಕ್....ಅವನೇ ನನ್ನ ಸೆಲಿಕ್’ ಎಂದು ಕುಣಿದಾಡಿದಳು.

‘ಅವನು ನನ್ನ ಮರೆತಿಲ್ಲ, ಮತ್ತೆ ಅವನು ಖಂಡಿತಾ ಬರುತ್ತಾನೆ,’ ಎನ್ನುತ್ತಾ ಕಾಯುತ್ತಲೇ ಇದ್ದಳು ಕ್ಯಾಥರೀನ್.

(‘ರೀಡರ್ಸ್ ಡೈಜೆಸ್ಟ್’ ನಿಂದ)

❑

(ಟ್ರಿಗ್ವೇ ಬರ್ಜ್ ಚಿತ್ರೀಕರಿಸಿದ ‘ಸಮ್ಮರ್ ವಿತ್ ಸೆಲಿಕ್’ ಸಾಕ್ಷ್ಯ ಚಿತ್ರ ಹಲವಾರು ದೇಶಗಳ ಟಿ.ವಿ. ಗಳಲ್ಲಿ ಪ್ರದರ್ಶಿತವಾಗಿ ಪ್ರಸಿದ್ಧಿಯಾಗಿದೆ.)

✚ **ಎಚ್ಚೆನ್. ಸೋಮಶೇಖರ ಗೌಡ,** ಪಿಹೆಚ್‌೯ ಕಛೇರಿ ಪಕ್ಕ, ಮೊದಲನೇ ಮುಖ್ಯ ರಸ್ತೆ, ಪಿ.ಸಿ. ಬಡಾವಣೆ, ಕೋಲಾರ - ೫೬೩ ೧೦೧.

ಅವರೋಹಣ

ಕೊರಿಯನ್ ಮೂಲ : ಕಿಮ್‌ಸೊಂಗ್ ಡೊಂಗ್
ಅನುವಾದ : ಮುಸಿಯಾಲ್ ಗಣೇಶ್ ಶೆಣೈ

ಅದು ಬೇಸಗೆಯ ಆರಂಭದ ಕಾಲವಾಗಿತ್ತು. ದಟ್ಟವಾಗಿ ಬೆಳೆದಿದ್ದ ಗಿಡಮರಗಳಿಂದ ಎಲ್ಲವೂ ಗಾಢ ಹಸಿರು ಬಣ್ಣದಲ್ಲಿ ಕಾಣುತ್ತಿತ್ತು. ಮುಗಿಲನ್ನು ಮುಟ್ಟುವಂತೆ ಎತ್ತರಕ್ಕೆ ಬೆಳೆದಿದ್ದ ಪೈನ್ ವೃಕ್ಷದ ಕಾಂಡವನ್ನು ಎರಡು ಕೈಗಳಿಂದ ನಾನು ತಬ್ಬಿಕೊಂಡೆ. ಎತ್ತರದ ಪರ್ವತ, ಹರಿವ ನೀರು, ಬೇಸಿಗೆಯ ಭಾರಕ್ಕೆ ಬಾಗಿ ನಿಂತ ಬಹುವರ್ಣದ ಗಿಡಮರಗಳು. ಎಲ್ಲೆಲ್ಲೂ ಕೇಳುತ್ತಿದ್ದ ಪಕ್ಷಿಗಳ ವಿಶೇಷ ಕಲರವ. ಆದರೆ ಲೌಕಿಕ ಜಗತ್ತಿನ ಯಾರು ನನಗೆ ಕಾಣಲಿಲ್ಲ, ನನ್ನ ಹೃದಯದಲ್ಲಂತೂ ಬುದ್ಧನನ್ನು ಹುಡುಕಲು ಆಗಲಿಲ್ಲ.

ಸೂರ್ಯ ಮುಳುಗುವ ಸಮಯ. ಇನ್ನೇನು ಕತ್ತಲಾಗುವ ಕಾಲ. ಅಲೆಯುತ್ತ ನಾನು ಮತ್ತೊಂದು ದಿನವನ್ನು ವ್ಯರ್ಥಗೊಳಿಸಿದ್ದು ಅರಿವಾಯಿತು. ನಾನು ಯುವಕನಾಗಿದ್ದಾಗ ನನಗೆ ಇದ್ದಕ್ಕಿದ್ದಂತೆ ಜ್ಞಾನೋದಯವಾಗುವುದೆಂದು ಹೇಳಿಕೊಳ್ಳುತ್ತಿದ್ದೆ. ಈ ಕಾರಣದಿಂದಲೇ ನಾನು ಸನ್ಯಾಸಿಯಂತೆ ಪರ್ವತವಾಸಿಯಾದೆ. ಈ ದಿನ ಎಷ್ಟು ನಡೆದರೂ ಎಷ್ಟು ಎತ್ತರ ಏರಿದರೂ ಶಿಖರ ಕಾಣಲೇ ಇಲ್ಲ. ದಿನದ ಅಂತ್ಯವಾಗುವುದರಲ್ಲಿತ್ತು. ಜಗತ್ತಿನ ಧೂಳಿನಿಂದ ತುಂಬಿದ್ದ ದೇಹವನ್ನು ಎಲ್ಲಾದರೊಂದುಕಡೆ ಚೆಲ್ಲಲು ಜಾಗ ಬೇಕಿತ್ತು. ಕೆಳಗೆ ಕುಳಿತು ಮಂಡಿಯಮೇಲೆ ಗಲ್ಲವನ್ನು ಊರಿದೆ. ಅಭ್ಯಾಸಬಲದಿಂದ ಪೋಸಲ ಪವಿತ್ರ ನಾಮಸ್ಮರಣೆ ಮಾಡಿದೆ. ನನಗೆ ಬಹಳ ನಿರಾಶೆಯಾಗಿತ್ತು. ನಾನೊಬ್ಬ ಸನ್ಯಾಸಿಯಾಗಿಲ್ಲದೆ ನೀಳ ಕೇಶವನ್ನು ಬಿಟ್ಟು ಸಾಮಾನ್ಯ ಮನುಷ್ಯನಂತೆ ಬಣ್ಣದ ಬಟ್ಟೆಯನ್ನು ತೊಟ್ಟಿದ್ದರೆ ಒಂದು ಸಿಗರೇಟನ್ನಾದರೂ ಸೇದಿ ಕೆಲಕ್ಷಣವಾದರು ಮನಸ್ಸನ್ನು ಕಾಡುವ ಸಂಗತಿಗಳಿಂದ ಮುಕ್ತನಾಗಬಹುದಾಗಿತ್ತು. ಆದರೆ ಬೌದ್ಧ ಸನ್ಯಾಸಿಯಾದ ನಾನು ಮೀನು,ಮಾಂಸ, ಮದ್ಯ ಹೊಗೆಸೊಪ್ಪನ್ನು ಪ್ಲೇಗ್‌ನಂತೆ ದೂರವಿಡಬೇಕಾಗಿತ್ತು. ನನಗೆ ಲಭ್ಯವಿರುವ ಏಕೈಕ ಸಮಾಧಾನವೆಂದರೆ ಇಲ್ಲಿ ಸುಮ್ಮನೆ ಕುಳಿತು ಬುದ್ಧ ಮತ್ತು ಪೋಸಲರ ಹೆಸರುಗಳ ಸ್ಮರಿಸುವುದು.

ನಾನು ಕತ್ತಲೆಯಲ್ಲಿ, ಆ ಹಾದಿಯಲ್ಲಿ ಒಬ್ಬ ಮಹಾಗುರುವನ್ನು ಅರಸಿ ನಡೆದಿದ್ದೆ. ಅಲ್ಲೆಲ್ಲೋ ಇರಬಹುದೆಂದು ಹೇಳಲಾಗುತ್ತಿದ್ದ ಆ ಗುರುವಿನ ಬಗ್ಗೆ ಅನೇಕ ಸಂಗತಿಗಳನ್ನು ಕೇಳಿದ್ದೆ. ಅವರೊಬ್ಬ ದೈತ್ಯದೇಹಿ, ಗಂಭೀರವಾಗಿ ವರ್ತಿಸುವವರು. ಅವರು ಯಾವುದೋ ನಿರ್ಜನ ಪರ್ವತ ಪ್ರದೇಶದಲ್ಲಿ ವಾಸಿಸುವ ಸನ್ಯಾಸಿಯಂತೆ ತೋರದೆ ಸಾವಿರಾರು ಸೈನಿಕರನ್ನು ಮುನ್ನಡೆಸುವ ಸೈನ್ಯಾಧಿಕಾರಿಯಂತೆ ತೋರುತ್ತಿದ್ದರು. ಹುಲಿಯ ಕಣ್ಣುಗಳಂತೆ ತೋರುತ್ತಿದ್ದ ಅವರ ಕಣ್ಣುಗಳಲ್ಲಿ ಎಂತಹ ಶಕ್ತಿಯಿತ್ತೆಂದರೆ

ಅದನ್ನು ನೋಡಿದ ಯಾವುದೇ ವ್ಯಕ್ತಿ ತಲೆ ಬಾಗುತ್ತಿದ್ದ. ಮಹಾ ಗುರುವಿನ ಧ್ವನಿಯು ಸಿಂಹ ಗರ್ಜನೆಯಂತಿದ್ದು ಕೇಳುವವರ ಕಿವಿ ತಮಟೆಯನ್ನು ಹರಿಯುವಂತಿತ್ತು. ಅವರು ೭೧ ವರ್ಷದ ವೃದ್ಧರೆಂದು ಜನರು ಹೇಳುತ್ತಿದ್ದರು. ಸಣ್ಣ ವಯಸ್ಸಿನಿಂದಲೇ ಬ್ರಹ್ಮಚಾರಿಯಾಗಿ ಉಳಿದಿದ್ದ ಅವರು ತಮ್ಮ ನಿರ್ಮಲ ಕಾಯವನ್ನು ಬುದ್ಧ ಮತ್ತು ಲಾವೋಝಿಯ ಬೋಧನೆಯನ್ನು ತಿಳಿಸಲು ಬಳಸಿದ್ದರು. ದೇಹ ಮತ್ತು ಮನಸ್ಸನ್ನು ತಮ್ಮ ಗುರುಗಳ ನಿರ್ದೇಶನದಂತೆ ಬಳಸುವುದರಲ್ಲಿ ಅವರು ಕೂದಲೆಳೆಯಷ್ಟು ತಪ್ಪಲಿಲ್ಲ. ಅವರೊಬ್ಬ ಮಹಾಗುರು. ಅವರ ಜ್ಞಾನವು ಎಷ್ಟು ಹಿರಿಮೆಯದೆಂದರೆ, ವಿಶ್ವದ ಅಸಂಖ್ಯಾತ ಮೂಲ ತತ್ವಗಳು ಕಾಲ-ದೇಶಾತೀತವಾಗಿ ಅವರಿಗೆ ತಿಳಿದಿತ್ತು. ಆದರೆ ಈ ಮಹಾನ್ ಗುರುವಿನ ಸುಂದರ ಹೆಸರನ್ನು ಯಾರು ಯಾರು ತಿಳಿದಿದ್ದರೋ. ಅವೆಲ್ಲವೂ ಬೇರೆಯವರ ಮಾತಿನ ಮೂಲಕವೇ ಆಗಿತ್ತು. ವಾಸ್ತವವಾಗಿ ಅವರ ಭವ್ಯ ದೇಹವನ್ನು ನೋಡಿದವರಾಗಲಿ, ಅವರ ಸಿಂಹವಾಣಿಯನ್ನು ಕೇಳಿದವರಾಗಲಿ ಇಲ್ಲ. ಅವರ ದಿವ್ಯ ಮಾರ್ಗದರ್ಶನದಲ್ಲಿ ಜ್ಞಾನೋದಯ ಹೊಂದಿದವರು ಇಲ್ಲ. ಆದರೂ ಆಶ್ಚರ್ಯವೆಂಬಂತೆ ಅವರ ವ್ಯಕ್ತಿತ್ವದ ಬಗ್ಗೆ, ಅವರ ಬೋಧನೆಯ ಬಗ್ಗೆ ಲೌಕಿಕ ಜಗತ್ತಿನ ಧೂಳುಮಯ ರಸ್ತೆಯಲ್ಲಿ ಜನರು ಮಾತನಾಡಿಕೊಳ್ಳುತ್ತಿದ್ದರು.

ಮಹಾಗುರುಗಳ ಹೆಸರು ಏಕಾಂಗುಲಿ. ಆ ಹೆಸರಿನಿಂದ ತಮ್ಮನ್ನು ಕರೆಯಬೇಕೆಂದು ಅವರು ಹೇಳದಿದ್ದರು 'ಮಾರ್ಗ' ವನ್ನು ಕೇಳಿದವರಿಗೆಲ್ಲ ಒಂದು ಬೆರಳನ್ನು ಎತ್ತಿ ತೋರಿಸುತ್ತಿದ್ದರಿಂದ ಅವರಿಗೆ ಆ ಹೆಸರು ಬಂದಿತು. ಆಶ್ಚರ್ಯವೆಂದರೆ ಅವರಿಗೆ ಆ ಒಂದು ಬೆರಳು ಇರಲಿಲ್ಲ. ಆ ಬಗ್ಗೆ ಒಂದು ಕಥೆಯೂ ಇದೆ:

****

ಅವರು ಶಿಷ್ಯರಾಗಿದ್ದ ದಿನಗಳವು. ಅವರ ಗುರು ಎಲ್ಲೋ ಹೊರಹೋಗಿದ್ದರು. ಆಗ ಒಬ್ಬ ಅಲೆಮಾರಿ ಸನ್ಯಾಸಿ ಏಕಾಂಗುಲಿಯ ಗುರುಗಳಿಗೆ ನಮಸ್ಕರಿಸಿ ಹೋಗಲು ಬಂದರು. ಏಕಾಂಗುಲಿ ಅವರನ್ನು ಸತ್ಕರಿಸಿ ಅವರು ಬಂದ ಉದ್ದೇಶವನ್ನು ಕೇಳಿದರು. ಆ ಸನ್ಯಾಸಿ ತಾನು ಗುರುಗಳನ್ನು ನೋಡಲು ಬಹಳ ದೂರದಿಂದ ಬಂದುದಾಗಿ ಹೇಳಿದರು. ಗುರುಗಳು ಯಾವಾಗ ಹಿಂತಿರುಗುವರೆಂದು ಹೇಳುವುದು ಕಷ್ಟವೆಂದು ಏಕಾಂಗುಲಿ ಹೇಳಿದರು. ಆ ಸನ್ಯಾಸಿ ತನ್ನ ಸೋಲಿನ ಬಗ್ಗೆ ಏನೋ ಹೇಳಿ ವಿಚಿತ್ರ ಸ್ವರ ಹೊರಡಿಸುವಾಗ ಆಯಾಸ ಚಿಹ್ನೆಯ ಬದಲು ವಿಷಾದದ ಗೆರೆಗಳು ಕಂಡವು. ಸನ್ಯಾಸಿಯ ಸಂಕಟಕ್ಕೆ ಕಾರಣವೇನೆಂದು ಏಕಾಂಗುಲಿ ಕೇಳಿದರು. ಸನ್ಯಾಸಿ ಆಕಾಶದತ್ತ ನೋಟವನ್ನು ಬೀರಿ ತಾನು 'ಮಾರ್ಗ' ದ ಬಗ್ಗೆ ಕೇಳಲು ಬಂದುದಾಗಿ ಹೇಳಿದರು. ಏಕಾಂಗುಲಿಗೆ ಜೋರಾಗಿ ನಗು ಬಂದರು ತೋರ್ಪಡಿಸಲಿಲ್ಲ. ಏಕೆಂದರೆ ಏಕಾಂಗುಲಿಯ ಗುರುವಿಗೆ ಪ್ರತಿದಿನ ಇಂತಹ ಅಲೆಮಾರಿ ಸನ್ಯಾಸಿಗಳು ಬಂದು ಕೇಳುತ್ತಿದ್ದ ಪ್ರಶ್ನೆ ಅದೇ ಆಗಿತ್ತು."ನನಗೆ ಮಾರ್ಗವನ್ನು ತೋರಿಸುವಿರಾ ?" ಆಗೆಲ್ಲ ಗುರುಗಳು ಮೌನವಾಗಿ ಒಂದು ಬೆರಳನ್ನು ಎತ್ತಿ ತೋರಿಸುತ್ತಿದ್ದರು. ಆದ್ದರಿಂದ ಏಕಾಂಗುಲಿಗೆ ಆ ಪ್ರಶ್ನೆಯನ್ನು ನೂರು ಬಾರಿ ಕೇಳಿದರೂ ಉತ್ತರ ಗೊತ್ತಿತ್ತು. ಏಕಾಂಗುಲಿ ಪದ್ಮಾಸನದಲ್ಲಿ ಕುಳಿತು ತಾನು ಕಂಡಿದ್ದ ಬುದ್ಧನ ವಿಗ್ರಹದಲ್ಲಿರುವಂತೆ ಮುಖವನ್ನೆಲ್ಲಾ ಗಂಭೀರವಾಗಿ ಮಾಡಿಕೊಂಡು ಆ ಸನ್ಯಾಸಿಗೆ ತನ್ನ ಪ್ರಶ್ನೆಯನ್ನು ಕೇಳಬೇಕೆಂದು ಹೇಳಿದರು.

ಸನ್ಯಾಸಿಗೆ ಆಶ್ಚರ್ಯವಾದರೂ ಏಕಾಂಗುಲಿಯ ಗಂಭೀರ ಚಹರೆ ಅವರ ಮೇಲೆ ಪ್ರಭಾವ ಬೀರಿತು. ಆ ಸನ್ಯಾಸಿಗೆ - ತನಗಿಂತ ಹಿರಿಯ ಸನ್ಯಾಸಿಗಳಿಗೆ ಯಾರೋ ಮರ ಕತ್ತರಿಸುವವನ ಕೊರಳ ಧ್ವನಿಯ ಸದ್ದಿಗೆ ಜ್ಞಾನೋದಯವಾದದ್ದು ಅಥವಾ ಯಾವುದೋ ಪ್ರಾಣಿಗಳ ಕ್ರೀಡೆಯನ್ನು ನೋಡುತ್ತಲೇ ಅನುಮಾನಗಳೆಲ್ಲ ಪರಿಹಾರವಾದುದು ಗೊತ್ತಿತ್ತು. ಆದ್ದರಿಂದ ಮಾರ್ಗವನ್ನು ಅರಸಿಬಂದ ತಾನು ಮನುಷ್ಯನೊಬ್ಬನನ್ನು ಅವನ ವಯಸ್ಸಿನ ಆಧಾರದ ಮೇಲೆ ತೀರ್ಮಾನಿಸುವುದು ತಪ್ಪೆಂದು ತಿಳಿಯಿತು.

ತನ್ನ ಪೆದ್ದುತನಕ್ಕಾಗಿ ತನ್ನನ್ನೇ ಶಪಿಸಿಕೊಂಡ ಆ ಸನ್ಯಾಸಿ ಬಟ್ಟೆಗಳನ್ನು ಸರಿಪಡಿಸಿಕೊಂಡು ಸಾಂಪ್ರದಾಯಿಕ ಪದ್ಧತಿಯಿಂದ ಮೂರು ಸಾರಿ ತಲೆಬಾಗಿ ನಮಸ್ಕರಿಸಿ 'ಮಾರ್ಗ ಯಾವುದು?' ಎಂದು ಕೇಳಿದರು. ಯುವಕ ಏಕಾಂಗುಲಿ ಕಣ್ಣುಗಳನ್ನು ಶಾಂತವಾಗಿ ಮುಚ್ಚಿಕೊಂಡು ಪದ್ಮಾಸನದಲ್ಲಿ ಕುಳಿತಿದ್ದ ಭಂಗಿಯಲ್ಲಿ ಒಂದು ಬೆರಳನ್ನು ಎತ್ತಿ ತೋರಿಸಿದರು. ವಿಸ್ಮಯಗೊಂಡ ಆ ಅಲೆಮಾರಿ ಸನ್ಯಾಸಿ ಹೊರಡದೆ ಗತ್ಯಂತರವಿರಲಿಲ್ಲ. ಕೆಲಕಾಲದ ನಂತರ ಗುರುಗಳು ಬಂದಾಗ ಏಕಾಂಗುಲಿ ಹೆಮ್ಮೆಯಿಂದ ನಡೆದ ಸಂಗತಿಯನ್ನು ವಿವರಿಸಿದರು. ಗುರುಗಳು ಚಪ್ಪಾಳೆ ತಟ್ಟಿ ಜೋರಾಗಿ ನಕ್ಕರು. ಶಿಷ್ಯನ ಬೆನ್ನು ಚಪ್ಪರಿಸಿದರು. ತನ್ನ ಶಿಷ್ಯರ ಪೈಕಿ ಒಂದು ಸಿಂಹದ ಮರಿ ಇದ್ದುದ್ದು ಈ ವರೆಗೆ ತಿಳಿದಿರಲಿಲ್ಲವೆಂದರು. ಏಕಾಂಗುಲಿ 'ನಾನು ಮಾಡಿದ್ದು ಸರಿಯಾಯಿತೆ' ಎಂದು ಕೇಳಿದಾಗ ಗುರುಗಳು ಸಿಂಹದ ಹೊಟ್ಟೆಯಲ್ಲಿ ಸಿಂಹ ಹುಟ್ಟಿಕೊಳ್ಳುವುದೆ ಹೊರತು ಜಿಂಕೆಯಲ್ಲ ಎಂದರು. ಆದರೆ ತನ್ನ ರಹಸ್ಯವನ್ನು ಈಗ ಶಿಷ್ಯನಾದ ಏಕಾಂಗುಲಿ ಕದ್ದಿರುವುದರಿಂದ ತನ್ನ ಜೀವನೋಪಾಯವೇನೆಂದು ಪ್ರಶ್ನಿಸಿದರು. ಅದರ ಅರ್ಥವೇನೆಂದು ಏಕಾಂಗುಲಿ ಕೇಳಿದಾಗ ತನ್ನ ಮುಂದಿನ ಮಾರ್ಗವೇನೆಂದು ಗುರುಗಳು ಕೇಳಿದರು. ಏಕಾಂಗುಲಿ ಏನು ಬೇಕಾದರು ಕೇಳಿ ಎಂದು ಹೇಳಿದರು. ಗುರುಗಳು ಮೂರು ಬಾರಿ ತಲೆಬಾಗಿ ವಂದಿಸಿ ಮಾರ್ಗಯಾವುದೆಂದು ಕೇಳಿದರು. ಶಿಷ್ಯ ಏಕಾಂಗುಲಿ ಒಂದು ಬೆರಳನ್ನು ಎತ್ತಿತೋರಿಸಿ ಕೂಡಲೇ ನೋವಿನಿಂದ ಚೀರುತ್ತ ಕೈಯನ್ನು ಹಿಂದಕ್ಕೆ ಎಳೆದುಕೊಂಡರು. ತಮ್ಮ ಕೈಯಲ್ಲಿ ಬಚ್ಚಿಟ್ಟುಕೊಂಡಿದ್ದ ಚೂರಿಯಿಂದ ಗುರುಗಳು ಏಕಾಂಗುಲಿಯ ಆ ಬೆರಳನ್ನು ಕತ್ತರಿಸಿ ಹಾಕಿದ್ದರು!. ಶಿಷ್ಯ ಚೀರುತ್ತ ರಕ್ತಮಯವಾದ ಕೈಯನ್ನು ಹಿಡಿದು ಧರ್ಮಗೃಹದಿಂದ ಹೊರಗೆ ಓಡಿದರು. ಆದರೆ ಗುರುಗಳ ಗುಡುಗಿನಂತಹ ಮಾತಿಗೆ ನಿಂತು ಗುರುಗಳತ್ತ ನೋಡಿದರು. ಗುರುಗಳು ಒಂದು ಬೆರಳನ್ನು ಎತ್ತಿಹಿಡಿದಿದ್ದರು. ಇದ್ದಕ್ಕಿದ್ದಂತೆ ಏಕಾಂಗುಲಿ ಸುತ್ತಲು ಕುಣಿದಾಡತೊಡಗಿದರು. ಸೂರ್ಯ, ಚಂದ್ರ, ನಕ್ಷತ್ರಗಳು, ಪರ್ವತಗಳು, ನದಿಗಳು ಅಷ್ಟೇ ಅಲ್ಲ ಇಡೀ ವಿಶ್ವವೇ ಗುರುಗಳ ಆ ಒಂದು ಬೆರಳಿನಲ್ಲಿ ಅಡಕವಾಗಿರುವುದನ್ನು ನೋಡಿ ಏಕಾಂಗುಲಿಗೆ ಜ್ಞಾನೋದಯವಾಯಿತೆಂದು ನಂತರ ಎಲ್ಲರೂ ಹೇಳಿದರು.

ನಾನು ದೇಗುಲಗಳಲ್ಲಿ ಮತ್ತು ಲೌಕಿಕ ಜಗತ್ತಿನ ಎಲ್ಲೆಡೆಯು ಸುತ್ತಾಡುತ್ತಿರುವಾಗ ಮಹಾ ಗುರು ಏಕಾಂಗುಲಿಗೆ ಆ ಹೆಸರು ಬಂದ ಬಗ್ಗೆ ಈ ರೀತಿ ತಿಳಿದುಕೊಂಡೆ. ಆದರೆ ಇದು ಸಹ ಪರಿಶೀಲನೆಗೆ ಸಿಲುಕದ ಗಾಳಿ ಮಾತು ಮಾತ್ರ. ಮಹಾಗುರುಗಳ ಬಗ್ಗೆ ಒಂದೇ ಒಂದು ಸಂಗತಿಯು ದೃಢವಾಗಿ ತಿಳಿದಿಲ್ಲದಿದ್ದುದು ಅವರನ್ನು ಕಾಣಲು ಮತ್ತಷ್ಟು ಪ್ರಚೋದನೆಗೆ ಕಾರಣವಾಯಿತು. ಆದ್ದರಿಂದಲೇ ಚಳಿಗಾಲದ ಧ್ಯಾನದ ಅವಧಿಯನ್ನು ಮುಗಿಸಿದ ನಂತರ ನಾನು ಅವರನ್ನು ಹುಡುಕುತ್ತಾ ಹೊರಟೆ. ನಿರ್ಜನ ಪರ್ವತ ಗವಿಗಳಲ್ಲೂ, ಜನಭರಿತ ಮಾರುಕಟ್ಟೆಗಳಲ್ಲೂ ನಾನು ಹುಡುಕಿದೆ.

ನನ್ನ ಹೆಸರು, ಬಟ್ಟೆ ಮತ್ತು ದೇಹವನ್ನು ಜಗತ್ತಿನ ಎಲ್ಲ ಮಾಲಿನ್ಯಕ್ಕೂ ಒಡ್ಡಲು ಇದ್ದ ಏಕೈಕ ಕಾರಣವೆಂದರೆ ಮಹಾಗುರುಗಳನ್ನು ಕಂಡು ಮಾರ್ಗದ ಬಗ್ಗೆ ತಿಳಿಯುವುದಾಗಿತ್ತು. ಆದರೆ ಅವರು ಎಲ್ಲಿ ಇದ್ದರು ಎಲ್ಲಿ ಹೋಗಲಿರುವರೆಂಬ ಬಗ್ಗೆ ನನಗೆ ತಿಳಿದು ಬಂದು ಅಲ್ಲಿಗೆ ಹೋಗುವಷ್ಟರಲ್ಲಿ ಮಹಾ ಗುರುಗಳು ಹೊರಟು ಹೋಗಿರುತ್ತಿದ್ದರು.

****

ಮಹಾಗುರುಗಳ ಹುಡುಕಾಟದಲ್ಲಿ ಬಹಳ ಕಾಲ ಕಳೆದ ನಾನು ಕೊನೆಗೊಮ್ಮೆ ವೇಶ್ಯಾ ಗೃಹಗಳ ಸಾಲಿನ ಎದುರು ನಿಂತಿದ್ದೆ. ಕೆಂಪು ಮತ್ತು ನೀಲಿ ದೀಪಗಳಿಂದ ಆ ಜಾಗ ಆವೃತವಾಗಿತ್ತು. ಆ ವೇಶ್ಯಾ ಕೇಂದ್ರದ ಎಲ್ಲಾ ಮೂಲೆಗಳಿಂದಲೂ ವೇಶ್ಯೆಯರು ಮತ್ತು ಅವರ ಗಿರಾಕಿಗಳ ದೇಹದ ಸುಖದ ಸದ್ದು ಕೇಳಿಬರುತ್ತಿತ್ತು. ಕೆಂಪು ಬೆಳಕು ಬೀರುತ್ತಿದ್ದ ದೀಪವೊಂದರ ಕೆಳಗೆ ನಿಂತಿದ್ದ ಏಕಾಂಗಿ ವೇಶ್ಯೆಯನ್ನು ನಾನು ಹಾದು ಹೋಗಬೇಕೆನ್ನುವಷ್ಟರಲ್ಲಿ ಆಕೆ ನನ್ನನ್ನು ಕರೆದಳು.

“ಏ ಸನ್ಯಾಸಿ ಇಲ್ಲಿಬಾ.” ನಾನು ಹತ್ತಿರ ಹೋದಾಗ ಆಕೆಯ ಸಿಡುಬಿನ ಕಲೆಗಳ ಮುಖದಲ್ಲಿ ಹಂದಿ ಮೂಗಿನಂತಹ ಮೂಗು ಕಂಡಿತು. ನಾನು ಕಂಡ ಅತ್ಯಂತ ಕುರೂಪಿಯಾಗಿದ್ದಳು ಆ ಹೆಂಗಸು. ಬಹುಶಃ ಆಕೆಯ ಆ ವಿಕೃತ ರೂಪದ ಕಾರಣದಿಂದಲೇ ಆಕೆಗೆ ಇಂದು ಯಾವ ಗಿರಾಕಿಯು ಸಿಗಲಿಲ್ಲವೆಂದು ನನಗೆ ಮನವರಿಕೆಯಾಯಿತು.

“ ನೀನು ನನ್ನನ್ನು ಕರೆದೆಯಾ?” ಎಂದು ನಾನು ಕೇಳಿದೆ.

ಆಕೆ ತನ್ನ ನಾಸಿಕ ಸ್ವರದಲ್ಲಿ “ ನಿನ್ನ ಮುಖವನ್ನು ನೋಡಿದರೆ ನೀನು ಲೈಂಗಿಕ ಹಸಿವೆಯಿಂದ ಬಳಲಿರುವಂತಿದೆ. ನಿನಗಾಗಿ ನಾನು ನನ್ನ ದೇಹವನ್ನೇ ಕೊಡಬಲ್ಲೆ” ಎಂದಳು.

ಸ್ಥಂಭೀಭೂತನಾದ ನಾನು ಹೇಗೋ ತಾಳ್ಮೆಯನ್ನು ತಂದುಕೊಂಡು “ನೀನೊಬ್ಬ ವೇಶ್ಯೆಯಾಗಿರಬಹುದು. ಆ ಕಾರಣದಿಂದ ಬುದ್ಧವಚನವನ್ನು ಶಿಸ್ತಿನಿಂದ ಅಭ್ಯಾಸಮಾಡಿ ಜಗತ್ತಿನ ಆಮಿಷಗಳಿಗೆ ಬೆನ್ನುಹಾಕಿರುವ ಸನ್ಯಾಸಿಯೊಬ್ಬನ ಬಗ್ಗೆ ಈ ರೀತಿ ವರ್ತಿಸುವುದು ಸರಿಯಲ್ಲ” ಎಂದು ಹೇಳಿದೆ.

ಆಕೆ ಕೈಯನ್ನು ಮುಷ್ಠಿಮಾಡಿ ನನ್ನನ್ನು ಹೊಡೆಯುವ ಹಾಗೆ ಎತ್ತಿದಳು.

“ನಿನಗೇನಾಗಿದೆ? ನಾನು ಕುರೂಪಿಯಾಗಿರಬಹುದು. ಆದರೆ ಇಲ್ಲಿ ನನಗೆ ಸಿಗುವ ಬೆಲೆ ಯಾರಿಗೂ ಸಿಗದು. ಒಂದು ಬಾರಿ ನನ್ನನ್ನು ಸೇರು. ನಿನ್ನ ಇಡಿಯ ದೇಹವೇ ಪರಮಾನಂದದಲ್ಲಿ ಕರಗಿಹೋಗುತ್ತದೆ” ಎಂದಳು.

ನಾನು ಪೋಸಲರ ನಾಮಸ್ಮರಣೆಯನ್ನು ಮಾಡಿ ಆ ವೇಶ್ಯೆಯನ್ನು ಬಯ್ದೆ. ಆದರೆ ಆಕೆ ಮತ್ತೆ ಹೇಳಿದಳು.

“ಯೋಚಿಸಬೇಡ ನಾನು ಉಚಿತವಾಗಿ ಸೇವೆ ನೀಡುತ್ತೇನೆ. ನಾನು ಎಂತಹ ಕೀಳು ಅವಸ್ಥೆಯಲ್ಲಿದ್ದರು ಪ್ರತಿಫಲವಿಲ್ಲದೆ ನೀಡುವ ದಾನದ ಮಹತ್ವವನ್ನು ನಾನು ಬಲ್ಲೆ. ಬಾಯಾರಿದವನಿಗೆ

ನೀರು ಕೊಡುವುದು ಯುಕ್ತವಿರುವಂತೆ, ಹಸಿದವನಿಗೆ ಆಹಾರ ನೀಡುವುದು ಯುಕ್ತವಿರುವಂತೆ, ಅನಾರೋಗ್ಯ ಪೀಡಿತನಿಗೆ ಔಷದ ನೀಡುವುದು ಯುಕ್ತವಿರುವಂತೆ, ದೇಹ ಸುಖಕ್ಕಾಗಿ ಹಸಿದವನಿಗೆ ನಾನು ನನ್ನ ದೇಹವನ್ನು ಕೊಡುತ್ತೇನೆಂದರೆ ಏಕೆ ಅಭ್ಯಂತರ?"

ಬುದ್ಧನ ನುಡಿಗಳನ್ನು ಅವಳು ಎಲ್ಲಿಂದ ಕೇಳಿದಳೆಂದು ನನಗೆ ತಿಳಿಯಲಿಲ್ಲ, ಅವಳ ಕೆನ್ನೆಗೆ ಬಿಗಿಯಬೇಕೆಂದು ಮನಸ್ಸಾದರೂ ಅದನ್ನು ತಡೆದುಕೊಂಡು ಹೇಳಿದೆ.

"ನಿನ್ನ ಮಾತು ಪೂರ್ಣವಾಗಿ ಸುಳ್ಳಲ್ಲ ಆದರೆ ಮಾರ್ಗವನ್ನು ಹುಡುಕಿ ಹೊರಟ ಒಬ್ಬ ಬಿಕ್ಷುವಿಗೆ ಈ ರೀತಿ ಮಾತನಾಡುವುದು ಸರಿಯಲ್ಲ."

"ಯಾರಾದರೂ ತನ್ನ ತುಟಿಯನ್ನು ನೆಕ್ಕಿಕೊಂಡರೆ ನನಗೆ ಆತನು ಹಸಿದಿರುವುದು ಗೊತ್ತಾಗುತ್ತದೆ. ನಿನ್ನಲ್ಲಿ ನನಗೆ ಹಾಳಾದ ಒಂದು ದೇಗುಲವಷ್ಟೆ ಕಾಣಿಸುತ್ತಿದೆ. ೧೦ ವರ್ಷಗಳ ಕಾಲ ವೇಶ್ಯಾವೃತ್ತಿಯನ್ನು ಅನುಸರಿಸಿದ ನಂತರ ನನ್ನಲ್ಲಿ ಉಳಿದಿರುವುದೆಂದರೆ ಕುಂಡಿಯನ್ನು ಅಲ್ಲಾಡಿಸುವುದು ಮತ್ತು ಜನರನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ. ನೀನು ಲೈಂಗಿಕ ತೃಷೆ ಇಲ್ಲದವನಾಗಿದ್ದರೆ ಇಂತಹ ಸಮಯದಲ್ಲಿ ಸೂಳೆಗಳ ಮನೆಯ ಹತ್ತಿರ ಸುಳಿದಾಡುತ್ತಿರಲಿಲ್ಲ."

"ತನ್ನ ಪರ್ವತ ನಿವಾಸವನ್ನು ತೊರೆದ ಸನ್ಯಾಸಿಗೆ ಇಂತಹ ಆರೋಪಗಳೆಲ್ಲಾ ಆಗಲೇ ಬೇಕು. ನಿನಗೆ ತಿಳಿಯಲೇಬೇಕೆಂದಿದ್ದರೆ ನಾನೊಬ್ಬ ಮಹಾಗುರುವಿನ ಶೋಧದಲ್ಲಿದ್ದೇನೆ".

"ಮಹಾ ಗುರು ಎಂದೆಯಾ!"

"ಹೌದು ನಿನಗೆ ಗೊತ್ತೆ"?

"ನನ್ನನ್ನು ಏನೆಂದು ಕೊಂಡಿದ್ದೀಯ? ದೇಹವನ್ನು ಮಾರಿಕೊಳ್ಳುವವಳು ಎಂದಕೂಡಲೇ ನಿನ್ನ ಮಹಾಗುರುವಿನ ಬಗ್ಗೆ ಗೊತ್ತಿಲ್ಲದವಳೆಂದೆ?"

ಆ ವೇಶ್ಯೆ ತನ್ನ ಬಟ್ಟೆಗಳನ್ನು ಸರಿಪಡಿಸಿಕೊಳ್ಳುತ್ತಾ ಮೇಲೆದ್ದು ಹೊರಡುವವಳಿದ್ದಳು. ಈ ಬಾರಿ ನಾನೇ ಅವಳ ತೋಳನ್ನು ಹಿಡಿದೆ.

"ಕ್ಷಮಿಸು. ನಿಜಕ್ಕೂ ನಾನು ಹೇಳಿದ ವ್ಯಕ್ತಿಯನ್ನು ನೀನು ತಿಳಿದಿರುವೆಯಾ? ಅಂದರೆ ನೀನು ಅವರನ್ನು ಕಂಡಿರುವೆಯಾ?".

ಆಕೆ ನಕ್ಕುಬಿಟ್ಟಳು. "ಅಷ್ಟೇ ಏಕೆ? ನಿನ್ನೆ ರಾತ್ರಿ ಅವರು ಇಲ್ಲೇ ಇದ್ದರು. ಈ ರಾತ್ರಿಯು ಬರಬಹುದು".

"ನೀನು ಏನು ಹೇಳುತ್ತಿದ್ದೀಯಾ? ಅಂತಹ ಒಬ್ಬ ವ್ಯಕ್ತಿ...!"

ಏನೋ ಕೇಳಬೇಕೆಂದಿದ್ದದ್ದು ಮಧ್ಯದಲ್ಲೆ ನಿಂತು ಹೋಯಿತು. " ನೀನು ಹೇಳುತ್ತಿರುವುದು ನಿಜವೆ? ಅವರ ಬಗ್ಗೆ ಸ್ವಲ್ಪ ಹೇಳು".

"ಅವರು ದೀನರ ಮಿತ್ರ. ಬದುಕು ಬಹಳ ಕಷ್ಟವೆಂದು ಅನಿಸಿದಾಗ, ಜಗತ್ತು ತೀರ ಕ್ರೂರವೆನಿಸಿದಾಗ ಅವರು ನಮ್ಮಲ್ಲಿ ಬರುತ್ತಾರೆ. ಅವರೆಂದೂ ನಿನ್ನ ಹಾಗೆ ದೊಡ್ಡ ದೊಡ್ಡ

ಮಾತುಗಳನ್ನು ಆಡುವುದಿಲ್ಲ. ಒಮ್ಮೆ ನನಗೆ ಗುಪ್ತರೋಗ ಬಂದು ಹಾಸಿಗೆಯಿಂದ ಏಳಲು ಆಗದಿದ್ದಾಗ ಅವರೇ ನನ್ನ ವಸ್ತ್ರಗಳನ್ನು ಒಗೆದು ಕೊಟ್ಟರು. ಅಷ್ಟೇ ಅಲ್ಲ, ನನ್ನ ಗೆಳತಿಯೊಬ್ಬಳನ್ನು ಪೋಲೀಸರು ಹೊಡೆದುಹಾಕಿದ್ದಾಗ ಆಕೆಯನ್ನು ಬಿಡಿಸಲು ಇವರೇ ಬಂದರು...."

ಅವಳು ಅರ್ಥವಿಲ್ಲದೇ ಬಡಬಡಿಸುತ್ತಿರುವುದನ್ನು ನೋಡಿ ಅವಳ ಮಾತು ನಿಲ್ಲಿಸಲು ಅವಳ ತೋಳನ್ನು ಅಲ್ಲಾಡಿಸಿದೆ. "ನೀನು ನಿಜಕ್ಕೂ ಅವರನ್ನು ನೋಡಿದ್ದರೆ ಅವರು ಹೇಗಿರುವರೆಂದು ಹೇಳು?"

ಆಕೆ ಮತ್ತೆ ಕಣ್ಣುಗಳನ್ನು ಮುಚ್ಚಿಕೊಂಡು ಮಾತನಾಡಿದಳು.

"ಅವರು ನಮ್ಮ ಹಾಗೇ ಇದ್ದಾರೆ. ಅವರ ಮುಖ ಕುರೂಪವಾಗಿದೆ. ಅವರ ಕೈಗಳ ತುಂಬಾ ಬಿಸಿಲಿನ ಪ್ರಭಾವದಿಂದ ಗಂಟುಗಳು ಎದ್ದಿವೆ. ಆದರೆ ಎಲ್ಲಕ್ಕೂ ಮುಖ್ಯವಾಗಿ ಅವರು ನಮಗೆ ಮಾತನಾಡುವಾಗ ಕಷ್ಟವಾಗುವಂತಹ ಶಬ್ದಗಳನ್ನು ಬಳಸುವುದೇ ಇಲ್ಲ".

ಅವಳ ಮಾತುಗಳನ್ನು ಕೇಳುತ್ತಿದ್ದಂತೆ ಅವಳ ತಲೆಕೆಟ್ಟಿರುವುದು ತಿಳಿಯಿತು. ಮಹಾಗುರುಗಳು ಇನ್ನು ನನಗೆ ಸಿಗಲಾರರು ಎಂದು ಅನಿಸಿತು. ನಿಟ್ಟುಸಿರು ಬಿಟ್ಟು ನಾನು ತಿರುಗಿದಾಗ ಆಕೆ ನನ್ನ ಬಟ್ಟೆಯನ್ನು ಹಿಡಿದಳು. "ಏನಾಯಿತೀಗ? ನೀನು ಹಣ ಕೊಡುವುದು ಬೇಡ ಎಂದು ಈಗಾಗಲೇ ಹೇಳಿದ್ದೇನಲ್ಲ. ಬಹಳ ಹೊತ್ತಿನಿಂದ ಮುಖವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದೆ. ಈಗ ಒಳಗೆ ಹೋಗಿ ರಾತ್ರಿ ಒಟ್ಟಿಗೆ ಕಳೆಯೋಣ".

"ನನ್ನನ್ನು ಬಿಡು, ಪವಿತ್ರ ಸನ್ಯಾಸಿಯೊಬ್ಬನ ಬಟ್ಟೆಯನ್ನು ಹಿಡಿಯಲು ಕೆಳದರ್ಜೆಯ ಸೂಳೆಗೆ ಎಷ್ಟು ಧೈರ್ಯ?"

ಅಷ್ಟರಲ್ಲಿ ನನಗೆ ಸಿಟ್ಟು ಬಂದು ಜೋರಾಗಿ ಕೂಗಾಡತೊಡಗಿದೆ. ಆದರೆ ಆಕೆ ನನ್ನ ಬಟ್ಟೆಯನ್ನು ಬಿಡುವ ಮಾತಿರಲಿ, ಒಂದು ಕೈಯಿಂದ ನನ್ನ ಸೊಂಟದ ಸುತ್ತ ಕೈ ಹಾಕಿ, ಇನ್ನೊಂದು ಕೈಯನ್ನು ನನ್ನ ಕಾಲುಗಳ ಮಧ್ಯೆ ತಂದಳು.

"ನನ್ನನ್ನು ಬಿಡು ಸೂಳೆ, ನೀವೆಲ್ಲ ಸತ್ತು ನರಕಕ್ಕೆ ಹೋಗುತ್ತೀರಿ" ನಾನು ನನ್ನ ಬಲವನ್ನೆಲ್ಲ ಬಳಸಿ ಅವಳನ್ನು ತಳ್ಳಿ ಬೇರೆಯಾದೆ. ಕೆಳಗೆ ಬಿದ್ದ ಅವಳ ಒಳ ವಸ್ತ್ರವೂ ಕಾಣುತ್ತಿತ್ತು. ಕೂಡಲೇ ಎದ್ದುನಿಂತ ಆಕೆ ನನ್ನ ಕುತ್ತಿಗೆಯಲ್ಲಿದ್ದ ಜಪಸರವನ್ನು ಹಿಡಿದು ಜೋರಾದ ಸ್ವರದಲ್ಲಿ ಕೂಗಾಡ ತೊಡಗಿದಳು."

"ನಾಯಿಮಗನೆ, ನೀನು ಸನ್ಯಾಸಿಯಲ್ಲ. ದೊಡ್ಡ ಕಳ್ಳ, ಕಾಮಾತುರನಾದ ನಿನಗೆ ಮನಸ್ಸಿನ ಆಳದಿಂದ ದೇಹವನ್ನರ್ಪಿಸಲು ಬಂದರೆ ನನ್ನನ್ನು ಮಾತಿನಲ್ಲಿ ಮತ್ತು ದೈಹಿಕವಾಗಿ ಹಿಂಸಿಸುತ್ತೀಯಾ?"

ಈ ಗಲಾಟೆಯಲ್ಲಿ ವೇಶ್ಯೆಯರು ತಮ್ಮ ತಮ್ಮ ವಿಟರೊಂದಿಗೆ ಬಟ್ಟೆಗಳನ್ನು ಸರಿಪಡಿಸಿಕೊಳ್ಳುತ್ತ ಹೊರಬಂದರು. ಅವರೆಲ್ಲ ನನ್ನನ್ನು ನೋಡಿ ನಗತೊಡಗಿದರು. ಅತ್ಯಂತ ಅವಮಾನಕ್ಕೆ ಗುರಿಯಾದ ನಾನು ಬೇರೆ ಏನೂ ಮಾಡಲಾಗದೆ ಬುದ್ಧ ಮತ್ತು ಪೋಸಲರ ನಾಮಸ್ಮರಣೆ ಮಾಡಿದೆ. ಇಷ್ಟೆಲ್ಲದರ ನಡುವೆಯೂ ಆ ವೇಶ್ಯೆ ತನ್ನ ವಾಗ್ಬಾಣಗಳನ್ನು ಮತ್ತೆ ಮುಂದುವರೆಸಿದಳು, "ನಾಯಿ ಮಗನೇ, ನೀನೊಬ್ಬ ಕಳ್ಳ, ನಾನು ನರಕಕ್ಕೆ ಹೋಗುತ್ತೀನಾ? ಇದೇ ನರಕ, ಇದಕ್ಕಿಂತ ಕೆಟ್ಟ ನರಕ

ಇನ್ನೊಂದಿಲ್ಲವೆಂದು ನಿನಗೆ ತಿಳಿಯದು. ಮಾರ್ಗದ ಅನ್ವೇಷಣೆಯ ಹೆಸರಿನಲ್ಲಿ ನೀನು ಬೇರೆಯವರ ಅನ್ನವನ್ನು ಕದಿಯುತ್ತೀಯಾ! ಇಂತಹ ನೀನು ಸ್ವರ್ಗಕ್ಕೆ ಹೋದರೆ, ನಮ್ಮ ಹೊಟ್ಟೆಪಾಡಿಗಾಗಿ ದೇಹವನ್ನು ಮಾರಿಕೊಳ್ಳುವ ನನ್ನಂತಹ ಸೂಳೆಯರು ನರಕಕ್ಕೆ ಹೋಗುತ್ತಾರೆ ಅಲ್ಲವೇ?"

ಇದ್ದಕ್ಕಿದ್ದಂತೆ ನನ್ನ ಕುತ್ತಿಗೆಯಲ್ಲಿದ್ದ ಜಪಸರ ಕಿತ್ತುಹೋಯಿತು. ಮಣಿಗಳು ಎಲ್ಲೆಲ್ಲೂ ಚೆಲ್ಲಾಡಿದುವು. ನನ್ನ ಹೃದಯ ಬಡಿತವು ತೀವ್ರವಾಯಿತು. ಆದರೆ ಆ ವೇಶ್ಯೆ ಕೂಗಾಡುವುದನ್ನು ಮತ್ತೆ ಮುಂದುವರೆಸಿದಳು. "ನಿಜ, ನನ್ನಂತಹ ಕುರೂಪಿಗಳು ದೇಹವನ್ನು ಮಾರಾಟಮಾಡಿದ್ದಕ್ಕಾಗಿ ನರಕಕ್ಕೆ ಹೋದರೆ, ನಿನ್ನಂತಹ ಚೆನ್ನಾಗಿ ಸಾಕಲ್ಪಟ್ಟ ಬುದ್ಧಿವಂತ ಋಷಿಯಾಗಿ ಸ್ವರ್ಗಯಾನವನ್ನು ಮಾಡುತ್ತಾನೆ..."

ನೆರೆದಿದ್ದ ಜನರಲ್ಲಿನ ಒಬ್ಬ ವೃದ್ಧ ಹೆಂಗಸು ಬುದ್ಧನ ಕರುಣೆಯನ್ನು ತಿಳಿದಿದ್ದರಿಂದ ನಾನು ತಪ್ಪಿಸಿಕೊಳ್ಳಲು ಸಾಧ್ಯವಾಯಿತು. ಆದರೆ ನಾನು ಏಕಾಂಗುಲಿಯನ್ನು ಕಾಣಲು ಸಾಧ್ಯವಾಗಲಿಲ್ಲವಷ್ಟೇ ಅಲ್ಲದೆ, ಒಬ್ಬ ವೇಶ್ಯೆಯ ಕೈಯಲ್ಲಿ ಅವಮಾನಕ್ಕೆ ಗುರಿಯಾಗಬೇಕಾಯಿತು. ಆದ್ದರಿಂದ ನಾನು ಈ ಲೌಕಿಕ ಜಗತ್ತಿನಲ್ಲಿ ಸುತ್ತಾಡುವುದನ್ನು ನಿಲ್ಲಿಸಲು ನಿರ್ಧರಿಸಿದೆ. ಆದರೆ ನನ್ನ ಅನ್ವೇಷಣಾ ಕಾರ್ಯದ ಮುಂದೆ ಈ ತೀರ್ಮಾನ ನಿಲ್ಲಲಿಲ್ಲ.

****

ನಾನು ಜಗತ್ತಿನ ಎಲ್ಲ ಕೊಳಕು ಜಾಗಗಳಲ್ಲೂ ಹುಡುಕಾಟವನ್ನು ಮುಂದುವರೆಸಿದೆ. ಎಲ್ಲೆಡೆಯೂ ನನಗೆ ಆ ವೇಶ್ಯೆಯು ಮಾಡಿದ ರೀತಿಯಲ್ಲೇ ಅವಮಾನವಾಯಿತು. ಆದರೆ, ಶ್ರೀಮಂತ ಮಹಿಳೆಯರು ಮತ್ತು ಸರ್ಕಾರಿ ಅಧಿಕಾರಿಗಳು ದಾನಮಾಡಿದ ಚಿನ್ನ ಮತ್ತು ಬೆಳ್ಳಿ ವಸ್ತುಗಳಿಂದ ಕೂಡಿದ ದೇಗುಲಗಳ ಬಳಿ ಸುಳಿಯದ ಮಹಾಗುರುಗಳು ಜಗತ್ತಿನ ಅತ್ಯಂತ ಕೊಳಕು ಸ್ಥಳಗಳಲ್ಲಿ ಮಾತ್ರ ಏಕೆ ಇರುತ್ತಿದ್ದರು ಎಂದು ನನಗೆ ತಿಳಿಯಲಿಲ್ಲ. ಏಕೆಂದರೆ ಇಂತಹ ಸ್ಥಳಗಳಲ್ಲಿನ ಜನರು ಮಾತ್ರ ತಾವು ಮಹಾಗುರುಗಳನ್ನು ಕಂಡದ್ದಾಗಿ ಹೇಳುತ್ತಿದ್ದರು. ಆದ್ದರಿಂದ ನನ್ನ ಅನ್ವೇಷಣೆಯಲ್ಲಿ ನಾನು ವೇಶ್ಯೆಯರು, ಜೂಜುಗಾರರು, ಮೋಸಗಾರರು ಮುಂತಾದವರಿಂದ ಅವಮಾನಕ್ಕೆ ಈಡಾದೆ.

ರಾಜನಿಗಾಗಿ ಕೆಲವು ದಾಸರು ಎತ್ತಿನ ಹಾಗೆ ಬೆನ್ನಿನ ಮೇಲೆ ನೇಗಿಲು ಹೊತ್ತು ದುಡಿಯುತ್ತಿದ್ದರು. ಮನೆ ಗಾತ್ರದ ಗಿರಣಿಯ ಸುತ್ತ ಕುತ್ತಿಗೆಗೆ ಬಿಗಿದ ಕಂಬವನ್ನು ನೂಡುತ್ತ ನಡೆದಿದ್ದರು. ಇವರೆಲ್ಲ ತಮ್ಮ ಕೆಲಸ ನಿಲ್ಲಿಸಿ ನನ್ನ ಮುಖಕ್ಕೆ ಉಗಿದರು. ಈ ಕಠಿಣ ದುಡಿಮೆ ಕ್ರೂರ ಬದುಕಿನಿಂದ ಸಾವೊಂದೇ ಅವರನ್ನು ಬಿಡುಗಡೆ ಮಾಡಬಲ್ಲದೆಂದು ಹೇಳಿದರು. ನಾನು ಈ ಸಂದರ್ಭದಲ್ಲಿ ಅವರಿಗೆ ಬೌದ್ಧ ಸೂತ್ರವೊಂದನ್ನು ವಿವರಿಸತೊಡಗಿದೆ.

"ನೀವು ಕಳೆದ ಜನ್ಮದಲ್ಲಿ ಮಾಡಿದ ಪಾಪ ಕಾರ್ಯಗಳಿಗಾಗಿ ಈ ಜನ್ಮದಲ್ಲಿ ಕಷ್ಟವನ್ನು ಅನುಭವಿಸುತ್ತಿರುವಿರಿ. ಆದ್ದರಿಂದ ನಿಮಗೆ ಯಾರೂ ಇಲ್ಲ. ದ್ವೇಷವು ಪಾಪದ ಬೀಜವಾಗಿದ್ದು, ಜಗತ್ತನ್ನು ಶಪಿಸುವುದನ್ನು ಬಿಟ್ಟು ಬುದ್ಧನ ಪ್ರಾರ್ಥನೆಯಲ್ಲಿ ಮಗ್ನರಾಗಿರಿ."

ಆಗ ಅವರೆಲ್ಲ ಒಟ್ಟಾಗಿ ನನ್ನ ಮುಖಕ್ಕೆ ಉಗಿದರು. ಕಾಗೆಗಳ ಹಿಂಡಿನಂತೆ ಕೂಗಾಡಿದರು.

"ನಿನಗೆ ನಮ್ಮ ಕಷ್ಟ ಗೊತ್ತಾಗುವುದಿಲ್ಲ. ಆಹಾರಕ್ಕಾಗಿ, ಬಟ್ಟೆಗಾಗಿ, ಆಸರೆಗಾಗಿ ನೀನು ಯೋಚಿಸಬೇಕಾಗಿಲ್ಲ. ನಿನ್ನ ಮಾರ್ಗ ಅಥವಾ ಹೇಲಿನ ರಾಶಿಯತ್ತ ಹೋಗುವುದೇ ನಿನಗೆ ಮುಖ್ಯ. ಸಾವಿನ ಅಂಚಿನಲ್ಲಿರುವವರನ್ನು, ಅನ್ಯಾಯವಾಗಿ ಹಸಿವಿನಿಂದ ಒದ್ದಾಡುತ್ತಿರುವವರನ್ನು, ಅನಗತ್ಯವಾಗಿ ರೋಗದಿಂದ ಬಳಲುತ್ತಿರುವವರನ್ನು, ಸುಮ್ಮನೆ ಸೆರೆಮನೆಯಲ್ಲಿ ಕೊಳೆಯುತ್ತಿರುವವರನ್ನು ಕಂಡಾಗಲೆಲ್ಲ ಅವರು ಹಿಂದಿನ ಪಾಪಕರ್ಮದ ಫಲವನ್ನು ಅನುಭವಿಸುತ್ತಿದ್ದಾರೆ ಎಂದು ನೀನು ಹೇಳುತ್ತೀಯಾ? ಮುಂದಿ ಜನ್ಮದಲ್ಲಿ ಅವರು ಸುಖವಾಗಿರಬೇಕಾದರೆ ಬುದ್ಧನನ್ನು ಪ್ರಾರ್ಥಿಸಬೇಕೆಂದು ಹೇಳುತ್ತೀಯಾ. ನೀನೊಬ್ಬ ವಂಚಕ."

ಅವರೆಲ್ಲ ಇನ್ನೇನು ನನ್ನನ್ನು ಜೀವಂತವಾಗಿ ಹರಿದು ತಿನ್ನುವಂತೆ ಮಾತನಾಡಿದರು. ಅವರ ಕಣ್ಣುಗಳಲ್ಲಿ ಹೊಮ್ಮುತ್ತಿದ್ದ ಪೇಲವ ನೀಲ ಬೆಳಕನ್ನು ಕಂಡ ನನಗೆ ಬೆನ್ನಮೇಲೆ ಹೊರೆ ಇರದಿದ್ದರೆ ಅವರೆಲ್ಲ ನನ್ನನ್ನು ಹೊಡೆದು ಸಾಯಿಸುತ್ತಿದ್ದರೆಂದು ಅರಿವಾಯಿತು. ಏನೇ ಆದರೂ ಈ ಲೌಕಿಕ ಜಗತ್ತು ಅಜ್ಞಾನಿಗಳಿಂದ ಮತ್ತು ಕಾರುಣ್ಯರಹಿತ ಪ್ರಾಣಿಗಳಿಂದ ತುಂಬಿದ್ದು ಎಷ್ಟು ಕೀಳುಮಟ್ಟಕ್ಕೆ ಇಳಿದಿದೆಯೆಂದರೆ, ಮಾರ್ಗವನ್ನು ಅರಸಿ ಹೊರಟ ನನ್ನಂತಹವರು ಇಲ್ಲಿ ಮೂಗು ತೂರಿಸಬಾರದು ಎನಿಸಿತು.

ನಾನು ಎದ್ದು ನಿಲ್ಲುತ್ತಿರುವಾಗ ದೇಹದ ತೂಕಕ್ಕೆ ಕಾಲುಗಳು ನೋಯಿತು. ನಾನು ಬಹಳ ಹೊತ್ತಿನವರೆಗೆ ಅಲ್ಲಿ ಕುಳಿತಿದ್ದೆ. ಸ್ವಲ್ಪ ಹೊತ್ತಿನಲ್ಲೇ ಎಷ್ಟು ಕತ್ತಲಾಯಿತೆಂದರೆ ಸ್ವಲ್ಪ ದೂರದಲ್ಲಿರುವುದೂ ನನಗೆ ಕಾಣಿಸಲಿಲ್ಲ. ಅರಣ್ಯದ ಕಣಿವೆಯಿಂದ ಹಸಿದ ಪ್ರಾಣಿಗಳ ಶಬ್ದವನ್ನು ಕೇಳಿ ಮಹಾಗುರುಗಳು ಸಿಗುವುದಿರಲಿ ನಾನು ಈ ಕಾಡು ಪ್ರದೇಶದಲ್ಲಿ ಸಾಯುವೆನೆಂದು ಅನಿಸಿತು. ಚೀಲವನ್ನು ಸರಿಯಾಗಿ ಕಟ್ಟಿಕೊಳ್ಳುತ್ತ ಚಪ್ಪಲಿಯನ್ನು ಧರಿಸುತ್ತಿರುವಾಗ ನಡುಗುವ ಕಂಠದಲ್ಲಿ ಪೋಸಲರ ನಾಮಸ್ಮರಣೆ ಮಾಡಿದೆ. ನಂತರ ಮರಗಳ ಕೊಂಬೆಗಳನ್ನು ಸರಿಸುತ್ತಾ ಮುನ್ನಡೆದೆ.

ನಂತರ ನಾನು ದಾರಿ ಹುಡುಕುತ್ತಾ, ಬೀಳುತ್ತಾ, ಏಳುತ್ತಾ, ಗುರಿಯಿಲ್ಲದೆ ನಡೆಯುತ್ತಿರುವಾಗ ಎದುರಿಗೊಂದು ಬೆಳಕು ಕಂಡಿತು. ಅದೊಂದು ಮನೆಯಿರಬೇಕೆಂದು ಅನಿಸಿತು. ಇಂತಹ ಪರ್ವತದ ಆಳ ಪ್ರದೇಶದಲ್ಲಿ ಯಾರಾದರೂ ವಾಸಿಸುತ್ತಿದ್ದರೆ ಅದು ಮಹಾಗುರು ಏಕಾಂಗುಲಿಯೇ ಎಂದು ಅನಿಸಿತು. ಒಂದು ಕ್ಷಣವೂ ನಿಲ್ಲದೆ ನಾನು ಅಲ್ಲಿಗೆ ಓಡಿದೆ.

ಅದೊಂದು ಚಿಕ್ಕ ಗುಡಿಸಲಾಗಿತ್ತು. ಚಿನ್ನದ ಗಣಿಯಲ್ಲಿ ಕೆಲಸ ಮಾಡುವವರು ಅಥವಾ ಜಿನ್‌ಸೆಂಗ್ ಗೆಡ್ಡೆಗಳನ್ನು ಸಂಗ್ರಹಿಸುವವರು ರಾತ್ರಿಯನ್ನು ಕಳೆಯುವಂತಹ ಗುಡಿಸಲಾಗಿತ್ತು. ಗುಡಿಸಲಿನ ಎದುರಿನಲ್ಲಿ ಮಂದವಾದ ಬೆಳಕಿನಲ್ಲಿ ಮುದುಕನೊಬ್ಬ ತನ್ನ ಕೂದಲಿನ ಹೇನುಗಳನ್ನು ತೆಗೆದು ಉಗುರುಗಳ ಮಧ್ಯೆ ಕುಕ್ಕುತ್ತಾ ಕುಳಿದಿದ್ದ. ಅವನ ಜೀರ್ಣಗೊಂಡ ದೇಹ. ಚಿಂದಿಯಾದ ಬಟ್ಟೆ, ಗೀಜು ತುಂಬಿದ ಕಣ್ಣುಗಳನ್ನು ನೋಡಿದ ನನಗೆ, ಊರಿನವರು ಹೊರ ಹಾಕಿರುವ ಭಿಕ್ಷುಕನೀತ ಎಂದು ಗೊತ್ತಾಯಿತು.

ಮಹಾಗುರುವನ್ನು ಅರಸಿ ಹೊರಟ ನನಗೆ ಇಂತಹ ವ್ಯಕ್ತಿ ಇಲ್ಲಿರುವುದು ನೋಡಿ ಸಹಿಸಲು ಕಷ್ಟವಾಯಿತು. ಮೊದಲು ನಾನು ಹೀಗೇ ಕುಳಿತು ಧ್ಯಾನ ಮಾಡುವುದೆಂದು ಯೋಚಿಸಿದರೂ,

ಇಷ್ಟು ದೂರದವರೆಗೆ ಬಂದು ಸುಮ್ಮನಿರುವುದು ಸರಿಯಲ್ಲವೆಂದು ತೋರಿತು. ನಾನು ಕೇಳಿದೆ "ಮುದುಕ, ನಿನಗೇನಾದರೂ ಏಕಾಂಗುಲಿ ಎಂಬ ಮಹಾಗುರುಗಳ ಬಗ್ಗೆ ತಿಳಿದಿದೆಯೇ?"

ಆದರೆ ಆ ಮುದುಕ ಕಿವುಡನ ಹಾಗೆ ಯಾವುದೇ ಉತ್ತರವನ್ನು ಕೊಡದೆ ಹೇನು ಕುಕ್ಕುವ ತನ್ನ ಕೆಲಸದಲ್ಲೇ ಮುಳುಗಿದ.

'ಇನ್ನಂತಹವನಿಗೆ ಆ ಮಹಾಗುರುಗಳ ಬಗ್ಗೆ ಎಲ್ಲಿ ತಿಳಿದಿರುತ್ತದೆ?' ಎಂದು ನಾನು ಮನಸ್ಸಿನಲ್ಲೇ ಅಂದುಕೊಂಡೆ. ನಂತರ ಆ ಮುದುಕನನ್ನು ನಾನು ಮರೆತೇಬಿಟ್ಟೆ. ಅಭ್ಯಾಸಬಲದಂತೆ ಮಲಗುವ ಮುನ್ನ ನಾನು ಬುದ್ಧ ಸೂತ್ರವನ್ನು ಪಠಿಸತೊಡಗಿದೆ.

'ಬಾಯಿ ಮುಚ್ಚಿಕೊಳ್ಳಯ್ಯ, ನನಗೆ ನಿದ್ದೆ ಬರುತ್ತಿದೆ. ಪ್ರಾರ್ಥನೆ ಮಾಡುವುದಿದ್ದರೆ ಮನಸ್ಸಿನಲ್ಲಿ ಮಾಡಿಕೊ. ಬೇರೆಯವರ ವಿಶ್ರಾಂತಿಯನ್ನು ಹಾಳು ಮಾಡುವ ಹಾಗೆ ಪ್ರಾರ್ಥಿಸಬೇಕೆಂದು ಯಾವುದಾದರೂ ಕಾನೂನು ಇದೆಯಾ?"

ಇದನ್ನು ಕೇಳಿ ನಾನು ಕಣ್ಣು ಬಿಟ್ಟೆ. ಆದರೆ ಮುದುಕ ಅಷ್ಟರಲ್ಲಿ ದೀಪವನ್ನು ಆರಿಸಿದ್ದ. ಅವನ ಗೊರಕೆಯ ಸದ್ದು ಮಾತ್ರ ಕೇಳುತ್ತಿತ್ತು.

ಒಂದು ಋತುಕಾಲ ಪೂರ್ತಿ ಅಲೆದಾಡಿದ ಕಾರಣ ನನಗೆ ಅತೀವ ಆಯಾಸವಾಗಿತ್ತು. ಬೆಳಗ್ಗೆ ಬಹಳ ಸಮಯದವರೆಗೆ ನಾನು ಮಲಗಿದೆ. ನನಗೆ ಎಚ್ಚರವಾದಾಗ ಸೂರ್ಯ ನೆತ್ತಿಯ ಮೇಲೆ ಬಂದಿದ್ದ. ಮುದುಕ ಎಲ್ಲೂ ಕಾಣಲಿಲ್ಲ. ನಾನು ಚೀಲದಲ್ಲಿದ್ದ ಅಕ್ಕಿ ಮತ್ತು ಬಾರ್ಲಿ ಹಿಟ್ಟನ್ನು ಸ್ವಲ್ಪ ಸೇವಿಸಿದೆ. ನಂತರ ಭಾರವಾದ ಹೃದಯದಿಂದ ಎದುರಿಗೆ ವಿಶಾಲವಾಗಿ ಚಾಚಿಕೊಂಡಿದ್ದ ಪರ್ವತಗಳ ಸಾಲು ಸಾಲುಗಳನ್ನು ನಿರುಕಿಸುತ್ತಾ ನಿಂತೆ. ಇನ್ನೊಂದು ದಿನ ಬಂದಿತು, ಹೋಯಿತು. ಈಗ ಎಲ್ಲಿಗೆ ಹೋಗಲಿ ನಾನು ? ಗುರುವನ್ನು ಎಲ್ಲಿ ಸಂಧಿಸಲಿ ನಾನು? ನನಗೆ ಉತ್ತರ ಗೊತ್ತಿರದಿದ್ದರೂ ಮುನ್ನಡೆಯಲೇ ಬೇಕಿತ್ತು.

ಹೃದಯದ ಮೇಲೆ ದೊಡ್ಡ ಕಲ್ಲು ಬಂಡೆಯನ್ನು ಇಟ್ಟುಕೊಂಡವನಂತೆ ಆ ಹಳೆಯ ಗುಡಿಸಲಿನಿಂದ ನಾನು ಹೊರಡುತ್ತಿದ್ದಂತೆ ಯಾರೋ ಕೂಗಿದರು.

"ಗುರುಗಳು!ಗುರುಗಳು!"

ನಾನು ನಡಿಗೆಯ ದಿಕ್ಕನ್ನು ಬದಲಿಸದೇ ತಲೆಯನ್ನು ಮಾತ್ರ ತಿರುಗಿಸಿದೆ. ಅಲ್ಲಿ ಆ ಮುದುಕ ನಿಂತಿದ್ದ. ಆತ ಚೆನ್ನಾಗಿ ನಗುತ್ತಿದ್ದ. "ಹಾಗಾದರೆ ನೀನು ನಿಜವಾದ ಗುರುವಿನ ಹುಟುಕಾಟದಲ್ಲಿ ಇದ್ದೀಯಾ ಅಲ್ಲವೆ?"

ವಿಸ್ಮಯಗೊಂಡ ನಾನು ತಲೆಯನ್ನು ಆಡಿಸಿದೆ. ಆ ಮುದುಕ ಗಹಗಹಿಸಿ ನಕ್ಕುಬಿಟ್ಟ. ನಂತರ ನನ್ನನ್ನು ಬಹಳ ಕರುಣೆಯ ವಸ್ತುವೆಂಬಂತೆ ನೋಡಿ ಬೆನ್ನು ತಟ್ಟಿದ.

"ಮೂರ್ಖ, ನೀನು ನಿಜವಾದ ಗುರುವನ್ನು ಹುಡುಕುತ್ತಿದ್ದೀಯಾ ಅಲ್ಲವೆ?"

"ಹೌದು"

ಮುದುಕ ನಿರಾಶೆಯ ದನಿಯಲ್ಲಿ ಲೊಚಗುಟ್ಟಿದ ನಂತರ ದೊಡ್ಡದಾಗಿ ನಿಟ್ಟುಸಿರು ಬಿಟ್ಟ.

"ಜಗತ್ತಿನಲ್ಲಿ ಇಷ್ಟೆಲ್ಲ ಸಮಸ್ಯೆಗಳಿರುವಾಗ ಗುರು ಈ ಉನ್ನತ ಪರ್ವತ ಪ್ರದೇಶದಲ್ಲಿ ಕುಳಿತು ಹೇನು ಕುಕ್ಕುತ್ತಿರುತ್ತಾನೆಂದು ಭಾವಿಸಿದೆಯಾ?"

ಆ ಕ್ಷಣದಲ್ಲಿ ನನ್ನ ಎದೆಯನ್ನು ಒತ್ತುತ್ತಿದ್ದ ಬಂಡೆಗಳನ್ನು ಎತ್ತಿ ಬಿಸಾಕಿದಂತಾಯಿತು. ನನ್ನ ಸುತ್ತಲಿನ ಎಲ್ಲವೂ ಇದ್ದಕ್ಕಿದ್ದಂತೆ ನಿಚ್ಚಳವಾಯಿತು.

ಬೋಧಿ ವಿವೇಕ ಮತ್ತು ದುಷ್ಕರ್ಮ ಒಟ್ಟೊಟ್ಟಿಗೆ ಇರುತ್ತವೆಂದು ಬುದ್ಧ ಸತ್ಯವನ್ನೇ ನುಡಿದಿದ್ದಾನೆ. ಈ ಜಗತ್ತು ಮತ್ತು ಶುದ್ಧ ಲೋಕ ಬೇರೆ ಬೇರೆಯಲ್ಲ.

ಈ ಜಗತ್ತಿನ ಕಷ್ಟಪರಂಪರೆಗಳು, ಆಶೆ ಆಮಿಷಗಳಿಂದ ನಾವು ಓಡಿ ಹೋದರೆ ಶುದ್ಧ ಲೋಕವನ್ನು ತಲುಪುವುದಿಲ್ಲ. ಆ ವೇಶ್ಯೆ ಹೇಳಿದಂತೆ ಈ ಜಗತ್ತು ದೇಹವನ್ನೇ ಮಾರಿಕೊಳ್ಳುವ ವೇಶ್ಯೆಯರಿಗೆ ನರಕದಂತೆ ಕಾಣುತ್ತಿದ್ದರೆ ನಾನೂ ಈ ನರಕವನ್ನು ಅನುಭವಿಸಬೇಕು. ಕೊನೆಗೂ ನಾನು ಗುರುವನ್ನು ನೋಡುತ್ತೇನೋ ಇಲ್ಲವೋ ಅಥವಾ ನನ್ನ ಈ ಜ್ಞಾನೋದಯಕ್ಕೆ ಕಾರಣನಾದ ಆ ಮುದುಕನೇ ನಿಜಕ್ಕೂ ಮಹಾಗುರುವಿನ ಸ್ವರೂಪವೇ ಆಗಿರಬಹುದೇ ಎಂಬುದಕ್ಕೆ ಈಗ ಅರ್ಥವಿಲ್ಲ.

❑

✤ **ಮುನಿಯಾಲ್ ಗಣೇಶ್ ಶೆಣೈ,** 'ಲಕ್ಷ್ಮೀ ಸದನ', ಗಾವಳಿ ಶಾಲೆ ಎದುರು, ಗ್ರಾಮ: ಗಾವಳಿ, ಅಂಚೆ : ಹಳ್ನಾಡಿ-ಹರ್ಕಾಡಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ - ೫೭೬ ೨೧೦.

ತಾಯಿಯೊಬ್ಬಳ ಕಥೆ

ಆಂಗ್ಲ : ಹ್ಯಾನ್ಸ್ ಆ್ಯಂಡರ್‌ಸನ್
ಅನುವಾದ : ತಾ. ಶ್ರೀ. ಗುರುರಾಜ್ ಯಲ್ಲಾಪುರ

ತಾಯಿ ತನ್ನ ಮಗುವನ್ನೇ ದಿಟ್ಟಿಸುತ್ತಾ ಗರಬಡಿದವಳಂತೆ ಕುಳಿತಿದ್ದಳು. ತನ್ನ ಮಗುವೆಲ್ಲಿ ಸತ್ತು ಹೋಗುತ್ತದೋ ಎಂಬ ಚಿಂತೆ ಅವಳನ್ನು ಕಾಡುತ್ತಿತ್ತು. ಏಕೆಂದರೆ ಮಗು ಬಿಳಿ ಜಿರಲೆಯಂತೆ ಬಿಳಿಚಿಕೊಂಡಿತ್ತು. ಕಣ್ಣುಗಳು ಮುಚ್ಚಿದ್ದವು. ಉಸಿರಾಟವೂ ನಿಃಶಕ್ತಿಯಿಂದ ಕೂಡಿದ್ದು ಆಗಾಗ್ಗೆ ಭಾರವಾದ ನಿಟ್ಟುಸಿರನ್ನು ಹೊರಹೊಮ್ಮಿಸುತ್ತಿತ್ತು. ಈ ಸ್ಥಿತಿಯಲ್ಲಿ ಮಗುವನ್ನು ನೋಡುತ್ತಾ ತಾಯಿಯು ಹೆಚ್ಚು ಹೆಚ್ಚು ಚಿಂತಿತಳಾಗುತ್ತಿದ್ದಳು.

ಆಗ ಬಾಗಿಲನ್ನು ಯಾರೋ ತಟ್ಟಿದಂತಾಯ್ತು. ಕುದುರೆ ಚರ್ಮದ ಗಟ್ಟಿಯಾದ ಒರಟು ಚರ್ಮ ಹೊದ್ದಿದ್ದ, ಬಹಳ ಬಡವನಂತೆ ಕಾಣುತ್ತಿದ್ದ ಮುದುಕನೊಬ್ಬ ಬಾಗಿಲನ್ನು ಸರಿಸಿ ಒಳಕ್ಕೆ ಬಂದ. ಅವನಿಗೆ ಬೆಚ್ಚಗಿನ ಹೊದಿಕೆ ಬೇಕಿತ್ತು. ಏಕೆಂದರೆ ಅದು ಚಳಿಗಾಲದ ಭಯಾನಕ ಕೊರೆತ. ಬಾಗಿಲಿನ ಹೊರಗೆ ನೆಲವೆಲ್ಲಾ ಬೆಳ್ಳನೆಯ ಮಂಜಿನಿಂದ ಆವೃತವಾಗಿತ್ತು. ಓಡಾಡುವ ಜನರ ದುಃಖಕ್ಕೆ ರಾಚುವಂತೆ ಗಾಳಿ ಬರ್ರನೆ ಬೀಸುತ್ತಿತ್ತು.

ಒಳಗೆ ಬಂದ ಮುದುಕ ಅತ್ತಿತ್ತ ಕಣ್ಣಾಡಿಸುತ್ತಾ ಚಳಿಯಿಂದ ಗಡಗಡನೆ ನಡುಗುತ್ತಿರುವಾಗ ಮಗುವಿಗೆ ನಿದ್ದೆಯ ಜೋಂಪು ಹತ್ತುತ್ತಿತ್ತು. ತಾಯಿ ಎದ್ದು ಕುಡಿಕೆಯಲ್ಲಿದ್ದ ಒಂದಿಷ್ಟು ಮದ್ಯವನ್ನು ಬಿಸಿ ಮಾಡಿ ಅತಿಥಿಗೆ ನೀಡಲು ತೀರ್ಮಾನಿಸಿದಳು. ತಾಯಿ ಎದ್ದು ಒಳಹೋಗುತ್ತಿದ್ದಂತೆ ಮುದುಕ ತೊಟ್ಟಿಲ ಬಳಿ ಹೋಗಿ ಕುಳಿತ.

ಮದ್ಯವನ್ನು ಬಿಸಿಗಿಟ್ಟ ತಾಯಿ ತೊಟ್ಟಿಲ ಬಳಿಯ ಕುರ್ಚಿಯ ಮೇಲೆ ಕುಳಿತು ತನ್ನ ಖಾಯಿಲೆ ಮಗುವಿನತ್ತ ನೋಡಿ ನಿಟ್ಟುಸಿರು ಬಿಡುತ್ತಾ, ಮಗುವಿನ ಭಾರವಾದ ಉಸಿರಾಟವನ್ನು ಕೇಳಿಸಿಕೊಳ್ಳುತ್ತಾ, ಮಗುವಿನ ಪುಟ್ಟ ಕೈಯನ್ನು ಮೆಲುವಾಗಿ ಸವರುತ್ತಿದ್ದಳು.

'ಮಗುವನ್ನು ಉಳಿಸಿಕೊಳ್ಳಬಹುದಲ್ಲವೇ?' ಭಾರದ ದನಿಯಲ್ಲಿ ತಾಯಿ ಗುನುಗಿದಳು. 'ದೇವರು ಒಳ್ಳೆಯವನು. ನನ್ನ ಮುದ್ದಿನ ಮಗುವನ್ನು ನನ್ನಿಂದ ಕಿತ್ತುಕೊಳ್ಳಲಾರ'. ಅವಳ ದನಿಯಲ್ಲಿ ಆಶಯ ತುಂಬಿತ್ತು.

ಆ ಮುದುಕ ಸಾವೇ ಆಗಿದ್ದ. ತನ್ನ ತಲೆಯನ್ನು ಅತ್ತಿತ್ತ ಜೋರಾಗಿ ಆಡಿಸಿದ. ಆದರೆ ಅವನು ಹೌದೆಂದನೋ ಇಲ್ಲವೆಂದನೋ ಏನೂ ಗೊತ್ತಾಗುವಂತಿರಲಿಲ್ಲ. ತಾಯಿಯ ಕಣ್ಣುಗಳು ನೆಲದತ್ತ ತಿರುಗಿದವು. ಅವಳ ಕಣ್ಣಿನಲ್ಲಿ ತುಂಬಿದ್ದ ನೀರು ಕೆನ್ನೆಯ ಮೇಲೆ ಬಳಬಳನೆ ಹರಿದವು. ಅವಳಿಗೆ ತನ್ನ ತಲೆ ಸೀಸದಂತೆ ಭಾರವಾದಂತೆನಿಸಿತು. ಅವಳು ಮೂರು ರಾತ್ರಿಯಿಂದ

ಒಂದು ಕ್ಷಣವೂ ಕಣ್ಣು ಮುಚ್ಚಿರಲಿಲ್ಲ. ಕಣ್ಣಿನ ತುಂಬ ನಿದ್ರೆಯೇ ತುಂಬಿತ್ತು. ಹಾಗೆಯೇ ಒರಗಿ ಕುಳಿತ ಅವಳಿಗೆ ತೂಕಡಿಕೆ ಬಂದಂತಾಯ್ತು. ಕೊಂಚ ಹೊತ್ತು ಎಚ್ಚರವೇ ಇರದಂತೆ ಕಣ್ಣು ಮುಚ್ಚಿದಳು. ಆದರೆ ಒಂದೆರಡು ನಿಮಿಷವಷ್ಟೇ, ತಕ್ಷಣ ಕೊರೆವ ಚಳಿಯಿಂದಲೋ ಅವ್ಯಕ್ತ ಗಾಬರಿಯಿಂದಲೋ ಏನೋ ಬೆಚ್ಚಿ ಬಿದ್ದವಳಂತೆ ಎದ್ದಳು.

"ಇದೇನು?" ಅವಳು ಆಶ್ಚರ್ಯ ಚಕಿತಳಾದಳು. ಸುತ್ತ ಮುತ್ತ ಮಿಂಚಿನಂತೆ ಕಣ್ಣಾಡಿಸಿದಳು. ಆ ಮುದುಕ ಹೊರಟುಹೋಗಿದ್ದ. ತೊಟ್ಟಿಲತ್ತ ನೋಡಿದಳು. ಅವಳ ಮಗುವೂ ಇರಲಿಲ್ಲ. ಆ ಮುದುಕ ತನ್ನೊಂದಿಗೆ ಮಗುವನ್ನು ಎತ್ತಿಕೊಂಡು ಹೊರಟು ಹೋಗಿದ್ದ. ಗೋಡೆಯ ಮೇಲೆ ಅದುವರೆಗೂ ಟಿಕ್ ಟಿಕ್ ಎನ್ನುತ್ತಿದ್ದ ಗಡಿಯಾರದ ಭಾರವಾದ ಲೋಲಕ ಧೊಪ್ಪೆಂದು ಕೆಳಕ್ಕೆ ಬಿತ್ತು. ಗಡಿಯಾರದ ಮುಳ್ಳುಗಳು ಹಾಗೆಯೇ ತಣ್ಣಗೆ ನಿಂತವು.

ಚಿಂತೆಗೀಡಾದ ತಾಯಿ ಮನೆಯಿಂದ ಹೊರನುಗ್ಗಿ ತನ್ನ ಮಗುವಿಗಾಗಿ ಅಳತೊಡಗಿದಳು.

ಹೊರಗೆ ಮಂಜಿನ ಮಧ್ಯದಲ್ಲಿ ಹೆಂಗಸೊಬ್ಬಳು ತನ್ನ ಉದ್ದದ ನಿಲುವಂಗಿಯಂತಹ ಕಪ್ಪು ಬಟ್ಟೆಯಲ್ಲಿ ಕುಳಿತಿದ್ದಳು. ಅವಳು ರೋದಿಸುತ್ತಿದ್ದ ತಾಯಿಯನ್ನು ನೋಡಿ ಹೇಳಿದಳು.

"ನಿನ್ನ ಮನೆಗೆ ಯಮ ಬಂದಿದ್ದ ; ಅವನು ನಿನ್ನ ಪುಟ್ಟ ಮುದ್ದು ಮಗುವಿನೊಂದಿಗೆ ಓಡಿದ್ದನ್ನು ಕಂಡೆ. ಅವನು ಗಾಳಿಗಿಂತಲೂ ವೇಗವಾಗಿ ನುಗ್ಗಿ ಹೋದ. ಅವನು ತೆಗೆದುಕೊಂಡ ಯಾವುದನ್ನೂ ಹಿಂತಿರುಗಿಸುವುದಿಲ್ಲ. ಬಿಡು, ಏಕೆ ಬರಿದೇ ಅಳುತ್ತೀಯ?"

"ಅದೆಲ್ಲ ನನಗೆ ಬೇಡ, ಅವನು ಯಾವ ಕಡೆಗೆ ಹೋದನೆಂದು ಹೇಳು ಸಾಕು. ದಯವಿಟ್ಟು ಬೇಗ ಹೇಳು. ನಾನು ಅವನ ಬೆನ್ನು ಹತ್ತಿ ಹುಡುಕಿಕೊಂಡು ಹೋಗುತ್ತೇನೆ" ತಾಯಿ ಗೋಗರೆದಳು.

"ನನಗೆ ಅವನು ಹೋದ ದಾರಿ ಗೊತ್ತು" ಕಪ್ಪುಡುಗೆಯ ಹೆಂಗಸು ನಿಧಾನವಾಗಿ ಖಚಿತ ದನಿಯಲ್ಲಿ ಹೇಳಿದಳು. "ಆದರೆ ನಾನು ನಿನಗೆ ದಾರಿ ತೋರಿಸುವ ಮೊದಲು ನೀನು ನಿನ್ನ ಮಗುವನ್ನು ಮಲಗಿಸಲು ಹಾಡುತ್ತಿದ್ದ ಜೋಗುಳವನ್ನು ಹಾಡಬೇಕು. ಎಲ್ಲಾ ಹಾಡುಗಳನ್ನೂ ಹಾಡಬೇಕು. ನಾನು ರಾತ್ರಿ. ನನಗೆ ಆ ನಿನ್ನ ಹಾಡುಗಳೆಲ್ಲ ಇಷ್ಟ. ಅವೆಲ್ಲವನ್ನೂ ನಾನು ಬಹಳಷ್ಟು ಬಾರಿ ಕೇಳಿದ್ದೇನೆ. ಅಲ್ಲದೆ ಅವನ್ನು ಹಾಡುವಾಗ ನಿನ್ನ ಕಣ್ಣಿಂದ ಹರಿದ ಕಂಬನಿಯ ಪ್ರತಿ ಹನಿಯನ್ನೂ ನಾನು ಎಣಿಸಿದ್ದೇನೆ"

"ಅವನ್ನೆಲ್ಲಾ ನಾನು ನಿನಗಾಗಿ ಖಂಡಿತಾ ಹಾಡುತ್ತೇನೆ...ಆದರೆ ಈಗ ನನ್ನನ್ನು ತಡೆಯಬೇಡ. ಯಮನ ಬೆನ್ನು ಹತ್ತಲು ದಾರಿ ತೋರು. ನನ್ನ ಮಗುವನ್ನು ಮೊದಲು ಹಿಂತಿರುಗಿ ಪಡೆದು ಬರುತ್ತೇನೆ" ತಾಯಿ ದೀನತೆಯಿಂದ ಅಂಗಲಾಚಿದಳು.

ಆದರೆ ಆ ಕಡುರಾತ್ರಿ ಏನೂ ಉತ್ತರಿಸಲೇ ಇಲ್ಲ. ಮೌನವಾಗಿ ನಿಷ್ಕರುಣೆಯಿಂದ ಹಾಗೆಯೇ ಕುಳಿತಳು.

ತಾಯಿಗೆ ಬೇರೆ ದಾರಿಯೇ ಇರಲಿಲ್ಲ. ಹಾಗಾಗಿ ಹಾಡಲು ಆರಂಭಿಸಿದಳು. ಅಳುತ್ತಾ ತನ್ನ ಕೈಗಳನ್ನು ಹೊಸಕುತ್ತಾ ಕಷ್ಟಪಟ್ಟು ಹಾಡಿದಳು. ಅವೆಲ್ಲಾ ಅವಳು ಹಿಂದೆ ಹಾಡಿದ್ದ ಹಾಡುಗಳೇ. ಆದರೆ ಅವಕ್ಕಿಂತ ಹೆಚ್ಚಾಗಿದ್ದದ್ದು ಅವಳ ಕಣ್ಣೀರು. ಹಾಡು ಮುಗಿದವು.

ನಂತರ ಆ ರಾತ್ರಿ ಹೇಳಿದಳು, "ಬಲಕ್ಕೆ ತಿರುಗಿ ಆ ಫರ್ ಮರಗಳ ತೋಪಿನ ಕಗ್ಗತ್ತಲಿನಲ್ಲಿ ಹೋಗು. ಅದೇ ದಾರಿಯಲ್ಲಿ ಆ ಯಮ ನಿನ್ನ ಮಗುವಿನೊಂದಿಗೆ ಹೋದ"

ತಾಯಿ ಎದ್ದು ಅವಸರದಿಂದ ಹೊರಟಳು. ಆದರೆ ಆ ದಟ್ಟ ತೋಪಿನ ನಡುವೆ ಅನೇಕ ದಾರಿಗಳು ಎದುರಾದವು. ಯಾವ ದಾರಿ ಹಿಡಿದು ಯಮ ಹೋದನೆಂಬುದೇ ತಾಯಿಗೆ ತಿಳಿಯಲಿಲ್ಲ. ಅಲ್ಲೊಂದು ಮುಳ್ಳಿನ ಪೊದೆ ಬೆಳೆದು ನಿಂತಿತ್ತು. ಅದರಲ್ಲಿ ಒಂದೇ ಒಂದು ಎಲೆಯಾಗಲೀ, ಹೂವಾಗಲೀ ಇರಲಿಲ್ಲ. ಚಳಿಗಾಲವಾದ್ದರಿಂದ ಎಲ್ಲ ಉದುರಿಹೋಗಿದ್ದು ಅಲ್ಲಲ್ಲಿ ಮಂಜಿನ ಉಂಡೆಗಳು ಹತ್ತಿಯಂತೆ ಬೆತ್ತಲ ಗಿಡದ ಮೇಲೆ ಅಂಟಿಕೊಂಡಿದ್ದವು.

"ಓ ಪೊದೆಯೇ, ನನ್ನ ಮುದ್ದು ಮಗುವನ್ನು ಎತ್ತಿಕೊಂಡು ಆ ಯಮ ಯಾವ ದಾರಿಯಲ್ಲಿ ಹೋದ? ದಯವಿಟ್ಟು ಹೇಳು"

"ಅದು ನನಗೆ ಗೊತ್ತು," ಪೊದೆ ಉತ್ತರಿಸಿತು. "ಆದರೆ ನೀನು ಚಳಿಯಿಂದ ಜಡ್ಡುಗಟ್ಟಿರುವ ನನ್ನ ಹೃದಯವನ್ನು ಬಿಸಿಗೊಳಿಸುವಂತಿದ್ದರೆ ಮಾತ್ರ ನಾನು ಯಮ ಹೋದ ದಾರಿಯನ್ನು ನಿನಗೆ ತೋರಿಸುತ್ತೇನೆ. ಈ ಚಳಿಯಿಂದ ನಾನು ಸತ್ತೇ ಹೋಗುವೆನೇನೋ ಎನ್ನುವಷ್ಟು ಹೆಪ್ಪುಗಟ್ಟಿದ್ದೇನೆ. ನಾನು ಹೇಳಬೇಕೆಂದರೆ ನನ್ನ ಎದೆಯನೊಂದಿಷ್ಟು ಬಿಸಿಗೊಳಿಸು."

ತಾಯಿಗೆ ಬೇರೆ ಮಾರ್ಗವೇ ಇರಲಿಲ್ಲ. ಅವಳು ತನ್ನ ಎದೆಯನ್ನು ಆ ಮುಳ್ಳಿನ ಪೊದೆಗೆ ಒತ್ತಿ ಹಿಡಿದಳು. ಸ್ವಲ್ಪವೇ ಹೊತ್ತಿನಲ್ಲಿ ಅವಳೆದೆಯ ಬಿಸಿ ಹರಿದುದರಿಂದ ಗಿಡಕ್ಕೆ ಅಂಟಿದ್ದ ಮಂಜಿನುಂಡೆಗಳು ಕರಗಿ ಬಿದ್ದವು. ಮುಳ್ಳುಗಳು ಅವಳೆದೆಗೆ ನಾಟಿಕೊಂಡಿದ್ದು, ದಪ್ಪ ದಪ್ಪ ಹನಿಗಳಾಗಿ ರಕ್ತ ಕೆಳಗೆ ಉದುರುತ್ತಿತ್ತು. ಆಗ ಆ ಮುಳ್ಳಿನ ಗಿಡದಲ್ಲಿ ನಿಧಾನವಾಗಿ ಆ ಕೊರೆವ ಚಳಿಯಲ್ಲೂ ಒಂದಷ್ಟು ಎಲೆಗಳು ಚಿಗಿತವು. ಕಿರೀಟಗಳಂತೆ ಕೆಲ ಹೂಗಳೂ ಅರಳಿಕೊಂಡವು. ಅವು ದುಃಖತಪ್ತಳಾದ ತಾಯಿಯ ನೋವಿನ ಕಂಬನಿಯಷ್ಟೇ ಶುಭ್ರವಾಗಿ ಹೊಳೆಯುತ್ತಿದ್ದವು. ನಂತರ ಆ ಪೊದೆ ಯಮ ಹೋದ ದಾರಿಯನ್ನು ತೋರಿಸಿ, ಅವಳು ಹೋಗಬೇಕಾದ ದಾರಿಯನ್ನು ತಿಳಿಸಿತು.

ಆ ದಾರಿ ಅವಳನ್ನು ದೊಡ್ಡ ಸರೋವರದ ತೀರಕ್ಕೆ ತಂದಿತು. ಅಲ್ಲಿ ಸರೋವರವನ್ನು ದಾಟಲು ದೋಣಿಯಾಗಲೀ ತೆಪ್ಪವಾಗಲೀ ಕಾಣಲಿಲ್ಲ. ಅವಳ ಭಾರವನ್ನು ತಡೆದುಕೊಳ್ಳುವಷ್ಟು ಗಟ್ಟಿಯಾಗಿ ನೀರು ಹೆಪ್ಪುಗಟ್ಟಿರಲಿಲ್ಲ. ಹಾಗೇನಾದರೂ ಹೆಪ್ಪುಗಟ್ಟಿದ್ದರೆ ಅವಳು ನಿರಾಯಾಸವಾಗಿ ಆ ಸರೋವರವನ್ನು ದಾಟಿ ಬಿಡಬಹುದಾಗಿತ್ತು. ಅಲ್ಲದೆ ಆ ಸರೋವರ ಬಹಳ ಆಳವಾಗಿತ್ತು. ಆದರೂ ಅವಳು ಅದನ್ನು ದಾಟಿ ತನ್ನ ಮಗುವನ್ನು ಹಿಂತಿರುಗಿ ಪಡೆಯಲೇಬೇಕಿತ್ತು. ಅಲ್ಲಿಯೇ ಕುಳಿತು ಸರೋವರದ ನೀರನ್ನೆಲ್ಲಾ ಕುಡಿದುಬಿಡಬೇಕೆಂದು ಯೋಚಿಸಿದಳು. ಆದರೆ ಅದು ಮಾನವ ಜೀವಿಯಿಂದ ಅಸಾಧ್ಯವೆಂದೇ ಹೇಳಬೇಕು. ಆದರೆ ಮಗನನ್ನು ಕಳೆದುಕೊಂಡು ದುಃಖಿತಳಾದ ತಾಯಿಗೆ ಆ ಅಸಂಭವ ಕಾರ್ಯವೂ ಸಾಧ್ಯವಾಗಬಹುದೇನೋ ಎನಿಸಿರಬೇಕು.

ಸರೋವರ ಹೇಳಿತು: "ಇಲ್ಲ, ಅದಾಗದ ಕೆಲಸ.....ಅದರ ಬದಲು ನಾವಿಬ್ಬರೂ ಒಂದು ಒಪ್ಪಂದಕ್ಕೆ ಬರೋಣ. ನನಗೆ ಮುತ್ತುಗಳೆಂದರೆ ಬಹಳ ಇಷ್ಟ. ನನ್ನೊಳಗೆ ಎಷ್ಟೋ ಮುತ್ತುಗಳಿವೆ. ಆದರೆ ಆ ನಿನ್ನ ಕಣ್ಣಿನಷ್ಟು ಪ್ರಕಾಶಮಾನವಾದ ಮುತ್ತುಗಳನ್ನು ನಾನು ಕಂಡಿಲ್ಲ.

ನೀನು ಅತ್ತು ಅವನ್ನು ನನ್ನ ಮಡಿಲಿಗೆ ಉದುರಿಸಿದೆಯಾದರೆ ನಿನ್ನನ್ನು ನಾನು ಯಮನಿರುವ ಮತ್ತು ಅವನು ನೋಡಿಕೊಳ್ಳುತ್ತಿರುವ ಹೂ, ಗಿಡ, ಮರದ ಉದ್ಯಾನದ ಮಹಲಿಗೆ ಕರೆದೊಯ್ಯುವೆ. ಅಲ್ಲಿನ ಆ ಹೂ, ಗಿಡ, ಮರಗಳೆಲ್ಲಾ ಒಂದೊಂದು ಮಾನವ ಜೀವಿಗಳು."

"ನನ್ನ ಮಗುವನ್ನ ಪಡೆಯಲು ನಾನೇನು ಬೇಕಾದರೂ ಕೊಡುತ್ತೇನೆ" ತಾಯಿ ನೋವು ತುಂಬಿ ಹೇಳಿದಳು.

ಮರುಕ್ಷಣವೇ ಅಳಲು ಆರಂಭಿಸಿದಳು. ಅವಳೆದೆಯ ನೋವೆಲ್ಲಾ ಕರಗಿ ಹರಿಯುವಂತೆ ಗಳಗಳನೆ ಅತ್ತಳು. ಅವಳು ಅತ್ತಷ್ಟೂ ನೋವು ನೂರು ಪಟ್ಟಾಯಿತು. ಕೊನೆಗೆ ಅವಳ ಅಳುವಿಗೆ ಕರಗಿದಂತಾಗಿ ಅವಳೆರಡೂ ಕಣ್ಣುಗಳೂ ಸರೋವರದ ವಿಶಾಲ ನೀರಿಗೆ ಬಿದ್ದು ಜಗಜಗಿಸುವ ಎರಡು ಮುತ್ತುಗಳಾದವು. ಆಗ ಸರೋವರ ಭಾರವಾದ, ಉಬ್ಬರವಾದ ಅಲೆಗಳನ್ನು ಏಳಿಸಿತು. ಆ ಅಲೆಗಳು ಅವಳನ್ನು ಸುರಕ್ಷಿತವಾಗಿ ಮತ್ತೊಂದು ದಡಕ್ಕೆ ತಂದು ಬಿಟ್ಟಿತು. ಅಲ್ಲಿ ಸುಂದರವಾದ ಮಹಲು ಅದೆಷ್ಟೋ ಮೈಲುಗಳಷ್ಟು ವಿಶಾಲವಾಗಿತ್ತು. ಅದನ್ನು ನೋಡಿದರೆ ಅದೇನು ಕೈಗಳಿಂದ ಕಟ್ಟಿರುವುದೋ ಅಥವಾ ಕಾಡುಗವಿಗಳಿಂದ ಕೂಡಿದ ಗುಡ್ಡವೋ ಎನ್ನುವಂತಿತ್ತು. ಆದರೆ ಆ ತಾಯಿ ಅದನ್ನು ನೋಡಲು ಸಾಧ್ಯವಿರಲಿಲ್ಲ. ಅವಳೆರಡು ಕಣ್ಣುಗಳು ವಿಶಾಲ ಸರೋವರದಲ್ಲಿ ಸುಂದರ ಮುತ್ತುಗಳಾಗಿ ಹೋಗಿದ್ದವು.

"ಇಲ್ಲಿ ನನಗೆ ಯಮ ಎಲ್ಲಿ ಸಿಗುತ್ತಾನೆ? ನನ್ನ ಮಗುವನ್ನು ಹಿಂತಿರುಗಿಸುವಂತೆ ಅವನನ್ನ ಬೇಡಬೇಕು" ತಾಯಿ ಕತ್ತಲ ಶೂನ್ಯಕ್ಕೆ ಮೊರೆಯಿಟ್ಟಳು.

"ಅವನಿನ್ನೂ ಬಂದಿಲ್ಲ" ಹೊಳೆಯುವ ಬಿಳಿ ಕೂದಲಿನ ಮುದುಕಿ ಯಮನ ಮಹಲಿನ ಮುಂದೆ ಅತ್ತಿತ್ತ ಓಡಾಡುತ್ತಿದ್ದವಳು ನಿಂತು ಹೇಳಿದಳು. ಯಮನ ಅನುಪಸ್ಥಿತಿಯಲ್ಲಿ ಉಸ್ತುವಾರಿ ನೋಡಿಕೊಳ್ಳಲು ಅವಳನ್ನು ನಿಯೋಜಿಸಲಾಗಿತ್ತು.

"ನೀನು ಇಲ್ಲಿಗೆ ಬರಲು ದಾರಿಯನ್ನು ಹೇಗೆ ಕಂಡುಕೊಂಡೆ? ನಿನಗಾರು ಸಹಾಯ ಮಾಡಿದರು?" ಮುದುಕಿ ಕೇಳಿದಳು.

"ನನ್ನ ದೇವರೇ ನನಗೆ ಸಹಾಯ ಮಾಡಿದ. ಅವನು ಕರುಣಾಮಯಿ. ಅಲ್ಲದೆ ನೀನು...ನೀನೂ ಸಹ ಕರುಣೆಯುಳ್ಳವಳೇ. ಇಲ್ಲಿ....ಇಲ್ಲಿ ನನ್ನ ಮಗನೆಲ್ಲಿ ಸಿಕ್ಕುತ್ತಾನೆ?" ತಾಯಿ ಕೇಳಿದಳು.

"ನನಗೆ ಗೊತ್ತಿಲ್ಲ. ನನಗನ್ನಿಸುತ್ತದೆ. ನೀನವನನ್ನು ನೋಡಲಾರೆ. ಬಹಳಷ್ಟು ಹೂ, ಗಿಡ, ಮರಗಳು ಈ ಚಳಿಯ ರಾತ್ರಿಯಲ್ಲಿ ಉದುರಿವೆ. ಅವನ್ನೆಲ್ಲಾ ಬೇರೆಡೆಗೆ ನೆಡಲು ಯಮ ಇಂದು ಬರುತ್ತಾನೆ. ಎಲ್ಲ ಮನುಷ್ಯರನ್ನೂ ಯಮನು ಹೂ, ಗಿಡ, ಮರಗಳಾಗಿ ಮಾಡುವನೆಂದು ನಿನಗೆ ಗೊತ್ತಿರಬೇಕು. ಅವು ಸಾಮಾನ್ಯ ಗಿಡ, ತರಕಾರಿ, ಹಣ್ಣುಗಳಾಗಿ ಕಂಡರೂ ಅವುಗಳ ಹೃದಯ ಮಿಡಿಯುತ್ತದೆ. ಆದ್ದರಿಂದ ಸಂತಸವಾಗಿರು. ನಿನ್ನ ಮಗನ ಹೃದಯದ ಬಡಿತವನ್ನು ಬಹುಶಃ ನೀನು ಗುರುತಿಸಲು ಸಾಧ್ಯವಾಗಬಹುದು. ಆದರೆ ಈಗ ನೀನೇನು ಮಾಡಬೇಕೆಂದು ನಾನು ಹೇಳುವುದಾದರೆ ನನಗೇನು ಕೊಡುತ್ತೀಯಾ?"

'ಕೊಡಲು ನನ್ನ ಬಳಿ ಏನೂ ಇಲ್ಲ. ಆದರೆ ದಯೆತೋರಿ ನನ್ನ ಮಗನನ್ನು ಕೊಡು. ಅವನನ್ನು ಪಡೆದು ನಾನು ಇಲ್ಲಿಂದ ಬಹುದೂರದ ಪ್ರಪಂಚಕ್ಕೆ ಹೊರಟು ಹೋಗುತ್ತೇನೆ. ನಿನಗೆ ಜೀವಮಾನದುದ್ದಕ್ಕೂ ಋಣಿಯಾಗಿರುತ್ತೇನೆ.

"ನಿನ್ನ ಆ ಪ್ರಪಂಚದಿಂದ ನನಗೇನೂ ಬೇಡ ; ನಿನ್ನ ಆ ಉದ್ದನೆಯ ಕಪ್ಪುಕೂದಲನ್ನು ನನಗೆ ಕೊಡಬಹುದಲ್ಲ? ಅವೆಷ್ಟು ಸುಂದರವಾಗಿದೆಯೆಂದು ನಿನಗೆ ಗೊತ್ತಿರಬಹುದು. ಅವು ನನಗೆ ಚೆನ್ನಾಗಿ ಒಪ್ಪುತ್ತವೆ. ಬದಲಿಗೆ ನೀನು ನನ್ನ ಬಿಳಿಯ ಕೂದಲನ್ನು ತೆಗೆದುಕೊಳ್ಳಬಹುದು. ಅವು ಬಿಳಿಯಾದರೂ ಬೇರೆಯವರದಕ್ಕಿಂತ ಚೆನ್ನಾಗಿರುತ್ತದೆ."

"ಅಷ್ಟೇ ಏನು ನಿನ್ನ ಆಸೆ? ನನ್ನ ಕೂದಲನ್ನು ನಾನು ತುಂಬು ಮನಸ್ಸಿನಿಂದ ಕೊಟ್ಟು ಬಿಡುತ್ತೇನೆ" ಎಂದು ಆ ತಾಯಿ ತನ್ನ ಸುಂದರ ಕೂದಲನ್ನು ಕೊಟ್ಟು ಬದಲಿಗೆ ಮಂಜಿನಂತಿರುವ ಬಿಳಿಯ ಕೂದಲನ್ನು ತೆಗೆದುಕೊಂಡಳು.

ನಂತರ ಅವರು ಯಮನ ಬೃಹತ್ ಮಹಲಿನೊಳಕ್ಕೆ ಹೋದರು.

ಅಲ್ಲಿ ಗಿಡ, ಮರ, ಹೂಗಳು, ಸುಂದರವಾಗಿ ಒಂದು ಕ್ರಮವಾಗಿ ಬೆಳೆದಿದ್ದವು. ಬೇರೆ ಬೇರೆ ವಿಧಗಳಿದ್ದವು. ಬಹಳ ಮೃದುವಾದ ತಾವರೆಯನ್ನು ಗಾಜಿನ ಕುಂಡದಲ್ಲಿ ಬೆಳೆಸಿದ್ದರು. ಅಲ್ಲದೆ ಇತರ ಸದೃಢವಾದ ಪ್ರಸಿದ್ಧ ಗಿಡಗಳನ್ನೆಲ್ಲ ಬೆಳೆಸಲಾಗಿತ್ತು. ಅಲ್ಲಿ ಅನೇಕ ಜಲ ಸಸ್ಯಗಳು ಬೆಳೆದಿದ್ದು ಕೆಲವು ತಾಜಾತನದಿಂದ ಕೂಡಿದ್ದರೆ ಮತ್ತಷ್ಟು ಬಾಡಿದಂತೆ ಇದ್ದವು. ನೀರುಹಾವುಗಳು ಅವುಗಳ ಸುತ್ತ ಹರಿದಾಡುತ್ತಿದ್ದವು. ಕರಿಯ ಏಡಿಗಳು ಓಡಿ ಕಾಂಡಕ್ಕೆ ಅಪ್ಪಿಕೊಂಡವು. ಅಲ್ಲಿಯೇ ಬೃಹದಾಕಾರದ ಪಾಮ್, ಓಕ್ ಮರಗಳು ಹಾಗೂ ಬಾಳೆಯ ಗಿಡಗಳಿದ್ದವು. ಹತ್ತಿರದಲ್ಲೇ ಪುಟ್ಟ ಪುಟ್ಟ ಹೂಗಿಡಗಳಿಂದ ಸುವಾಸನೆ ಹರಡುತ್ತಿತ್ತು.

ಪ್ರತಿಯೊಂದು ಗಿಡ, ಮರಕ್ಕೂ ಹೆಸರುಗಳಿದ್ದು ಅವು ಮರದ್ದಾಗಲೀ, ಹೂವಿನದಾಗಲೀ ಆಗಿರದೆ ಮನುಷ್ಯನ ಹೆಸರಾಗಿದ್ದವು. ಆ ಹೆಸರುಗಳು ಯಾವುದೋ ಒಂದು ದೇಶದ ವರ ಹೆಸರುಗಳಲ್ಲ. ಭೂಮಿಯ ಎಲ್ಲ ದೇಶಗಳಿಗೂ ಸೇರಿದಂತಹ ಹೆಸರುಗಳು ಒಂದು. ಚೈನಾದ್ದಾದರೆ ಮತ್ತೊಂದು ಗ್ರೀಸ್‌ಲ್ಯಾಂಡನದು. ಹೀಗೆಯೇ...

ಅಲ್ಲಿಯೇ ದೊಡ್ಡ ದೊಡ್ಡ ಮರಗಳನ್ನು ಚಿಕ್ಕ ಚಿಕ್ಕ ಕುಂಡಗಳಲ್ಲಿ ಹಾಕಲಾಗಿದ್ದು ಅವುಗಳ ಬೇರುಗಳು ಬೆಳೆದು ಕುಂಡಗಳನ್ನೇ ಒಡೆಯುವಂತಿದ್ದವು. ಮತ್ತೊಂದು ಕಡೆ ನೂರಾರು ಪುಟ್ಟ ಗಿಡಗಳನ್ನು ಪಾಚಿಯ ನಡುವೆ ಹಾಕಲಾಗಿದ್ದು. ಅವುಗಳ ಬೇರುಗಳ ಮೇಲೆ ಹಸಿರು, ಹಳದಿಯ ಪಾಚಿ ಬೆಳೆದುಕೊಂಡಿತ್ತು. ಅದನ್ನು ಕಾಪಾಡುವುದಕ್ಕೆ ಸಾಕಷ್ಟು ಗಮನ ಹರಿಸಲಾಗಿತ್ತು.

ಬಿಕ್ಕಳಿಸುತ್ತಿದ್ದ ತಾಯಿ ಅತೀ ಪುಟ್ಟ ಸಸ್ಯಗಳ ಮೇಲೆ ಬಾಗಿದಳು. ಪ್ರತಿಯೊಂದರಲ್ಲೂ ಅವಳು ಮನುಷ್ಯನ ಹೃದಯದ ಮಿಡಿತವನ್ನು ಕೇಳಿದಳು. ಅಲ್ಲಿನ ಕೋಟ್ಯಂತರ ಬಡಿತಗಳ ನಡುವೆಯೂ ಅವಳು ತನ್ನ ಮಗುವಿನ ಎದೆ ಮಿಡಿತವನ್ನು ಗುರುತಿಸಿದಳು.

"ಅಯ್ಯೋ! ಅದೋ, ಅದೋ, ನನ್ನ ಮಗು ಅಲ್ಲಿ...." ಕಿರುಚುತ್ತಾ ತನ್ನ ಬಾಹುಗಳನ್ನು ಪುಟ್ಟ ನೀಲಿ ಕ್ರಾಕಸ್ ಹೂವಿನತ್ತ ಚಾಚಿದಳು. ಆ ಹೂವು ಒಂದು ಕಡೆ ರೋಗಗ್ರಸ್ತವಾಗಿ, ನಿಃಶಕ್ತವಾಗಿ ತೂಗಾಡುತ್ತಿತ್ತು.

"ಆ ಹೂವನ್ನು ಮುಟ್ಟಬೇಡ," ಮುದುಕಿ ಕೂಗಿಕೊಂಡಳು. "ನೀನಲ್ಲೇ ಇರು, ಯಮ ಬಂದಾಗ-ಅವನು ಬರುವುದನ್ನೇ ನಾನೂ ಕಾಯುತ್ತಿದ್ದೇನೆ-ಅವನು ಬಂದಾಗ ಈ ಗಿಡಕಿತ್ತು ಬೇರೆ ಕಡೆ ನಾಟಿ ಹಾಕಲು ಬಿಡಬೇಡ. ಅವನು ಕೇಳದಿದ್ದರೆ ಇಲ್ಲಿರುವ ಇತರೆ ಹೂಗಳನ್ನು ಕಿತ್ತು ಹರಿಯುವೆನೆಂದು ಹೆದರಿಸು. ಅದು ಅವನನ್ನ ಪೇಚಿಗೆ ಸಿಲುಕಿಸುತ್ತದೆ. ಏಕೆಂದರೆ ಒಂದೇ ಒಂದು ಹೂ ಹಾಳಾದರೂ ಯಮನು ನಮ್ಮ ದೇವರಿಗೆ ಉತ್ತರಿಸಬೇಕು. ದೇವರು ಅಪ್ಪಣೆ ಕೊಡುವವರೆಗೂ ಯಾವ ಗಿಡವನ್ನೂ ಘಾಸಿಗೊಳಿಸದಂತೆ ನೋಡಿಕೊಳ್ಳುವುದು ಅವನ ಕೆಲಸ."

ತಕ್ಷಣವೇ ಮಂಜಿನಂತೆ ಕೊರೆಯುವ ಗಾಳಿ ಪಡಸಾಲೆಯ ತುಂಬಾ ಹಾದು ಹೋದಂತಾಯ್ತು. ಆ ಕುರುಡುತಾಯಿ ಬಹುಶಃ ಯಮನೇ ಬಂದನೆಂದುಕೊಂಡಳು.

"ಇಲ್ಲಿಗೆ ಬರಲು ನೀನು ಹೇಗೆ ದಾರಿ ಕಂಡುಕೊಂಡೆ? ನನಗಿಂತ ಮೊದಲೇ ನೀನಿಲ್ಲಿ ಹೇಗೆ ಬಂದೆ?" ಯಮ ಪ್ರಶ್ನಿಸಿದ.

"ನಾನೊಬ್ಬ ತಾಯಿ. ನನ್ನ ಮಗುವಿರುವ ಯಾವುದೇ ಸ್ಥಳ ನನಗೆ ದೂರವಲ್ಲ. ಒಡಲಿನ ದುಃಖವೇ ಒಬ್ಬ ತಾಯಿಗೆ ಮಗುವಿರುವ ಜಾಗದ ದಾರಿ ತೋರಿಸುತ್ತದೆ" ತಾಯಿ ಮರುಮಾತನ್ನೆಸೆದಳು.

ಯಮ ನಿಧಾನವಾಗಿ ತನ್ನ ಉದ್ದವಾದ ಕೈಗಳನ್ನು ಆ ಪುಟ್ಟ ಕ್ರಾಕಸ್ ಹೂವಿನತ್ತ ಚಾಚಿದ. ಆದರೆ ಆ ತಾಯಿ ತನ್ನೆರಡು ಕೈಗಳನ್ನೂ ಆ ಹೂವಿನ ಸುತ್ತ ಕೋಟೆಯಂತೆ ಬಿಗಿಯಾಗಿ ಹಿಡಿದಿದ್ದಳು. ಅದನ್ನು ಬೇರೆಯವರು ಮುಟ್ಟಿದರೆ ಗೊತ್ತಾಗಲೆಂದು ಆ ಪುಟಾಣಿ ಹೂವಿನ ದಳವೊಂದು ತನ್ನ ಕೈಗೆ ತಾಗಿರುವಂತೆ ಮೃದುವಾಗಿ ಹಿಡಿದಿದ್ದಳು. ಯಮನ ಉಸಿರು ಅವಳ ಕೈ ಮೇಲೆ ಸುಳಿದಂತಾಗಿ ತಾಯಿಗೆ ಅದು ತಾನನುಭವಿಸಿದ್ದ ಚಳಿಗಾಲದ ಭಯಾನಕವಾಗಿ ಕೊರೆವ ಚಳಿಗಿಂತಲೂ ತಣ್ಣಗಿರುವಂತೆನಿಸಿತು. ಅವಳ ಕೈಗಳು ಹಾಗೆಯೇ ಶಿಥಿಲಗೊಂಡು ಶಕ್ತಿಹೀನವಾದಂತೆ ಕೆಳಸರಿದವು.

"ನನ್ನೆದುರು ನಿನ್ನ ಶಕ್ತಿಯೇನೂ ನಡೆಯದು" ಯಮನೆಂದ. "ಆದರೆ ಆ ಶಕ್ತಿ ನನ್ನ ದೇವರಿಗಿದೆ. ಅವನು ಕರುಣಾಮಯಿ" ತಾಯಿಯೆಂದಳು.

"ಅದು ನನಗೆ ಗೊತ್ತು. ಆದರೆ ಆ ದೇವನ ಮನದಿಚ್ಛೆಯಂತೆ ನಡೆಯುವುದು ನನ್ನ ಕೆಲಸ. ನಾನವನ ತೋಟದ ಮಾಲಿ. ನಾನವನ ಇಚ್ಛೆಯಂತೆ ಗಿಡ, ಮರ, ಹೂಗಳನ್ನು ಒಂದೊಂದಾಗಿ ತೆಗೆದುಕೊಂಡು ನೀನರಿಯದ ಸ್ವರ್ಗದ ನಂದನವನದಲ್ಲಿ ನೆಟ್ಟು ಬೆಳೆಸುತ್ತೇನೆ. ಇಲ್ಲಿ ರೋಗಗ್ರಸ್ಥವಾಗಿ ನರಳುವ ಗಿಡಗಳು ಅಲ್ಲಿ ಅದೆಷ್ಟು ಸದೃಢವಾಗಿ ಸುಖಮಯವಾಗಿ ಬೆಳೆಯುವವೆಂದು ನಿನಗೆ ಹೇಳಲಾರೆ ಬಿಡು."

"ಅಯ್ಯೋ! ನನ್ನ ಮಗುವನ್ನು ನನಗೆ ಹಿಂತಿರುಗಿಸಿಬಿಡು" ಅಳುತ್ತಾ ದೀನತೆಯಿಂದ ಬೇಡಿದಳು. ಕೊನೆಗೆ ಒಮ್ಮೆಲೇ ಎರಡು ಸುಂದರ ಹೂಗಳನ್ನು ತನ್ನೆರಡು ಕೈಗಳಿಂದ ಹಿಡಿದು

ಕಿರುಚಿದಳು. "ನಾನು ನಿನ್ನ ಈ ಎಲ್ಲ ಹೂಗಳನ್ನೂ ಹರಿದು ಬಿಡುತ್ತೇನೆ. ನಾನೀಗ ಎಲ್ಲಾ ಆಸೆ, ನಂಬಿಕೆಗಳನ್ನೂ ಕಳೆದುಕೊಂಡಿದ್ದೇನೆ."

"ಅವನ್ನು ಮುಟ್ಟಬೇಡ," ಯಮ ಆಜ್ಞಾಪಿಸಿದ. ನನಗೆ ಗೊತ್ತು, ನಿನಗೆ ಬಹಳ ದುಃಖವಾಗಿದೆಯೆಂದು. ಆದರೆ ಇನ್ನೊಬ್ಬ ತಾಯಿಯನ್ನು ನಿನ್ನಂತೆಯೇ ದುಃಖಿತಳನ್ನಾಗಿ ಮಾಡುವೆಯೇನು?"

"ಇನ್ನೊಬ್ಬಳು ತಾಯಿ?" ಗಟ್ಟಿಯಾಗಿ ಕೇಳುತ್ತಲೇ ತನ್ನ ಕೈಗಳಲ್ಲಿ ಹಿಡಿದಿದ್ದ ಎರಡೂ ಹೂಗಳನ್ನು ಬಿಟ್ಟು ದೂರ ಸರಿದಳು.

"ಈಗ ನಿನ್ನ ಕಣ್ಣುಗಳು ಮತ್ತೆ ಬಂದಿವೆ. ಅವನ್ನ ನಾನು ಸರೋವರದಿಂದ ಪಡೆದು ತಂದೆ. ಅವು ಪ್ರಕಾಶಮಾನವಾಗಿ ಹೊಳೆಯುತ್ತಿದ್ದವು. ಆದರೆ ಅವು ನಿನ್ನವೆಂದು ನನಗೆ ಗೊತ್ತಿರಲಿಲ್ಲ. ಅವನ್ನು ತೆಗೆದುಕೋ. ಅವು ಹಿಂದಿಗಿಂತ ಹೆಚ್ಚು ಪ್ರಕಾಶಮಾನವಾಗಿವೆ. ಈಗ ನೀನು ಈ ಆಳವಾದ ಕೊಳದಲ್ಲಿ ನೋಡು. ನೀನು ಕೇಳಲು ಹೊರಟಿದ್ದ ಎರಡು ಹೂಗಳ ಹೆಸರನ್ನು ಹೇಳುತ್ತೇನೆ. ಅವನ್ನು ನೀನು ಈ ಕೊಳದ ಚಿತ್ರದಲ್ಲಿ ಕಾಣಬಹುದು. ಅಲ್ಲದೇ ಅವುಗಳ ಭವಿಷ್ಯ, ಮನುಷ್ಯ ಜೀವನದ ಎಲ್ಲ ಹಂತಗಳನ್ನು ನೋಡಬಹುದು. ನೋಡು, ನೀನು ನಾಶಪಡಿಸಬೇಕೆಂದು ಇಚ್ಛಿಸಿದ್ದ ಪ್ರತಿಯೊಂದನ್ನೂ ನೀನಲ್ಲಿ ಕಾಣುವೆ."

ಅವಳಿಗೀಗ ಕಣ್ಣು ಬಂದಿದ್ದವು. ಆ ಕೊಳದತ್ತ ತದೇಕ ದೃಷ್ಟಿಯಿಂದ ನೋಡಿದಳು. ಅದೊಂದು ಸುಂದರ, ಮನೋಹರ ದೃಶ್ಯ. ಆ ಹೂಗಳಲ್ಲೊಂದು ಪ್ರಪಂಚಕ್ಕೆ ನೀಡಲಾಗಿದ್ದ ಆಶೀರ್ವಾದವೇ ಆಗಿತ್ತು. ಅದರ ಸುತ್ತ ಸೂರ್ಯನ ಹೊಂಬೆಳಕಿನಂತೆ ನಗೆ, ಸಂತೋಷದ ಪ್ರಭೆ ಇತ್ತು. ಆ ತಾಯಿ ಮತ್ತೊಂದರ ಬದುಕಿನತ್ತ ನೋಡಿದಳು. ಅದರ ಬಾಳಿನಲ್ಲಿ ಬರೀ ನೋವು, ದುಃಖಗಳು, ಕೆಟ್ಟ ಹಣೆಬರಹ ಮತ್ತು ಅಸಹನೀಯ ಕಷ್ಟ ಕಾರ್ಪಣ್ಯಗಳು.

'ಅವೆರಡೂ ದೇವರ ಇಚ್ಛೆ" ಯಮ ಹೇಳಿದ. ಇವುಗಳಲ್ಲಿ ಯಾವುದು ಕೆಟ್ಟ ಹಣೆ ಬರಹದ ಕೂಸೋ ಅದು ಯಾರದು? ದೇವರ ಕೃಪೆಗೆ ಪಾತ್ರವಾಗಿರುವ ಕೂಸು ಯಾರದು? ಎಲ್ಲಿಯದು?" ತಾಯಿ ಕೇಳಿದಳು.

"ನಾನದನ್ನು ಹೇಳುವುದಿಲ್ಲ ; ಆದರೆ ಇಷ್ಟನ್ನು ಮಾತ್ರ ಹೇಳಬಲ್ಲೆ. ಅವುಗಳಲ್ಲೊಂದು ನಿನ್ನದೇ ಮಗುವಾಗಿತ್ತು. ನೀನೀಗ ನಿನ್ನದೇ ಮಗುವಿನ ಗುರಿ ಮತ್ತು ಭವಿಷ್ಯವನ್ನು ಕಣ್ಣಾರೆ ಕಂಡಿದ್ದೀಯ."

ತಾಯಿ ಭಯದಿಂದ ಬಿಕ್ಕಳಿಸುತ್ತಾ ಕೇಳಿದಳು. "ಅವೆರಡರಲ್ಲಿ ನನ್ನ ಮಗು ಯಾವುದು? ದಯಪಿಟ್ಟು ಹೇಳು. ಏನೂ ಅರಿಯದ ಮುಗ್ಧ ಮಗುವನ್ನು ಕಷ್ಟದಿಂದ ಕಾಪಾಡು. ಓಹ್! ನನಗೀಗ ಅರ್ಥವಾಯಿತು. ಎರಡನೇ ಮಗು ನನ್ನದು....ಅಯ್ಯೋ! ದೇವರೇ ದಯವಿಟ್ಟು ಕೇಳು...ಏನೂ ಅರಿಯದ ಮುಗ್ಧ ಮಗುವನ್ನು ಕಾಪಾಡು. ಆ ಎಲ್ಲ ಕಷ್ಟ ಕೋಟಲೆ, ನೋವು ನರಕಗಳಿಂದ ನನ್ನ ಮಗುವನ್ನು ಪಾರುಮಾಡು. ಅದರ ತಪ್ಪನ್ನೆಲ್ಲಾ ಕ್ಷಮಿಸಿ ದೇವರ ರಾಜ್ಯಕ್ಕೆ

ಕರೆದುಕೊಂಡುಬಿಡು. ನನ್ನ ಕಣ್ಣೀರನ್ನು ಮರೆತುಬಿಡು. ಆ ಕಷ್ಟಗಳು ನನ್ನ ಮಗುವಿಗೆ ಬೇಡ. ನನ್ನ ಮಗು ನೋಯುವುದು ಬೇಡ." ಗಳಗಳನೆ ದೈನ್ಯದಿಂದ ಬೇಡಿಕೊಂಡಳು.

ಯಮನಿಗೆ ಆಶ್ಚರ್ಯವಾಯ್ತು. "ನಿನ್ನನ್ನು ಅರ್ಥಮಾಡಿಕೊಳ್ಳಲೇ ಆಗುತ್ತಿಲ್ಲ. ನಿನಗೆ ನಿನ್ನ ಮಗು ಮತ್ತೆ ಬೇಡವೇ? ಅಥವಾ ಅದನ್ನು ನಿನಗೆ ಗೊತ್ತಿರದ ಸುಂದರ ಲೋಕಕ್ಕೆ ಕರೆದೊಯ್ಯಲೇ?"

ತಾಯಿ ತನ್ನ ಕೈಗಳನ್ನು ಹೊಸೆದುಕೊಳ್ಳುತ್ತಾ ತನ್ನ ಮಂಡಿಯ ಮೇಲೆ ಒಮ್ಮೆಗೇ ಕುಸಿದಳು. ನಂತರ ಮಹಾಮಹಿಮ, ಕರುಣಾಸಾಗರನಲ್ಲಿ ಪ್ರಾರ್ಥಿಸಿದಳು. "ದೇವರೇ, ನಿನ್ನ ಇಚ್ಛೆಯಲ್ಲಿ ಇಲ್ಲದ್ದನ್ನು ನಾನು ಬಯಸಿದಾಗ ನೀನು ಕೇಳಿಸಿಕೊಳ್ಳಬೇಡ. ನಿನ್ನ ಇಚ್ಛೆ ಯಾವಾಗಲೂ ಉತ್ತಮವಾದುದು. ನನ್ನ ಬೇಡಿಕೆಯನ್ನು ಕೇಳಿಸಿಕೊಳ್ಳಬೇಡ. ದೇವರೇ, ಕೇಳಿಸಿಕೊಳ್ಳಬೇಡ. ನನ್ನೊಂದಿಗೆ ನನ್ನ ಮಗುವೂ ಈ ಪ್ರಪಂಚದಲ್ಲಿ ನೋವುಣ್ಣುವುದು ಬೇಡ. ಏನೋ ಕರುಳ ನೋವು ತಡೆಯದೇ, ಮಗುವಿನ ಮುಂದಿನ ಬದುಕಿನ ಬಗ್ಗೆ ಯೋಚಿಸದೇ ನಿನ್ನ ಸಾಮ್ರಾಜ್ಯದಲ್ಲಿ ನಲಿಯಬೇಕಾದ ಮಗುವನ್ನು ನನಗಾಗಿ ಬಯಸಿದ್ದೆ. ಆದರ ಭವಿಷ್ಯವನ್ನೆಲ್ಲಾ ಬರೀ ನೋವು ಸಂಕಟಗಳಿಂದ ತುಂಬಲು ಬಯಸಿದ್ದೆ. ಆದರೆ ನೀನು ನನ್ನ ಕಣ್ಣು ತೆರೆಸಿದೆ...ನಿನ್ನ ತೀರ್ಮಾನ, ಇಚ್ಛೆಯೇ ಸತ್ಯ. ಇನ್ನೆಂದೂ ನನ್ನ ಬಯಕೆಯನ್ನು ಕೇಳಬೇಡ, ನಿನ್ನಿಚ್ಛೆಯಂತೆಯೇ ಮಾಡು."

ಅವಳ ತಲೆ ಹಾಗೆಯೇ ಪಕ್ಕದ ಕಂಬಕ್ಕೆ ಒರಗಿತು. ಮುಖದಲ್ಲಿ ಪ್ರಶಾಂತತೆ ಮನೆ ಮಾಡಿತು.

ಯಮ ಅಲ್ಲಿಂದ ಹೊರಟ. ಜೊತೆಯಲ್ಲಿ ಆ ತಾಯಿಯ ಮುದ್ದು ಮಗುವನ್ನು ಯಾರೂ ಅರಿಯದ ಸುಂದರ ಲೋಕಕ್ಕೆ ಕರೆದುಕೊಂಡು ಹೋದ.

❑

✦ **ಡಾ.ಶ್ರೀ ಗುರುರಾಜ್ ಯಲ್ಲಾಪುರ**, 'ಸಹೃದಯ', ಕಾಡುಕುಂಟೆ, ಉಜ್ಜನಿ ಹೊಸಹಳ್ಳಿ ಅಂಚೆ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ - ೫೬೧ ೨೦೩.

ಸಮಯೋಚಿತ

ತಮಿಳು ಮೂಲ : ಗುರು ಅರವಿಂದನ್
ಅನುವಾದ : ಗೀತಾ ವಿಜಯಕುಮಾರ್

ಟೆಲಿಫೋನ್ ಕರೆಗಂಟೆ ಬಾರಿಸುತ್ತಲೇ ಇತ್ತು. ಸಾಧಾರಣವಾಗಿ ಕಿಂಕಿಣಿಸುವ ಟೆಲಿಫೋನ್ ಈ ನಡುವೆ ಈ ಮನೆಯೊಳಗೆ ರೋದಿಸುತ್ತಿರುವಂತೆ ಕೇಳಿ ಬರುತ್ತಲಿತ್ತು. ಕೆಲವು ದಿನಗಳಿಂದೀಚೆಗೆ ಯಾರಾದರೊಬ್ಬರು ತಮ್ಮ ಸಂತಾಪ ಸೂಚನೆ ಮಾಡುತ್ತಲೇ ಇದ್ದಾರೆ. ಪ್ರೊಫೆಸರ್ ಶಿವರಾಮನ್ ಒಲ್ಲದ ಮನಸ್ಸಿನಿಂದಲೇ ಟೆಲಿಫೋನ್ ಎತ್ತಿಕೊಂಡರು.

ಯಾರಿರಬಹುದು? ಏನು ಸುದ್ದಿನೋ ಏನೋ?

ಅಂದೂ ಇದೇ ತರಹ ಟೆಲಿಫೋನ್ ಕರೆಗಂಟೆ ಬಾರಿಸಿತ್ತು. ಅವರ ಮಗ ರಸ್ತೆ ಅಪಘಾತದಲ್ಲಿ ಮಡಿದು ಹೋದ ಸುದ್ದಿ, ಅವರ ಮೇಲೆ ಸಿಡಿಲು ಬಡಿದಂತೆ ಎರಗಿತ್ತು. ಅವರಿನ್ನೂ ಅದರ ಆಘಾತದಿಂದ ಚೇತರಿಸಿಕೊಂಡಿರಲಿಲ್ಲ. ಅವರ ಕುಟುಂಬಕ್ಕೆ ತೀರಾ ಹತ್ತಿರವಾಗಿದ್ದ ಕೆಲವರು ನೇರವಾಗಿಯೇ ಮನೆಗೆ ಬಂದು ಸಂತಾಪ ಸೂಚಿಸುತ್ತಿದ್ದರು. ಕೆಲವೊಬ್ಬರು ಟೆಲಿಫೋನ್ ಮೂಲಕವೇ ಸಂತಾಪ ಸೂಚಿಸಿದ್ದರು. ಅವನು ತೀರಿಕೊಂಡಿದ್ದಾನೆ ಅನ್ನೋದನ್ನ ಅವರಿಂದ ನಂಬೋದಕ್ಕೆ ಸಾಧ್ಯವಾಗಿರಲಿಲ್ಲ. ಎಲ್ಲವೂ ಒಂದು ಕನಸಿನಂತೆ ಮುಗಿದುಹೋಗಿಬಿಟ್ಟಿತ್ತು.

"ಹಲೋ"

"ಮೇ ಐ ಸ್ಪೀಕ್ ಟು ಪ್ರೊಫೆಸರ್ ಶಿವರಾಮನ್?"

"ಸ್ಪೀಕಿಂಗ್"

"ಸಾರ್...ನಾನು ರಮೇಶ್..."

"ರಮೇಶ್? ಯಾವ.....

"ನಿಮ್ಮ ಬಳಿಯೇ ಕಲಿತವನು...ಜ್ಞಾಪಕವಿದೆಯೇ?"

"ಯಾವ ರಮೇಶ್...ಹುಂ...."

"ಕ್ರಿಕೆಟ್ ಟೀಮ್ ನಲ್ಲೂ ಸಹ ಇದ್ದೆ....."

"ಹೌದು....ಈಗ ಜ್ಞಾಪಕಕ್ಕೆ ಬಂತು, ಫಾಸ್ಟ್ ಬೌಲರ್ ರಮೇಶ್ ತಾನೇ?"

"ಹೌದು ಸಾರ್...ಸ್ಟೇಷನ್ ಮಾಸ್ತರರ ಮಗ"

"ಈಗ ಗೊತ್ತಾಗ್ತಾ ಇದೆ! ಶಿವಶಂಕರರ ಮಗ ತಾನೇ?"

"ಹೌದು ಸಾರ್ ಅದೇ ರಮೇಶನೇ. ನಿಮ್ಮ ಮನೆಯೊಳಗೆ ಸಂಭವಿಸಿದ, ದುಃಖಕರ ಘಟನೆಯ ಬಗ್ಗೆ ಕೇಳಿದೆ. ಅದಕ್ಕೆ ಫೋನ್ ಮಾಡಿದೆ. ನಿಮ್ಮ ಮಗ ಸುರೇಶ್ ನನ್ನ ಕ್ಲಾಸ್ ಮೇಟ್. ಎಂಥಾ ಒಳ್ಳೇ ಹುಡುಗ. ಅವನಿಗೆ ಈ ತರಹ ಸಾವು ಬರಬಾರದಾಗಿತ್ತು. ಸಾರ್. ವಿಧಿ ಯಾರನ್ನು ತಾನೇ ಬಿಡುತ್ತೆ? ನನ್ನ ವಿಷಾದಪೂರ್ವಕ ಸಂತಾಪಗಳು."

"ಏನಪ್ಪಾ ಮಾಡೋದು? ಯಾರನ್ನ ಅಂತ ದೂಷಣೆ ಮಾಡೋದಕ್ಕಾಗುತ್ತೆ? ಎಲ್ಲಾ ಒಮ್ಮೆಗೇ ಮುಗಿದು ಹೋಗಿ ಬಿಟ್ಟಿತಪ್ಪಾ"

"ಅವನಂತೂ ಹೋಗೇ ಬಿಟ್ಟ. ಇನ್ನು ಅವನ ಬಗ್ಗೆ ಮಾತನಾಡಿ ಏನು ಮಾಡೋದು? ಹೌದು....ನೀನು ಹೇಗಿದ್ದೀಯಪ್ಪಾ? ಏನು ಮಾಡ್ತಾ ಇದ್ದೀಯ?"

"ಚೆನ್ನಾಗಿದ್ದೀನಿ ಸಾರ್! ಒಂದು ದೊಡ್ಡ ಕಂಪನಿಯಲ್ಲಿ ಕಂಪ್ಯೂಟರ್ ಇಂಜಿನೀಯರ್ ಆಗಿದೀನಿ"

"ಮದುವೆ ಆಗಿದೆಯೇ?"

"ಇಲ್ಲಾ ಸಾರ್-ಅದರ ಬಗ್ಗೇನೇ ಒಂದು ಸಮಸ್ಯೆ!"

"ಸಮಸ್ಯೆಯೇ? ಯಾಕೆ...ಪ್ರೇಮ ಗೀಮಾನಾ? ಅದಕ್ಕೇಂತ ಮನೆಯೊಳಗೆ ವಿರೋಧವೇ?"

"ಇಲ್ಲಾ ಸಾರ್....ಅರೇಂಜ್ಡ್ ಮ್ಯಾರೇಜೇ! ಹೆಣ್ಣು ನೋಡಿದ್ದಾಯ್ತು. ಎಲ್ಲಾ ಸರಿಯಾಗಿಯೇ ನಡೆದಿದೆ. ನಮ್ಮ ಮನೆಯೊಳಗೂ ಎಲ್ಲರಿಗೂ ಹೆಣ್ಣು ಒಪ್ಪಿಗೆಯಾಗಿದೆ."

"ಹಾಗಾದರೆ ಯಾಕೆ ಇನ್ನು ತಡ? ನಿನಗೂ ಹೆಣ್ಣು ಇಷ್ಟವಾಗಿದೆ ತಾನೇ?"

"ಇಷ್ಟವಾಗಿದೆ ಸಾರ್! ಒಳ್ಳೇ ಬಣ್ಣ, ತುಂಬಾನೇ ಚೆನ್ನಾಗಿದ್ದಾಳೆ. ನನ್ನ ಅಪೇಕ್ಷೆಗೆ ತಕ್ಕಂತಿದ್ದಾಳೆ."

"ಹಾಗಾದರೇ...ವಾಲಗ ಊದಿಸಿ ಬಿಡೋದು ತಾನೇ!"

"ಅಲ್ಲೇ ಸಾರ್, ಒಂದು ಸಮಸ್ಯೆ ಇರೋದು!"

"ಸಮಸ್ಯೆ ಏನು?"

"ತಾವು ಮಗ ಅಗಲಿರೋ ದುಃಖದಿಂದ ಬಳಲುತ್ತಿದ್ದೀರ. ನಿಮ್ಮ ಹತ್ತಿರ ಹೇಗೆ....."

"ಪರವಾಗಿಲ್ಲಪ್ಪ ಹೇಳು! ಹುಡುಗಿ ಯಾರು? ನನಗೇನಾದರೂ ಪರಿಚಯ ಇರುವವಳೇ?"

"ತಮಗೆ ಚನ್ನಾಗಿಯೇ ತಿಳಿದಿರೋ ಹುಡುಗಿ! ಸುತ್ತಿ ಬಳಸಿ ಮಾತನಾಡೋದೇಕೆ,

ನೇರವಾಗಿಯೇ ಹೇಳಿ ಬಿಡುತ್ತೇನೆ. ಹುಡುಗಿ ಬೇರೆ ಯಾರೂ ಅಲ್ಲ....ನಿಮ್ಮ ಮನೆಗೇ ಸೊಸೆಯಾಗಿ ಬರುವವಳಾಗಿದ್ದವಳು."

"ಯಾರು ನಮ್ಮ ಸುರೇಶನಿಗೆ ನೋಡಿದ ಹುಡುಗೀನೇ...ಸುಮತಿ? ನೀನು ಮದುವೆ ಮಾಡಿಕೊಳ್ಳಬೇಕೆಂದಿರೋದು ಅದೇ ಹುಡುಗೀನೇನಾ?"

"ಹೌದು ಸಾರ್...ಅದಕ್ಕೋಸ್ಕರಾನೇ ಆ ಹುಡುಗಿ ಬಗ್ಗೆ ನಿಮ್ಮ ಅಭಿಪ್ರಾಯ ಕೇಳಿದ ಮೇಲೇನೇ ಅವರುಗಳಿಗೆ ಸಮ್ಮತಿ ಸೂಚಿಸೋಣ ಅಂತ ಇದ್ದೀನಿ."

"ತುಂಬಾ ಒಳ್ಳೇ ಹುಡುಗಿ ಕಣಪ್ಪಾ. ಒಳ್ಳೆ ಮನೆತನ, ಒಳ್ಳೇ ಗುಣ. ಮನೆತನದ ಗೌರವಕ್ಕೆ ತಕ್ಕ ಹೆಣ್ಣು. ಏನು ಮಾಡೋದು. ಅವಳನ್ನು ಸೊಸೆಯಾಗಿ ಪಡೆಯೋದಕ್ಕೆ ನಾವು ಪಡೆದುಕೊಂಡು ಬಂದಿಲ್ಲ." ಒಂದು ನಿಡಿದಾದ ಉಸಿರನ್ನು ಬಿಟ್ಟರು.

ಈ ಮನೆಗೆ ಬೆಳಕು ಹೊತ್ತಿಸಬೇಕಾಗಿದ್ದವಳು, ಅದೆಷ್ಟೊಂದು ಕನಸುಗಳನ್ನು ಹೆಣೆದಿದ್ದೆವೋ! ಎಲ್ಲವೂ ಮುಗಿದೇ ಬಿಟ್ಟಿತಪ್ಪಾ."

ಅತ್ತೇ ಬಿಡುವರೇನೋ ಎನ್ನುವಂತಿತ್ತು ಅವರ ದನಿ.

"ಹೌದು....ಸಮಸ್ಯೆ ಅಂತ ಹೇಳಿದೆಯಲ್ಲ. ಈ ಹುಡುಗಿ ನಕ್ಷತ್ರ ರಾಶಿ ದೋಷಪೂರ್ಣ.....ಅದೂ...ಇದೂ...ಅಂತ."

"ಅವುಗಳ ಬಗ್ಗೆ ಸ್ವಲ್ಪ ಹೇಳಿದ್ರೆ...ಸಂಬಂಧ ಬೆಳೆಸೋದಕ್ಕೆ ಅವರುಗಳು ಯಾವ ತರಹ ಜನ....?

"ಬಹಳಾನೇ ಮುನ್ನುಗ್ಗೊ ಪ್ರವೃತ್ತಿ. ಧೈರ್ಯವಂತ ಹುಡುಗಿ. ಮನಸ್ಸಿನೊಳಗೆ ಯಾವೊಂದನ್ನು ಇಟ್ಟುಕೊಳ್ಳೋಲ್ಲ. ತಟ್ಟನೆ ಕೇಳೇ ಬಿಡ್ತಾಳೆ..."

"ಅವಳು ಆಗಿಂದಾಗ್ಗೆ ನಿಮ್ಮ ಮನೆಗೆ ಬಂದು ಹೋಗಿ ಮಾಡ್ತಾ ಇದ್ದಳಾ?"

"ಬರ್ತಾ ಇದ್ದಳು. ನಿಶ್ಚಿತಾರ್ಥ ಮುಗಿದೊಡನೆ ಮದುವೆ ತಾರೀಖನ್ನೂ ನಾವು ನಿಶ್ಚಯಿಸಿಕೊಂಡು ಬಿಟ್ಟಿದ್ದೆವು. ಉಗಾದಿ ದಿನ ನಾವೆಲ್ಲರೂ ಕೂಡಿ ಒಟ್ಟಾಗಿ ದೇವಸ್ಥಾನಕ್ಕೂ ಹೋಗಿ ಬಂದಿದ್ದೆವು. ನಂತರ ಅವಳು ನಮ್ಮ ಮನೆಗೆ ಬಂದು ದೀಪ ಬೆಳಗಿ, ಹಾಲು ಕಾಸಿ, ಕಾಫಿ ಬೆರೆಸಿ ಎಲ್ಲರಿಗೂ ಕೊಟ್ಟಿದ್ದಳು. ಆಮೇಲೆ ಸುರೇಶ್ ಬರ್ತಡೇ ಪಾರ್ಟಿಗೂ ಬಂದು ನಮ್ಮ ಜೊತೆ ಬೆರೆತು ಮಾತನಾಡಿಕೊಂಡಿದ್ದಳು. ಎರಡು ತಿಂಗಳು ಕೂಡ ಕಳೆದಿಲ್ಲ. ಎಲ್ಲಾ ಕನಸಾಗಿ ಹೋಗಿ ಬಿಟ್ಟಿತು!"

"ಹಾಗಾದ್ರೆ ಆಗ್ಗಿಂದಾಗ್ಗೆ ಮನೆಗೆ ಬಂದು ಹೋಗಿ ಮಾಡ್ತಾ ಇದ್ದಳಾ!"

ರಮೇಶ ಆತುರದಿಂದ ಕೇಳಿದ.

"ಇಲ್ಲಪ್ಪಾ. ಮೂರೇ ಮೂರು ಸಲ ಮಾತ್ರ ಬಂದಿದ್ದಳು. ಆದರೆ ಮೂವತ್ತು ವರ್ಷಗಳ

ಪರಿಚಯದಂತೆ ನಮ್ಮೊಡನೆ ಬೆರೆತಿದ್ದಳು."

"ನಿಮ್ಮಗಳ ಜೊತೆ ಬೆರೆತಿದ್ದು ಇರಲಿ ಸಾರ್. ನಿಮ್ಮ ಜೊತೆ ಹೇಗೆ ಪಳಗುತ್ತಿದ್ದಳು? ಬಹಳ ಆತ್ಮೀಯವಾಗಿ ಪಳಗಿದ್ದಳೇ? ಅವರಿಬ್ಬರೂ ಒಟ್ಟಾಗಿ ಹೊರಗಡೆ ಹೋಗಿ ಬಂದು ಮಾಡುತ್ತಿದ್ದರೇ?"

ಅವನು ಅದೇನನ್ನು ತಿಳಿಯಲಿಚ್ಚಿಸುತ್ತಿದ್ದಾನೆ ಅನ್ನೋದು ಅವರಿಗೆ ತಟ್ಟನೆ ಅರ್ಥವಾಯ್ತು.

ಒಟ್ಟಾಗಿ ಮಲಗಿದ್ದರೇ, ಅಂತ ಕೇಳೋದಕ್ಕೆ ಸಾಧ್ಯವಾಗದೆ ಈ ರೀತಿ ಸುತ್ತಿ ಬಳಸಿ ಮಾತನಾಡುತ್ತಾ ಇದ್ದಾನೆ.

ಥೆ, ಇವನೊಬ್ಬ ಸಂದೇಹ ಪಿಶಾಚಿ. ಮದುವೆ ಮೊದಲೇ ಈ ರೀತಿ ಕೆದಕಿ ಕೆದಕಿ ವಿಚಾರಿಸುವವನು, ಬಾಳ್ವೆ ಪೂರ್ತಿ ಅವಳನ್ನು ಅವನು ಅದೆಷ್ಟು ಹಿಂಡಿ ಹಿಪ್ಪೆ ಮಾಡಿಬಿಡ್ತಾನೋ ಏನೋ? ಪಾಪ ಸುಮತಿ! ಇಂಥಾ ಕಿರಾತಕನನ್ನು ಅವಳು ಮದುವೆ ಮಾಡಿಕೊಳ್ಳಬೇಕೇ? ಬೇಡ ಬೇಡ ಆ ಬಂಗಾರದಂಥ ಹುಡುಗಿಗೆ ಬೇರೆ ಉತ್ತಮನಾದ ವರ ಸಿಗದೇ ಹೋಗಿ ಬಿಡ್ತಾನಾ?

"ನೀನು ಕೇಳ್ತಾ ಇರೋದು ಅರ್ಥವಾಯ್ತಪ್ಪಾ. ಹೌದು! ಸಾಕಾ?" ತಟ್ಟನೆ ರಿಸೀವರ್ ಇಟ್ಟುಬಿಟ್ಟರು ಶಿವರಾಮನ್. ❑

✤ ಗೀತಾವಿಜಯಕುಮಾರ್, ನಂ. ೬೭೨, ಸೌರಭ, ೧೭ನೇ ಅಡ್ಡರಸ್ತೆ, ಜೆ.ಪಿ.ನಗರ, ಆರನೇ ಹಂತ, ಬೆಂಗಳೂರು.

ನಟ್ಟಿರುಳಿನಲ್ಲಿ ನಗರವೊಂದರ ದೃಶ್ಯ

ಆಂಗ್ಲ ಮೂಲ : ಆಲಿವರ್‌ಗೋಲ್ಡ್‌ಸ್ಮಿತ್
(೧೭೨೮-೧೭೭೪)
ಅನುವಾದ : ವಿ. ಶ್ರೀನಿವಾಸ

ಇದೀಗ ಎರಡು ಗಂಟೆಯಾಯಿತು! ಇನ್ನೇನು ಆರಿಹೋಗಲಿರುವ ಸೊಡರು ಆಗೊಮ್ಮೆ ಈಗೊಮ್ಮೆ ಮಂದಕಿರಣವೊಂದನ್ನೆಸೆಯುತ್ತ ಮಂಕಾಗುತ್ತಿದೆ. ಸುಖಜೀವಿಗಳು, ಕಷ್ಟಜೀವಿಗಳು ಎಲ್ಲರೂ ನಿದ್ರೆಯ ಮಡಿಲಲ್ಲೊರಗಿ ವಿರಮಿಸುತ್ತಿದ್ದಾರೆ. ಧ್ಯಾನಾಸಕ್ತರು, ಘಾತುಕರು, ಬಾಳಿನಲ್ಲಿ ಹತಾಶರಾಗಿ ನೆಟ್ಟುಗೆಟ್ಟ ನತದೃಷ್ಟರು-ಇವರನ್ನು ಬಿಟ್ಟರೆ, ಮತ್ತಾರಿಗೂ ಈ ವೇಳೆಯಲ್ಲಿ ಎಚ್ಚರವಿಲ್ಲ. ಅಗೋ, ಆ ಉನ್ಮತ್ತ ಕುಡುಕನು ಮತ್ತೊಮ್ಮೆ ತನ್ನ ವಿನಾಶದ ಬಟ್ಟಲಿಗೆ ಮದಿರೆಯನ್ನು ತುಂಬುತ್ತಿದ್ದಾನೆ. ಚೋರನು ತನ್ನ ನಡುರಾತ್ರಿಯ ಸಂಚಾರವನ್ನು ಪ್ರಾರಂಭಿಸಿದ್ದಾನೆ. ಬದುಕಿನಲ್ಲಿ ನಿರಾಶೆಗೊಂಡ ಹತಭಾಗ್ಯ ವ್ಯಕ್ತಿ ತನ್ನ ಪವಿತ್ರ ಜೀವನವನ್ನೇ ಕೊನೆಗಾಣಿಸಲೆಂದು ಆತ್ಮಹತ್ಯೆಯ ಪಾಪಕಾರ್ಯಕ್ಕೆ ಕೈಯಿಟ್ಟಿದ್ದಾನೆ.

ಇನ್ನು ನೀನು ಗತಕಾಲದ ಇತಿಹಾಸವನ್ನು ಓದುತ್ತಲೋ, ಇಲ್ಲವೆ, ಇಂದಿನ ಪ್ರತಿಭಾನ್ವಿತ ವ್ಯಕ್ತಿಗಳ ವಿಚಿತ್ರ ಸಂಭಾಷಣೆಗಳನ್ನು ನೆನೆಯುತ್ತಲೋ ರಾತ್ರಿಯನ್ನು ವ್ಯರ್ಥವಾಗಿ ಕಳೆಯುವುದು ಬೇಡ. ಬದಲಾಗಿ, ಕೆಲವೇ ಗಂಟೆಗಳ ಹಿಂದೆ ಡಂಭ ದರ್ಪಗಳ ಚಂಚಲ ಪ್ರಭಾವದಿಂದ ಕುಣಿದು ಮೆರೆದು ಈಗ-ಕಾಡಿಸಿ, ಪೀಡಿಸಿ, ಸಾಕಾಗಿ ಸೋತು ಮುದುರಿಕೊಂಡಿರುವ ಹಠಮಾರಿ ಕೂಸಿನಂತೆ - ಎಲ್ಲವನ್ನು ಮರೆತು ನಿದ್ರಿಸುತ್ತಿರುವ ಈ ನಗರದಲ್ಲಿ ನಾನು ಒಂಟಿಯಾಗಿ ಚರಿಸುತ್ತೇನೆ.

ಆಹಾ! ಏನು ಕತ್ತಲೆ ಸುತ್ತಲೂ! ಆರಿ ಹೋಗಲಿರುವ ದೀಪ ಕ್ಷೀಣ, ಕಾಂತಿಹೀನ ಕಿರಣವೊಂದನ್ನೆಸೆಯುತ್ತಿದೆ. ಗಂಟೆಯ ಶಬ್ದವನ್ನು, ದೂರದಲ್ಲಿ ಎಲ್ಲಿಯೋ ಬೊಗಳುತ್ತಿರುವ ನಾಯಿಯ ಸದ್ದನ್ನೂ ಬಿಟ್ಟರೆ, ಮತ್ತೊಂದು ಸದ್ದು ಕೇಳಿಸುತ್ತಿಲ್ಲ. ಮಾನವರ ದರ್ಪದ ಗದ್ದಲವೆಲ್ಲವೂ ಅಡಗಿಹೋಗಿದೆ. ಇಂತಹ ವೇಳೆಯಲ್ಲಿಯೇ ಮನುಷ್ಯರ ದರ್ಪದ ಶೂನ್ಯತೆ ಮನದಟ್ಟಾಗುವುದು. ಕ್ಷಣಿಕವಾದ ಈ ಮೌನವೇ ನಿರಂತರವೂ, ಶಾಶ್ವತವೂ ಆಗಿ ಮಹಾನಗರವೇ, ತನ್ನ ಪ್ರಜೆಗಳಂತೆ, ಅಳಿದು, ಉರುಳಿ, ಸುಡುಗಾಡಿನ ಮರುಭೂಮಿಯಾಗುವ ಒಂದು ಕಾಲವೂ ಬರುವುದು.

ಆಹಾ! ಇಂತಹ ಎಷ್ಟೋ ಮಹಾನಗರಗಳು ಇಷ್ಟೇ ಮಹತ್ತರವಾದ ವಿಜಯವನ್ನು ಗಳಿಸಿ, ಇಷ್ಟೇ ನ್ಯಾಯಪರವೂ ಅಮಿತವೂ ಆದ ಆನಂದದಿಂದ ನಲಿದು, ದೂರದೃಷ್ಟಿಯಿಲ್ಲದೆ, ಅವಿವೇಕದಿಂದ ತಾವೇ ಶಾಶ್ವತವೆಂದು ಭ್ರಮಿಸಿದ್ದುವು! ಅವುಗಳ ಪೈಕಿ ಕೆಲವು ನಗರಗಳ ಗುರುತುಗಳೂ ಈಗ ಉಳಿದಿಲ್ಲ. ಇನ್ನುಳಿದ ನಗರಗಳ ಭೀಕರ ಅವಶೇಷಗಳನ್ನು ಕಂಡು ಪ್ರವಾಸಿ ನಿಟ್ಟುಸಿರಿಡುತ್ತಾನೆ.

ಅವುಗಳನ್ನು ಅವಲೋಕಿಸಿ ಆತ ಇಹಲೋಕದ ಸಮಸ್ತ ಸಿರಿ-ಸಂಪತ್ತುಗಳ ನಶ್ವರತೆಯನ್ನು ಮನಗಂಡು ಮತಿವಂತನಾಗುತ್ತಾನೆ.

'ಆಹಾ! ಇಲ್ಲಿ ಅವರ ಅರಮನೆ ಇದ್ದಿತು. ಇಂದು ಅಲ್ಲಿ ಮುಳ್ಳು ಗಿಡಗಳು ಬೆಳೆದು ನಿಂತಿವೆ. ಅಗೋ, ಅಲ್ಲಿ ಅವರ ಶಾಸನಸಭೆ ಇದ್ದಿತು. ಇಂದು ಅದು ಹಾವು-ಚೇಳುಗಳ, ವಿಷಜಂತುಗಳ ಬೀಡಾಗಿದೆ. ಅವರ ಗುಡಿ-ಗೋಪುರಗಳು, ನಾಟಕಮಂದಿರಗಳು ಗುರುತು ಸಿಗಲಾರದಷ್ಟು ಹಾಳಾಗಿ ಪಾಳಿನ ರಾಶಿಯಾಗಿ ಬಿದ್ದಿವೆ. ಅವರ ಭೋಗಲಾಲಸೆ ಮತ್ತು ದುರಾಶೆ ಅವರನ್ನು ತಗ್ಗಿಸಿ, ಕುಗ್ಗಿಸಿ, ಪತನಕೂಪಕ್ಕೆ ತಳ್ಳಿದುವು. ರಾಜ್ಯದ ಬಹುಮಾನ-ಪುರಸ್ಕಾರಗಳು ಆಮೋದ-ವಿನೋದಗಳಿಗೆ ದೊರೆತುವೇ ಹೊರತು ಸಮಾಜದ ಉಪಯುಕ್ತ ಪ್ರಜೆಗಳಿಗೆ ದೊರಕಲಿಲ್ಲ. ಅವರ ಸಿರಿ-ಸಂಪತ್ತುಗಳೂ ಸುಖಮಯ ಜೀವನವೂ ಧಾಳಿಕಾರರ ಕಣ್ಣು ಕುಕ್ಕಿದವು-ಮೊದಲ ಬಾರಿ ಸೋತು ಹಿಮ್ಮೆಟ್ಟಿದರೂ ಧೃತಿಗೆಡದೆ ಮುನ್ನುಗ್ಗಿದ ಪರಕೀಯರು ಚಿತ್ತಸ್ಥೈರ್ಯದಿಂದ ಹೋರಾಡಿ ಗೆದ್ದು ಶತ್ರುಗಳನ್ನು ಸದೆಬಡಿದು ಹೇಳಹೆಸರಿಲ್ಲದಂತೆ ನಾಶಮಾಡಿ ಬಿಟ್ಟರು.

ಕೆಲವೇ ಗಂಟೆಗಳ ಹಿಂದೆ ಜನಭರಿತವಾಗಿದ್ದ ಆ ಬೀದಿಗಳಲ್ಲಿ ಈಗ ಅಲ್ಲೊಬ್ಬ ಇಲ್ಲೊಬ್ಬ ಕಾಣಿಸುತ್ತಿದ್ದಾನೆ. ಈಗ ಓಡಾಡುತ್ತಿರುವವರು ತಮ್ಮ ದಿನನಿತ್ಯದ ಮುಸುಕನ್ನು ತೆಗೆದೊಗೆದಿದ್ದಾರೆ. ಈ ನಿಶಾಚರಿಗಳು ತಮ್ಮ ತುಚ್ಛತೆಯನ್ನು, ಸಂಕಷ್ಟವನ್ನು ಮರೆಮಾಚದೆ ಸಂಚರಿಸುತ್ತಿದ್ದಾರೆ.

ಆದರೆ, ಬೀದಿಯಲ್ಲಿ ಬಿದ್ದಿರುವ ಈ ಬಡಪಾಯಿಗಳು ಯಾರು? ಶ್ರೀಮಂತರ ಮನೆಬಾಗಿಲುಗಳ ಬಳಿಬಿದ್ದು ಒಂದು ಕ್ಷಣ ತಮ್ಮ ಕಡುಕಷ್ಟವನ್ನು ಮರೆತು ವಿರಮಿಸುತ್ತಿರುವ ಈ ದೀನ ಜೀವಿಗಳು ಯಾರು?

ಅವರೋ ಅಪರಿಚಿತರು, ತಿರುಕರು, ಅನಾಥರು. ಅವರ ಸ್ಥಿತಿ-ಗತಿಗಳು ಅಪರಿಹಾರ್ಯವೆನಿಸುವಷ್ಟು ದೀನ, ಹೀನ. ಅವರ ಕಷ್ಟಗಳು ಮರುಕಕ್ಕೂ ಎಟುಕದವು. ಅವರ ಕಷ್ಟವನ್ನು, ದಾರಿದ್ರ್ಯವನ್ನು ನೋಡಿದರೆ ಮರುಕಕ್ಕಿಂತ ಹೆಚ್ಚಾಗಿ ನಡುಕವುಂಟಾಗುತ್ತದೆ.

ಕೆಲವರಿಗೆ ಮೈಮುಚ್ಚಲು ಚಿಂದಿಬಟ್ಟೆಗಳು ಕೂಡ ಇಲ್ಲ. ಇನ್ನಿತರರು ರೋಗ-ರುಜಿನಗಳಿಂದ ನಶಿಸಿಹೋಗಿದ್ದಾರೆ. ಜಗತ್ತು ಅವರನ್ನು ಕೈಬಿಟ್ಟಿದೆ. ಸಮಾಜವು ಅವರ ಕಷ್ಟ-ಕಾರ್ಪಣ್ಯಗಳನ್ನು ಪರಿಗಣಿಸದೆ, ಅವರನ್ನು ಹಸಿವು-ನಗ್ನತೆಗಳಿಗೆ ಗುರಿಮಾಡಿದೆ. ಇಗೋ! ಗಡಗಡನೆ ನಡುಗುತ್ತಿರುವ ಈ ಬಡ ಹೆಣ್ಣು ಜೀವಗಳು ಒಂದಾನೊಂದು ಕಾಲದಲ್ಲಿ ಸುಖವಾಗಿ ಬಾಳಿದವರೇ, ಸುಂದರಿಯರೆಂದು ಹೊಗಳಿಸಿಕೊಂಡವರೇ.

ವಿಷಯಲಂಪಟ, ಭೋಗಪ್ರಿಯ ಧೂರ್ತರಿಂದ ಶೀಲಹರಣಕ್ಕೊಳಗಾದ, ಈ ಬಡಪಾಯಿಗಳು ಮಾಗಿಯ ಕೊರೆಯುವ ಚಳಿಯಲ್ಲಿ ಹೊರಗೆ ಬಿದ್ದಿದ್ದಾರೆ. ಬಹುಶಃ, ಅವರು ತಮ್ಮನ್ನು ವಂಚಿಸಿದ ಕಲ್ಲೆದೆಯ ಕಟುಕರ ಮನೆಗಳ ಬಳಿಬಿದ್ದು ಅವರನ್ನು ಬೇಡುತ್ತಿದ್ದಾರೆ, ಅನುನಯಿಸುತ್ತಿದ್ದಾರೆ. ಆ ಪಾಪಿಗಳು ಇವರನ್ನು ಶಪಿಸುವರೇ ಹೊರತು ಇವರಿಗೆ ಸಹಾಯ ಮಾಡುವವರಲ್ಲ.

ಅಯ್ಯೋ, ಏಕೆ, ನಾನೇಕೆ ಮಾನವನಾಗಿ ಹುಟ್ಟಿದೆ? ಮಾನವನಾಗಿ ಹುಟ್ಟಿ ಈ ಬಡಪಾಯಿಗಳ ಕಷ್ಟವನ್ನು ಕಣ್ಣಾರೆ ನೋಡುತ್ತಿದ್ದರೂ ಅವರಿಗೆ ಸಹಾಯ ಮಾಡಲಾರೆನಲ್ಲ! ಮನೆ-ಮಠಗಳಿಲ್ಲದ, ದೀನ, ಅನಾಥ ಪ್ರಾಣಿಗಳು! ಸಮಾಜವು ನಿಮ್ಮ ಮೇಲೆ ನಿಂದೆಯನ್ನು ಹೊರಿಸುವುದಲ್ಲದೆ ನಿಮಗೆ ನೆರವು ನೀಡದು. ದೊಡ್ಡವರೆನಿಸಿಕೊಂಡವರಿಗೆ ಕಿಂಚಿತ್ ಕಷ್ಟವೆಂದರೂ ಸಾಕು, ಜನರು ತಮ್ಮ ವಾಕ್-ಶಕ್ತಿಯನ್ನೆಲ್ಲ ವ್ಯಯ ಮಾಡಿ, ಉತ್ಪ್ರೇಕ್ಷೆಗೊಳಿಸಿ, ನಮ್ಮ ಗಮನವನ್ನು ಸೆಳೆದು, ನಮ್ಮಲ್ಲಿ ಅವರ ಬಗ್ಗೆ ಸಹಾನುಭೂತಿ ಹುಟ್ಟುವಂತೆ ಮಾಡಿಬಿಡುತ್ತಾರೆ. ಬಡವರಾದರೋ ಕೇಳುವವರೇ ದಿಕ್ಕಿಲ್ಲದೆ ಗೋಳಿಡುತ್ತಾರೆ. ಮದೋನ್ಮತ್ತ ಅಧಿಕಾರಶಾಹಿಯ ತೀರ ಕೆಳಮಟ್ಟದ ನೌಕರನೂ ಅವರಿಗೆ ಕಿರುಕುಳ, ಹಿಂಸೆ ಕೊಡುತ್ತಾನೆ. ಇತರರನ್ನು ರಕ್ಷಿಸುವ ಕಾಯಿದೆ-ಕಾನೂನುಗಳು ಬಡವರ ಪಾಲಿಗೆ ಶತ್ರುಗಳಾಗುತ್ತವೆ.

ಅಯ್ಯೋ! ಇದೆಂತಹ ಸೂಕ್ಷ್ಮಸಂವೇದನೆ! ನನ್ನ ಮನೋಧರ್ಮಕ್ಕೆ, ನನ್ನಮನಸ್ಸಿನ ಸಂವೇದನೆಗೆ ತಕ್ಕಂತೆ ನನಗೆ ಅದೃಷ್ಟದ ಔದಾರ್ಯವಾದರೂ ಏಕೆ ಲಭಿಸಲಿಲ್ಲ? ಪರರ ಕಷ್ಟವನ್ನು ನಿವಾರಿಸುವ ಸಾಮರ್ಥ್ಯವಿಲ್ಲದೆ ದಯಾರ್ದ್ರತೆಯಿಂದ ದಯೆತೋರಿಸುವ ಮೃದು ಹೃದಯಿಯೇ ಸಹಾಯಕೋರುವ ದೀನನಿಗಿಂತಲೂ ಹೆಚ್ಚು ದುಃಖಿಯಾಗುತ್ತಾನೆ.

❑

✤ ವಿ. ಶ್ರೀನಿವಾಸ್, ೨೧೨, ೨ನೇ ತಿರುವು, ೧ನೇ ಜಿ ಮುಖ್ಯ ರಸ್ತೆ, ಜಕ್ಕಸಂದ್ರ ಬಡಾವಣೆ, ೧ನೇ ಬ್ಲಾಕ್, ೧ನೇ ಮುಖ್ಯ ರಸ್ತೆ, ಕೋರಮಂಗಲ, ಬೆಂಗಳೂರು-೩4

ಭಾಗ-೨

'ತಿಟ್ಹತ್ತಿ ತಿರುಗಿ......'

ವಿಚಾರ ಸಂಕಿರಣದ ಪ್ರಶ್ನಾವಳಿ

೧. ಕನ್ನಡ ಸಾಹಿತ್ಯ ವಲಯದಲ್ಲಿ ಒಂದು ರೀತಿಯ ಸ್ತಬ್ಧ ವಾತಾವರಣ ಆವರಿಸಿಕೊಂಡಿರುವುದನ್ನು ನೀವು ಹೇಗೆ ಪರಿಭಾವಿಸುತ್ತೀರಿ?

೨. ದಲಿತ ಮತ್ತು ಬಂಡಾಯ ಚಳುವಳಿಗಳ ನಿಲುಗಡೆಯ ಸ್ಥಿತಿಗೂ, ಬದುಕಿನ ಬಗ್ಗೆ ಮುಕ್ತ ಗ್ರಹಿಕೆಯಾಗಿ ರೂಪುಗೊಳ್ಳದ ಭಾರತೀಯ ಎಡ ಚಿಂತನೆಗಳ ದೌರ್ಬಲ್ಯಕ್ಕೂ, ಇಂದಿನ ಸಾಹಿತ್ಯ ವಲಯದ ಈ ಸ್ತಬ್ಧ ವಾತಾವರಣಕ್ಕೂ ನಡುವಿನ ಆಂತರಿಕವಾದ ಸಂಬಂಧಗಳ ಸ್ವರೂಪವನ್ನು ನೀವು ಹೇಗೆ ಅರ್ಥೈಸುತ್ತೀರಿ?

೩. ವೇಗ ಸಂಸ್ಕೃತಿಯ ಚಾಲಕ ಶಕ್ತಿಗಳಾದ ವಿದ್ಯುನ್ಮಾನ ಮಾಧ್ಯಮಗಳು, ಮುಖ್ಯವಾಗಿ ಟಿ.ವಿ. ಮತ್ತು ಕಂಪ್ಯೂಟರ್‌ಗಳ ವಿಸ್ತೃತ ಜಾಲ ಬಹುಜನ ಸಮುದಾಯದ ಬಹುಮುಖೀ ಸಾಂಸ್ಕೃತಿಕ ಸ್ತರಗಳ ಅಭಿವ್ಯಕ್ತಿ ವಿಧಾನಗಳ ಮೇಲೆ ಬೀರುತ್ತಿರುವ ಪರಿಣಾಮ ಎಂತಹುದು?

೪. ವಿಶ್ವ ಗ್ರಾಮದ ಪರಿಕಲ್ಪನೆಯಿಂದಾಗಿ ಬದಲಾಗುತ್ತಿರುವ ಕಾಲ, ದೇಶಗಳ ಪರಿಕಲ್ಪನೆ ನಮ್ಮ ಸಾಹಿತ್ಯದಲ್ಲಿ ಹೇಗೆ ನಿರ್ವಹಿಸಲ್ಪಡುತ್ತಿದೆ?

೫. ಚಾಪ್ಲಿನ್ ಮತ್ತು ಬ್ರೆಕ್ಟ್‌ರಂತಹ ಶ್ರೇಷ್ಠ ಕಲಾವಿದ, ಬರಹಗಾರರನ್ನು ರೂಪಿಸಿದ ಎಡಚಿಂತನೆಗಳ ತತ್ವಬದ್ಧತೆ ಇಂದು ಅಪ್ರಸ್ತುತವೆನಿಸುತ್ತಿದೆಯೇ?

❑

ಕ್ರಿಯೆಗಿಂತಲೂ ಗಾಢವಾಗಿರುವ ಹತಾಶೆ!

- ಡಾ|| ಜಿ. ರಾಮಕೃಷ್ಣ

೧. ವಾತಾವರಣವು ಸ್ತಬ್ದವಾಗಿದೆ ಎನಿಸುವುದಿಲ್ಲ. ಎಂದಿನಂತೆ ಚಟುವಟಿಕೆ ಮುಂದೆ ಸಾಗುತ್ತಿದೆ. ಕೆಲವರನ್ನು ಬಿಟ್ಟರೆ ಮಿಕ್ಕ ಹಿರಿಯ ಸಾಹಿತಿಗಳೆಲ್ಲಾ ಯಥಾಪ್ರಕಾರ ಸಾಹಿತ್ಯವನ್ನು ಪ್ರಕಟಿಸುತ್ತಲೇ ಇದ್ದಾರೆ. ಕನ್ನಡಕ್ಕೆ ಈ ಬಾರಿ ನೋಬೆಲ್ ಪ್ರಶಸ್ತಿ ದೊರೆತೇಬಿಡುತ್ತದೇನೋ ಎಂಬಷ್ಟು ಓಡಾಟ ಸಹ ನಡೆಯುತ್ತಿದೆಯೆಂದು ಕೇಳಿಬರುತ್ತಿದೆ. ಇಂತಹ ಗದ್ದಲಗಳ ನಡುವೆ ಸೃಷ್ಟಿಯಾಗುತ್ತಿರುವುದು ಗಟ್ಟಿಯಲ್ಲ, ಜೊಳ್ಳು, ಎಂಬ ಭಾವನೆಗೂ ಸತರ್ಕವಾದ ಅವಕಾಶವಿಲ್ಲ. ಏಕೆಂದರೆ, ಕಳೆದೆರಡು ದಶಕಗಳಿಗೆ ಹೋಲಿಸಿದರೆ ಈಗಿನದೂ ಅದರಂತೆಯೇ ಗಟ್ಟಿಯೆಂದರೆ ಗಟ್ಟಿ, ಜೊಳ್ಳೆಂದರೆ ಜೊಳ್ಳು. ಇಂಗ್ಲೆಂಡೂ ಸೇರಿದಂತೆ ಯೂರೋಪಿನ ಸಾಹಿತ್ಯ ಓದಿಕೊಂಡು, ಅಲ್ಲಿನ ಅನುಭವಗಳನ್ನು ತಮ್ಮ ಮೇಲೆ ಆರೋಪಿಸಿಕೊಂಡು ಇಲ್ಲಿನ ದಿನನಿತ್ಯದ ಅನುಭವಗಳು ಅವಾಸ್ತವಿಕ ಅಥವಾ ಅಪ್ರಸ್ತುತ ಎನ್ನುವಂತೆ ಮೊದಲು ಬರೆಯುತ್ತಿದ್ದವರಿಗಿಂತಲೂ ಈಗ ಕಡಿಮೆ ಮಂದಿ ಹಾಗೆ ಮಾಡುತ್ತಿದ್ದಾರೆ. ಅದು ಆರೋಗ್ಯಕರ ಕೂಡ. ನಮ್ಮ ದೇಶ ಪರಭಾರೆಯಾಗುತ್ತಿರುವುದು, ಜಾಗತಿಕ ಹಳ್ಳಿಯ ಹೆಸರಿನಲ್ಲಿ ಸೂರೆಗೊಳ್ಳುತ್ತಿರುವುದು, ಮತೀಯ ವಿದ್ವೇಷದ ಕಾರ್ಮೋಡವು ನಮ್ಮನ್ನಾವರಿಸಿ ಸಾಂಸ್ಕೃತಿಕಲೋಕವನ್ನು ಕಪ್ಪಾಗಿಸಿರುವುದು, ರೈತರ ಆತ್ಮಹತ್ಯೆಗಳು, ಮಹಿಳೆಯರನ್ನು ನಗ್ನಗೊಳಿಸಿ ಹೋ ಹೋ ಎಂದು ಮೆರೆಯುವ ಪಾತಕಿಗಳ ಹೆಚ್ಚಳ, ಮುಂತಾದ ವಿಚಾರಗಳು ನಮ್ಮ ಸಾಹಿತ್ಯ ವಲಯಕ್ಕೆ ಹಿಂದೆಯೂ ಗಂಭೀರವೆನಿಸಲಿಲ್ಲ, ಈಗಲೂ ಸಾಕಷ್ಟು ಆಳವಾಗಿ ಅನಿಸುತ್ತಿಲ್ಲ. ಅವರವರ 'ಕರ್ಮ' ಎಂಬ ಘನಪಾಂಡಿತ್ಯ ಈಗಲೂ ಹಲವು ಸಾಹಿತಿಗಳಿಗೆ ಅದ್ಭುತ ತಾತ್ವಿಕ ನಿಲುವಾಗಿ ಶೋಭಿಸುತ್ತಿರಬಹುದು. ನಮ್ಮ ಉದ್ದಾಮ ಸಾಹಿತಿಗಳಿಗೆ ಹಾಗೂ ವಿಮರ್ಶಕರಿಗೆ ಅಧುನಿಕೋತ್ತರ, ರಾಚನಿಕೋತ್ತರ, ವಸಾಹತೋತ್ತರ ಮುಂತಾದ ಶಬ್ದ ಕಲ್ಪನೆಗಳ ಗುಂಗು ಹಿಡಿದಿದೆ. ಆದರೆ ಅದು ಹೊಸ ಪ್ರವೃತ್ತಿಯಲ್ಲ. ಹಿಂದೆಯೂ ಅಸಂಗತ ಮುಂತಾದ ಗುಂಗುಗಳನ್ನು ತುಂಬಿಕೊಂಡಿದ್ದರು. ಅಮೇರಿಕಾದಲ್ಲಿ ಕವಿತೆ ಓದಿ ಬರುವುದು ಪ್ರಿಯವಾದಾಗ ಇಲ್ಲಿನ ಸಂಕಷ್ಟಗಳು ಗೌಣವಾಗುತ್ತವೆಂದು ತೋರುತ್ತದೆ. ಮುಖ್ಯವಾಗಿ ಗಮನಿಸಬೇಕಾದ್ದು ಇದು: ಇಲ್ಲಿಯ ಜೀವನದೊಡನೆ ಸಮೀಕರಣವಿಲ್ಲದೆ ಸಾಹಿತಿಗೆ ಭವ್ಯವಾದ ಜೀವನದರ್ಶನ ಕೂಡಿ ಬರುವುದಿಲ್ಲ. ಹಾಗೆ ತಾದಾತ್ಮ್ಯ ಸಿದ್ಧಿಸಿಕೊಂಡವರು ಉತ್ತಮ ಸಾಹಿತ್ಯ ಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಕ್ರಿಯೆಗಿಂತಲೂ ಹತಾಶೆ ಗಾಢವಾಗಿರುವಂತಹ ಸಂದರ್ಭ ಈಗಿನದು. ಈ ಸಂದರ್ಭ ಚಿರಕಾಲ ಉಳಿಯುವುದಿಲ್ಲ. ನಮ್ಮ ಯುವ ಪೀಳಿಗೆ ಭಿನ್ನವಾಗಿ ಸ್ಪಂದಿಸುವ ಅಗತ್ಯ ಪೂರೈಸುತ್ತದೆಂಬುದಕ್ಕೆ

ಇಂದಿನ ಕೆಲವು ಸಾಹಿತಿಗಳ ಪ್ರಜ್ಞೆ, ಅವಲೋಕನ ಮತ್ತು ಕ್ರಿಯೆ ಸಾಕ್ಷಿಯಾಗಿದೆ. ನೊಬೆಲ್ ಗೀಳಿಲ್ಲದವರು, ವಿದ್ವತ್ತನ್ನು ಪ್ರದರ್ಶಿಸಬೇಕೆಂದು ಹಂಬಲ ಇಲ್ಲದವರು ನಮ್ಮ ಜನರ ನಿಜಸ್ಥಿತಿಯ ಅರಿವನ್ನು ಅಂತರ್ಗತ ಮಾಡಿಕೊಂಡಿರುವವರು ವಿರಳವಾದರೂ ಗಟ್ಟಿಗರಾಗಿ ಶೋಭಿಸುತ್ತಾರೆ.

೨. ದಟ್ಟವಾದ ಅನುಭವ ಉಳ್ಳವರಿಗೆ ಅಭಿವ್ಯಕ್ತಿ ಶಕ್ತಿ ಕುಬ್ಜವಾಗಿರುವುದು ಮತ್ತು ತಮ್ಮದಲ್ಲದ ಅನುಭವಗಳನ್ನು ಜಾಣತನದಿಂದ ನಿವೇದಿಸುವುದರಲ್ಲಿ ಮಹತ್ತಾದ ಕೌಶಲ್ಯವನ್ನು ಹೊಂದಿರುವುದು ನಮ್ಮ ನಡುವೆ ಕಾಣಸಿಗುತ್ತದೆ. ಯಾವುದೇ ಸೈದ್ಧಾಂತಿಕ ತತ್ವ-ನಿಲುವುಗಳು ಆಚರಣೆಯಿಂದ ಮಾತ್ರವೇ ಜೀವಂತಿಕೆ ಪಡೆಯಬೇಕು. ಪ್ರಜ್ಞಾಪೂರ್ವಕವಾದ ಸಾಮುದಾಯಿಕ ಮಧ್ಯಪ್ರವೇಶವು ಕುಂಠಿತವಾದಾಗ ನಮ್ಮ ಆಶಯಗಳು ಫಲಿಸಬೇಕೆಂಬ ನಿರೀಕ್ಷೆ ಹುಸಿಯಾದುದು. ಜಾಗತಿಕವೆಂಬ ದೈತ್ಯ ಭ್ರಾಂತಿಯ ತೆಕ್ಕೆಗೆ ಸಿಲುಕಿರುವ ನಮ್ಮ ದೇಶದಲ್ಲಿ ಚೇತನವನ್ನು ಹೊಡೆದೆಬ್ಬಿಸುವುದು ಸರಳವಾದ ಕೆಲಸವಲ್ಲ. ಜೈವ ತಾಂತ್ರಿಕ ಸಂಶೋಧನೆಯೆಂಬ ಪರದೆಯ ಹಿಂದೆ ಕೃಷಿ ವಿದ್ಯಾರ್ಥಿ ಸಂಶೋಧಕರನ್ನು ಚಚ್ಚಿ ಹಾಕಿದಾಗಲೂ ನಮ್ಮ ಸಾಮೂಹಿಕ ಪ್ರಜ್ಞೆ ಸುಪ್ತವಾಗಿಯೇ ಉಳಿಯುವಂತಹ ಮೋಹಕ ಶಕ್ತಿ ನಮ್ಮನ್ನು ಬಂಧಿಸಿದೆ. ಎಡ ಚಿಂತನೆಯ ಸೋಲು (ಅದು ಈಗಾಗಲೇ ಸೋತು ಸೊರಗಿ ಹೋಗಿದೆಯೆಂದು ನಾನು ನಂಬುವುದಿಲ್ಲ) ಬದುಕಿನ ಬಗ್ಗೆ ಮುಕ್ತ ಗ್ರಹಿಕೆ ಇಲ್ಲದಿರುವುದರಿಂದ ಉಂಟಾಗಿದೆಯೆಂಬುದು ಅರ್ಧಸತ್ಯವಷ್ಟೇ. ಇಲ್ಲಿ ಮುಕ್ತ ಅಥವಾ ಬಂಧಿತ ಎಂಬುದಕ್ಕಿಂತಲೂ ಸ್ವಂತಿಕೆ ಮತ್ತು ಕ್ರಿಯೆಗಳ ಜಿಜ್ಞಾಸೆ ಹೆಚ್ಚು ಅರ್ಥಪೂರ್ಣ. ಅಮೂರ್ತ ಜೀವನದರ್ಶನದ ಸಂಧಿವಾತ ನಮ್ಮ ಸಾಹಿತ್ಯಕ್ಕೆ ಸ್ವಲ್ಪ ಮಟ್ಟಿಗೆ ತಟ್ಟಿದ್ದರೆ ಅದು ವ್ಯಾಪಕ ಹೋರಾಟಗಳ ಅಭಾವದಿಂದಲೂ ಹಾಗಾಗಿದೆಯೆಂಬುದು ನನ್ನ ಇಂಗಿತ.

೩. ಇಂದಿನ ಒಂದು ವಿಸ್ಮಯ ಹೀಗಿದೆ: ಪತ್ರಿಕೆಗಳಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸುವ ಮಂದಿ ವಿದೇಶಗಳಿಂದ ಈ-ಮೇಲ್ ಮುಖಾಂತರ ಕಳಿಸುತ್ತಾರೆ. ಅವು ಪ್ರಕಟವಾಗುವಷ್ಟು ಸುಲಭವಾಗಿ ಗಂಪಲಹಳ್ಳಿಯಿಂದ ಯಾರೋ ಪ್ರಜ್ಞಾವಂತರ ಕೈಯಲ್ಲಿ ಬರೆದು ಕಳಿಸುವ ಪತ್ರವು ಪ್ರಕಟವಾಗುವುದಿಲ್ಲ. ಇಲ್ಲಿಯ ಚಿಂತೆಯನ್ನು ಅಲ್ಲಿರುವವರು ವಿಪುಲವಾಗಿ ಮಾಡುತ್ತಾರೆ ಮತ್ತು ಇಲ್ಲಿಯವರು ಅಲ್ಲಿಯ ಭ್ರಮೆಗೆ ಅಧೀನರಾಗಿ ಅಧೀರರಾಗಿದ್ದಾರೆ. ಕಂಪ್ಯೂಟರ್ ಬಳಕೆಯಿಂದ ವಿದೇಶಿ ಹಣ ಬರುತ್ತಿದೆ. ನಿಜ; ಆದರೆ ಸದಾಕಾಲಕ್ಕೂ ಬರುವುದಿಲ್ಲ. ಎರಡನೆಯದಾಗಿ ಅದು ನಮ್ಮ ಕೃಷಿ ಹಾಗೂ ಉದ್ಯಮ ಕ್ಷೇತ್ರಗಳ ಉತ್ಪಾದನೆಯನ್ನು ಅಧಿಕಗೊಳಿಸುವ ತಂತ್ರಜ್ಞಾನವನ್ನೇನೂ ಕೊಟ್ಟಿಲ್ಲ. ಈ ಮೂಲಭೂತ ಸತ್ಯವನ್ನು ಮರೆಮಾಚುವಂತೆ ಆಳುವ ವರ್ಗದ ಹುನ್ನಾರಗಳೂ ಕೆಲಸ ಮಾಡುತ್ತಿವೆ. ಶಾಸ್ತ್ರೀಯ ಸಂಗೀತಗಾರರು ಸಹ ವಿದ್ಯುನ್ಮಾನ ತಂತ್ರದ ದಾಸರಾಗಿ ನಮಗೆ ರಸಾನುಭವ ಕೊಡುವಂತೆ ನಟಿಸುವ ಯಂತ್ರಗಳಾಗಿದ್ದಾರೆ. ಇಂಟರ್‌ನೆಟ್ ಜ್ಞಾನವೇ ಅಂತಿಮ ಜ್ಞಾನವೆಂಬ ಮೌಢ್ಯ ನಮ್ಮನ್ನಾವರಿಸುತ್ತಿದೆ. ಇಂಟರ್‌ನೆಟ್‌ಗೆ ಮಾಹಿತಿ ತುಂಬಿರುವವರ ವರ್ಗಹಿತದ ಬಗೆಗಿನ ಕಾಳಜಿ ಅಸತ್ಯವೆಂಬಂತೆ ಮಾತನಾಡುವ ಧೀಮಂತರು ಹೆಚ್ಚಾಗುತ್ತಿದ್ದಾರೆ. ಸ್ವಲ್ಪದರಲ್ಲೇ ಹೇಳುವುದಾದರೆ, ಎಲ್ಲವನ್ನೂ ವಿದ್ಯುನ್ಮಾನಕ್ಕೆ ಅಳವಡಿಸುವ, ಸಂಗ್ರಹವಾಗಿ ತುರುಕುವ ಶೈಲಿ

ವಿಜೃಂಭಿಸುತ್ತಿದೆ. ಅಪಕ್ವ, ನೀರಸ, ನಿರುತ್ಸಾಹೀ ಜೀವನ ದೃಷ್ಟಿಯು ಪ್ರತಿಫಲಿತಗೊಳ್ಳುತ್ತಿದೆ. ಹಾಗೆ ಆ ಸಮವಸ್ತ್ರದ ಪರಿಧಿಗೆ ಸೇರದಿದ್ದುದು ಸಮಕಾಲೀನವೆನಿಸಿಕೊಳ್ಳುವುದಿಲ್ಲವೆಂಬ ತೀರ್ಮಾನವು ಭಯೋತ್ಪಾದಕ ಬುದ್ಧಿಶಕ್ತಿಯ ಚಾಲನೆಗೆ ಗ್ರಾಸವಾಗುತ್ತಿದೆ. ಜನರ ಬಗ್ಗೆ ಗೌರವ ಉಳ್ಳವರು ಈ ಬಗ್ಗೆ ಎಚ್ಚರ ವಹಿಸಬೇಕಾಗಿದೆ.

೪. ವಿಶ್ವಗ್ರಾಮದ ಪರಿಕಲ್ಪನೆ ಮೂಲತಃ ಸುಳ್ಳು. ಲಾಭಕೋರತನಕ್ಕೆ ಹೆಸರಾದ ಪ್ರಚಂಡರು ಬೇರೆ ದೇಶಗಳ ಮಾರುಕಟ್ಟೆಯನ್ನು ಆಕ್ರಮಿಸಲು ಆರಂಭಿಸಿರುವ ಪ್ರಕ್ರಿಯೆ ಇದು. ಅತ್ಯಂತ ನವೀನವಾದ ಮಾದರಿಯೇನೂ ಅಲ್ಲದಿದ್ದರೂ ಇದರಲ್ಲೇನೋ ಉದಾರ, ಉದಾತ್ತ ನೀತಿ, ತತ್ವ, ಹಾಸುಹೊಕ್ಕಾಗಿದೆಯೆಂಬ ಪ್ರಚಾರ ಜೋರಾಗಿ ನಡೆದಿದೆ. ನವವಸಾಹತುಶಾಹಿಗೆ ರುಚಿಕರವಾದ ಹೆಸರು ಕೊಡದಿದ್ದರೆ ಅದು ಸ್ವೀಕೃತವಾಗುವುದಿಲ್ಲವಾಗಿ ವಿಶ್ವಗ್ರಾಮ, ಜಾಗತೀಕರಣ ಎಂಬ ಪದಗುಚ್ಛಗಳು ಹುಟ್ಟಿಕೊಂಡಿವೆ. ನಮ್ಮೂರಿನ ಬಡ ಅಜ್ಜಿಯ ಮೊಮ್ಮಗಳಿಗೆ ಜ್ವರ ಬಂದಾಗ ಈಗಲೂ ಬೇವಿನ ಸೊಪ್ಪಿನ ಮಂತ್ರವನ್ನೇ ಪ್ರಯೋಗಿಸುವ ಸನ್ನಿವೇಶವಿದೆ. ನಮ್ಮ ಬಹುಪಾಲು ಸಾಹಿತಿಗಳು ಬುದ್ಧಿವಂತರು, ವಿಶ್ವಮಾನ್ಯವೆಂದು ಅವರು ಬಗೆದುದನ್ನು ಅಂತಿಮ ಸತ್ಯವೆಂದು ಹಂಚುವವರು. ದೇಶಕ್ಕೆ ಮತ್ತು ದೇಶದ ಜನಕ್ಕೆ ವಂಚನೆ ನಿರಾತಂಕವಾಗಿ ನಡೆಯುತ್ತಿದ್ದರೆ ಅದನ್ನು ಗ್ರಹಿಸದ ಸಾಹಿತಿ ಇನ್ನೆಂತಹ ಪ್ರತಿಭಾವಂತನಿದ್ದಾನು! ಅಂತಹ ಮಂದೆಗೆ ಸೇರದೆ ಪ್ರತ್ಯೇಕವಾಗಿ ಉಳಿಯುವ ಸಾಹಿತಿಗಳೂ ನಮ್ಮಲ್ಲಿದ್ದಾರೆಂಬುದು ಸಮಾಧಾನದ ವಿಷಯ.

೫. ತತ್ವಬದ್ಧತೆಯು ಮೂರ್ತವಾಗಿದ್ದಾಗ ಅದೆಂದೂ ಅಪ್ರಸ್ತುತವಾಗುವುದಿಲ್ಲ. ನೂರು ಫುಕುಯಾಮಾಗಳು ಒಟ್ಟಾಗಿ "ಚರಿತ್ರೆಯು ಕೊನೆಯಾಗಿದೆ" ಎಂದು ಅರಚಿಕೊಂಡರೂ ಇತಿಹಾಸದ ಗತಿ-ನಿಯಮಗಳು ಪಲ್ಲಟವಾಗುವುದಿಲ್ಲ. ಸಮಾಜದ ವಿಶ್ಲೇಷಣೆಯ ನಿಯಮಗಳು, ವರ್ಗಚಿಂತನೆ, ತತ್ವ ಶ್ರದ್ಧೆ ಇವೆಲ್ಲಾ ಮೌಲಿಕವಾದ ಅಂಶಗಳು. ಜಾಗತೀಕರಣವೆಂಬ ಮಂತ್ರಕ್ಕೆ ಶರಣಾಗಿ ಮುಗ್ಧರಂತೆ ತೋರಿಕೊಳ್ಳುವ ಜನ ತಮ್ಮ ವೈಯಕ್ತಿಕ ಆಕಾಂಕ್ಷೆಗಳನ್ನು, ಚಟಗಳನ್ನು ತೃಪ್ತಿಪಡಿಸಿಕೊಳ್ಳಬಹುದು. ಜೀವಜಗತ್ತಿನ ಬಗೆಗಿನ ಅವರ ವ್ಯಾಖ್ಯಾನವೇ ಪರಮಸತ್ಯವೆಂದು ಅವರು ಬೀಗುವುದು ಸಹಜವಾಗಿದೆ. ಆದರೆ ತತ್ವಬದ್ಧತೆಯು ಅದರಿಂದಾಗಿ ಸತ್ವವನ್ನು ಕಳೆದುಕೊಳ್ಳುವುದಿಲ್ಲ. ಮಾನವ ಶರೀರದಲ್ಲಿ ಹೃದಯವು ಸಾಮಾನ್ಯವಾಗಿ ಎಡಭಾಗದಲ್ಲಿರುತ್ತದೆ. ವಿಶ್ವದ ಚರಿತ್ರೆಯಲ್ಲಿ ಇಂತಹ ಹೃದಯಿಗಳೇ ಹೃದಯವಂತರಾಗಿ ಗೋಚರಿಸಿರುವುದು, ಕ್ರಿಯಾತ್ಮಕವಾಗಿರುವುದು, ಶ್ರೇಯಸ್ಸು ಗಳಿಸಿರುವುದು.

❑

✤ **ಡಾ॥ ಜಿ. ರಾಮಕೃಷ್ಣ,** ೨ ಎಫ್, ಪವನ್ ಪರಂಜ್ಯೋತಿ,
೨೨/೧, ೪ನೇ ಕ್ರಾಸ್, ಕಾವೇರಿ ನಗರ, ಬೆಂಗಳೂರು - ೫೬೦ ೦೮೫.

'ಮುಂಚೂಣಿ ಸಾಹಿತಿಗಳ ದೌರ್ಬಲ್ಯ ಕಾರಣ'

- ಎಚ್. ಜಿ. ಸಣ್ಣಗುಡ್ಡಯ್ಯ

೧. ಕನ್ನಡ ಸಾಹಿತ್ಯ ವಲಯದಲ್ಲಿ ಒಂದು ಸ್ತಬ್ಧ ವಾತಾವರಣ ಆವರಿಸಿಕೊಂಡಿದೆ ಎಂದು ನೀವು ಹೇಳಿದ್ದೀರಿ! ಈ ಮಾತನ್ನು ಇತರ ಭಾಷೆಗಳ ಸಾಹಿತ್ಯದ ವಿಷಯದಲ್ಲೂ ಹೇಳಬಹುದೋ ಏನೋ. ಸಾಹಿತ್ಯ ಒಂದು ವಿರಾಮಕಾಲದ ಹವ್ಯಾಸ. ಅದು ಶಾಂತಿ ಕಾಲದಲ್ಲಿ ಅರಳುವ 'ರಸ' ವಸ್ತು. ಇದೊಂದು ಸೃಜನಶೀಲ ಉದ್ಯೋಗವಾದುದರಿಂದ ಒಂದು ವಿಶಿಷ್ಟ ಬಗೆಯ ಸ್ಫೂರ್ತಿ ಮತ್ತು ಉತ್ಸಾಹದ ವಾತಾವರಣವನ್ನು ನಿರೀಕ್ಷಿಸುತ್ತದೆ. ಪ್ರಸ್ತುತ ಸಂದರ್ಭದಲ್ಲಿ ನಾವು ಈ ಸ್ಫೂರ್ತಿಯನ್ನಾಗಲಿ, ಉತ್ಸಾಹವನ್ನಾಗಲಿ ಕಾಣುತ್ತಿಲ್ಲ. ಪ್ರತಿ ಬೆಳಗೂ ಪತ್ರಿಕೆ ಕೈಗೆ ಬೀಳುವಾಗ, ದೂರದರ್ಶನ ಅಥವಾ ಆಕಾಶವಾಣಿಯಲ್ಲಿ ಕ್ಲುಪ್ತ ಕಾಲಕ್ಕೆ ಬಿತ್ತರವಾಗುವ ಸಮಾಚಾರದಲ್ಲಿ ಪ್ರಪಂಚದ ಯಾವ ಮೂಲೆಯಲ್ಲಿ ಯಾವ ಭಯಂಕರ ದುರ್ಘಟನೆ ನಡೆದಿದೆಯೋ, ಎಲ್ಲಿ ಎಷ್ಟು ಜನ ದುರ್ಮರಣಕ್ಕೆ ಒಳಗಾದರೋ ಎಂದು ಮೊದಲು ಹುಡುಕಿ ಓದುವ ಅಥವಾ ಕೇಳುವ ಸ್ಥಿತಿಗೆ ನಾವು ಬಂದಿದ್ದೇವೆ. ಜನರ ನಡವಳಿಕೆಯನ್ನು ನಿಯಂತ್ರಿಸಬಲ್ಲ, ಸಾಮಾಜಿಕ ಇತಿಹಾಸದಲ್ಲಿ ಲಭ್ಯವಿರುವ ಸತ್ ಶಕ್ತಿಗಳ ಮರು ಹೂಡಿಕೆ ಮಾಡಬಲ್ಲ ಸಾಧನೆ ನಮ್ಮಲ್ಲಿ ಇಲ್ಲವಾಗಿದೆ; ಬದುಕಿನ ಸುಖ ಮತ್ತು ಸೌಂದರ್ಯಗಳಿಗಾಗಿ ಅವುಗಳನ್ನು ಪುನರುಜ್ಜೀವನ ಮಾಡುವ ಕ್ರಿಯಾಶೀಲತೆಯೂ ನಮ್ಮಲ್ಲಿ ಇಲ್ಲವಾಗಿದೆ. ಆದ್ದರಿಂದ ಸಾಹಿತ್ಯದಂಥ ಗಂಭೀರ ಕ್ಷೇತ್ರದಲ್ಲಿ ಒಂದು ಸ್ತಬ್ಧ ವಾತಾವರಣ ಕಾಣುತ್ತಿದ್ದರೆ ಅದರಲ್ಲಿ ಅಸಹಜತೆ ಏನೂ ಇಲ್ಲ.

ಬಹುಶಃ ನಿತ್ಯದ ಆದಾಯ ಮತ್ತ ರೂಢಿಗತ ಹವ್ಯಾಸಗಳನ್ನು ಅವಲಂಬಿಸಿರುವ ಚಲನಚಿತ್ರವೇ ಮೊದಲಾದ ಕೆಲವು ಕ್ಷೇತ್ರಗಳ ಹೊರತು ಇತರೆಡೆ ಈ ಸ್ತಬ್ಧತೆ ತಾನೇ ತಾನಾಗಿ ವಿರಾಜಿಸುತ್ತಿದೆ.

ಇದರ ಜೊತೆಗೆ ಕನ್ನಡದ ಸಂದರ್ಭಕ್ಕೆ ಸೀಮಿತವಾಗಿ ನಾವು ಗುರುತಿಸಬಹುದಾದ ಒಂದು ಪ್ರವೃತ್ತಿ ಎಂದರೆ ಹಿರಿಯರೂ ಯಶವಂತರೂ ಎನಿಸಿಕೊಂಡುಬಿಟ್ಟಿರುವ ಬಹು ಜನರು ತಮ್ಮ ನೆರೆಯವರತ್ತ ಕಣ್ಣು ಹಾಯಿಸದೆ ಒಂದು ಬಗೆಯ ಗೆಲುವಿನ ಅತಿಕಾಮುಕ (Crazy) ಬೇಟೆಯಲ್ಲಿ, ಪ್ರಶಸ್ತಿಗಳ ಹುಡುಕಾಟದಲ್ಲಿ ಅವಿರತವಾಗಿ ಮುಳುಗಿ ಹೋಗಿರುವಂತೆ ಕಾಣುತ್ತದೆ. ಈ ಬೇಟೆ ಒಬ್ಬರಿಗೊಬ್ಬರ ನಡುವೆ ಒಂದು ಬಗೆಯ ವ್ಯಾವಹಾರಿಕ ಗೋಪ್ಯತೆಯನ್ನೂ ಗಳಿಸಿಕೊಂಡಿರುವಂತೆ ಕಾಣುತ್ತದೆ.

೨. ದಲಿತ ಮತ್ತು ಬಂಡಾಯ ಎನ್ನುವ ಚಳುವಳಿಗಳು ಸಾಮಾಜಿಕ ಸಂಘಟನೆಗೆ ಸಂಬಂಧಿಸಿದ ವಿಚಾರಗಳು. ಅವು ಕೇವಲವಾಗಿ ಸಾಹಿತ್ಯ ಚಳುವಳಿಗಳಲ್ಲ. ಅಥವಾ ಅವು

ಸಾಹಿತ್ಯ ಚಳುವಳಿಗಳಾಗಿ ಕಾಣುತ್ತಿದ್ದರೆ ಅದು ಒಂದು ಅಪ್ರಾಥಮಿಕ ಚಟುವಟಿಕೆಯಾಗಿ ಮಾತ್ರ ಎನಿಸುತ್ತದೆ.

ಭಾರತೀಯ ಎಡ ಚಿಂತನೆಗಳ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದ್ದೀರಿ. ಅವು ಮುಕ್ತ ಗ್ರಹಿಕೆಯಾಗಿ ರೂಪುಗೊಂಡಿಲ್ಲ ಎಂದರೇನರ್ಥ? ಅವರ ದೃಷ್ಟಿ, ವಿಚಾರ ಮತ್ತು ಕಾರ್ಯ ಯೋಜನೆಗಳು ಇನ್ನಷ್ಟು ಮುಕ್ತವಾಗಿರಬೇಕಾಗಿತ್ತು ಎಂದು ಕನ್ನಡದ ದಲಿತ ಮತ್ತು ಬಂಡಾಯದ ನಾಯಕರುಗಳು ಭಾವಿಸುತ್ತಿರಬಹುದು. ದಲಿತ ಮತ್ತು ಬಂಡಾಯ ಚಳುವಳಿಗಳು ಮೊದಲು ತಮ್ಮ ಚಳುವಳಿ ಅಥವಾ ಹೋರಾಟ ಎಡ ಸಿದ್ಧಾಂತಗಳ ವಲಯಕ್ಕೆ ಸೇರಿದ ಚಟುವಟಿಕೆ ಎಂಬುದನ್ನು ಗ್ರಹಿಸಿ, ಒಪ್ಪಿಕೊಳ್ಳಬೇಕಾಗಿದೆ. ಅನೂಚಾನವಾಗಿ ಎಡ ಸಂಘಟನೆಗಳು ಮತ್ತು ಚಿಂತಕರು ಕಟ್ಟೆಚ್ಚರದಿಂದ ಪಾಲಿಸಿಕೊಂಡು ಬಂದಿರುವ ಕೆಲವು ಶಿಸ್ತುಗಳನ್ನು ಕಡೆಗಣಿಸಿ ದಲಿತರು ಮತ್ತು ಬಂಡಾಯದವರ ಜೊತೆಗೆ ಅವರು ನಡೆದು ಬರಬೇಕೆಂದು ನಾವು ನಿರೀಕ್ಷಿಸಬಾರದು. ದಲಿತ ಮತ್ತು ಬಂಡಾಯ ಚಳುವಳಿಗಳು ತಾತ್ಕಾಲಿಕ ಒತ್ತಡಗಳ ಉತ್ಪನ್ನಗಳಾಗಿ ಹುಟ್ಟಿ ಬಂದು, ಆ ಚಳುವಳಿಗಳ ಉದ್ದೇಶ ಒಂದು ಪಕ್ಷ ಈಡೇರಿದರೆ, ಚಳುವಳಿಯು ಕರಗುತ್ತ ಬಂದು ಗುರುತೇ ಸಿಗದಂತೆ ಅದರೂ ಆಗಬಹುದು. ಎಡ ಚಿಂತನೆಯೆಂಬುದು ಒಂದು ಮೂಲಭೂತ ಸಾಮಾಜಿಕ ವಿಚಾರವಾಗಿದ್ದು ಅದು ತಾತ್ಕಾಲಿಕ ಒತ್ತಡಗಳಿಂದಾಗಿ ತನ್ನ ಸ್ವರೂಪವನ್ನು ಬದಲಿಸಿಕೊಳ್ಳುವಂಥದಲ್ಲ ಎಂದು ಹೇಳಬೇಕಾಗಬಹುದು. ಕನ್ನಡ ಸಾಹಿತ್ಯ ವಲಯದ ಇಂದಿನ ಸ್ತಬ್ಧತೆಗೆ ಭಾರತೀಯ ಎಡಚಿಂತನೆಗಳ ದೌರ್ಬಲ್ಯವಂತೂ ಕಾರಣವಾಗಿರಲಾರದು.

೩. ವಿದ್ಯುನ್ಮಾನ ಮಾಧ್ಯಮಗಳು ಮತ್ತು ಅವುಗಳ ಬಹುರೂಪೀ ವ್ಯಾಪಾರಗಳು ಸಾಹಿತ್ಯ, ಸಂಗೀತ ಮುಂತಾದ ಸಾತ್ವಿಕ ಕಲೆಗಳ ಅಭಿವ್ಯಕ್ತಿ ವಿಧಾನಗಳ ಮೇಲೆ ಅತ್ಯಂತ ಕೆಟ್ಟ ಪರಿಣಾಮವನ್ನೇ ಉಂಟುಮಾಡುತ್ತಿವೆ ಎಂದು ಹೇಳಬಹುದು. ಸಾಮಾಜಿಕರ ಮನಸ್ಸುಗಳನ್ನು ಉದ್ರಿಕ್ತ ಸ್ಥಿತಿಗೆ ತಂದು ತನ್ಮೂಲಕ ಮಿತಿ ಮೀರಿದ ಹಣ ಸಂಪಾದನೆಯ ಒಂದು ಅನಾರೋಗ್ಯಕರ ಚಟುವಟಿಕೆಗೆ ಈ ಮಾಧ್ಯಮಗಳು ದಾರಿ ಮಾಡಿಕೊಟ್ಟಿವೆ. ಎಡಚಿಂತನೆಯನ್ನು ಮುಕ್ತಗ್ರಹಿಕೆಯಾಗಿ ರೂಪಿಸುವುದು ಮತ್ತು - ಎಡ ಚಿಂತನೆಯ ದೌರ್ಬಲ್ಯ ಮೊದಲಾದ ಮಾತುಗಳಿಗೂ ಈ ಹಣಗಳಿಕೆಯ ಬಹುಮುಖೀ ಆವಿಷ್ಕಾರಗಳಿಗೂ ಸಂಬಂಧವಿಲ್ಲವೇ? ಅದನ್ನೂ ನಾವು ಗಣನೆಗೆ ತೆಗೆದುಕೊಳ್ಳುವುದು ಒಳ್ಳೆಯದು.

೪. ವಿಶ್ವಗ್ರಾಮ, ಕಾಲದೇಶಗಳ ಪರಿಕಲ್ಪನೆ ಇತ್ಯಾದಿ ಮಾತುಗಳ ಅರ್ಥ ನನಗಂತೂ ಸ್ಪಷ್ಟವಾಗಿಲ್ಲ. ಜಗತ್ತು ಹಲವು ಶಕ್ತಿಗಳ ಸಂಯೋಗದಿಂದ ಚಿಕ್ಕದಾಗಿರಬಹುದಾದರೂ ಅದರಲ್ಲಿ ಗ್ರಾಮ ಸಂಸ್ಕೃತಿ ಪ್ರಾಧಾನ್ಯವನ್ನು ಪಡೆಯುವುದು ದೂರದ ಮಾತು. ಸದ್ಯಕ್ಕಂತೂ ನಮ್ಮ ಸಂಸ್ಕೃತಿ ವಿಶ್ವನಗರ ಸಂಸ್ಕೃತಿಯಾಗಿ ರೂಪುಗೊಳ್ಳುತ್ತಿರುವಂತೆ ಕಾಣುತ್ತಿದೆ. ಕನ್ನಡ ಸಾಹಿತ್ಯ ಕ್ಷೇತ್ರದ ಯಾವ ಪ್ರಮುಖರೂ ಈ ಪರಿಕಲ್ಪನೆಯಿಂದ ಬಾಧಿಸಲ್ಪಡುತ್ತಿರುವಂತೆ ನನಗೆ ಕಂಡಿಲ್ಲ.

೫. ಚಾಪ್ಲಿನ್ ಮತ್ತು ಬ್ರೆಕ್ಟ್‌ರಂತಹ ಶ್ರೇಷ್ಠ ಕಲಾವಿದರನ್ನು ರೂಪಿಸಿದ್ದು ಎಡಚಿಂತನೆಯ ತತ್ವಗಳು ಮತ್ತು ಅವರುಗಳ ತತ್ವಬದ್ಧತೆ ಎನ್ನುವುದಾದರೆ ಇಂದು ಅಂತಹ ಪ್ರತಿಭೆಗಳು

ಕಾಣಿಸದೆ ಇರುವುದಕ್ಕೆ ಎಡ ಚಿಂತನೆಗಳ ದೌರ್ಬಲ್ಯ (ಅಥವಾ ಕ್ರಮೇಣ ಪ್ರಾಪ್ತವಾದ ದೌರ್ಬಲ್ಯ) ಕಾರಣ ಎನ್ನಬಹುದೇ? ನನ್ನ ಪ್ರಶ್ನೆಯ ಅರ್ಥ ಅವರ ಕಾಲದ ಎಡ ಚಿಂತನೆಗೆ ಈ ದೌರ್ಬಲ್ಯ ಇರಲಿಲ್ಲವೇ? ಎಂದು. ಅಂದರೆ ನನ್ನ ಅಭಿಪ್ರಾಯ ದಲಿತ ಮತ್ತು ಬಂಡಾಯ ಚಳುವಳಿಗಳ ನಿಲುಗಡೆಯ ಸ್ಥಿತಿಗೆ ಅಥವಾ ಕನ್ನಡ ಸಾಹಿತ್ಯ ವಲಯದ ಸ್ತಬ್ಧ ವಾತಾವರಣಕ್ಕೆ ಎಡಚಿಂತನೆ ಯಾವ ರೀತಿಯಲ್ಲೂ ಕಾರಣವಲ್ಲ. ದಲಿತ ಮತ್ತು ಬಂಡಾಯ ಚಳುವಳಿಗಳ ಆಂತರಿಕ ಒತ್ತಡದ ಅಭಾವ ಅಥವಾ ಸಮಗ್ರ ದೃಷ್ಟಿ ಇಲ್ಲದ ಅವುಗಳ ಸೀಮಿತ ಕಾರ್ಯಕ್ರಮ ಈ ಚಳುವಳಿಗಳ ಇಂದಿನ ಸ್ಥಿತಿಗೆ ಕಾರಣ ಎನಿಸುತ್ತದೆ. ಉದಾಹರಣೆಗೆ ದಲಿತ ನಾಯಕರಿಗಾಗಲೀ ಬಂಡಾಯ ಚಳುವಳಿಯ ಪ್ರಧಾನರಿಗಾಗಲೀ ಭುಗಿಲೆದ್ದಿರುವ ಗ್ರಾಮೀಣ ರೈತರ ಸಮಸ್ಯೆಗಳು ಉತ್ತರಿಸಬೇಕಾದ ಸಮಸ್ಯೆಗಳು ಎಂದೆನಿಸಿವೆಯೇ?

ಕನ್ನಡ ಸಾಹಿತ್ಯ ಕ್ಷೇತ್ರದ ಸ್ತಬ್ಧತೆಗೂ ಇಂತಹ ಆಂತರಿಕ ದೌರ್ಬಲ್ಯ ಅಥವಾ ಮುಂಚೂಣಿಯ ಸಾಹಿತಿಗಳ ವ್ಯಕ್ತಿತ್ವದ ದೌರ್ಬಲ್ಯ ಕಾರಣವಿರಬಹುದು.

❏

✚ ಎಚ್.ಜಿ. ಸಣ್ಣಗುಡ್ಡಯ್ಯ, ೧ನೇ ಎ ಅಡ್ಡರಸ್ತೆ, ಸಿದ್ಧಗಂಗಾ ಬಡಾವಣೆ,
ತುಮಕೂರು-೫೭೨ ೧೦೧.

'ದಲಿತ/ಬಂಡಾಯದ ಸ್ಥಿತಿಗೆ ಸ್ಥಳೀಯ ಕಾರಣ ಹುಡುಕಿ'

- ಸಿ. ಎನ್. ರಾಮಚಂದ್ರನ್

೧. ಕನ್ನಡ ಸಾಹಿತ್ಯವಲಯದಲ್ಲಿ ಒಂದು ಸ್ತಬ್ಧ ವಾತಾವರಣ ಆವರಿಸಿಕೊಂಡಿದೆ ಎಂಬ ನಿಮ್ಮ ಹೇಳಿಕೆಯೇ ಪ್ರಶ್ನಾರ್ಹ. ಕಳೆದೈದು ವರ್ಷಗಳ ಅವಧಿಯನ್ನೇ ತೆಗೆದುಕೊಂಡರೂ, ಗಮನೀಯ ಸಂಖ್ಯೆಯಲ್ಲಿ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಉತ್ತಮ ಕೃತಿಗಳು ರಚಿಸಲ್ಪಟ್ಟಿವೆ; ಅರ್ಥಪೂರ್ಣ ವಿಚಾರ ಸಂಕಿರಣಗಳು, ಕಮ್ಮಟಗಳು ನಡೆದಿವೆ. ಅನೇಕ ವಿ.ವಿ. ಗಳು ಮತ್ತು ಅಕಾಡೆಮಿಗಳು ಅನುಕರಣೀಯ ಕಾರ್ಯಗಳನ್ನು ಮಾಡುತ್ತಿವೆ. ಇಂತಹ ವಾತಾವರಣ ಸ್ತಬ್ಧ ಹೇಗಾಗುತ್ತದೆ?

ನಿಮ್ಮ ಪ್ರಶ್ನೆ ದಲಿತ ಬಂಡಾಯ ಚಳುವಳಿಗೆ ಸಂಬಂಧಿಸಿದ್ದರೆ, ಯಾವ ಚಳುವಳಿಯೂ ಪ್ರಾರಂಭದ ಉತ್ಸಾಹ-ಗತಿಯನ್ನು ಒಂದು ಘಟ್ಟದ ನಂತರ ಉಳಿಸಿಕೊಳ್ಳಲು ಸಾಧ್ಯವಿಲ್ಲ.

೨. ಈ ಪ್ರಶ್ನೆಯೂ ಅನೇಕ ಚರ್ಚಾಸ್ಪದ ಗೃಹೀತಗಳಿಂದ ಕೂಡಿದೆ. ದಲಿತ ಬಂಡಾಯ ಚಳುವಳಿಯು ನಿಲುಗಡೆಗೆ ಬಂದಿಲ್ಲ-ಮೊದಲಿನ ಆವೇಶ ಕಮ್ಮಿಯಾಗಿದೆ, ಅಷ್ಟೇ. ಭಾರತೀಯ ಎಡ ಚಿಂತನಾ ಮಾರ್ಗಗಳು 'ದುರ್ಬಲ' ಎಂದು ನಾನೊಪ್ಪಲಾರೆ. ಒಂದು ಘಟ್ಟದಲ್ಲಿ ಕೇವಲ ರಷ್ಯಾದ ನೆರಳಾಗಿದ್ದ ಭಾರತದ ಎಡಚಿಂತನೆ ಅನಂತರ ತನ್ನದೇ ಭಿನ್ನವಾದ, ಭಾರತೀಯವೆನ್ನಬಹುದಾದ, ಚಿಂತನಾ ಮಾರ್ಗವನ್ನು ಬೆಳೆಸಿಕೊಂಡಿತು ; ಮತ್ತು, ಒಂದಲ್ಲ ಒಂದು ಬಗೆಯ ಎಡ ಚಿಂತನೆ ಭಾರತದಲ್ಲಿ ರಾಷ್ಟ್ರೀಯ ನೆಲೆಯ ಪ್ರಗತಿಶೀಲ ಚಳುವಳಿಯ ಕಾಲದಿಂದಲೂ ಕ್ರಿಯಾಶೀಲವಾಗಿದೆ.

ದಲಿತ ಬಂಡಾಯ ಚಳುವಳಿಯ ಇಂದಿನ ಸ್ಥಿತಿಗೆ (ಸರಿಯಾದ ನಾಯಕತ್ವದ ಅಭಾವ, ವೈಚಾರಿಕ ಗೊಂದಲ, ಇತ್ಯಾದಿ) ಸ್ಥಳೀಯ ಕಾರಣಗಳನ್ನು ಹುಡುಕಬೇಕು.

೩. ಒಟ್ಟಾರೆಯಾಗಿ ಕನ್ನಡ / ಭಾರತೀಯ ಸಮಾಜದ ಮೇಲೆ, ಟಿ.ವಿ. ಕಂಪ್ಯೂಟರ್ ಜಾಲ ಅಷ್ಟೇನೂ ಋಣಾತ್ಮಕ / ಧನಾತ್ಮಕ ಪರಿಣಾಮವನ್ನು ಬೀರಿದೆಯೆಂದು ನನಗೆ ತೋರುವುದಿಲ್ಲ. 'ಈ ಜಾಲದಿಂದ ನಮ್ಮ ಸಂಸ್ಕೃತಿಗೆ / ಸಾಹಿತ್ಯಕ್ಕೆ ದಕ್ಕೆಯಾಗುತ್ತಿದೆ' ಎಂದು ಕೇವಲ ನಗರವಾಸಿ, ಮಧ್ಯಮ ವರ್ಗದ, 'ಬಿಳಿಯ ಕಾಲರ್' ಜನಗಳು ಭಾವಿಸುತ್ತಾರೆ; ಮತ್ತು ಇಂತಹ ವರ್ಗ ಎಂದೂ ಬಹುಜನ ಸಮುದಾಯಕ್ಕೆ ಸ್ಪಂದಿಸಿದವರಲ್ಲ.

ಹಾಗೆ ನೋಡಿದರೆ, ಟಿ.ವಿ. / ಕಂಪ್ಯೂಟರ್ ಜಾಲ ಬಹುಜನ ಸಮುದಾಯದ ಬಹುಮುಖೀ ಸಂಸ್ಕೃತಿಯನ್ನು ಅಲ್ಪ ಪ್ರಮಾಣದಲ್ಲಿಯಾದರೂ ಬೆಳೆಸುತ್ತಿದೆ:

ಅಕ್ಷರಜ್ಞಾನವಿಲ್ಲದವರಿಗೂ ದೃಶ್ಯಮಾಧ್ಯಮದ ಮೂಲಕ ಟಿ.ವಿ., ಮತ್ತು ತನ್ನ ವೈವಿಧ್ಯಮಯ ವೆಬ್‌ಸೈಟ್‌ಗಳ ಮೂಲಕ ಕಂಪ್ಯೂಟರ್.

೪. ಈ ಪ್ರಶ್ನೆಯ ಗೃಹೀತಕ್ಕೆ (ವಿಶ್ವ ಗ್ರಾಮದ ಪರಿಕಲ್ಪನೆಯಿಂದ ಕಾಲ-ದೇಶಗಳು ಬದಲಾಗುತ್ತಿವೆ) ಎರಡು ಬಗೆಯ ಉತ್ತರಗಳು ಸಾಧ್ಯ : ಅಹುದು ಮತ್ತು ಅಲ್ಲ. ನಿಜ, ಇಂದು ಹಳ್ಳಿ ಹಳ್ಳಿಗಳ ಸಾಮಾನ್ಯ ಪ್ರಜೆಗೂ, ಪರೋಕ್ಷವಾಗಿ ಐ.ಎಂ.ಎಫ್ / ಜಾಗತೀಕರಣ ಇತ್ಯಾದಿಗಳ ಪ್ರಭಾವದ ಅನುಭವವಾಗುತ್ತಿದೆ. ಆದರೆ, ಸಾಮಾನ್ಯ ಭಾರತೀಯನ ಜೀವನ ಕ್ರಮ ಹಾಗೂ ಜೀವನ ದೃಷ್ಟಿಯೇನೂ ಮೂಲಭೂತವಾಗಿ ಬದಲಾಗಿಲ್ಲ. ಆದ್ದರಿಂದ, ಈ ಪರಿಕಲ್ಪನೆ ಕನ್ನಡ ಸಾಹಿತ್ಯವನ್ನು ಅಷ್ಟಾಗಿ ಪ್ರವೇಶಿಸಿಲ್ಲ.

ಅಲ್ಲದೆ, ಇಂತಹುದೇ ವಿಷಯಗಳನ್ನು / ಪರಿಕಲ್ಪನೆಯನ್ನು ಸಾಹಿತ್ಯ ನಿರ್ವಹಿಸಬೇಕೆಂದು ಅಪೇಕ್ಷಿಸುವುದೂ ಅಷ್ಟೇನೂ ಉಚಿತವಲ್ಲ, ಅಲ್ಲವೆ?

೫. ಚಾಪ್ಲಿನ್, ಬ್ರೆಖ್ಟ್, ಪ್ರೇಮ್‌ಚಂದ್ ಮುಂತಾದವರನ್ನು ಎಡಚಿಂತನೆಗಳ ತತ್ವಬದ್ಧತೆ ರೂಪಿಸಿತು ಎಂಬ ಗ್ರಹಿಕೆ ಚರ್ಚಾಸ್ಪದ. ವ್ಯಕ್ತಿಗಳಾಗಿ ಇವರುಗಳು ಎಡಚಿಂತನೆಯನ್ನು ಒಪ್ಪಿಕೊಂಡಿದ್ದರು ಎಂಬುದು ನಿಜ. ಆದರೆ, ಚಾಪ್ಲಿನ್‌ನ 'ಲೈಮ್‌ಲೈಟ್' ಮತ್ತು 'ದ ಗ್ರೇಟ್ ಡಿಕ್ಟೇಟರ್', ಬ್ರೆಖ್ಟ್‌ನ 'ಕಕೇಶಿಯನ್ ಚಾಕ್ ಸರ್ಕಲ್', ಪ್ರೇಮ್‌ಚಂದ್ ಅವರ "ಗೋದಾನ್" ಮತ್ತು "ಕರ್ಮಭೂಮಿ" ಇತ್ಯಾದಿ ಕೃತಿಗಳು ಯಾವ ತಾತ್ವಿಕಚಿಂತನೆಗೂ ಬದ್ಧವಾಗಿಲ್ಲ. ಇವರೆಲ್ಲರೂ ತಮ್ಮತಮ್ಮ ಸೃಜನಶೀಲ ಪ್ರತಿಭೆಗೆ ಮಾತ್ರ ಬದ್ಧರಾಗಿದ್ದರು.

ಆದ್ದರಿಂದ, 'ಎಡಚಿಂತನೆಗಳ ತತ್ವಬದ್ಧತೆಯ ಪ್ರಸ್ತುತತೆ'ಯ ಪ್ರಶ್ನೆ ಏಳುವುದಿಲ್ಲ.

❑

✚ **ಸಿ. ಎನ್. ರಾಮಚಂದ್ರನ್**, ೦೦೫, ಪ್ರೇಮಸಾಗರ್ ಅಪಾರ್ಟ್‌ಮೆಂಟ್ಸ್,
ಮಣ್ಣಗುಡ್ಡ, ಮಂಗಳೂರು - ೫೭೫ ೦೦೩.

ಆರ್ಭಟದ ಅತಿಭಾರಕ್ಕೆ ಸೃಜನಶೀಲ ಅಭಿವ್ಯಕ್ತಿ ಬಲಿ!

- ಆರ್. ನಿರ್ಮಲ

೧. ಕನ್ನಡ ಸಾಹಿತ್ಯ ವಲಯದಲ್ಲಿ ನಿಷ್ಕ್ರಿಯವಾದ ಗಾಢಮೌನ ಆವರಿಸಿ ಕೊಂಡಿರುವುದಂತೂ ನಿಜ. ಕೆಲವು ಔಪಚಾರಿಕವಾದ ವಿಚಾರ ಸಂಕಿರಣಗಳು, ಅಲ್ಲಲ್ಲಿ ಸಾಂದರ್ಭಿಕವಾಗಿ ನಡೆಯುವ ಚರ್ಚೆಗಳನ್ನು ಬಿಟ್ಟರೆ, ಉಳಿದಂತೆ ಸಾಹಿತ್ಯವಲಯವೇ ಸ್ಥಗಿತವಾದಂತೆ ಕಾಣುತ್ತದೆ.

೬೦-೭೦-೮೦ ರ ದಶಕದವರೆಗೂ ಸಾಹಿತಿಗಳನ್ನೂ, ಸಾಹಿತ್ಯಾಸಕ್ತರನ್ನೂ ಗಂಭೀರವಾದ ಸಂವಾದಗಳಿಗೆ, ವಾಗ್ವಾದಗಳಿಗೆ ಪ್ರಚೋದನೆ ನೀಡುತ್ತಿದ್ದ ವಾತಾವರಣ ಈಗ ಇಲ್ಲ. ಇದಕ್ಕೆ ಕಾರಣಗಳೇನು ಎಂಬುದನ್ನು ಗುರುತಿಸಲಾರದಷ್ಟು ಗೊಂದಲ ಉಂಟಾಗಿದೆ. ಈ ಗೊಂದಲಗಳನ್ನು ಎಲ್ಲಾ ಕಲಾಕ್ಷೇತ್ರಗಳಲ್ಲೂ ಮತ್ತು ಸಾಂಸ್ಕೃತಿಕ ವಲಯದಲ್ಲೂ ನಾವು ಗುರುತಿಸಬಹುದಾಗಿದೆ. ಇದಕ್ಕೆ ಸಾರಾಸಗಟಾಗಿ ಜಾಗತೀಕರಣ ಉದಾರೀಕರಣ ವ್ಯಾಪಾರೀಕರಣದ ಪರಿಸ್ಥಿತಿಯೇ ಕಾರಣವೆಂದು ಅನೇಕರು ಹೇಳುತ್ತಾರೆ. ಇದೊಂದು ಸರಳವಾದ ವ್ಯಾಖ್ಯಾನ. ಇದನ್ನೂ ಮೀರಿದ ಅನ್ಯ ಕಾರಣಗಳನ್ನು ನಾವು ಗುರುತಿಸಬೇಕಾಗಿದೆ.

ನವೋದಯ ಕಾಲದ ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ, ಪು.ತಿ.ನ. ಇಂಥ ಅನನ್ಯ ಕಾವ್ಯ ಪರಂಪರೆಯೊಂದನ್ನು ನಿರ್ಮಿಸಿದ ಸಾಂಸ್ಕೃತಿಕ ವಾತಾವರಣ, ನವ್ಯ ಕಾವ್ಯದ ಸ್ಥಿತ್ಯಂತರದಿಂದ ಬದಲಾಗಿ ಹೋಯಿತು. ಗೋಪಾಲಕೃಷ್ಣ ಅಡಿಗ, ಯು.ಆರ್. ಅನಂತಮೂರ್ತಿಯಂತಹ ವಿಶಿಷ್ಟ ಲೇಖಕರನ್ನು ರೂಪಿಸಿದರೂ, ವ್ಯಕ್ತಿನಿಷ್ಠತೆಯ ವಿದ್ಯಮಾನಗಳಿಂದ ಹೊಸ ಸಂವಾದಗಳು ವಾಗ್ವಾದಗಳು ಸೃಷ್ಟಿಯಾದರೂ ಅದು ಒಟ್ಟಾರೆಯ ಸಮಷ್ಟಿ ಪ್ರಜ್ಞೆಯಾಗಿ ರೂಪಿತವಾಗದೆ ಸೀಮಿತವಾದ ಅತಿಬೌದ್ಧಿಕತೆಗೆ ಬದ್ಧವಾಯಿತು. ಪ್ರಾಯಶಃ ಇಲ್ಲಿಂದಲೇ ಸಾಹಿತ್ಯ ಕ್ಷೇತ್ರದ ಗೊಂದಲಗಳು, ಚರ್ವಿತ ಚರ್ವಣಗಳು ಏಕತಾನತೆಯಾಗಿ ತನ್ನ ಬಹುರೂಪಿ ಸ್ವರೂಪವನ್ನು ಸಮಷ್ಟಿ ಪ್ರಜ್ಞೆಯನ್ನು ಅವಸಾನದ ಸ್ಥಿತಿಗೆ ತಂದಿರಲು ಕಾರಣವಾಗಿರಬಹುದು ಎಂದು ನನಗೆ ಅನಿಸುತ್ತದೆ.

ಈ ಸೀಮಿತ ವಲಯವನ್ನು ಹಠದಿಂದಲೇ ದಾಟಲು ಪ್ರಯತ್ನಿಸಿದ ಲಂಕೇಶ್, ತೇಜಸ್ವಿಯಂತಹ ಪ್ರತಿಭಾಶಾಲಿಗಳು ಹೊಸ ಪರ್ಯಾಯವೊಂದನ್ನು ಸಾಹಿತ್ಯ ಪ್ರಜ್ಞೆಯಾಗಿ ಮತ್ತು ಸೃಜನಶೀಲ ಪ್ರಚೋದನೆಯಾಗಿ ಪರಿವರ್ತಿಸಲು ಪ್ರಯತ್ನ ಮಾಡಿದರೂ ಅವರೂ ಕೂಡ ವಿಶಾಲವಾದ ಸಮಷ್ಟಿಪ್ರಜ್ಞೆಯ ಹೊಸ ರೂಪವೊಂದನ್ನು ಅಮೂರ್ತತೆಯಲ್ಲಿಯೇ ಉಳಿಸಿಬಿಟ್ಟರು.

ಬಂಡಾಯ ದಲಿತ ಚಳುವಳಿಗಳು ಬರೆಯುವವರ ಮತ್ತು ನಿಸ್ಸಂಕೋಚವಾಗಿ ಸಂವಾದಿಸುವವರ ಸಂಖ್ಯೆಯನ್ನು ವಿಸ್ತರಿಸಿತು. ದೇವನೂರ ಮಹಾದೇವ, ಕವಿ ಡಾ॥ ಸಿದ್ಧಲಿಂಗಯ್ಯ ಅನನ್ಯ ಮಾದರಿಯೊಂದನ್ನು ಇಟ್ಟುಕೊಂಡು ನಿಸ್ಸಂಕೋಚವಾಗಿ ಬರೆಯುವ ಸಂವಾದಿಸುವ ಸಾಮಾಜಿಕ ಕೆಳಸ್ತರದ ಲೇಖಕರನ್ನು ಸೃಷ್ಟಿಸಿದರು. ಈ ವಿಸ್ತರಣೆಯೂ ಕೂಡ ಆರ್ಭಟದ ಘೋಷಣಾಮಯವಾದ ಸಾಮಾಜಿಕತೆಯ ಅತಿ ಭಾರದಿಂದ ಕುಸಿದು ಹೋದಂತೆ ಕಾಣುತ್ತದೆ. ಒಟ್ಟಾರೆಯಾಗಿ ಸಾಹಿತ್ಯ ಕ್ಷೇತ್ರದ ಈ ಅಂತರ್ವೈರುಧ್ಯಗಳಿಂದ ಮತ್ತು ಗೊಂದಲಮಯವಾದ ತರ್ಕಗಳಿಂದ ಜೀವನಾನುಭವದ ಸೃಜನಶೀಲತೆಯ ಅಭಿವ್ಯಕ್ತಿಯೇ ಬಲಿಯಾದಂತೆ ಕಾಣುತ್ತದೆ.

೨. ಘೋಷಿಸಲ್ಪಟ್ಟ ಸೈದ್ಧಾಂತಿಕ ಉದ್ಗಾರಗಳೇ ಬಂಡಾಯ ದಲಿತ ಚಳುವಳಿಗಳು ನಿಷ್ಕ್ರಿಯವಾಗಲು ಕಾರಣವೆಂದು ನಾನು ತಿಳಿದಿದ್ದೇನೆ. ಮಾತು ಮತ್ತು ಕ್ರಿಯೆಯ ನಡುವಿನ ಅಂತರ ಹೆಚ್ಚಾದಂತೆಲ್ಲ ಮಾತು ಅರ್ಥ ಕಳೆದುಕೊಳ್ಳುತ್ತ, ಅಸಂಬದ್ಧವಾಗುತ್ತ ಕೇವಲ ಘೋಷಣೆ ಮಾತ್ರವಾಗಿ ಉಳಿದು ಬಿಡುವ ಅಪಾಯದಿಂದ ಪಾರಾಗಲು ಬಂಡಾಯ ದಲಿತ ಚಳುವಳಿಗಳು ಪ್ರಯತ್ನಿಸಿದಂತೆ ಕಾಣುವುದಿಲ್ಲ. ಈ ಸೈದ್ಧಾಂತಿಕ ತರ್ಕ ಮತ್ತು ವೈರುಧ್ಯಗಳಿಂದ ಅದು ಬಳಲಿ ಏಕತಾನವಾದಂತೆ ಕಾಣುತ್ತದೆ. ಭಾರತೀಯ ಎಡಚಿಂತನೆಗಳ ದೌರ್ಬಲ್ಯವೂ ಇದೇ ಆಗಿರಬಹುದು. ಆದ್ದರಿಂದ ಸಾಹಿತ್ಯ ಜೀವನಾನುಭವದ ಮುಕ್ತ ಅನ್ವೇಷಣೆ ಮತ್ತು ಅದಕ್ಕೆ ಅನುಗುಣವಾದ ಅಭಿವ್ಯಕ್ತಿಯನ್ನು ಕಂಡುಕೊಳ್ಳುವುದು ಮುಖ್ಯವಾದದ್ದು. ಅದೇ ರೀತಿ ಮಾನವತೆಗೆ ಸ್ಪಂದಿಸುವ ಅರ್ಥಪೂರ್ಣತೆಯನ್ನು ಕಂಡುಕೊಳ್ಳುವುದು ಸಾಹಿತ್ಯ ಸಂವೇದನೆಯ ಹೊಣೆಗಾರಿಕೆಯಾಗಿದೆ ಎನ್ನುವುದು ನನ್ನ ಗ್ರಹಿಕೆ. ಇಂತಹ ಸಂವೇದನೆಯ ಕೊರತೆಯ ಪರಿಣಾಮ ಮತ್ತು ನೀವು ಪ್ರಸ್ತಾಪಿಸಿದ ಭಾರತೀಯ ಎಡಚಿಂತನೆಯ ವೈರುಧ್ಯಗಳಿಗೂ ಸಂಬಂಧವಿದೆಯೆಂದು ನಾನು ಭಾವಿಸಿದ್ದೇನೆ. ಆದ್ದರಿಂದಲೇ ಸಾಹಿತ್ಯದ ವಿದ್ಯಮಾನಗಳಲ್ಲಿ ಈ ರೀತಿಯ ಸ್ತಬ್ಧ ವಾತಾವರಣ ನಿರ್ಮಾಣವಾಗಿರಬಹುದು. ಸಾಹಿತ್ಯದ ಸ್ವರೂಪಗಳಲ್ಲೂ ಈ ಗೊಂದಲಗಳು ಮೂರ್ತವಾಗಿರಬಹುದು.

೩. ಈಗ ಜಾಗತೀಕರಣದಿಂದ ಮೂರ್ತವಾಗಿರುವ ವಿದ್ಯುನ್ಮಾನ ಮಾಧ್ಯಮಗಳು ಸಮಷ್ಟಿ ಪ್ರಜ್ಞೆಗೆ ಹೊರತಾದ ವ್ಯಾಪಾರೀಕರಣದ ಸಾಂಸ್ಕೃತಿಕ ಜಾಲವೊಂದನ್ನು ಸೃಷ್ಟಿಸಿಬಿಟ್ಟಿದೆ. ಬಹುಮುಖಿಯಾದ ಸಾಂಸ್ಕೃತಿಕ ಅಭಿವ್ಯಕ್ತಿಯ ವಿಧಾನಗಳನ್ನು ಶ್ವೇತ ಸಂಸ್ಕೃತಿಯ ಸ್ವರೂಪವೊಂದು ನಮ್ಮ ಮನೆಗಳಲ್ಲಿ ಮೂರ್ತಗೊಳಿಸಿದೆ. ಆದ್ದರಿಂದಲೇ ನಮ್ಮ ಜೀವನಾನುಭವದ ವಿಸ್ತಾರವಾದ ಅನುಭವ ದ್ರವ್ಯಗಳನ್ನು ಬಹುಮುಖಿ ಕೇಂದ್ರದಿಂದ ಪಲ್ಲಟಿಸಿ ಏಕಮುಖಿ ಕೇಂದ್ರದ ಕಡೆಗೆ ಚಲಿಸುವಂತೆ ಯಾಂತ್ರಿಕ ಒತ್ತಡವನ್ನು ನಿರ್ಮಿಸಿಬಿಟ್ಟಿವೆ. ಆದ್ದರಿಂದಲೇ ಸಾಹಿತ್ಯ ಮತ್ತು ಕಲಾಮಾಧ್ಯಮಗಳ ಜೀವನಾನುಭವದ ಅನ್ವೇಷಣೆಗಳನ್ನು ಸ್ಥಗಿತಗೊಳಿಸಿದೆ. ಇದು ಅತ್ಯಂತ ಅಪಾಯಕಾರಿಯಾದ ಸಾಂಸ್ಕೃತಿಕ ಬಿಕ್ಕಟ್ಟು ಮತ್ತು ಸೃಜನಶೀಲತೆಯ ಇಕ್ಕಟ್ಟು ಆಗಿದೆ. ನಮ್ಮ ಸಾಂಸ್ಕೃತಿಕವಾದ ಬೇರುಗಳು ನಮ್ಮ ಶಿಕ್ಷಣ ವಿಧಾನದಲ್ಲೇ ಬುಡ ಮೇಲಾಗುತ್ತಿರುವುದರಿಂದ ಅದರ ಪರಿಣಾಮಗಳನ್ನು ನಾವು ಗಂಭೀರವಾಗಿ ಗ್ರಹಿಸಿದಂತೆ ಕಾಣುವುದಿಲ್ಲ. ನಮ್ಮ ಸಾಂಸ್ಕೃತಿಕ,

ಸಾಹಿತ್ಯಕ ಮತ್ತು ಕಲಾಕ್ಷೇತ್ರಗಳ ಔಪಚಾರಿಕ ವಿದ್ಯಮಾನಗಳಲ್ಲಿ ನಾವಿದನ್ನು ಗುರುತಿಸಬಹುದು.

೪. ವಿಶ್ವಗ್ರಾಮದ ಪರಿಕಲ್ಪನೆಯೇ ಹುಸಿಯಾದದ್ದು. ಅದು ಕೇವಲ ವ್ಯಾಪಾರೀಕರಣದ ವಿದ್ಯಮಾನಗಳಿಂದ ಸೃಷ್ಟಿಯಾದದ್ದು. ಈ ಭ್ರಮಾತ್ಮಕತೆಯನ್ನೇ ವಾಸ್ತವ ಎಂದು ಗ್ರಹಿಸಿದರೆ ನಮ್ಮ ಸೃಜನಶೀಲತೆಯ ತಾಯಿಬೇರನ್ನೇ ಕಳೆದುಕೊಳ್ಳಬೇಕಾಗುತ್ತದೆ. ವಿಶ್ವಗ್ರಾಮದ ಪರಿಕಲ್ಪನೆ ಮಾನವೀಯ ಅನುಭವವಾಗಿ ಮೂರ್ತವಾದರೆ ಅದರಿಂದ ನಮ್ಮ ಸಾಹಿತ್ಯದ ಮೇಲೆ, ಸಂಸ್ಕೃತಿಯ ಮೇಲೆ ಗುಣಾತ್ಮಕ ಪರಿಣಾಮವಾಗಬಹುದು. ಕೇವಲ ವ್ಯಾಪಾರೀಕರಣದ ಆರ್ಥಿಕ ಪ್ರಲೋಭನೆಯಿಂದ ನಿರ್ಮಿತವಾಗಿರುವ ವಿಶ್ವಗ್ರಾಮ ಪರಿಕಲ್ಪನೆ ಯಾಂತ್ರಿಕವಾದದ್ದು. ಮಾನವೀಯ ಸಂವೇದನೆಗಳಿಗೆ ಅಪಾಯಕಾರಿಯಾದದ್ದು. ಆದ್ದರಿಂದ ಅದು ನಮ್ಮ ಸಾಹಿತ್ಯದ ಚಲನೆಯನ್ನೂ ವ್ಯಾಪಾರೀಕರಣಕ್ಕೆ ತುಡಿಯುವಂತೆ ಮಾಡಿಬಿಡಬಹುದು.

೫. ಚಾಪ್ಲಿನ್ ಮತ್ತು ಬ್ರೆಕ್ಟ್ ಎಡಪಂಥೀಯ ಚಿಂತನೆಗಳಿಂದ ಪ್ರಭಾವಿತರಾದರೂ ಜಗತ್ತಿನ ಶ್ರೇಷ್ಠ ಚಿಂತನಾಶೀಲ ಕಲಾವಿದರಾದ್ದರಿಂದ ತತ್ವಬದ್ಧತೆಯ ಚೌಕಟ್ಟನ್ನು ಮೀರಿ ಮಾನವೀಯ ಸಂವೇದನೆಗಳನ್ನು ಅಭಿವ್ಯಕ್ತಿಸಿದರು. ಎಡಚಿಂತನೆ ಬಲಚಿಂತನೆ ಎನ್ನುವುದು ಕೇವಲ ಕೈಮರವಾಗಿರಬಹುದು. ಈಗಂತೂ ಎಡಚಿಂತನೆ ಬಲಚಿಂತನೆಯ ಪರಿಭಾಷೆಯೇ ಅಸಂಬದ್ಧವಾಗಿ ಕಾಣುತ್ತದೆ. ಶ್ರೇಷ್ಠ ಕಲಾವಿದನಾಗದವನು ಶ್ರೇಷ್ಠ ಚಿಂತಕನೂ ಆಗಲಾರ ಎಂಬುದು ನನ್ನ ಗ್ರಹಿಕೆ.

❑

✦ ಆರ್. ನಿರ್ಮಲ, ೯೮೬, 'ಚಾರ್ವಾಕ' ಪಂಚಮಂತ್ರ ರಸ್ತೆ,
ಕುವೆಂಪು ನಗರ, ಮೈಸೂರು - ೫೭೦ ೦೨೩.

'ಸಿದ್ಧಾಂತಗಳು ಸಾರ್ವಕಾಲಿಕವೆಂಬ ಭ್ರಮೆ ಬೇಡ'

- ಬಿದರಹಳ್ಳಿ ನರಸಿಂಹಮೂರ್ತಿ

೧. ಕನ್ನಡ ಸಾಹಿತ್ಯವಲಯದಲ್ಲಿ ಸ್ತಬ್ಧ ವಾತಾವರಣ ಆವರಿಸಿಕೊಂಡಿದೆ ಎಂದೇನು ನನಗೆ ಭಾಸವಾಗುತ್ತಿಲ್ಲ. ನಗರ ಕೇಂದ್ರಿತವಾಗಿದ್ದ ಸಾಹಿತ್ಯಕ ಚಟುವಟಿಕೆಗಳು ಒಳನಾಡಿಗೆ ನುಗ್ಗಿವೆ ಅಷ್ಟೆ. ಚಳುವಳಿಗಳಿಂದ ದೂರ ನಿಂತೂ ಚಳುವಳಿಗಳ ಸತ್ಯ ಮತ್ತು ಆಶಯಗಳನ್ನು ಹೀರಿಕೊಂಡ ಹೊಸ ಪೀಳಿಗೆಯಿಂದ ಒಳ್ಳೆ ಸಾಹಿತ್ಯ ರಚನೆಯಾಗುತ್ತಲೆ ಇದೆ.

೨. ಯಾವ ಚಳುವಳಿಯೂ ಬದುಕನ್ನು ಸಮಗ್ರವಾಗಿ ಹಿಡಿಯಲು ಸಮರ್ಥವಾಗುವುದಿಲ್ಲ. ಯಾವ ಚಳುವಳಿಯೂ ಒಂದು ನಿರಂತರ ಪ್ರಕ್ರಿಯೆ ಅಲ್ಲ. ಮಾನವ ಪ್ರವಾಹದ ಚಿಂತನೆ ಸ್ಥಗಿತಗೊಳ್ಳದಂತೆ ಆಗೀಗ ಚಳುವಳಿಗಳು ವೇಗ / ವರ್ಧಕದಂತೆ ವರ್ತಿಸುತ್ತವೆ. ಚಳುವಳಿಯೆ ಪ್ರಧಾನವಾದ ಸಾಹಿತ್ಯ ತುಂಬ ತೆಳ್ಳಗಿರುತ್ತದೆ. ಚಳುವಳಿಗಾಗಿಯೆ ಬರೆದದ್ದು ಒಳ್ಳೆ ಘೋಷಣೆ ಯಾದೀತು ಉತ್ತಮ ಸಾಹಿತ್ಯವಾಗಲಾರದು. ಆದರೆ ಉತ್ತಮ ಸಾಹಿತ್ಯದಲ್ಲಿ ಎಲ್ಲ ಚಳುವಳಿಗಳ ಸಾತ್ವಿಕಾಂಶಗಳು ಅಡಗಿರುತ್ತವೆ.

ದಲಿತ ಬಂಡಾಯ ಚಳುವಳಿಗೆ ಸಾಹಿತ್ಯ ಒಂದೇ ಉದ್ದೇಶವಾಗಿರಲಿಲ್ಲ. ಅವಕ್ಕೆ ಇನ್ನೂ ಪ್ರಮುಖವಾದ ಸಾಮಾಜಿಕ ರಾಜಕೀಯ ಉದ್ದೇಶಗಳಿದ್ದವು. ಅವು ಈಗ ಸಾಧಿತವಾಗಿರುವುದು ತಿಳಿದೇ ಇದೆ. ಅವುಗಳ ಉದ್ದೇಶ ಸಾಧನೆಯಾದ ನಂತರ ಅವು ನಿಲುಗಡೆಗೆ ಬರಬೇಕಾದುದೂ, ಮುಂದಿನ ಹೊಸ ಚಳುವಳಿಗಳಲ್ಲಿ ಪರ್ಯವಸಾನವಾಗಬೇಕಾದುದೂ ಸಹಜ ಸಂಗತಿಯೆ.

ಮನುಷ್ಯ ಅನ್ನ ವಸತಿ ಬಟ್ಟೆಗಳಂಥ ಮೂಲಭೂತ ಅವಶ್ಯಕತೆಗಳ ಪೂರೈಕೆಗಳಾದರೆ ಎಲ್ಲ ಬಗೆಯ ಸುಖ ತೃಪ್ತಿ ಪಡೆಯುತ್ತಾನೆ ಎಂಬುದು ಸುಳ್ಳು. ಮನುಷ್ಯ ಮನೋಜೀವಿ. ಮನಸ್ಸಿನ ಹಸಿವು ಅನಂತ ಅವತಾರಗಳನ್ನು ತಾಳುವಂಥದು. ಇದನ್ನು ಕಡೆಗಣಿಸಿದ್ದು ಎಲ್ಲ ಬಗೆಯ ಎಡಚಿಂತನೆಗಳ ಮುಖ್ಯ ದೌರ್ಬಲ್ಯ. ಭೌತಿಕ ಸಿದ್ಧಿಯೆ ಬದುಕನ್ನ ಪೂರ್ಣಗೊಳಿಸುತ್ತದೆ ಎಂಬುದು ಬರಿ ಅರ್ಧಸತ್ಯ. ಭೌತಿಕವಾದವಾಗಿಯೂ ಎಡಚಿಂತನೆಯ ಬುಡ ಅಲುಗಾಡಿದೆ. ನೈಸರ್ಗಿಕ ಸಂಪನ್ಮೂಲಗಳೆಲ್ಲ ಯಾವುದೇ ಕ್ಷಣದಲ್ಲೂ ಮುಗಿದುಹೋಗಬಹುದು ಎಂಬ ಕಲ್ಪನೆಯೆ ಔದ್ಯಮೀಕರಣದ ನಿರಂತರ ಚಕ್ರದ ಕನಸಿಗೆ ಕೊಡಲಿಯೇಟು ಕೊಟ್ಟಿದೆ. ಪ್ರತಿಯೊಂದು ಸಿದ್ಧಾಂತವೂ ಆಯಾ ಯುಗದ ಚಿಂತನಾತ್ಮಕ ಪ್ರಗತಿ ಹಾಗೂ ಭೌತಿಕ ಲೌಕಿಕ ಅವಶ್ಯಕತೆಗಳಿಂದ ಹುಟ್ಟುವಂತೆ ಕಾಣುತ್ತದೆ. ಅವು ಸರ್ವಕಾಲಿಕ ಎಂಬ ಭ್ರಮೆ ಬೇಕಿಲ್ಲ.

೩. ವೇಗ ಸಂಸ್ಕೃತಿ ವಿದ್ಯುನ್ಮಾನ ಮಾಧ್ಯಮ ಜಾಲಗಳು ಬಹುಜನ ಸಮುದಾಯದ ಬದುಕುವ ಹಕ್ಕನ್ನು ಕಸಿದುಕೊಳ್ಳುವುದಾದಲ್ಲಿ ಅವುಗಳ ವಿರುದ್ಧ ಹೋರಾಡಲೇಬೇಕು. ಬಹುಮುಖೀ

ಸಾಂಸ್ಕೃತಿಕ ಸ್ತರಗಳನ್ನು ಅಳಿಸಿಹಾಕುವ ಹುನ್ನಾರು ಅವುಗಳಿಗಿದ್ದಲ್ಲಿ ಅದನ್ನು ಪ್ರತಿಭಟಿಸಲೇಬೇಕು. ಆದರೆ ಪ್ರಗತಿಯನ್ನು ಸಾರಾಸಗಟಾಗಿ ವಿರೋಧಿಸುವುದು ಹುಂಬತನ. ನಾವಿನ್ನೂ ದಡ್ಡರಿದ್ದೇವೆ, ನಮ್ಮ ಬುದ್ಧಿ ಬೆಳೆಯುವವರೆಗೂ ನೀವು ಬುದ್ಧಿವಂತರಾಗಲು ನಾವು ಬಿಡೋದಿಲ್ಲ ಎಂಬುದು ಹಾಸ್ಯಾಸ್ಪದವಾದೀತು. ವೇಗ ಸಂಸ್ಕೃತಿ ಯಾವುದನ್ನೂ ಅಳಿಸಿಹಾಕದಹಾಗೆ ಬಹುಮುಖೀ ಸಂಸ್ಕೃತಿಗಳು, ಪ್ರಗತಿಯು ಜೇಡ ಹೆಣ್ಣದ ಹಾಗೆ, ಅವೆರಡೂ ಸಮರಸದಲ್ಲಿ ಬೆರೆಯುವ ಹಾಗೆ ಮಾಡುವ ಪರ್ಯಾಯ ಚಿಂತನೆ ಇಂದಿನ ಅಗತ್ಯವಾಗಿದೆ.

೪. ಸಾಹಿತ್ಯ ಒಂದು ವಿರಾಟ್ ಶಕ್ತಿ. ಹೋಮರ್, ವರ್ಜಿಲ್, ವ್ಯಾಸ, ವಾಲ್ಮೀಕಿ, ಕಾಳಿದಾಸ, ಷೇಕ್ಸ್‌ಪಿಯರ್, ಟಾಲ್‌ಸ್ಟಾಯ್, ದಾಸ್ತೋವ್‌ಸ್ಕಿ, ಕುವೆಂಪು, ಕಾರಂತ, ಬೇಂದ್ರೆ, ಯೇಟ್ಸ್, ಸಿಂಗರ್, ಮಾರ್ಕ್ವೆಸ್ ಮುಂತಾದವರೆಲ್ಲ ತಮ್ಮ ಕಾಲ-ದೇಶಗಳ ಸಮಗ್ರ ಆಗುಹೋಗುಗಳನ್ನ ತಮ್ಮ ಅಂಗೈನೆಲ್ಲಿ ಮಾಡಿಕೊಂಡು ಸಾಹಿತ್ಯ ರಚಿಸಿದ್ದಾರೆ. ಸಕಲವನ್ನು ಅರಗಿಸಿಕೊಳ್ಳುವ ಶಕ್ತಿ ಸಾಹಿತ್ಯಕ್ಕಿದೆ. ಸದ್ಯ ಸಾಹಿತ್ಯ ಕೊಂಚ ಬರಡಾಗಿದೆ ಎಂದ ಮಾತ್ರಕ್ಕೆ ಮುಂದೂ ಹಾಗೆ ಇರುತ್ತದೆ ಎಂದು ಭಾವಿಸಬೇಕಾಗಿಲ್ಲ. ಸಾಹಿತ್ಯದ ವಿರಾಟ್ ಸ್ವರೂಪದ ವಿಶ್ವಶಕ್ತಿ ಅಭಿವ್ಯಕ್ತಿ ಪಡೆಯಬೇಕಾದರೆ ಮತ್ತೆ ಕಾಲ ಕೂಡಿಬರಬೇಕು. ಆ ಬಗ್ಗೆ ಭರವಸೆ ಕಳೆಕೊಳ್ಳಬೇಕಾಗಿಲ್ಲ. ಪ್ರತಿಭೆಗೆ ಹೊಸ ಹುಟ್ಟು ಇದೆ.

೫. ತತ್ವಬದ್ಧತೆ ಶ್ರೇಷ್ಠ ಕಲಾವಿದರಿಗೆ ಒಂದು ನೆವ, ಅಥವಾ ಒಂದು ತೆಳ್ಳಗಿನ ಚೌಕಟ್ಟು. ಬೇಕೆಂದಾಗ ಅದನ್ನ ಮುರಿಯಲು ಅವರು ತಯಾರಿರುತ್ತಾರೆ. ಚಾಪ್ಲಿನ್, ಬ್ರೆಕ್ಟ್‌ರನ್ನು ರೂಪಿಸಿದ್ದು ಬರಿ ಎಡಚಿಂತನೆಯ ತತ್ವಬದ್ಧತೆ ಮಾತ್ರ ಎಂದು ನಾನು ನಂಬುವುದಿಲ್ಲ. ಅವರು ಕಂಡುಂಡ ಅವರ ಕಾಲ ದೇಶದ ಆಳ ಅಗಲವುಳ್ಳ ಬದುಕು ಅವರನ್ನ ಹಾಗೆ ರೂಪಿಸಿತು. ಮುಖ್ಯವಾಗಿ ಆಳವಾದ ಮಾನವೀಯ ತುಡಿತಗಳು ಅವರನ್ನ ಅಷ್ಟು ಶ್ರೇಷ್ಠ ಕಲಾವಿದರನ್ನಾಗಿ ಮಾಡಿತು. ತತ್ವಬದ್ಧತೆಯಷ್ಟೆ ಕಲಾಮಾಧ್ಯಮದ ಬಗೆಗೂ ತಲೆ ಕೆಡಿಸಿಕೊಂಡವರು ಅವರು. ಆದರೆ ಅವರೆಡಕ್ಕಿಂತ ಅವರಿಗೆ ಮುಖ್ಯವಾದದ್ದು ಬಹುಶಃ ಜೀವಕಾರುಣ್ಯ ಮತ್ತು ಜೀವನಪ್ರೀತಿ.

❑

✦ ಬಿದರಹಳ್ಳಿ ನರಸಿಂಹಮೂರ್ತಿ, 'ಅನಿಮಿಷ', ದುರ್ಗಿಗುಡಿ ಬಡಾವಣೆ,
ಹೊನ್ನಾಳಿ-೫೭೭ ೨೫೭. ದಾವಣಗೆರೆ ಜಿಲ್ಲೆ.

‘ಎಡಚಿಂತನೆಗಳ ಗರಡಿಯಲ್ಲಿ ತಂಗಿ ಪಯಣಿಸಬೇಕು’

- ಮೊಗಳ್ಳಿ ಗಣೇಶ್

೧. ಕನ್ನಡ ಸಾಹಿತ್ಯದ ಸದ್ಯದ ಸಂದರ್ಭವನ್ನು ಅತ್ಯಂತ ಸಂಕೀರ್ಣವಾದ ರೂಪ ವಿರೂಪಗಳ ಸಂಯುಕ್ತ ವಿಕಾಸದ ಸವಾಲಿನ ಸ್ಥಿತಿಯೂ, ಸಾಧ್ಯತೆಯ ಅವಧಿಯೂ ಎಂದು ನಾನು ಭಾವಿಸುತ್ತೇನೆ. ಈ ಶತಮಾನದ ಕೊನೆಯ ಪಲ್ಲಟಗಳು ನೊಂದ ಬಹುಮುಖಿ ಸಮುದಾಯಗಳನ್ನು ಮುಂಚೂಣಿಗೆ ತಡವಾಗಿ ಆಹ್ವಾನಿಸಿ ತಮ್ಮ ಚರಿತ್ರೆಯನ್ನು ವೈಚಾರಿಕವಾಗಿಯೂ ಸಾಂಸ್ಕೃತಿಕವಾಗಿಯೂ ಜೊತೆಯಾಗಿ ನಿರೂಪಿಸಿಕೊಳ್ಳಲು ಕೊಟ್ಟ ಪುಟ್ಟ ಅವಕಾಶ ಕೂಡ ನಮ್ಮ ಸಾಹಿತ್ಯದ ಗೊಂದಲಗಳಿಗೆ ಕಾರಣವಿರಬಹುದು. ಹಾಗೆಯೇ ಈ ಸಮುದಾಯಗಳು ಸಾಮಾಜಿಕವಾಗಿ ತಮ್ಮನ್ನು ದಾಖಲಿಸಿಕೊಳ್ಳುವ ಹಂಬಲದ ಒತ್ತಡ ಮತ್ತು ಅದರ ಆತುರದಲ್ಲಿ ಹೆಚ್ಚು ಉತ್ಸಾಹ ತೋರಿದಾಗ ಸಾಹಿತ್ಯದ ಶುದ್ಧಾಂಗ ಪರಿಕಲ್ಪನೆಗಳಿಗೆ ಪೆಟ್ಟು ಬೀಳುವುದು ಸಹಜ ಮತ್ತು ಅನಿವಾರ್ಯ. ಇದನ್ನು ಸಾಹಿತ್ಯದ ತೊಡಕೆಂದು ಭಾವಿಸುವುದಕ್ಕಿಂತ ಸಾಹಿತ್ಯವನ್ನು ವಿಸ್ತರಿಸುವ, ತಿದ್ದುವ, ಪರಿಶೀಲಿಸುವ ಹಾಗೆಯೆ ಹೊಸ ಹಸಿವಿನ ಕಡೆಗೆ ಅದನ್ನು ಕೊಂಡೊಯ್ಯುವ ಹಂತ ಎಂದು ತಿಳಿಯಬೇಕಾಗುತ್ತದೆ. ಸಾಹಿತ್ಯ ಇಲ್ಲವೆ ಯಾವುದೇ ಕ್ರಿಯಾತ್ಮಕ ಬದಲಾವಣೆ ಉಂಟಾಗುವ ಮೊದಲು ‘ಒಂದು ಬಗೆಯ ಸ್ತಬ್ಧ ವಾತಾವರಣ’ ಇರುವುದು ವಿಕಾಸದ ಪ್ರಕ್ರಿಯೆ ಎಂದೇ ನಾನು ನಂಬುತ್ತೇನೆ. ಕನ್ನಡ ಸಾಹಿತ್ಯ ಪರಂಪರೆಯ ಉದ್ದಕ್ಕೂ ಈ ವಾತಾವರಣ ಬೇರೆ ಬೇರೆ ಸಮುದಾಯಗಳ ಪ್ರವೇಶದಿಂದಾಗಿ ಹೊಸ ಜೀವವನ್ನು ತುಂಬಿಕೊಂಡಿರುವುದನ್ನು ನಾವು ನೋಡಬಹುದಾಗಿದೆ. ಇಷ್ಟೊಂದು ಪ್ರಮಾಣದಲ್ಲಿ ಬರೆಯುತ್ತಿರುವ ದಲಿತ, ಬಂಡಾಯ, ಮಹಿಳಾ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಬರಹವನ್ನು ಮನುಷ್ಯತ್ವದ ಹಸಿವಿನಿಂದ ನೋಡಿದಾಗ ಕನ್ನಡ ಸಾಹಿತ್ಯದ ಉಳಿದ ಯಾವ ಕಾಲದಲ್ಲೂ ಈ ಪ್ರಮಾಣದ ಸೃಜನಶೀಲ ಹಸಿವು ಇರಲಿಲ್ಲವೆಂದು ಕಾಣುತ್ತದೆ. ಈಗ ಬರೆಯುತ್ತಿರುವುದರಲ್ಲಿ ಗುಣಮಟ್ಟದ ಬಗ್ಗೆ ತಕರಾರುಗಳು ನನಗೂ ಇವೆಯಾದರೂ ಒಟ್ಟು ಸಾಹಿತ್ಯದ ವಿಕಾಸವು ಇಂತಹ ವಾತಾವರಣವನ್ನು, ನಮ್ಮ ಮಾನದಂಡಗಳನ್ನು ಮೀರಿ, ಅಗತ್ಯವಾದದ್ದನ್ನು ಸೃಷ್ಟಿಸಿಕೊಳ್ಳುತ್ತದೆ.

೨. ಇದು ಸಾಹಿತ್ಯದ ಪರಿಕಲ್ಪನೆಗಳನ್ನು ಮುರಿಯುತ್ತ ಪುನರ್‌ಸೃಷ್ಟಿಸಿಕೊಳ್ಳುವ ಕಾಲ. ಹೀಗೆ ಮಾಡುವಲ್ಲಿ ಇವತ್ತಿನ ಬಹುಪಾಲು ಲೇಖಕರೂ ಚಿಂತಕರೂ ಮತ್ತು ಕೆಲವು ಓದುಗರೂ ತಮ್ಮ ವೈಚಾರಿಕ ಹರವನ್ನು ಸಾಧಿಸುತ್ತ ಅದನ್ನೆ ಸಾಮಾಜಿಕ ಬದ್ಧತೆ ಎಂದು ನಂಬಿರುವ ಅಪಾಯಕ್ಕೆ ಸಿಲುಕಿದ್ದಾರೆ. ಅದರಲ್ಲೂ ಎಡಪಂಥೀಯರು ಸಾಧಿಸುವ ವರ್ಗದ ಹಠ ಬಡವರ ಹೊಟ್ಟೆಗೆ ಬೇಡಾ, ಕೇವಲ ಸಾಹಿತ್ಯದ ಸುಂದರ ಮಾನವೀಯ ಕನಸಿಗೂ ಉಪಯೋಗಕ್ಕೆ ಬರದಂತೆ ಪೋಲಾಗುತ್ತಿರುವುದು ಚೋದ್ಯವಾಗಿದೆ. ತಮ್ಮ ಸಾಂಸ್ಕೃತಿಕ ಅನುಭವ, ಚರಿತ್ರೆಯ ವಿವೇಕ, ಸಮಾಜದ ಅಂತಃಸಾಕ್ಷಿಗಳಿಗಿಂತಲೂ ಮಿಗಿಲಾಗಿ ಹೊರಗಿನ ಪ್ರಭಾವಗಳಿಂದ, ತತ್ವಗಳಿಂದ ಸೃಜನ

ಶೀಲ ವಿಕಾಸವನ್ನು ಆವಾಹಿಸಿಕೊಳ್ಳುವುದು ಅರ್ಥಪೂರ್ಣವಲ್ಲ. ವೈಚಾರಿಕ ಹಠ ಚಳುವಳಿಯನ್ನೂ ಸಾಹಿತ್ಯ ಕೃತಿಯನ್ನೂ ಸಮನಾಗಿ ಸೀಮಿತಗೊಳಿಸುತ್ತದೆ. ಇದರಿಂದ ಬಿಡಿಸಿಕೊಳ್ಳಲು ನಮ್ಮ ಅನುಸಂಧಾನ ಕ್ರಮದಲ್ಲೇ ಸಮಗ್ರ ತಿದ್ದುಪಡಿಯನ್ನು ಒಟ್ಟಾಗಿ ಮಾಡಿಕೊಳ್ಳಬೇಕು. ಜಾತ್ಯತೀತವಾಗಿ ಸಾಹಿತ್ಯವನ್ನು ಬರೆವ, ಓದುವ, ಅರಿಯುವ ಮನಸ್ಸು ಎಲ್ಲ ಕಡೆ ಸಾಕ್ಷಿಪ್ರಜ್ಞೆಯಂತೆ ವಿಸ್ತರಿಸುವಂತಾಗಬೇಕು. ಜೊತೆಗೆ ಈ ಹಂತದಲ್ಲಿ ಸಮಾಜ ವಿಜ್ಞಾನಗಳ ಸಾಹಿತ್ಯೇತರ ಪರಿಕಲ್ಪನೆಗಳನ್ನು ಸಾಹಿತ್ಯದ ಜೊತೆ ಸಂಯೋಗಿಸುವಾಗ ಬಹಳ ಎಚ್ಚರಿಕೆಯಿಂದ ಅಂತರ್‌ಶಿಸ್ತೀಯ ಕ್ರಿಯೆಯನ್ನು ಜರುಗಿಸಬೇಕು. ಇಲ್ಲದಿದ್ದರೆ ಇಂತಹ ಅನ್ಯ ಪರಿಕಲ್ಪನೆಗಳು ಸಾಹಿತ್ಯದ ವಿಕಾಸಕ್ಕೆ ತೊಡಕಾಗಲೂಬಹುದು. ಇದರ ಬಿಕ್ಕಟ್ಟಿನಿಂದಾಗಿಯೆ ಇವತ್ತು ಕನ್ನಡದ ವೈಚಾರಿಕ ಗದ್ಯ ಗೊಂದಲವಾಗಿರುವುದು. ಹಾಗೆಯೆ ಸೃಜನಶೀಲ ಪ್ರಕಾರಗಳು ಜಾಳಾದಂತೆ ಕಾಣುತ್ತಿರುವುದು. ನಮ್ಮ ಕಾಲದ ಈ ತಾತ್ವಿಕ ಬದ್ಧತೆ ಅವುಗಳ ವೈರುಧ್ಯ, ವೈಚಾರಿಕ ಅಹಂಕಾರ, ತರ್ಕದ ಹಠ, ಅಸಮಗ್ರ ಓದು, ಜರೂರಿನ ಒತ್ತಡಗಳಿಂದಾಗಿ ಒಳ್ಳೆಯ ಉದ್ದೇಶವಿದ್ದೂ ಅದನ್ನು ನೆರವೇರಿಸಲು ತಪ್ಪು ಕ್ರಮಗಳಿಂದ ಸಾಹಿತ್ಯದ ರುಚಿಯಲ್ಲಿ ಏರು ಪೇರುಗಳಾಗುತ್ತಿವೆ. ಈ ಅಪಾಯವನ್ನು ಮೊದಲು ಲೇಖಕ ಬಿಡಿಸಿಕೊಳ್ಳಬೇಕು. ಓದುವ ಕ್ರಮವೂ ಸುಧಾರಣೆಯಾಗಬೇಕು.

೩. ಈ ತನಕ ಅಲಕ್ಷಿತ ಬಹುಮುಖೀ ಸಮುದಾಯಗಳ ಸಾಂಸ್ಕೃತಿಕ ವಲಯಗಳನ್ನು ಮಾನ್ಯ ಮಾಡದೇ ಹೊರಟಿದ್ದು, ಈಗ ಅವುಗಳನ್ನು ನೆನಪು ಮಾಡಿಕೊಳ್ಳುವುದನ್ನು ನಾನು ಅನುಮಾನದಿಂದ ನೋಡುತ್ತೇನೆ. ಯಾವ ಸರ್ಕಾರಗಳೂ, ಸಾಹಿತ್ಯ ಪಂಥಗಳೂ, ಚಳುವಳಿಗಳೂ, ಈ ಬಗ್ಗೆ ಗಂಭೀರವಾಗಿ ಪರಿಗಣಿಸಿರಲೇ ಇಲ್ಲ. ತಡವಾಗಿಯಾದರೂ ಕೆಲವರಾದರೂ ಈಗ ಸಾಂಸ್ಕೃತಿಕ ಆತಂಕವನ್ನು ಅನುಭವಿಸುತ್ತಿರುವುದು ವಿಚಿತ್ರವಾಗಿದೆ. ನನ್ನ ಮಟ್ಟಿಗೆ ಈ ಎಲ್ಲ ವಿದ್ಯುನ್ಮಾನ ಮಾಧ್ಯಮಗಳು ಬಹುಜನ ಸಮುದಾಯದ ಬಹುಮುಖೀ ವಲಯಗಳಿಗೆ ಅಗತ್ಯಕ್ಕೆ ತಕ್ಕಂತೆ ಬೇಕು. ಇವು ಬಂದ ಕೂಡಲೆ ಅಲಕ್ಷಿತ ಸಮುದಾಯಗಳ ಬಾಳಿಗೆ ದೊಡ್ಡ ಬೆಳಕೂ ಉಂಟಾಗದು. ಹಾಗೆಯೇ ಮಹಾಕತ್ತಲೆಯೂ ಇವುಗಳಿಂದ ಆವರಿಸಲಾರದು. ತಂತ್ರಜ್ಞಾನಕ್ಕೂ ಸಂಸ್ಕೃತಿಗೂ ಅತ್ಯಂತ ಸಮರ್ಪಕವಾದ ಅಂತರವನ್ನು ಬಹುಮುಖಿ ಸಮುದಾಯಗಳು ಕಂಡುಕೊಳ್ಳಬಲ್ಲವು. ಕೆಲವರ ಭಯದ ಪ್ರಕಾರ ವಿದ್ಯುನ್ಮಾನ ಭೂತವು ಎಲ್ಲವನ್ನೂ ನುಂಗಿ ಹಾಕುತ್ತದೆಂಬುದು ನನಗೆ ಎಷ್ಟೋ ಬಾರಿ ಆಧುನಿಕ ಮೂಢನಂಬಿಕೆಯಂತೆ ಕಾಣುತ್ತದೆ. ಜಗತ್ತಿನ ಕೆಲವೊಂದು ಅನಿವಾರ್ಯ ಪ್ರಭಾವಗಳನ್ನು ತಾಂತ್ರೀಕೃತ ಅರಿವನ್ನೂ ಆ ನಾಗರೀಕತೆಯ ಬೆಡಗನ್ನೂ ಹಳೆಯ ಜಗತ್ತಿನ ಸಾಂಸ್ಕೃತಿಕ ಸಮುದಾಯಗಳು ಪಡೆದುಕೊಳ್ಳುವ ಮೂಲಕ ಅವುಗಳಿಗೆ ಪ್ರತಿರೋಧ ಶಕ್ತಿಯೂ ಹೆಚ್ಚಿ ಅನುಸಂಧಾನವೂ ಸಾಧ್ಯವಾಗಿ ಇನ್ನೊಂದು ಆಯಾಮಕ್ಕೆ ಅವು ವಿಕಾಸವಾಗುವಂತೆ ಮಾಡುತ್ತದೆ. ತಾತ್ಕಾಲಿಕವಾಗಿ ಇದರಿಂದ ಒಂದಿಷ್ಟು ತೊಂದರೆಗಳಿರುತ್ತವೆಯಾದರೂ ಜಗತ್ತಿನ ಮಾನವ ಸಮುದಾಯಗಳ ವಿಕಾಸದ ಪ್ರಕ್ರಿಯೆಯಲ್ಲಿ ಇದೆಲ್ಲ ಸಹಜ ಮತ್ತು ಮೀರಿ ಬೆಳೆಯುವ ಗುಣ ಎಂದು ನಾನು ಭಾವಿಸುತ್ತೇನೆ.

೪. ಇಷ್ಟಾದರೂ ವಿಶ್ವಗ್ರಾಮದ ಪರಿಕಲ್ಪನೆ ಕೇವಲ ತಾಂತ್ರೀಕೃತವಾಗಿ ಅದರಲ್ಲೂ ಸೀಮಿತವಾಗಿ ಮಾತ್ರ ಸಾಧ್ಯವಾಗಿದೆಯೆ ಹೊರತು ಸಾಂಸ್ಕೃತಿಕವಾಗಿ ಜಗತ್ತು ಇನ್ನು ವಿಶ್ವಗ್ರಾಮವಾಗಿ ಆಗಿಯೇ ಇಲ್ಲ. ಸಾಂಸ್ಕೃತಿಕ ಜಾಗತೀಕರಣವನ್ನು ಹೀಗಾಗಿಯೆ ನಾನು ತುಂಬ ಆಶಾವಾದಿಯಾಗಿ ಪ್ರತಿಪಾದಿಸುವುದು. ಆರ್ಥಿಕ ಮತ್ತು ಸಾಂಸ್ಕೃತಿಕ ಜಾಗತೀಕರಣಗಳು ಸಮನಾಗಿ ತೃತೀಯ ಜಗತ್ತಿನ

ಮೂಲಕ ಘಟಿಸಬೇಕಾಗಿರುವುದು ಇವತ್ತಿನ ಜಗತ್ತಿನ ಅನಿವಾರ್ಯ. ಪಶ್ಚಿಮದ ಮೂಲಕ ವಿಸ್ತರಿಸುವ ಆರ್ಥಿಕ ಜಾಗತೀಕರಣವನ್ನು ತೃತೀಯ ಜಗತ್ತು ಜಾಣ್ಮೆಯಿಂದ ದೇಶೀಯ ತಿಳುವಳಿಕೆಯಿಂದ ಅದರ ಮಾರುಕಟ್ಟೆ ಮತ್ತು ಅದರ ಸಾಂಸ್ಕೃತಿಕ ಪ್ರತಿರೋಧಗಳಿಂದ ಮುಖಾ ಮುಖಿಯಾಗಬೇಕಾಗಿದೆ. ಅಂತದನ್ನು ಮಾತ್ರ ಮುಕ್ತ ಜಾಗತೀಕರಣವೆಂದು ನಾವೆಲ್ಲ ಸ್ವಾಗತಿಸಬಹುದು. ಅದು ಸಾಹಿತ್ಯದಲ್ಲಿ ಬೇರೂರಬೇಕು. ಅಂತಹ ಯತ್ನಗಳು ಭಾಗಶಃ ಜನಪ್ರಿಯ ಸಾಹಿತ್ಯದಲ್ಲಿ ಮಾರುಕಟ್ಟೆಯ ಅಭಿರುಚಿಯಲ್ಲಿ ಕೃತಕ ವೇಷಗಳಲ್ಲಿ ಕಾಣಸಿಗಬಹುದು. ಗಂಭೀರವಾದ ಅಂತಹ ಪ್ರಯತ್ನಗಳಿಗೆ ನಮ್ಮ ಲೇಖಕರು ಒಳಗಾಗಬೇಕಿದೆ. ಜಗತ್ತಿನ ಆಚೆ ತುದಿಯ ಮನೆಗೂ ಕೇಳಿಸುವಂತೆ ನಾವು ಕಾವ್ಯ, ಕಥೆ, ಕಾದಂಬರಿ ಹಾಗೂ ವೈಚಾರಿಕ ಸಂಕಥನಗಳನ್ನು ಸೃಷ್ಟಿಸಬೇಕಾಗಿದೆ.

ಜಗತ್ತಿನ ಅನೇಕ ಪುಟ್ಟ ಭಾಷಾ ಸಮುದಾಯಗಳ ಲೇಖಕರು ಹಾಗೆ ಮಾಡಿದ್ದಾರೆ. ಸಾಂಸ್ಕೃತಿಕ ಜಾಗತೀಕರಣವನ್ನು ಜಗತ್ತಿನ ಎಲ್ಲ ದೊಡ್ಡ ಲೇಖಕರು ಮಾಡಿದ್ದರಿಂದಲೇ ನಮಗೆ ಬೇರೆ ಮಾದರಿಗಳು ಪರಿಚಯವಾದದ್ದು. ವ್ಯವಸ್ಥೆಯು ತನ್ನ ಅನುಕೂಲದ ರೀತಿಯಲ್ಲಿ ಆರ್ಥಿಕ ಜಾಗತೀಕರಣವನ್ನು ಮಾಡುತ್ತಿದ್ದರೆ, ಲೇಖಕರು ಸಾಂಸ್ಕೃತಿಕ ಜಾಗತೀಕರಣವನ್ನು ಸಾಹಿತ್ಯದಂತಹ ಅನೇಕ ಸೃಜನಶೀಲ ಮಾಧ್ಯಮಗಳಲ್ಲಿ ಭಿನ್ನವಾಗಿ ಮಾಡುತ್ತ ಹೋಗಬಹುದು. ಡಿ.ಆರ್. ನಾಗರಾಜ್. ವಿಶ್ವ ಗ್ರಾಮದ ಪರಿಕಲ್ಪನೆಯನ್ನೇ ತನ್ನ ಸಾಹಿತ್ಯ ಕಥನದಲ್ಲಿ ಬೇರೆ ಬೇರೆ ಮೂಲಗಳ ಸಂವೇದನೆಯಿಂದ ವಿಸ್ತರಿಸುತ್ತ ಕನ್ನಡದ ದೇಶೀ ಪ್ರಜ್ಞೆಯನ್ನು ಜಾಗತಿಕ ಗುಣದಿಂದ ವ್ಯಾಖ್ಯಾನಿಸಿದ್ದನ್ನು ಇಲ್ಲಿ ಗಮನಿಸಬಹುದು. ಆ ಅರ್ಥದಲ್ಲಿ ಪೌರ್ವಾತ್ಯವನ್ನು ನಾವು ಪಶ್ಚಿಮದ ಕಥನದಲ್ಲಿ ಹೇಳುತ್ತ ಪ್ರಜ್ಞೆಯಲ್ಲಿ ದೇಶೀಯವಾಗುತ್ತ ಹೋಗಬೇಕಾಗುತ್ತದೆ.

೫. ಯಾವುದೇ ಶ್ರೇಷ್ಠ ಕಲಾವಿದನನ್ನು ತತ್ತ್ವ ಬದ್ಧತೆ ರೂಪಿಸಿರಲಾರದು. ಅಂತಹ ಕಲಾವಿದರಿಗೆ ಅದು ಪೂರಕ ಶಕ್ತಿಯನ್ನು ನೀಡಬಲ್ಲದೇ ಹೊರತು ತತ್ವದಿಂದಾಗಿಯೆ ಒಂದು ಕೃತಿ, ಒಬ್ಬ ಲೇಖಕ ಒಂದು ಪಂಥ, ಒಂದು ಕಲಾಕೃತಿ ಯಶಸ್ಸನ್ನು ದಾಟಿರಲಾರದು. ನಿಜವಾದ ಶ್ರೇಷ್ಠ ಕಲಾವಿದ ತನ್ನ ಒಳಗಿನ ಬದ್ಧತೆಯ ತತ್ವವನ್ನೂ ಮೀರಿ ಅಭಿವ್ಯಕ್ತಿಸಿರುತ್ತಾನೆ. ಹಾಗೆಯೆ ಒಂದು ಕಾಲದ ನಂಬಿಕೆ ಇನ್ನೊಂದು ಕಾಲಕ್ಕೆ ದಣಿದಂತೆಯೂ ಕಾಣಬಹುದು. ಎಡಪಂಥೀಯ ಚಿಂತನೆಗಳ ತತ್ವಬದ್ಧತೆ ಅವರವರ ಆಯ್ಕೆಗೆ ಬಿಟ್ಟದ್ದೇ ಹೊರತು ಅಂತಿಮವಾಗಿ ಮಹತ್ವದ ಒಂದು ಕ್ರಿಯೆಗೆ ಅದು ಕಡ್ಡಾಯ ಎಂದು ನಾನು ನಂಬಲಾರೆ. ಆದರೆ ನಮ್ಮ ಸಾಮಾಜಿಕ ಸ್ವಾಸ್ಥ್ಯದ ಕನಸನ್ನು ಕಾಣುವ ಎಲ್ಲರೂ ಮೊದಲು ಆ ಚಿಂತನೆಯ ಗರಡಿ ಮನೆಯಲ್ಲಿ ತಂಗಿದ್ದು ಮುಂದೆ ಪಯಣ ಮಾಡಬೇಕಾದದ್ದು ಸರಿಯಾದ ಹಾದಿ ಎಂದು ಮಾತ್ರ ಭಾವಿಸಬಲ್ಲೆ.

❑

✦ **ಮೊಗಳ್ಳಿ ಗಣೇಶ್,** ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ-೫೮೩ ೨೭೬, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.

'ಚಾಪ್ಲಿನ್, ಬ್ರೆಕ್ಟ್‌ರಂತಹ ಕಲಾವಿದರ ಹುಟ್ಟಿಗೆ ನೆಲ ಹದಗೊಂಡಿದೆ'

- ಶಿವರಾಮಯ್ಯ

೧. ತಿಟ್ಟತ್ತಿ ತಿರುಗಿ ಸಿಂಹಾವಲೋಕನ ಮಾಡಿ ನೋಡಿದರೆ, ಜಗತ್ತಿನ ಯಾವ ಸಾಹಿತ್ಯವೂ ಎಲ್ಲ ಕಾಲಕ್ಕೂ ಸೃಜನಶೀಲವಾಗಿರುವುದಿಲ್ಲ. ಪರಿಮಿತಿಗಳು ಸಾಮಾನ್ಯವಾಗಿ ಇದ್ದದ್ದೇ. ಇದು ನಮ್ಮ ಸಾಮಾಜಿಕ ಬದುಕಿನ ಏರುಪೇರುಗಳನ್ನೇ ಅವಲಂಬಿಸಿರುತ್ತದೆಯಷ್ಟೆ. ಹಾಗೆ ನೋಡಿದರೆ ನಮ್ಮ ಇವತ್ತಿನ ಸಾಮಾಜಿಕ ಜೀವನ ಹಿಂದೆಂದಿಗಿಂತಲೂ ಮಿಗಿಲಾದ ಸಂಘರ್ಷಕ್ಕೆ ಒಡ್ಡಿಕೊಂಡಿದೆ ಎನ್ನಬಹುದು. ಅದಕ್ಕೆ ಮೂಲ ಕಾರಣ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ಎಂಬ ಈ ತ್ರಿಕರಣಗಳು. ಮುಂದುವರಿದ ರಾಷ್ಟ್ರಗಳ ದಬ್ಬಾಳಿಕೆಗೆ ಗುರಿಯಾಗಿ ಮೂರನೇಜಗತ್ತಿನ ರಾಷ್ಟ್ರಗಳು ಯಾವತ್ತೂ ಸೋಲು, ದಣಿವು, ನೋವು, ಹಿಂಸೆ, ಅವಮಾನಗಳ ವಜೆಯಿಂದ ಕುಸಿದು ಕಂಗಾಲಾಗಿ ಹೋಗುತ್ತಿವೆ. ಆದರೂ ಜನಜೀವನದ ಪ್ರತಿಬಿಂಬವೊ ಗತಿಬಿಂಬವೊ ಎಂದು ಕರೆಸಿಕೊಳ್ಳುವ ಸಾಹಿತ್ಯ ವಲಯದಲ್ಲಿ ಇನ್ನೂ ಸ್ತಬ್ಧ ವಾತಾವರಣವೇ ಆವರಿಸಿದೆಯಲ್ಲ ಎಂಬುದೇ ಯಕ್ಷ ಪ್ರಶ್ನೆ. ಆರ್ಥಿಕ ಸಾಮ್ರಾಜ್ಯಶಾಹಿ ಪ್ರಭುತ್ವಗಳು ಒಡ್ಡಿದ ಚಕ್ರಮೂಲಕೋಟೆಯಲ್ಲಿ ಸಿಲುಕಿದ ಬಡರಾಷ್ಟ್ರಗಳ ಸ್ಥಿತಿ ಅಭಿಮನ್ಯುಕುಮಾರನಂತೆ ಚಿಂತಾಜನಕವಾಗಿದೆ. ಸುಯೋಧನನ ನಿಷ್ಕರುಣೆ ಪಡೆ ಇನ್ನೇನು ಅವನ ಕೈಕಾಲುಗಳನ್ನು ತುಂಡರಿಸುವ ಸನ್ನಾಹದಲ್ಲಿದೆ. ಇತ್ತ ಸಮಾಜವಾದಿ ಸೋವಿಯತ್ ರಷ್ಯಾ ಬಂಡವಾಳಶಾಹಿಗಳ ಹಿಕಮತ್ತನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದೆ ಮುಕ್ಕಾಲು ಶತಮಾನ ಬಾಳಿ ಕುಸಿದು ಹೋದದ್ದನ್ನು ಕಂಡ ನಮ್ಮ ಸಮಾಜವಾದಿ ಚಿಂತಕರು ಧೈರ್ಯಗೆಟ್ಟು ತಲೆಗೆ ಕೈಕೊಟ್ಟು ಕುಳಿತರು. ಸಮಯಸಾಧಕ ಕೊಳ್ಳಿಬಾಕ ಬಹುರಾಷ್ಟ್ರೀಯ ಕಂಪನಿಗಳು ನಮ್ಮ ನೆಲ, ಜಲ, ನಭೋಮಂಡಲಗಳಲ್ಲಿ ಘೋರ್ಗರೆದು ಮುತ್ತುತ್ತಿದ್ದಾರೆ. ನವಸಾಮ್ರಾಜ್ಯಶಾಹಿಗಳು ನೇಮಿಸಿದ ಉಸ್ತುವಾರಿ ಸರ್ಕಾರಗಳೊ ಎಂಬಂತಿರುವ ನಮ್ಮ ಸರ್ಕಾರಗಳು ನಾಚಿಕೆ ಇಲ್ಲದೆ ಕಮೀಷನ್ ಆಸೆಗಾಗಿ ಬರುವ ಕಂಪನಿಗಳಿಗೆಲ್ಲ ರತ್ನಗಂಬಳಿ ಹಾಸುತ್ತಿವೆ. ಇದನ್ನು ಕಂಡು ಪ್ರತಿರೋಧಿಸುವ ವಿಚಾರವಂತರ ಎದೆಗೆ ಗುಂಡಿಡಲೂ ನಮ್ಮ ಫ್ಯಾಸಿಸ್ಟ್ ಪ್ರಭುತ್ವಗಳು ಹಿಂದೆ ಮುಂದೆ ನೋಡುತ್ತಿಲ್ಲ.

ದಿನ ನಿತ್ಯದ ಬಳಕೆಯ ನೀರು, ಗಾಳಿ, ಬೆಂಕಿ ಮುಂತಾದ ಪಂಚಭೂತಗಳೂ ಕಲುಷಿತಗೊಳ್ಳುತ್ತಿವೆ. ಇದನ್ನೆಲ್ಲ ಕಂಡು ದಿಗ್ಭ್ರಮೆಗೊಂಡ ಕಲಾವಿದ, ಬರಹಗಾರರೂ ಕೋಮಾಸ್ಥಿತಿಗೆ ಇಳಿದು ಹೋಗುತ್ತಿದ್ದಾರೆ. ಬಹುಶಃ ಇದು ಕಾರಣವಾಗಿ ನಮ್ಮ ಸಾಹಿತ್ಯವಲಯದಲ್ಲಿ ಸ್ತಬ್ಧತೆಯ ವಾತಾವರಣ ಆವರಿಸಿದಂತೆ ಕಂಡುಬರುತ್ತಿದೆ.

೨. ಸಿಪಿಐ/ಸಿಪಿಎಮ್ ಮುಂತಾದ ಎಡಪಕ್ಷಗಳೂ ಸಹ ಡಿಜನರೇಟ್ ಆಗಿ ತಮ್ಮ ಪ್ರಭಾವವನ್ನು ಕಳೆದುಕೊಳ್ಳುತ್ತಿವೆ. ಅವು ಕೇವಲ ವಿಧಾನಸಭೆ/ಲೋಕಸಭೆ ಸದಸ್ಯತ್ವದ ಗುಂಗಿನಲ್ಲಿ

ರಾಜಕಾರಣ ನಡೆಸುತ್ತಿವೆ. ಅತ್ಯಂತ ಶೋಷಣೆಗೆ ಒಳಗಾಗಿರುವ ಕೃಷಿಕರು ಹಾಗೂ ಕಾರ್ಮಿಕರು ಸರಿಯಾಗಿ ಮಾರ್ಗಕಾಣದೆ ತಮ್ಮದೇ ಆದ ರೀತಿಯಲ್ಲಿ ಶೋಷಕರ ವಿರುದ್ಧ ಸೆಣಸುತ್ತಿದ್ದಾರೆ. ಆದ್ದರಿಂದ ಯಾವುದೇ ಸಂಘಟನೆಗಳು ಸರಿಯಾದ ಗೊತ್ತುಗುರಿ ಇಲ್ಲದೆ ನಾಯಿಕೊಡೆಗಳಂತೆ ಹುಟ್ಟಿ ಸಾಯುತ್ತಿವೆ. ಇದರ ಪರಿಣಾಮವಾಗಿ ಸಮೂಹಗಳು ಹಲವಾರು ಗುಂಪುಗಳಾಗಿ ಒಡೆದುಹೋಗುತ್ತಿವೆ.

ಕರ್ನಾಟಕದ ನಮ್ಮ ದಲಿತ, ಬಂಡಾಯ, ರೈತ ಚಳುವಳಿಗಳು ಸೂಕ್ತಮಾರ್ಗದರ್ಶನ ಕಾಣದೆ ನಿಲುಗಡೆಗೆ ಸಂದಿವೆ. ಇಲ್ಲಿದ್ದ ಮುಂಚೂಣಿಯ ನಾಯಕರಲ್ಲಿ ಅನೇಕರು ಆಳುವ ಪಕ್ಷಗಳೊಂದಿಗೆ ರಾಜಿಮಾಡಿಕೊಂಡು, ಗೌರವದ ಸ್ಥಾನ ಸ್ವೀಕರಿಸಿ, ಜನಸಂಪರ್ಕದಿಂದ ದೂರವಾದರು. ಅಧಿಕಾರವನ್ನು ಹಿಡಿದರೆ ಏನನ್ನಾದರೂ ಸಾಧಿಸಬಹುದು ಎಂಬ ಅವರ ನಂಬಿಕೆ ಹುಸಿಯಾಯಿತು. ಸಂಘಟನೆಗಳ ಕಾರ್ಯಕರ್ತರಲ್ಲಿ ಗೊಂದಲವುಂಟಾಗಿ ಅವರು ಹಿಂದೆ ಸರಿದರು. ಕಡೆಗೆ ಭರವಸೆಯಿಂದ ಹುಟ್ಟಿಬಂದಿದ್ದ ನಮ್ಮ ಈ ಚಳುವಳಿಗಳೆಲ್ಲ ಮೂಲೆಗುಂಪಾಗಿ ಹೋದವು. ಇತ್ತ ನಮ್ಮ ಕೆಲವು ಬರಹಗಾರರು ಕೇವಲ ಸ್ವೀಡಿಷ್ ಅಕಾಡೆಮಿಯನ್ನು ಮೆಚ್ಚಿಸಲು ಹೊಸೆಯುತ್ತಿರುವ ಸಾಹಿತ್ಯವನ್ನು ಸೃಜನಶೀಲ ಎಂದು ಕರೆಯಬೇಕೆ? ಎಂಬ ಜಿಜ್ಞಾಸೆ ಮೂಡುತ್ತಿದೆ. ಅತ್ಯಂತ ಕೆಳಗಿನ ಮನುಷ್ಯನನ್ನು ದೃಷ್ಟಿಯಲ್ಲಿರಿಸಿಕೊಂಡು 'ಖಡ್ಗವಾಗಲಿ ಕಾವ್ಯ' ಎಂಬ ಧ್ಯೇಯವಾಕ್ಯದೊಂದಿಗೆ ಮೂಡಿಬಂದ ದಲಿತ/ಬಂಡಾಯ ಸಾಹಿತ್ಯವೂ ಕೂಡ ವ್ಯವಸ್ಥೆಯನ್ನು ಪ್ರಶ್ನಿಸುವುದರಲ್ಲಿಯೇ ವಿಶ್ರಮಿಸಿತು. ನಮ್ಮ ದಲಿತ/ಬಂಡಾಯ ಸಾಹಿತ್ಯ ಎಂಬದರಲ್ಲಿ ರಷ್ಯಾದ ಮಹಾಕ್ರಾಂತಿಗೆ ಮುಂಚಿನ ಸಂದರ್ಭದಲ್ಲಿಯಂತೆ ಬದ್ಧತೆ ಇರುವ ಕೃತಿ ಮೂಡಿದ್ದು ವಿರಳವೇ. ಹಾಗೆ ನೋಡಿದರೆ ನವೋದಯ ಕಾಲದ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಯಲ್ಲಿ ಆ ಬಗೆಯ ಅಕ್ಷರ ಕ್ರಾಂತಿಯ ಅರುಣೋದಯದ ಸೂಚನೆಗಳು ಸ್ಪಷ್ಟವಾಗುತ್ತವೆ; ತದನಂತರ 'ಕುಸುಮಬಾಲೆ'ಯಲ್ಲಿ ಸೂರ್ಯೋದಯದ ಬೆಳಕು ಮೂಡಿದಂತೆ ಕಂಡಿತಾದರೂ ಪ್ರಸ್ತುತ ಅದಕ್ಕೆ ಮೋಡ ಕವಿದ ವಾತಾವರಣವೇ ಮುಂದುವರಿಯುತ್ತದೆ. ಯಾವುದಕ್ಕೂ ಸರ್ಕಾರದ ಕೃಪಾಕಟಾಕ್ಷಕ್ಕೇ ಕೈಚಾಚುವ ಹಕ್ಕೊತ್ತಾಯದ ಕೂಗಾಟಗಳೆ ಅಧಿಕವಾಗಿ ಕರ್ತವ್ಯದಿಂದ ಹಿಂದೆಸರಿಯುವ ಚಳುವಳಿಗಾರರಿಂದ ಅಕ್ಷರಕ್ರಾಂತಿಯಂತಹ ದಿವ್ಯವನ್ನು ಹಿಡಿಯುವ ಸಾಮರ್ಥ್ಯವುಂಟೇ ಎಂದು ಕೇಳಬೇಕಾಗಿದೆ. ಏಕೆಂದರೆ ಇಂದು ಸ್ಫೋಟಗೊಳ್ಳುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಕಲಿಕೆಯ ಸೌಲಭ್ಯಗಳು ಇಲ್ಲವಾಗುತ್ತಿವೆ. ಅಪಾರ ಜನಸಮೂಹಗಳಿಗೆ ಧಣಿಗಳು ಹೇಳಿದವರಿಗೆ ಓಟುನೀಡಲು ಮತ್ತು ಊಳಿಗಮಾಡಲು ಎರಡು ಕೈಗಳಿದ್ದರೆ ಸಾಕು, ಕಲೆಯ ಪ್ರಶ್ನೆಯೇ ಬೇಡ ಎನ್ನುವಂತಾಗಿದೆ. ಮುಖವೇ ಇಲ್ಲದ ಇಂಥ ಜನಕೋಟಿಯಿಂದ ಜನಾಂಗವಾಣಿಯಾದ ಸಾಹಿತ್ಯ ತಾನೆ ಎಲ್ಲಿಂದ ರಚನೆಯಾದೀತು? ಆದ ಪ್ರಯುಕ್ತ ನಮ್ಮ ಸಾಹಿತ್ಯವಲಯದಲ್ಲಿ ಶೂನ್ಯವಾತಾವರಣ ಆವರಿಸಿಕೊಂಡಿದೆಯೆಂದು ಹೇಳಬಹುದು.

ಮತ್ತೊಂದು ಮಾತು ಇಲ್ಲಿ ಹೇಳುವುದಾದರೆ, ಕೆಲವು ಸೃಜನಶೀಲ ಬರಹಗಾರರು ಸಾಹಿತ್ಯಕ್ಕಿಂತ ಇನ್ನೂ ಹೆಚ್ಚಿನ ಜನರನ್ನು ತಲುಪಬೇಕೆಂಬ ಮಹತ್ವಾಕಾಂಕ್ಷೆಯಿಂದ ದೃಶ್ಯ ಮಾಧ್ಯಮಗಳಾದ ಸಿನಿಮಾ ಮತ್ತು ಟಿ.ವಿ. ಧಾರಾವಾಹಿಗಳತ್ತ ವಲಸೆ ಹೋದರು. ಆದರೆ ಅಲ್ಲಿಯೂ ಮಾಧ್ಯಮದವರ ಬಂಡವಾಳಶಾಹಿ ಪ್ರವೃತ್ತಿ ಎದುರು ನಿಂತು ಹೋರಾಡಲಾರದೆ

ಅವರ ಮರ್ಜಿಗೆ ಬಿದ್ದು ರಾಜಿಮಾಡಿಕೊಳ್ಳುತ್ತ ಕಳಪೆ ಚಿತ್ರಗಳನ್ನು ಕೊಡುತ್ತಿದ್ದಾರೆ. ಇದೆಲ್ಲಕ್ಕಿಂತಲೂ ಮಿಗಿಲಾದ ಜಾಗತೀಕರಣದ ಪರಿಣಾಮವಾಗಿ ನುಗ್ಗಿ ಬರುತ್ತಿರುವ ವಿದೇಶಿ ಕಲೆ, ಸಾಹಿತ್ಯ ಸರಕಿನ ಮುಂದೆ ನಮ್ಮದೇನು ಮಹಾ ಎಂಬ ಕೀಳರಿಮೆಯಿಂದ ಕೆಲವರು ಕಂಗಾಲಾಗಿ ಕುಳಿತಿದ್ದಾರೆ.

೪. ಕಾಲವನ್ನು ತಡೆಯಲು ಯಾರಿಗೂ ಇಲ್ಲ. ಟಿ.ವಿ. ಮತ್ತು ಕಂಪ್ಯೂಟರ್‌ಗಳು ಕಾಲನ ದಾಪುಗಾಲಿನ ವಿಸ್ತೃತ ಜಾಲಗಳಾಗಿವೆ. ಇವು ನಮ್ಮ ಖಾಸಗೀ ವಲಯಕ್ಕೂ ನುಗ್ಗಿ ನಮ್ಮ ಬೇಕುಬೇಡಗಳನ್ನು ತಾವೇ ನಿಯಂತ್ರಿಸುತ್ತಿವೆ. ವಿದ್ಯುನ್ಮಾನಮಾಧ್ಯಮಗಳಲ್ಲಿ ಬಿಂಬಿತವಾಗುವ ಅದ್ಭುತ ಸಾಹಸಗಳು ಕಲ್ಪನೆಗೂ ಸಾಧ್ಯವಿಲ್ಲವೆಂಬಂತಿವೆ. ಅದೇರೀತಿ ಹಿಂಸೆ ಹಾಗೂ ಲೈಂಗಿಕತೆಯ ಮುಖಗಳೂ ಘೋರವಾತಕವೆಂಬಂತಿದ್ದು ಯುವ ಜನತೆಯನ್ನು ದಿಕ್ಕು ತಪ್ಪಿಸುತ್ತಿವೆ. ಶೋಷಕರೇ ಪಾಲುದಾರರಾಗಿರುವ ಈ ಮಾಧ್ಯಮಗಳು ಬಿತ್ತರಿಸುವ ಮೂಢನಂಬಿಕೆಗಳಿಗೆ, ಅಂಧಾನುಕರಣೆಗಳಿಗೆ, ಅವೈಚಾರಿಕ ರೂಢಿಪದ್ಧತಿಗಳಿಗೆ ಲಂಗುಲಗಾಮು ಇಲ್ಲ. ಸರ್ವೋದಯ ಸಂದರ್ಭದಲ್ಲಿ ಮೂಡಿದ ಜನಜಾಗೃತಿ ಮೊಟಕಾಗುತ್ತಿದೆ. ನಮ್ಮ ಬಹುಮುಖೀ ಸಂಸ್ಕೃತಿಯ ತಾಯಿಬೇರುಗಳಾದ ಜನಪದ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಮೂಲೆಗುಂಪಾಗಿ ವಿದೇಶದಿಂದ ಆಮದಾದ ಸಾಹಿತ್ಯ ಸಂಗೀತ ಬೆಳೆಬಾಳುತ್ತಿವೆ. ಆದ್ದರಿಂದ ನಮ್ಮ ಸಾಂಸ್ಕೃತಿಕ ಜಗತ್ತು ಅಪಮೌಲ್ಯೀಕರಣಗೊಂಡು ಕೀಳರಿಮೆಗೆ ತುತ್ತಾಗುತ್ತಿದೆ. ಇಂಗ್ಲೀಷ್ ಭಾಷಾ ಸಂಸ್ಕೃತಿಯ ಅನುಕರಣೆಯಂತೂ ಮುಗಿಲು ಮುಟ್ಟುತ್ತಿದೆ. ಹಾಲಿವುಡ್ಡನ್ನು ಬಾಲಿವುಡ್ ಅನುಕರಿಸಿದರೆ, ಬಾಲಿವುಡ್ಡನ್ನು ಗಾಂಧಿನಗರ ಅನುಕರಿಸುತ್ತಿದೆ.

ಜಾಗತೀಕರಣದ ಪರಿಣಾಮವಾಗಿ ನಮ್ಮ ಆದಿವಾಸಿ/ಬುಡಕಟ್ಟು ಜನಾಂಗಗಳ ಕುಲಕಸುಬುಗಳು, ಅವುಗಳನ್ನು ಆಶ್ರಯಿಸಿ ಅವಲಂಬಿಸಿರುವ ಸಾಂಸ್ಕೃತಿಕ ವಿಧಿ ಆಚರಣೆಗಳು ಮೂಲೆ ಗುಂಪಾಗಿ ಮಾಯವಾಗುತ್ತಿವೆ. ಇವತ್ತಿನ ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆಯಾದ ಏಕಮುಖಿ ಸಂಸ್ಕೃತಿಗೆ ಒತ್ತುಕೊಟ್ಟರೆ ಬಹುಮುಖೀ ಸಂಸ್ಕೃತಿಗಳು ಸರ್ವನಾಶವಾಗುತ್ತವೆ. ಇದು ತುಂಬಾ ಸಂಕೀರ್ಣವೂ, ಜಟಿಲವೂ ಆದ ಸಮಸ್ಯೆಯಾಗಿದೆ. ಇವತ್ತಿನ ಊಟೋಪಚಾರದಲ್ಲಿ, ವೇಷಭೂಷಣದಲ್ಲಿ, ಆಚಾರವಿಚಾರದಲ್ಲಿ ಪ್ರಾದೇಶಿಕ ಭಿನ್ನತೆ, ವೈವಿಧ್ಯತೆ ಮಾಯವಾಗಿ ಪಶ್ಚಿಮದ ಅನುಕರಣೆಗೆ ಮನಸೋಲುತ್ತಿದೆ. ಆದರೂ ನಾವು ನಿರಾಶಾವಾದಿಗಳಾಗಬೇಕಾಗಿಲ್ಲ. ನವಸಾಮ್ರಾಜ್ಯಶಾಹಿ ವಿಸ್ತರಣೆಯ ಕರುಣೆ ಇಲ್ಲದ ಕ್ರೌರ್ಯವನ್ನು ಪ್ರತಿರೋಧಿಸುವ, ವಿಡಂಬಿಸುವ ಅಭಿಜಾತಕಲೆ, ಸಾಹಿತ್ಯ ಸೃಷ್ಟಿಯಾಗುವ ಸೂಚನೆಗಳು ಅಲ್ಲಲ್ಲಿ ಕಾಣಸಿಗುತ್ತಿವೆ. ಟಾಲ್‌ಸ್ಟಾಯ್ ತಮ್ಮ ಮಹಾನ್ ಕಾದಂಬರಿ 'ವಾರ್ ಅಂಡ್ ಪೀಸ್' ಎಂಬ ಕೃತಿಯ ಉಪಸಂಹಾರದಲ್ಲಿ ನಿರ್ವಚಿಸಿರುವಂತೆ, ಈ ಕೊಳ್ಳೆಗಾರ ಸಂಸ್ಕೃತಿ ಎಂಬುದು ಸದಾ ಪಶ್ಚಿಮದಿಂದ ಪೂರ್ವಕ್ಕೆ ಪಥ ಸಂಚಲನ ಮಾಡುತ್ತಲೆ ಬಂದಿದೆ. ಇದರ ಮಹಾಘಾತಕ್ಕೆ ಸಿಲುಕಿದ ಪೂರ್ವದ ರಾಷ್ಟ್ರಗಳು ಯಾವತ್ತೂ ಹಿಂಸೆ ಮತ್ತು ನೋವು, ಅವಮಾನವನ್ನು ಅನುಭವಿಸುತ್ತಲೆ ಬಂದಿವೆ. ಆದರೆ ನಿದ್ರೆಯಿಂದ ಎಚ್ಚರಗೊಂಡ ಸಿಂಹರಾಜನಂತೆ ಇವು ಒಮ್ಮೆ ಎಚ್ಚರಗೊಂಡ ಪಕ್ಷಕ್ಕೆ ಅದು ಗುಳ್ಳೆನರಿಯಂತೆ ಬಾಲ ಸಿಕ್ಕಿಸಿಕೊಂಡು ಓಟಕೀಳುತ್ತದೆ. ಇದಕ್ಕೆ ನಿದರ್ಶನವಾಗಿ ನೆಪೋಲಿಯನ್ನನ ರಷ್ಯಾ ದಂಡಯಾತ್ರೆಯನ್ನು ಉಲ್ಲೇಖಿಸುತ್ತಾರೆ ಆ ಲೇಖಕರು. ನೆಪೋಲಿಯನ್ ಎಂಬ ಈ ಲೂಟಿಕೋರ ತನ್ನ ಆರು ಲಕ್ಷ ಸೈನ್ಯದೊಂದಿಗೆ ದಂಡೆತ್ತಿ ಬಂದು ಮಾಸ್ಕೋ ನಗರವನ್ನೇನೋ ತಲುಪಿದ. ಆದರೆ ಅದು ಪ್ರಾಣವಿಲ್ಲದ

ಕೇವಲ ಅಸ್ಥಿಪಂಜರವಾಗಿತ್ತು. ಕಾರಣ ಅಲ್ಲಿನ ನಿವಾಸಿಗಳೆಲ್ಲ ಊರು ತೊರೆದು ದೂರ ಪಲಾಯನಮಾಡಿದ್ದರು. ಇದುವರೆಗೆ ತಮ್ಮ ಭಾಷಾ ಸಂಸ್ಕೃತಿಗಳನ್ನು ಉಪೇಕ್ಷೆಮಾಡಿ ಫ್ರಾನ್ಸಿನ ಭಾಷೆ ಸಂಸ್ಕೃತಿಯನ್ನೇ ಅನುಕರಣೆ ಮಾಡುತ್ತಿದ್ದ ರಷ್ಯಾದ ಎಲೈಟ್ ವರ್ಗ ಈ ಘಟನೆಯ ನಂತರ ತಮ್ಮ ಭಾಷಾಸಂಸ್ಕೃತಿಯ ಕಡೆಗೆ ಬಿಡುಗಣ್ಣರಾಗಿ ನೋಡಲು ತೊಡಗಿದರು. ತರುವಾಯ ಅವರಲ್ಲಿ ರಾಷ್ಟ್ರೀಯಪ್ರಜ್ಞೆ ಅಂಕುರಿಸಿತು. ಕ್ರಮೇಣ ರಷ್ಯಾದ ಕಲೆ ಮತ್ತು ಸಾಹಿತ್ಯದ ದಿಕ್ಕು ಸಮತಾವಾದದತ್ತ ಒಲಿಯಿತು. ಇದು ಮುಂದೆ ಒಂದು ಶತಮಾನದ ನಂತರ ಸಂಭವಿಸಿದ ರಷ್ಯನ್ ಮಹಾಕ್ರಾಂತಿ(೧೯೧೭)ಗೆ ಮುನ್ನುಡಿಯಾಯಿತು.

ಸುತ್ತುವುದೇ ಕಾಲಚಕ್ರದ ಧರ್ಮ. ಆಗ ಪ್ರಜಾಪ್ರಭುತ್ವದ ಹೆಸರಿನಲ್ಲಿ ಪಶ್ಚಿಮ ರಾಷ್ಟ್ರಗಳು ಮಾಡುತ್ತಿರುವ ಅಪರಾಧಕ್ಕೆ ತಕ್ಕ ಶಿಕ್ಷೆಯಾಗುತ್ತದೆ. ಜಗತ್ತಿನ ನ್ಯಾಯ ಕಟಕಟೆಯಲ್ಲಿ ನಿಂತು ಅವು ತಪ್ಪೊಪ್ಪಿಗೆ, ಪಶ್ಚಾತ್ತಾಪ ಪಡಬೇಕಾಗುತ್ತದೆ. ಈ ನಿಟ್ಟಿನಲ್ಲಿ 'ಸೂಳ್ ಪಡೆಯಲ್ ಅಪ್ಪುದು ಕಣಾಮಹಾಜಿರಂಗದೊಳ್' ಎಂಬ ಒಳನೋಟದ ಸಾಹಿತ್ಯ ಮತ್ತು ಕಲೆ ಮುಂದೆ ಮೂಡಿಬರುತ್ತವೆ ಎಂಬ ಆಶಯ ನನ್ನದು.

೪. ಕಾಲದೇಶಗಳ ಗಡಿರೇಖೆಗಳು ಈಗ ಅಳಿಸಿ ಹೋಗುತ್ತಿವೆ, ವಿಶ್ವಗ್ರಾಮದ ಪರಿಕಲ್ಪನೆಯನ್ನು ನಮ್ಮ ವೈಜ್ಞಾನಿಕ ಸಾಧನೆಗಳು ನಿಜಗೊಳಿಸಿವೆ. ಆದರೆ 'ಏನಿದ್ದರೇನು ಹತ್ತಿರ, ಎಷ್ಟೊಂದು ದೂರ ಅಂತರ' ಎಂಬಂತೆ ಮನುಷ್ಯ ಮನುಷ್ಯರ ನಡುವೆ ಬಿರುಕು ಹೆಚ್ಚಾಗುತ್ತಿದೆ. ಭಾವನಾತ್ಮಕವಾದ ಬೆಸುಗೆ ಒಡೆದು ಹೋಳಾಗುತ್ತಿದೆ. ಕಾಲದೇಶಗಳನ್ನು ಗೆದ್ದಮಾನವ ತನ್ನ ಅಹಂಕಾರ, ಠೇಂಕಾರವನ್ನು ಮಾತ್ರ ಗೆಲ್ಲಲಿಲ್ಲ. ವಿಶ್ವಗ್ರಾಮಕ್ಕೆ ಮೊದಲು ವಿಶ್ವಮಾನವ ಕಲ್ಪನೆ ಇಂದು ಮನುಜನ ಎದೆಯಲ್ಲಿ ಮೂಡಿಬರಬೇಕು. ಕಾಲದೇಶಗಳನ್ನು ಒಂದು ಮಾಡಿದುದರಿಂದ 'ಮನುಜಮತ ವಿಶ್ವಪಥ' ವಾಗುವುದಿಲ್ಲ. ವಿಜ್ಞಾನ ಧರ್ಮ ಮತ್ತು ವಿಶ್ವಧರ್ಮ ಈ ಎರಡೂ ಎಂದು ಒಂದೇ ಬಿಂದುವಿನಲ್ಲಿ ಆತ್ಮಸಂಗವಾಗುವುವೋ ಅಂದು ಮಾತ್ರ ವಿಶ್ವ-ಗ್ರಾಮದ ಪರಿಕಲ್ಪನೆಗೆ ಅರ್ಥಬರುವುದು. ಇದನ್ನೆಲ್ಲ ಬಿಂಬಿಸುವ ಸಾಹಿತ್ಯಕೃತಿಗಳು ಮುಂದೆ ಮೂಡಿ ಬರಬಹುದು.

೫. ಎಡಚಿಂತನೆಗಳ ತತ್ವ ಬದ್ಧತೆ ಎಂದಿಗೂ ಅಪ್ರಸ್ತುತವಲ್ಲ. ಎಡ ಮತ್ತು ಬಲ ಚಿಂತನೆಗಳು ಹಗಲು ರಾತ್ರಿಗಳಂತೆ ಒಂದನ್ನು ಬಿಟ್ಟು ಒಂದಿರುವುದಿಲ್ಲ. ಋತು ನಿಯಮದಂತೆ ಒಂದು ಇನ್ನೊಂದನ್ನು ಹಿಂಬಾಲಿಸುತ್ತಲೇ ಇರುತ್ತವೆ. ಎಡಚಿಂತನೆಗಳೆಂದರೆ 'ಅಪರಿಮಿತದ ಕತ್ತಲೆಯೊಳಗೆ ವಿಪರೀತದ ಬೆಳಕು ಇದ್ದಂತೆ'. ಇಂಥ ತಾತ್ವಿಕತೆಗೆ ತಮ್ಮನ್ನು ಧಾರೆ ಎರೆದುಕೊಂಡು ಕಲಾವಿದರಾಗಿ ಜಗತ್ತಿನ ಶ್ರೇಷ್ಠ ಕಲಾಕರ್ತೃಗಳಾಗಿ ಚಾರ್ಲಿ ಚಾಪ್ಲಿನ್ ಮತ್ತು ಬರ್ಟೋಲ್ಟ್ ಬ್ರೆಕ್ಟ್ ಎಂದಿಗೂ ನಿಲ್ಲುತ್ತಾರೆ.

ಜಾಗತಿಕ ಯುದ್ಧಗಳ ನಡುವೆಯೇ ಆ ಯುದ್ಧಕೋರ ರಾಷ್ಟ್ರಗಳನ್ನು ಕುರಿತು ವಿಡಂಬಿಸುವ, ವ್ಯಂಗ್ಯದಿಂದ ಸೀಳುವ, ದಾಸ್ಯದಿಂದ ಛೇಡಿಸುವ, ಕರುಣೆಯಿಂದ ತಣಿಸುವ ಕಲಾವಿದನಾಗಿ ಚಾಪ್ಲಿನ್ ಅವತರಿಸಿದ. ಎರಡನೇ ಮಹಾಯುದ್ಧದ ನಂತರ ನಗು ಕಳೆದುಕೊಂಡಿದ್ದ ಜಗತ್ತಿಗೆ ನಗು ತಂದ ಕೊಟ್ಟ ಶ್ರೇಷ್ಠ ನಟ, ನುರಿತ ಕಲಾವಿದ, ಅರಿತ ಮಾನವತಾವಾದಿ, ಈ ಚಾರ್ಲಿ. ಅಮೆರಿಕದ ಬಗ್ಗೆ ಚಾರ್ಲಿ ಚಾಪ್ಲಿನ್ನನ ಪ್ರತಿಕ್ರಿಯೆ ಇಂತಿದೆ: "ಬಂಡವಾಳಶಾಹಿ ಸಮಾಜದಲ್ಲಿ ಖಚಿತವಾದ ಪ್ರಣಾಳಿಕೆ

ಇರುವುದಿಲ್ಲ. ಇಂಥ ಸಮಾಜ ದಾರಿದ್ರ್ಯ, ಹಸಿವೆ, ಕೊಲೆ, ಸುಲಿಗೆ, ವ್ಯಭಿಚಾರ, ವಂಚನೆಗಳೆಂಬ ಕಪ್ಪುಕಲೆಗಳನ್ನು ಮೈತುಂಬಾ ಹಚ್ಚಿಕೊಂಡೇ ಹುಟ್ಟಿರುತ್ತದೆ". ಅಮೆರಿಕಾ ಖಂಡದ ಪೂರ್ವೇತಿಹಾಸದ ಬಗ್ಗೆ ಮಾಹಿತಿಯುಳ್ಳವರಿಗೆ ಈ ಟೀಕೆಯ ಯಥಾರ್ಥವೇನೆಂಬುದು ಗೊತ್ತಾಗುತ್ತದೆ.

ಹೀಗೆಯೇ ಎಡಚಿಂತನೆಯ ತತ್ತ್ವಬದ್ಧತೆಯಲ್ಲಿ ಜರ್ಮನಿಯ ನಾಟಕಕಾರ ಬ್ರೆಕ್ಟ್ (೧೮೯೮-೧೯೫೬) ಚಾಪ್ಲಿನ್ನನ ಸೋದರನೆನಿಸಿಕೊಳ್ಳುತ್ತಾನೆ. ನಾಝಿಗಳ ಆಳ್ವಿಕೆಯಲ್ಲಿ ಜರ್ಮನಿ ಹಿಂಸೆ, ಕ್ರೌರ್ಯ, ದಬ್ಬಾಳಿಕೆ, ರಕ್ತಪಾತಗಳ ಆಗರವಾಗಿ ಹೋಯಿತು. ಬ್ರೆಕ್ಟ್ ಇದನ್ನೆಲ್ಲ ವಿರೋಧಿಸಿದ ಕಾರಣ ದೇಶಭ್ರಷ್ಟನಾಗಿ ಹೋಗಬೇಕಾಯಿತು. ಇವನ ಪುಸ್ತಕಗಳನ್ನು ಬಹಿಷ್ಕರಿಸಲಾಯಿತು. ಆದರೂ ಎದೆಗುಂದದ ಬ್ರೆಕ್ಟ್ ಪರದೇಶಿಯಾಗಿದ್ದುಕೊಂಡಿದ್ದು ಸಾಮಾಜಿಕ ಬದ್ಧತೆಯುಳ್ಳ ಉತ್ತಮ ನಾಟಕಗಳನ್ನು ರಚಿಸುತ್ತಾ ಬಂದ. ಆಧುನಿಕ ಕ್ರಾಂತಿಕಾರಿ ಸಮಾಜಗಳಿಗೆ ಬ್ರೆಕ್ಟನ ಈ ವಿಚಾರಗಳು ಅನುಕರಣೆಯೋಗ್ಯವಾಗಿ ನಿತ್ಯ ನೂತನವೆಂಬಂತಿವೆ.

ಕೊನೆಯದಾಗಿ ಒಂದು ಮಾತು. ಭಗವದ್ಗೀತೆಯಲ್ಲಿ ಅರ್ಜುನ ಕೇಡನ್ನು ನಿವಾರಿಸುವ ಸಲುವಾಗಿಯಾದರೂ ಕೊಲೆಯೆಂಬ ಹತ್ಯಾಕಾಂಡಕ್ಕೆ ದುಮ್ಮಿಕ್ಕಲು ಮೊದಲು ಹಿಂಜರಿದ. ಆದರೆ ಅವನ ಪಾಪಪ್ರಜ್ಞೆಯನ್ನು ಕೃಷ್ಣ ತನ್ನ ಗೀತೋಪದೇಶದ ಮೂಲಕ ನಿವಾರಿಸಿ ಮತ್ತೆ ಅವನು ಹತ್ಯಾಕಾಂಡಕ್ಕೆ ದುಮ್ಮಿಕ್ಕುವಂತೆ ಸಿದ್ಧಗೊಳಿಸಿದ. ಇದು ಕ್ರಿಯೆಗೆ ಮೊದಲು ಮನುಷ್ಯನಿಗೆ ಸಂಭವಿಸಿದ ವಿಷಾದಯೋಗ - ಆದರೆ ರಷ್ಯಾದ ಮಹಾನ್ ಕಾದಂಬರಿಕಾರ ದಾಸ್ತೋವಸ್ಕಿ ವಿರಚಿತ 'ಕ್ರೈಮ್ ಅಂಡ್ ಪನಿಷ್‌ಮೆಂಟ್' ಎಂಬ ಕೃತಿಯಲ್ಲಿ ಕ್ರಿಯೆಯನಂತರ ಮನುಷ್ಯ ವಿಷಾದಯೋಗಕ್ಕೆ ಹೋಗುತ್ತಾನೆ. ಇಲ್ಲಿಯೂ ಕೂಡ ನಾಯಕ ರಾಸ್ಕೋಲ್ನಿಕೋವ ಕೇಡನ್ನು ನಿವಾರಿಸುವ ಸಲುವಾಗಿಯೇ ಚಕ್ರಬಡ್ಡಿಯ ಮುದುಕಿಯನ್ನು ಕೊಲೆಗೈದು ತದನಂತರ ಆ ಪಾಪಪ್ರಜ್ಞೆಯಿಂದ ಅಸ್ವಸ್ಥನಾಗಿ ತೊಳಲಾಡುತ್ತಾನೆ. ಇಂಥ ಒಂದು ತಾತ್ವಿಕ ಹಿನ್ನೆಲೆಯಿಂದ ನೋಡಿದರೆ ತನ್ನ ಚರಿತ್ರೆಯ ಉದ್ದಕ್ಕೂ ಮಿಲಿಯಾಂತರ ಜನರನ್ನು ದುಃಖಾರ್ತರನ್ನಾಗಿ ಮಾಡುತ್ತ, ಕೊಲೆಗೈಯ್ಯುತ್ತ ಬಂದ ಅಮೆರಿಕದಂತಹ ಶಕ್ತಿಶಾಲಿ ರಾಷ್ಟ್ರಗಳು ಯಾವತ್ತೂ ಪಾಪದ ಪ್ರಜ್ಞೆಯಿಂದ ತಪ್ಪೊಪ್ಪಿಕೊಂಡು ಪಶ್ಚಾತ್ತಾಪ ಪಟ್ಟಿದ್ದೇ ಇಲ್ಲ. ವಿಷಾದವನ್ನು ವ್ಯಕ್ತಪಡಿಸುವುದಕ್ಕೆ ಬದಲಾಗಿ ತನ್ನಂತೆ ಪ್ರಜಾಪ್ರಭುತ್ವ ರಾಷ್ಟ್ರ ಇನ್ನೊಂದಿಲ್ಲ ಎಂದು ಬೀಗುತ್ತಾ ಬಂದಿವೆ. ಇತ್ತ ಮತೀಯವಾದಿ ಭಯೋತ್ಪಾದಕರೂ ಅಷ್ಟೆ, ತಮ್ಮ ಹತ್ಯಾಕಾಂಡಕ್ಕೆ ವಿಷಾದ ವ್ಯಕ್ತಪಡಿಸದ ನರ ರಾಕ್ಷಸರಿವರು. ಈ ಎರಡೂ ಬಗೆಯ ಜನರು ಜೀವವಿರೋಧಿಗಳೇ ಆಗಿದ್ದಾರೆ. ಇಂಥವರ ಅಹಂಕಾರವನ್ನು ಛೇದಿಸುವ, ಢಾಂಬಿಕತೆಯನ್ನು ಬಯಲುಮಾಡುವ, ದೀನಾನಾಥರ ತುಟಿಗೆ ನಗುತರಿಸುವ ಎಡಚಿಂತನೆಗಳ ತತ್ತ್ವಬದ್ಧತೆಯುಳ್ಳ ಶ್ರೇಷ್ಠ ಕಲಾವಿದರಾದ ಚಾರ್ಲಿಚಾಪ್ಲಿನ್ ಮತ್ತು ಬ್ರೆಕ್ಟ್ ಅವರಂತಹ ಜನರ ಹುಟ್ಟಿಗೆ ಈ ನೆಲ ಈಗ ಹದಗೊಂಡಿದೆ.

❑

✤ **ಶಿವರಾಮಯ್ಯ,** ನಂ. ೧೭೨, ಐಸಾಕ್ ರೋಡ್,
ಟೀಚರ್ಸ್ ಕಾಲೋನಿ, ನಾಗರಬಾವಿ, ಬೆಂಗಳೂರು-೭೨

ಎವೆಯ ಆ ದಡದಲ್ಲಿ...

- ಡಾ॥ ಕೆ. ವೈ. ನಾರಾಯಣಸ್ವಾಮಿ

೧.

ಎವೆಯ ಆ ದಡದಲ್ಲಿ
ಒಂದು ಜಂಬುನೇರಳೆ ಮರವಿತ್ತು
ಮರದ ಕೊಂಬೆಯಲೊಂದು ನವಿಲು
ಹಗಲನುಂಡು ತಿಳಿತಿಂಗಳನ್ನ ಕುಡಿಯುತ್ತಿತ್ತು
ಒಮ್ಮೆ ಆಕಾಶದತ್ತ
ಮಗದೊಮ್ಮೆ ಭೂಮಿಯ ಇತ್ತ
ಹೊರಳಿಸುತ್ತಿತ್ತು ಸಾವಿರದ ಕಣ್ಣ ಬೆರಗನ್ನ!

ಯಾವಾಗಲೊ ಒಮ್ಮೆ ವಸಂತದ ಚೆಲುವು
ಬೇವು ಹೊಂಗೆಯ ನರುಗೆಂಪು
ದಾಳಿಯಿಟ್ಟಂತೆ ಋತು ಚಲನೆ
ಹಬ್ಬದೆತ್ತಿನ ಚಂದ್ರಕೊಂಬಿನ ಮೇಲೆ
ಒಪ್ಪುವುದು ಪಟ!
ಗರಿಗೆದರಿದ ನವಿಲು ಕೇಕೆ ಹಾಕುವುದು
ನಿಷ್ಕಾರಣ ಹಸುಮಗುವೊಂದು ನಕ್ಕಂತೆ!

ಅತ್ತ ನದಿಯಲ್ಲಿ ನೀರ ಪಟದ ಮೇಲೆ
ಮೂಡಿ ಕಾಮನ ಬಿಲ್ಲಿನ ಕಣ್ಣು
ತೆರೆ ಸರಿದು ತೆರೆ ನೀರ ಬಾಗಿಲು
ಆಹಾ! ಬೆರಳು ಕಚ್ಚುವ ಬೆಡಗು
ಪುರ್ರನೆ ಹಾರಿ ಹೊಕ್ಕೇ ಬಿಡುವುದು ನವಿಲು
ಕಣ್ಣಾಲೆ ನೀರಲ್ಲಿ ಇನ್ನೂ ತೂಗುಯ್ಯಾಲೆ
ಆಡುತ್ತಾ ಇರುವುದು ನವಿಲ ನೆರಳು!

ಆಡುವ ಮಗುವ ಕೈಯಿಂದ ಕಸಿದುಕೊಂಡಂತೆ ಗಿಲಕಿ
ಕಿಟಾರನೆ ಕಿರುಚಿಕೊಂಡಿದ್ದು ಯಾರು?
ಮಿಂಚು ಕಣ್ಣುಕಟ್ಟುವಾಗ ಪಂಚಿಸುವುದು ಸಿಡಿಲು.
ಎತ್ತಣಿಂದ ಎತ್ತ ಎರಗಿತು ಬಾಣ
ನಾಟಿಕೊಂಡಿದ್ದು ಎಲ್ಲಿಗೆ?
ಅಂದಿನಿಂದಲೂ ಕಣ್ಣು ಗಾಯದ ಹುಣ್ಣು
ಬೆಚ್ಚಿ ಎವೆ ಬಿಚ್ಚಿದರೆ
ಎಲ್ಲ ಬಟ್ಟಂ ಬಯಲು-ಅದಲು ಬದಲು
ಧಗ ಧಗನೆ ಉರಿವಂತೆ ಚಿತೆ-ಹಗಲ ಬಿಸಿಲು!

೨.

ರೆಪ್ಪೆಯ ಮೇಲೆ ಒರಗಿದಂತೆ ಹಗಲು ಭಾರ
ಹಳೆಯ ಗಾಯಕ್ಕೆ ಮುಲಾಮು ಸವರುವ ರೆಕ್ಕೆ ರಾತ್ರಿ
ಎವೆ ಮುಚ್ಚಿ ತೆರೆವ ನಡುವೆ
ನವಿ ಹರಿದು ನವಿಲು ಕೇಕೆ ಮುರಿದು ಕುಣಿದು
ಎಂದಿನಂತೆ ನೀರ ಬಾಗಿಲು ಅರೆಗಳಿಗೆ ತೆರೆದು
ಪುರ್‍ರನೆ ಹಾರಿ ಬಿಡುವುದು!

ಬೇಟೆಗಾರನ ಸುಳಿವಿಡಿದು ಬೆದರಿದಂತೆ
ಹಾರಿ ಹೋಗುವಾಗ ನವಿಲು
ನೀಲ ಗುಡ್ಡದಲ್ಲಿ ಮರೆಯಾಗುವಾಗ
ಗಾಳಿಯಲುಗು ತೊಟ್ಟು ಕಡಿದ ನಿಮಿತ್ತ
ಪತ್ರ ನೆಲಕ್ಕೊರಗುವ ನಿರ್ಲಿಪ್ತತೆಯಲ್ಲಿ
ನವಿಲ ಗರಿಯೊಂದು ಉಳಿದಿತ್ತು ಗಾಳಿಯಲ್ಲಿ
ಅನಾಥ ಸ್ವಪ್ನವೊಂದರ ಕುರುಹಿನಂತೆ
ಅನಾದಿ ದುಃಖವೊಂದರ ನಿಶ್ಶಬ್ದ ಯಾನದಂತೆ
ಕಣ್ಣರಿಯದ ದಡವನರಸುತ್ತಿರುವ ನಾವೆಯಂತೆ!

೩.

ಹಗಲು ಸವರಿ ಇರುಳು
ಇರುಳು ಸವರಿ ಹಗಲು
ಮೊಂಡಾಗಿದೆ ಮುಲಾಮಿನ ರೆಕ್ಕೆ

ಮತ್ತಷ್ಟು ರಣವಾಗಿದೆ ಗುಡ್ಡೆ

ಒಡೆದ ಕನ್ನಡಿ ಕಣ್ಣು
ಗಾಯಗೊಂಡಿವೆ ಬಿಂಬ ಚಿತ್ರ
ತಳಬಿರಿದು ನದಿ ಪಾತ್ರ
ನೆಲ ಕಚ್ಚಿವೆ ನಾವೆ
ಜಲಪಾದ ಬತ್ತಿ ಒಣಗುತ್ತಿದೆ ಜಂಬುನೇರಳೆ ಮರ
ಎಲೆಯ ಎಳೆ ಕಣ್ಣುಗಳು ಜೋಲುತ್ತಿವೆ ಜಲಕಣ್ಣುಗಳತ್ತ
ಬಾನ ಹೊಲದಲ್ಲಿ ಕೂರಿಗೆ ಹೂಡುವವರಿಲ್ಲ.
ಮಳೆ ಬೀಜ ಬಿತ್ತುವವರಿಲ್ಲ!
ಯಾವ ಕಣ್ಣ ಮಾಯಾ ಕೋಟೆಗಳಲ್ಲಿ
ಸೆರೆ ಸಿಕ್ಕಿವೆಯೋ ಮೈಲು ಪಕ್ಷಿಗಳೆಲ್ಲಾ
ಮುಂಗಾರು ಕಳೆದರೂ ಪತ್ತೆಯಿಲ್ಲ

೪.
ನೀರು ಬರದೆ ನವಿಲು ಬರದು
ನವಿಲು ಬರದೆ ಮುಲಾಮಿಗೆ ರೆಕ್ಕೆ ಸಿಗದು
ಹೊಸ ರೆಕ್ಕೆ ಸೋಂಕದೆ ಮಾಯದು ಹುಣ್ಣು
ಹೇಗೆ ಎವೆ ಮುಚ್ಚುವುದು ಇನ್ನು!
ನವಿಲು ಕನಸಿಗೂ ಬರವಾಯಿತ್ತಲ್ಲ!

✦ ಡಾ॥ ಕೆ. ವೈ. ನಾರಾಯಣಸ್ವಾಮಿ, ಕನ್ನಡ ಅಧ್ಯಾಪಕರು,
ಬಾಲಕರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ.

ಅಮೇರಿಕಾದ ಹಾಡು

- ಎಚ್.ಸ್. ಸೋಮಶೇಖರಗೌಡ

ಹಳೇ ಒಡಂಬಡಿಕೆ

ಜೋ ಜೋ ಜೋ ಜೋ ತಾಲಿಬಾನು
ಹಾಡೇನು, ಲಾಲಿ ಲಾಲಿ ಲಾಡೇನು ॥

ಕಂದಹಾರಿನ ಕಂದಾ
ಆಫ್ಘನದ ಆನಂದಾ
ಗಿರಿ ಕಂದರಗಳ ತೊಟ್ಟಿಲಲೇ ಅರಳಿದವನೇ
ಮರಳ ಹಾಸಿಗೆಯಲ್ಲೇ ಮಲಗಿದವನೇ ॥ ಜೋ ಜೋ ॥

ನಿನ್ನ ಕೈಯ ಬಂದೂಕೇ ಗಿಲಗಿಲ ಗಿಲಕಿ
ಜೇಹಾದು ಜೋಗುಳವ ಪ್ರತಿ ಕ್ಷಣವೂ ಪಲುಕಿ
ಕದನದಾ ಕಾಗುಣಿತ, ಕೊಲೆಗಡುಕ ಕುಣಿತ
ಕಲಿಸುವೆ ಬಾ ಕಂದಾ ಡಾಲರಿನ ಗಣಿತ ॥ ಜೋ ಜೋ ॥

ಹಾ ...ರುದ್ರವದನಾ ನಿನ್ನ ಕನಸಲ್ಲೂ ಕದನ
ಸಾವ ಬೆಳೆಯುವ ಸಖನೇ, ಹೇ....ಮಸಣ ರಮಣಾ
ಸೋವಿಯಟ್ಟಿಗೆ ನಿದ್ದೆಗೆಡಿಸಿದವನೇ
ಕಮ್ಯೂನಿಸಮ್ಮಿಗೆ ತುಕ್ಕು ಹಿಡಿಸಿದವನೇ ॥ ಜೋ ಜೋ ॥

ಹೊಸ ಒಡಂಬಡಿಕೆ

ಬುಡುಬುಡಿಕೆ ...ಬುಡುಬುಡಿಕೆ ...ಇದು ಹೊಸ ಒಡಂಬಡಿಕೆ
ವಾಷಿಂಗ್ಟನ್ನಿನ ವಯಾಗ್ರಾದ ಮತ್ತದಕೆ
ಬುದ್ಧನನೆ ಕೆಡವಿ ಬಾಮಿಯಾನ್ ಬುದ್ಧನಾಗುವ ಬಯಕೆ ॥

ಸೂರ್ಯಮುಳುಗದ ಗುಂಗಿನ, ಗೋಬೆಲ್ಲು ಗತ್ತಿನ
ಕರಟಕ ದಮನಕರು ಅದರ ಎಡ ಬಲಕೆ ॥ ಬುಡುಬುಡಿಕೆ ॥

ಉಗ್ರ ದೊರೆಗಳ ಎದುರು ಸಮರ ಸಾರಿದ ಗಳಿಗೆ
ಮುಷಾರಫ್‌ನ ಜೊತೆ ಮುಲುಗುಡುವ ಕಲಬೆರಕೆ ! ।। ಬುಡುಬುಡಿಕೆ ।।

ದಿಗಿಲ ದೆವ್ವದ ಗಿಡಕೆ ರಕ್ತ ಕಾಲುವೆ ಹರಿಸಿ
ರಮಿಸಿದೀ ರಣಹದ್ದಿಗೆ ಸರ್ಪನಾಲಗೆಯದೇ ರುಚಿ ।। ಬುಡುಬುಡಿಕೆ ।।

ಬುಡುಬುಡಿಕೆ ...ಬುಡುಬುಡಿಕೆ ...ಇದು ಹೊಸಾ ಒಡಂಬಡಿಕೆ
ವಾಷಿಂಗ್ಟನ್ನಿನಾ ಬಿಳಿಮನೆಯ ಬಿಳಿಚಿದ ಬಡಬಡಿಕೆ ।। ಬುಡುಬುಡಿಕೆ ।।

ಪೈಪೋಟಿ

ಅಮೇರಿಕದ ಹದ್ದಿಗೂ
ಇಂಡಿಯದ ನವಿಲಿಗೂ
ಮುಗಿಲ ಮುಟ್ಟುವ ಸ್ಪರ್ಧೆ
ಕೇಳಿದ್ದೆ ತಡ ಹದ್ದು
ಗಗನಕ್ಕೆ ನೆಗೆದಿತ್ತು.
ನಕ್ಕಿತ್ತು ನವಿಲು !
ಶಿಖೆ ನಿಮಿರಿ
ಮಿರಿ ಮಿರಿ ...ಗರಿಗೆದರಿ
ಕೇಕೆ ಹಾಕಿ ಕುಣಿಯಿತು
ಮುಗಿಲು ನೆಲಕೆ
ಇಳಿಯಿತು !

ಗಿಡುಗ ಮತ್ತು ಮುದುಕ

ಊರ ಪಶ್ಚಿಮದಲ್ಲಿ
ದೊಡ್ಡ ಆಲದ ಮರ;
ದಿಕ್ಕು ದಿಕ್ಕಿಗೂ ದಿಗಿಲ ಬೇತಾಳದೋಳು
ಭುವಿ ಬಾನು ಬೆರೆತಂಥ ಹೆಬ್ಬಾವ ಬಿಳಿಲು
ಅಳಿಲು, ಗಿಳಿ, ಪಿಕಳಾರ, ಕೋಗಿಲೆ, ಕಾಜಾಣ
ಸಕಲ ಚರ ಖಚರಗಳ ತಂಗುದಾಣ
ಉಲ್ಲಾಸ ಉಕ್ಕಿಸುವ...ಕರುಳ ಕಕ್ಕುಲತೆಯ
ತಾಯಿ ಪ್ರಾಣ
ಇದು....ಪುರಾಣ

ಹೀಗಿರಲು ....
ಒಂದು ಮುಂಜಾನೆ ಮರದಲ್ಲಿ ಅಲ್ಲೋಲ ಕಲ್ಲೋಲ!
ಎಲ್ಲಿಂದ ಬಂತೋ ಆ ರಕ್ಕಸ ಹಕ್ಕಿ
ಕೊಡಲಿ ಕೊಕ್ಕು, ನಂಜು ಕಾರುವ ಪಂಜ
ಗಾಳಿಗುಡಿಸುವ ಊರಗಲದ ಗುರಾಣಿ ರೆಕ್ಕೆ
ಗರಿಗರಿಯೂ ಮಸೆದ ಇಬ್ಬಲಗಿನ ಬಿಚ್ಚುಗತ್ತಿ
ರಕ್ತ ಕಾರುವ ಕಣ್ಣು
ಅದಕ್ಕಿಂತಲೂ.....
ಮಿಗಿಲದರ ನೆತ್ತರಿನ ದಾವರ!

ಎತ್ತ ಹಾರಿದವೋ ಮಿಕ್ಕ ಹಕ್ಕಿಗಳೆಲ್ಲಾ
ದಿಕ್ಕುಗಾಣದೆ ದಿಕ್ಕಿಗೊಂದೊಂದರಂತೆ
ಹೂಂಕರಿಸಿ....ಪೂತ್ಕರಿಸಿ ಗುಡುಗಿತ್ತು ಗಿಡುಗ:
ಈ ಮರಕೆ......ಈ ಧರೆಗೆ ನಾನೇ ಸರದಾರ!

ಅಲ್ಲೇ ಮರದ ಬದಿಯಲ್ಲೊಂದು
ಹರಿವ ತಿಳಿನೀರಿನ ತೊರೆ
ಕಲಕಲ ಕಲರವದ ಮೊರೆವ ಕನಕಲ ಗಿಡುಗು;
ಅದರ ಬದಿ ಗುಡಿಸಲಲಿ ನರೆತ ಗಡ್ಡದ ಮುದುಕ
ಗುಡುಗುಡಿಯ ಸೇದುತ್ತಾ....ಕಾಲವನೇ ತೇಯುತ್ತಾ
ನೋಡುತ್ತಲೇ ಇದ್ದ ;
ಗಿಡುಗನನು ಕರೆದ.....
ಎಲೆ ಗಿಡುಗ ನಿನಗಿಲ್ಲವೇ ಮರುಕ
ನಾನು ಹುಟ್ಟುವ ಮೊದಲೇ
ನನ್ನಜ್ಜ, ಮುತ್ತಜ್ಜ, ಅವನಜ್ಜನಜ್ಜ
ಕಣ್ಣು ತೆರೆಯುವ ಮೊದಲೇ.....
ಇಲ್ಲೇ ಇತ್ತು ಈ ಮರ....ಮರ್ಮರಿಸುತ್ತಾ
ಕೊಂಬೆ ಕೊಂಬೆಯಲ್ಲೂ ಗಾಳಿ ಜೋಗುಳವಾಡಿ
ಹಕ್ಕಿ ಸಂಕುಲಕೆಲ್ಲ ಹಾಲೂಡಿಸುತ್ತಾ ;
ನೀ ಬಂದ ಗಳಿಗೆ....ದಿಗಿಲು ಬಂದಂತಾಯ್ತು ಈ ಧರಗೆ!
ದಿಕ್ಕು ದಿಕ್ಕಿಗೂ ದಿಗಿಲ ಮೊಟ್ಟೆಗಳಿಟ್ಟು
ಕೊಟ್ಟು ಕಾವು....ಬೆಳೆಯದಿರು ಸಾವು;

ನೀವುತ್ತಾ ಗಡ್ಡ.....ನುಡಿದ ಮುದುಕ ಕಡಲಂತೆ
ತಿಳಿಜಲದ ಕಲರವದ ಕನಕಲ ಗಿಡುಗಂತೆ;

ಗುಡುಗಿತ್ತು ಗಿಡುಗ:
ಏ.....ಮುದುಕ
ನನ್ನೆದುರು ತೋರದಿರು ನಿನ್ನ ತಂಬೂರಿ ಚಳಕ;
ನೋಡಿಲ್ಲಿ....ನನಗಾರು ಸಾಟಿ!
ಗರಗಸದ ಗರಿಗೆದರಿ....ನಂಜು ಪಂಜವ ಬಿಡಿಸಿ
ಕೇಕೆ ಹಾಕಿತು ಗಿಡುಗ
ಮಸೆದು ಮಚ್ಚಿನ ಕೊಕ್ಕು!
ಕಲಕಲ ಕಲರವದ ಗಿಡುಗು ಗುನುಗಿತ್ತು :
"ಬಿತ್ತಿದ್ದ ಬೆಳೆಯವೆ"
......ಮುದುಕ ನಕ್ಕ!

❑

✤ ಎಚ್ಚೆನ್. ಸೋಮಶೇಖರ ಗೌಡ, ಪಿಡಬ್ಲ್ಯು ಕಛೇರಿ ಪಕ್ಕ, ಮೊದಲನೇ ಮುಖ್ಯ ರಸ್ತೆ,
ಪಿ.ಸಿ. ಬಡಾವಣೆ, ಕೋಲಾರ - ೫೬೩ ೧೦೧.

ವ್ಯಕ್ತ ಮಧ್ಯದ ಗುರುವು*

- ಎಸ್.ಜಿ. ಸಿದ್ಧರಾಮಯ್ಯ

ಅದೊಂದು ನಡು ಹಗಲು ಅಡ್ಡದಾರಿಯ ಹಿಡಿದು
ನಡೆದಿದ್ದೆ ಊರ ಮಧ್ಯದ ತೇರಬೀದಿಯ ಗುಂಟ
ಸಾಲಿಟ್ಟ ಜನ ಎಲ್ಲ ಪರಿಚಿತರೆ ಹರ ಕರೆದಂತೆ
ಹರ ತೆರೆದಂತೆ ಪಾಪ ಪುಣ್ಯದ ಬಯಲು

ಮಳೆಯಲ್ಲಿ ಮಿಂದಂತೆ ಅಚ್ಚರಿಯ ದೀವಟಿಗೆ
ಹತ್ತಿ ಉರಿದಂತೆ ಎಚ್ಚರದ ಹೆಜ್ಜೆ ಗತಿ
ನೋಡನೋಡುತ ಕೂಡಿದ ಕೊನೆ ಗುರು
ಭಕ್ತನ ಮನೆ ಗುರುವಲ್ಲಿ ಮಧ್ಯಬಿಂದು

ಆನಂದ ಬದಿಯಲ್ಲಿ ನುಗುಡೋಣಿ ನಡುವಲ್ಲಿ
ನಾಗಭೂಷಣನಿದ್ದ ಸಪಿತಾಳ ಬಲದಲ್ಲಿ
ಬಿಂದು ಮಧ್ಯದ ಗುರುಗೆ ಅಂದು ಹರುಷವದೇನೋ
ಹಿಡಿಕೆಯಲ್ಲಿ ಒಡೆದಿದ್ದ ಕಲ್ಲು ಸಕ್ಕರೆ ಚೂರು

ಮಡಿಕೆಯಲಿ ಹಿಡಿದಿಟ್ಟ ಕವನಗಳ ಸಾಲು ಸಾಲು
ಭಂಗನೆದ್ದನು ನುಗುಡೋಣಿ ಸಂಗಬೇಡದ ರೀತಿ
ಭಂಗ ಬಿತ್ತುತ ಹರಿದ ಅಭಂಗಗಳ ಹಾಡ ಹಾಡಿ
ವಾಲಿಕಾರನ ಕೂಗು ಕೆಂಪಿನೋಕುಳಿಯಾಗೆ

ನಾಗಭೂಷಣನೆದ್ದ ನಾಗಬೆತ್ತವ ಹಿಡಿದು
ಪತ್ರೆ ದಾಸೋಹದಲ್ಲಿ ನಿತ್ಯ ಜಂಗಮವೆಂದು
ಉಳುವ ರೈತನ ಗುಳದ ಗೆರೆಯಲಿ ಪಾರಿವಾಳ
ಹೆಜ್ಜೆ ಹುಡುಕುತ ನಡೆದ ವ್ಯಕ್ತ ಮಧ್ಯದ ಗುರುವು

❑

* ಜಿ.ಎಸ್.ಎಸ್. ಕನಸಿನಲ್ಲಿ ನಡೆಸಿಕೊಟ್ಟ ಕವಿಗೋಷ್ಠಿ

✚ **ಎಸ್. ಜಿ. ಸಿದ್ಧರಾಮಯ್ಯ, ಪ್ರಿನ್ಸಿಪಾಲರು,**
ಸರ್ಕಾರಿ ಪ್ರಥಮದರ್ಜೆ ಕಾಲೇಜು, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ.

ಜೀವಸಂಪಿಗೆ ಎಂಬೊ ಜಡೆಮಾದ

- ಸರಸ್ವತಿ .ದು

೧.

ಅಗೋ ಅಲ್ಲಿ
ಆಳ ಪಾತಾಳದೊಳಗೊಂದು
ದೊಡ್ಡ ಸಂಪಿಗೆ ಮರ
ಏಳು ಏಳೇಳು ಎಪ್ಪತ್ತೇಳು ಕೋಟಿ
ಎತ್ತರಕೆ ಬೆಳೆದ ಮರ ಕಾಣಲು
ಇಳಿದು ಇಳಿದಿಳಿದು ಬಸವಳಿದು
ತಂಪನೆಯ ತೊರೆ ತುಳಿದು
ಮತ್ತೇರಿದರೆ ಮರ ಇದಿರು

ಅದುರದುರುವ ಮೈ
ಬೆವರುವ ಮನ ಹೊತ್ತು
ನಿಂತು ಕತ್ತೆತ್ತಿದರೆ
ಎತ್ತರ ಕಾಣದು
ಕತ್ತು ಬಗ್ಗಿಸಿದರೆ
ಬೇರು ಕಾಣದು
ಕಣ್ಣೆದುರು
ದುಂಡು ದುಂಡನೆ
ದೊಡ್ಡ, ಪುಟ್ಟ ಪುಟಾಣಿ ಬಂಡೆಗಳು
ತಣ್ಣಗೆ ಬಡಿವ ಗಾಳಿ
ನಡುಕ ಹುಟ್ಟಿಸುವ ಮೌನ

ಆಕಾಶ ಸೀಳಿ ನುಗ್ಗಿದ ಮರ
ಪಾತಾಳದಾಳ ಕೊರೆದಿಳಿದ ಬೇರು
ಮಗ್ಗುಲಲಿ ಬಿದ್ದಿದ್ದವೆರಡು

ಕೊಂಬೆಗಳ ಬೃಹತ್ ಬಂಡೆ

ಬಿದ್ದ ಕೊಂಬೆಗಳಿಗೆಷ್ಟು ಯುಗವೋ?
ನಿಂತ ಮರಕ್ಕೆಷ್ಟು ಯುಗವೋ?
ಇಳಿದ ಬೇರಿಗೆ, ಉದುರುದುರಿ
ಚಿಗುತ ಎಲೆಗಳಿಗೆಷ್ಟು ಯುಗ?
ನಡುಕ ಹುಟ್ಟಿಸುವ ಮೌನಕ್ಕೆಷ್ಟು ಯುಗ ?
ಬೇರು ಇಳಿ ಬಿಡಿಸಿಕೊಂಡ ಮಣ್ಣಿಗೆ
ಹೂವಾಗಿ ಬನಕೆಲ್ಲಾ ಅಡರಿದ ಕಂಪಿಗೆ
ಎಷ್ಟೆಷ್ಟು ಯುಗವೋ?

ನಿನ್ನ ಎಲೆ ಎಲೆಗೆ
ಬೇರು ಬೇರಿಗೆ
ಕಾಂಡ, ಕೊಂಬೆ, ರೆಂಬೆ
ರೆಂಬೆಯ ಸೀಳಿಗೆ
ಶರಣು ಶರಣೆನ್ನುವ ಶಕ್ತಿ ಕೊಡೆಂದೆ.

೨.

ಓ ಹೆಣ್ಣೆ!
ನಿನ್ನ ಜನ್ಮವೊಂದು
ಎಳೆ ಚಿಗುರೆಲೆಯ ತುದಿ
ಚಿಗುರ ತುದಿಗೆ
ಯುಗದ ಲೆಕ್ಕಾಚಾರ ದಕ್ಕೀತೆ
ಎಂದು ನಕ್ಕವರಾರು?
ಒಡೆಯ ಜಡೆಮಾದನೆ?
ಜಡೆ ಮಾದಿಯೆ?
ಅವಳೆ? ಅವನೆ?
ಅವನೆ? ಅವಳೆ?
ಅವಳವನಲ್ಲದ ಮರವೆ?

ಸುಳಿಸುಳಿದು
ಎಳೆದೆಳೆದು
ಬಳಿದು, ಸೀಳಿ ಅವಳನು
ಗರಗರನೆ ಸುತ್ತುವ ಸುಳಿ

ವರವೇ? ಶಾಪವೆ?
ಹುಟ್ಟೆ? ಸಾವೆ? ಬದುಕೆ?
ಕಡಿದು ಬುಡಕೆ ಬಿದ್ದಳು
ಜಡೆಮಾದನೆ
ನಾ ಕಾದಾಡಲಾರೆನೊ ನಿನ್ನೊಡನೆ
ನೀ ಮಡಿಲಿಗೆ ಎಸೆದ
ಹಿಡಿ ಬದುಕು ನಿನಗೇ ಮುಡಿಪು
ಹಿಡಿ ಬದುಕೊಳಗೆ
ಇಂಪುಂಟು ತಂಪುಂಟು
ಕಂಪುಂಟು, ಕಾಪಿಡುವ ಕಾವುಂಟು
ಕಾದು ಸುಡುವ ಕಾರಿರುಳುಂಟು
ರಣಾಂಗಣ ಉಂಟು ಮಸೆದ ಮಚ್ಚುಗಳುಂಟು
ನೀ ಎಸೆದ ಬದುಕ
ಬೆನ್ನಿಗೆ ಭಾರವಾಗಿಸಿ ಬಗ್ಗು ಬಡಿವೆಯೋ
ಹೆಗಲ ಮೇಲಿನ ನೆತ್ತಿಯಲಿರಿಸಿ ನಿಲ್ಲಿಸುವೆಯೋ
ನಿನಗೇ ಬಿಟ್ಟಿದ್ದು.

ಏನಿಲ್ಲವೆಂದರೂ
ಮಡಿದು ಮಣ್ಣಲಿ ಹೂತು
ಕೊಳೆತು, ಕಳಿತು
ಈ ಚಣ ಹುಟ್ಟುವ ಬೇರಿಗೊ, ಎಲೆಯ ಮೊಳಕೆಗೊ
ಗೊಬ್ಬರವಾಗಿಸಿಕೊ
ನಾ ಕಾದಾಡಲಾರೆನೊ ನನ ಗೆಳೆಯ ಜಡೆಮಾದ.

✤ ಸರಸ್ವತಿ .ದು. ೧೧೯, ಪಶ್ಚಿಮ ಕಾರ್ಡ್ ರಸ್ತೆ,
೨ನೇ ಹಂತ, ಮಹಾಲಕ್ಷ್ಮೀಪುರ, ಬೆಂಗಳೂರು - ೫೬೦೦೮೬.

*ರೇಣುಕಾ ಎಲ್ಲಮ್ಮ : ಅಂತಸ್ಥಗೊಂಡ ಮಾನವಚರಿತ್ರೆ

- ಡಾ॥ ಕೆ. ವೈ. ನಾರಾಯಣಸ್ವಾಮಿ

ಮೌಖಿಕ ಪರಂಪರೆಯ ಎಲ್ಲಮ್ಮ ರೇಣುಕಾ ಕಥನವು ಅಕ್ಷರ ಚರಿತ್ರೆಯು ದಾಖಲಿಸದ ಅಪೂರ್ವ ಒಳನೋಟಗಳನ್ನು, ಚರಿತ್ರೆಯಲ್ಲಿ ನಡೆದ ಅತ್ಯಂತ ಸೂಕ್ಷ್ಮ ಸಂಘರ್ಷಗಳನ್ನು, ಸಾಂಸ್ಕೃತಿಕ ವಾಗ್ವಾದವನ್ನು, ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯನ್ನು ದಾಖಲಿಸಿದೆ. ಸಮಾಜವೊಂದರಲ್ಲಿ ಉಂಟಾಗುವ ಮೌಲ್ಯ ಪಲ್ಲಟಗಳಿಗೆ, ಪ್ರಧಾನ-ಅಧೀನ ಶಕ್ತಿಗಳ ನಡುವಿನ ಘರ್ಷಣೆಗಳಿಗೆ, ಜನಪದ ಸಮಷ್ಟಿ ಪ್ರಜ್ಞೆ ಪ್ರತಿಕ್ರಿಯಿಸಿರುವ ಕ್ರಮವನ್ನು ಈ ಕಥನ ಮಂಡಿಸುತ್ತದೆ.ಭಾರತೀಯ ಸಂಸ್ಕೃತಿ ಮತ್ತು ಸಮಾಜದ ಕೆಲ ಸಂಕೀರ್ಣ ಸಮಸ್ಯೆಗಳನ್ನು ಜನಪದ ಸಂಸ್ಕೃತಿಯ ಸಂದು ಕಟ್ಟಿನಲ್ಲಿ ವಿವರಿಸಿಕೊಳ್ಳುವ ಅಗತ್ಯವನ್ನು ಈ ಕಥನದ ಓದು, ಅಧ್ಯಯನಗಳು ದೃಢಪಡಿಸುತ್ತವೆ. ಇಲ್ಲಿ ಉಲ್ಲೇಖಿಸಬೇಕಿರುವ ಮುಖ್ಯವಾದ ವಿಷಯವೊಂದಿದೆ. ಜನಪದ ಪರಿಕರಗಳಲ್ಲಿಯೇ ಅಂತಸ್ಥಗೊಂಡಿರುವ ಚರಿತ್ರೆ, ಸಮಾಜ, ಧರ್ಮ, ವಿಜ್ಞಾನದಂಥ ಜ್ಞಾನಮೂಲಗಳಿಂದಲೇ ಇಂದು ನಮ್ಮ ಸಾಂಸ್ಕೃತಿಕ ಚರಿತ್ರೆಯನ್ನು, ಸಾಮಾಜಿಕ ಜೀವನವನ್ನು, ಧಾರ್ಮಿಕ ಮೌಲ್ಯಗಳನ್ನು ಪುನರ್ ರಚಿಸಿಕೊಳ್ಳಬೇಕಿದೆ.ಈ ಬಗೆಯ ಆತ್ಮಪರಿವೀಕ್ಷಣೆಯ ಮಾದರಿಯ ಶೋಧ, ಇವೊತ್ತಿನ ಜರೂರು, ಅನಿವಾರ್ಯತೆ ಆಗಿದೆ. ಎಲ್ಲಮ್ಮ ರೇಣುಕಾ ಕಥನವನ್ನು ಕುರಿತ ಟಿಪ್ಪಣಿ ಈ ಬಗೆಯದಾಗಿದೆ. ಜಾನಪದ ಕಥನವೊಂದು ತನ್ನಲ್ಲಿ ಬಚ್ಚಿಟ್ಟುಕೊಂಡಿರುವ ಚರಿತ್ರೆಯ ಗುಟ್ಟುಗಳನ್ನು ಹೊರಗೆಳೆಯುವುದು ಈ ಟಿಪ್ಪಣಿಯ ಮುಖ್ಯ ಉದ್ದೇಶವಾಗಿದೆ.

ವೈದಿಕ ಹಿನ್ನೆಲೆ :

ಎಲ್ಲಮ್ಮ ಮತ್ತು ರೇಣುಕಾದೇವಿ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಅತ್ಯಂತ ಪ್ರಬಲ ಮಾತೃ ದೇವತೆ. ಬೆಳಗಾಂ ಜಿಲ್ಲೆಯ ಸವದತ್ತಿಯಲ್ಲಿ ಈಕೆಯ ಶಕ್ತಿ ಕೇಂದ್ರವಿದೆ. ಇಲ್ಲಿ ಪ್ರತಿ ವರ್ಷ ಲಕ್ಷಾಂತರ ಭಕ್ತರು ನಾಡಿನ ಎಲ್ಲಾ ಕಡೆಯಿಂದ ಬಂದು ಜಾತ್ರೆ ಜರುಗಿಸಿ, ಪೂಜೆ ಸಲ್ಲಿಸಿ ಹೋಗುತ್ತಾರೆ. ಈ ಎಲ್ಲಮ್ಮ ದೇವತೆಯಾಗಿ ನೆಲೆಗೊಳ್ಳುವ ಮೊದಲು ಜಮದಗ್ನಿ ಎಂಬ ಋಷಿಯ ಪತ್ನಿಯಾಗಿದ್ದಳು. ಈಕೆ ಜಾನಪದ ಸ್ತ್ರೀದೇವತೆಯಾಗಿ ರೂಪಾಂತರಗೊಂಡಿದ್ದರ ಹಿನ್ನೆಲೆಯನ್ನು ಜನಪದ ಜಗತ್ತು ಮಾತೃಪ್ರಧಾನ ಹಿನ್ನೆಲೆಯಲ್ಲಿ ವಿವರಿಸಿದ್ದರೆ, ಶಿಷ್ಟ ಪುರಾಣಗಳು ರೇಣುಕಾದೇವಿಯ ಪತನವನ್ನು ಪಿತೃಪ್ರಧಾನ ಹಿನ್ನೆಲೆಯಲ್ಲಿ ನಿರೂಪಿಸಿವೆ. ಶಿಷ್ಟ ಪುರಾಣಗಳು ಪ್ರಸ್ತಾಪಿಸುವ ಜಮದಗ್ನಿ ಋಷಿಯ

* ಕತ್ತಾಲ ದಾರಿ ದೂರ - ಜನಪದ ಖಂಡಕಾವ್ಯಗಳ ಸಂಕಲನ. ಸಂ. ಕೃಷ್ಣಮೂರ್ತಿ ಹನೂರು.

ಕಥೆಯೊಳಗೆ ರೇಣುಕಾದೇವಿ ಓರ್ವ ಸಾಮಾನ್ಯ ಗೃಹಿಣಿ. ಆಕೆ ತ್ರಿಕರಣ ಶುದ್ಧಿಯಾಗಿ ಗಂಡನನ್ನು ಭೂಲೋಕ ದೇವರೆಂದು ನಂಬಿದವಳು. ಈಕೆ ಎಂಥ ಪತಿವ್ರತೆ ಎಂದರೆ, ಪ್ರತಿದಿನವು ನದಿಗೆ ಹೋಗಿ ಮಡಿಯಾಗಿ ತನ್ನ ಪಾತಿವ್ರತ್ಯದ ಬಲದಿಂದ ಮರಳಲ್ಲಿ ಗಡಿಗೆಯನ್ನು ಮಾಡಿಕೊಂಡು, ಸರ್ಪವನ್ನು ಸಿಂಬೆಯಾಗಿರಿಸಿಕೊಂಡು ನೀರನ್ನು ತಂದು ಗಂಡನ ಸೇವೆ ಮಾಡಿಕೊಂಡು ಇದ್ದವಳು. ಆದರೆ ಒಂದು ದಿನ ಈಕೆ ನದಿಗೆ ಹೋದಾಗ ಅಲ್ಲಿ ಚಿತ್ರರಥ ಎಂಬ ಗಂಧರ್ವ ತನ್ನ ಸತಿಯೊಡನೆ ಜಲಕ್ರೀಡೆಯಾಡುತ್ತಿದ್ದನಂತೆ. ಆ ದೃಶ್ಯವನ್ನು ಕಂಡು ರೇಣುಕೆ ಒಂದರಗಳಿಗೆ ಚಿತ್ರರಥನಲ್ಲಿ ಅನುರಕ್ತಳಾದಳಂತೆ. ಹೀಗೆ ಮಾನಸಿಕವಾಗಿ ವಿಕಲ್ಪಳಾದ ರೇಣುಕಾದೇವಿ ಮರಳ ಗಡಿಗೆ ಮಾಡಲಾಗದೆ, ಸರ್ಪವನ್ನು ಸೋಕಲಾರದೆ ಆಶ್ರಮಕ್ಕೆ ಹಿಂದಿರುಗಿದಳು. ತನ್ನ ತಪೋಬಲದಿಂದ ನಡೆದ ಘಟನೆಯನ್ನು ಅರಿತ ಜಮದಗ್ನಿ ಆಕೆ ಪಾತಿವ್ರತ್ಯ ನಷ್ಟಗೊಂಡ ಪತಿತಳೆಂದು ತಿರಸ್ಕರಿಸುತ್ತಾನೆ. ಅಲ್ಲದೆ ತನ್ನ ಐದು ಜನ ಮಕ್ಕಳನ್ನು ಕರೆದು ತಾಯಿಯ ಶಿರ ಕಡಿವಂತೆ ಆಜ್ಞೆ ವಿಧಿಸುತ್ತಾನೆ. ಯಾರೂ ಮುಂದು ಬಾರದಿದ್ದಾಗ ಕಿರಿಮಗ ಪರಶುರಾಮ ತಂದೆ ಆಜ್ಞೆಯಂತೆ ತಾಯಿಯ ತಲೆ ಕಡಿಯುತ್ತಾನೆ. ಇದರಿಂದ ಸಂತೋಷಗೊಂಡ ಜಮದಗ್ನಿ ಪರಶುರಾಮನಿಗೆ ವರ ಬೇಡುವಂತೆ ಕೇಳುತ್ತಾನೆ. ಆಗ ಪರಶುರಾಮ 'ನನ್ನ ತಾಯ ಬದುಕಿಸು' ಎಂದು ವರ ಪಡೆದು ರೇಣುಕೆಗೆ ಜೀವದಾನ ಮಾಡುತ್ತಾನೆ. ಆದರೆ ಇದರಿಂದ ಪರಶುರಾಮನಿಗೆ ತಾಯಿ ಸಿಕ್ಕಳೆ ಹೊರತು ರೇಣುಕೆಗೆ ಜಮದಗ್ನಿಯ ಪತಿತ್ವ ಮರಳಿ ಸಿಕ್ಕಲಿಲ್ಲ. ಆಕೆಯ ಮೇಲಿನ ಪಾತಿವ್ರತ್ಯಭಂಗದ ಅಪವಾದವು ಅಳಿಯಲಿಲ್ಲ. ಈ ಕಥೆಯಲ್ಲಿ ಹೆಣ್ಣು ಮಾನಸಿಕವಾಗಿಯೂ ಪರಪುರುಷನನ್ನು ಕಲ್ಪಿಸಿಕೊಳ್ಳುವುದು ಪತಿವ್ರತಾ ಧರ್ಮಕ್ಕೆ ವಿರುದ್ಧವೆಂದು ಲೋಕಕ್ಕೆ ಸಾರಿ ಹೇಳುವ ಪುರುಷ ಹಿತಾಸಕ್ತಿಯನ್ನು ಕೊಂಡಾಡುವ ವಿವರಗಳೇ ತುಂಬಿ ಹೋಗಿವೆ. ಇದೇ ಬಗೆಯ ಸೀತೆ, ಅಹಲ್ಯೆ, ದ್ರೌಪದಿ ಮುಂತಾದ ನೂರಾರು ಉದಾಹರಣೆಗಳು ವೈದಿಕ ಸಾಹಿತ್ಯದ ತುಂಬಾ ಸಿಗುತ್ತವೆ.

ಜನಪದ (ಕಥನ) ಹಿನ್ನೆಲೆ :

ಎಲ್ಲಮ್ಮ ರೇಣುಕಾ ಕಥನದಲ್ಲಿ ಎಲ್ಲಮ್ಮ ಆದಿಮಶಕ್ತಿ ಪಡೆದ ಸಂಪನ್ನೆ.ಈಕೆಗೆ ಮದುವೆಯ ವಯಸ್ಸು ಪ್ರಾಪ್ತವಾಗಲು ಎಲ್ಲ ಕಡೆಗಳಿಂದ ವರರ ಭಾವಚಿತ್ರಗಳನ್ನು ತರಿಸುತ್ತಾರೆ. ಮುರಿದ ಮೂಗುತಿ ತೊಡಲಾರೆ, ಸಾಯುವ ಗಂಡನ ವರಿಸಲಾರೆ ಎಂದು ಆ ಎಲ್ಲಾ ವರರನ್ನು ಎಲ್ಲಮ್ಮ ತಿರಸ್ಕರಿಸುತ್ತಾಳೆ. ತನಗೆ ತಕ್ಕ ವರನನ್ನು ಆಯ್ಕೆ ಮಾಡಿಕೊಳ್ಳಲು ಮನೆ ಬಿಟ್ಟು ಹೊರಡುತ್ತಾಳೆ. ಹಾದಿಯಲ್ಲಿ ಭೇಟಿಯಾದ ಕೊರವಂಜಿಯ ಸಲಹೆಯಂತೆ ಗೋಕರ್ಣದ ಬೆಟ್ಟದಲ್ಲಿ ತಪಸ್ಸು ಮಾಡುತ್ತಿದ್ದ ಜಮದಗ್ನಿಯನ್ನು ವಿವಾಹವಾಗುವಂತೆ ಕೇಳುತ್ತಾಳೆ. ಆತ ಮದುವೆಗೆ ಕೆಲ ಷರತ್ತುಗಳನ್ನು ಒಡ್ಡುತ್ತಾನೆ. ಆ ಷರತ್ತುಗಳನ್ನು ಒಪ್ಪಿ ಎಲ್ಲಮ್ಮ ಆತನನ್ನು ವಿವಾಹವಾಗುತ್ತಾಳೆ. ಆದರೆ ಈ ದಾಂಪತ್ಯವು ಫಲಿಸದೆ, ರೇಣುಕಾ ಗರ್ಭವತಿಯಾಗದೆ ಬಂಜೆ ಎಂಬ ಸಮಾಜ ನಿಂದನೆಗೆ ಗುರಿಯಾಗುತ್ತಾಳೆ. ಆದರೆ ರೇಣುಕಾ ತಾನು ಬಂಜೆ ಎಂಬುದನ್ನು ನಂಬಲು ಸಿದ್ಧಳಿಲ್ಲ. ಗಂಡನ ಮನೆ ಬಿಟ್ಟು ಹೊರ ನಡೆಯುತ್ತಾಳೆ. ಕಾಡಿನಲ್ಲಿ ಘೋರ ಶೋಕವ ಮಾಡಿ ತ್ರಿಮೂರ್ತಿಗಳನ್ನು ಪ್ರಸನ್ನಗೊಳಿಸಿಕೊಂಡು ಅವರಿಂದ ಗಜಸಿಂಬೆ ಹಣ್ಣು ಪಡೆದು ಬಸಿರಾಗುತ್ತಾಳೆ. ಈಕೆಗೆ ಬಯಕೆಗಳು ಶುರುವಾಗಿ, ಅವುಗಳನ್ನು

ತಿರುಗಿಸಿಕೊಳ್ಳುವ ಸಲುವಾಗಿ ಊರಿಂದ ಊರಿಗೆ ಸಂಚರಣೆ ಕೈಕೊಂಡು ನೆಲ, ಜಲಗಳನ್ನು ಅಕ್ರಮವಾಗಿ ವಶಪಡಿಸಿಕೊಂಡು ಒಡೆಯರಾಗಿಸಿಕೊಂಡಿದ್ದ ಪುರುಷರ ಗರ್ವಭಂಗ ಮಾಡಿ ಭೂಮಿ ಮತ್ತು ಜಲಗಳ ಸೆರೆ ಬಿಡಿಸುತ್ತಾಳೆ. ಅದೇ ಸಮಯಕ್ಕೆ ತಿಂಗಳು ತುಂಬಿ ಹೆರಿಗೆಯ ಬೇನೆ ಕಾಣುವಾಗ ಚಂಪಗುತ್ತಿಯಲ್ಲಿ ತಂಗುತ್ತಾಳೆ. ಮೊದಲ ಸೂಲು ಆದ್ದರಿಂದ ತವರು ಮನೆಗೆ ಕರೆ ಹೋಗುತ್ತದೆ. ಅಣ್ಣಂದಿರಿಗೆ ಅದೇ ಸಮಯಕ್ಕೆ ತಂಗಿಗೆ ಮಗ ಹುಟ್ಟಿ ತಮ್ಮನ್ನು ಕೊಂದು ರಾಜ್ಯ ಕಿತ್ತುಕೊಂಡಂತೆ ಕನಸಾಗುತ್ತದೆ. ಆಗ ಅಣ್ಣಂದಿರು ತಂತ್ರ ಹೂಡಿ ಹೆಣ್ಣು ವೇಷದ ಗಂಡು, ಬಜ್ಜಣ್ಣ ಎಂಬುವನನ್ನು ಸೂಲಗಿತ್ತಿಯಾಗಿ ಕಳುಹಿಸಿಕೊಡುತ್ತಾರೆ. ಹೆಣ್ಣು ಹುಟ್ಟಿದರೆ ಉರಿಕೊಯ್ದು ಬಾ, ಗಂಡು ಹುಟ್ಟಿದರೆ ಶಿರ ಕೊಯ್ದು ಬಾ ಎಂದು ಆದೇಶಿಸಿ ಕಳುಹಿಸುತ್ತಾರೆ. ಆದರೆ ಈ ವೇಷಧಾರಿ ಸೂಲಗಿತ್ತಿಯ ಮೋಸವನ್ನು ಅರಿತ ಎಲ್ಲಮ್ಮ ಅವನನ್ನು ಷಂಡನಾಗುವಂತೆ ಶಪಿಸುತ್ತಾಳೆ. ಹುಟ್ಟಿನಿಂದಲೇ ತಂದೆಯ ಗುರುತಿಲ್ಲದ ಬಾಲಕ ಪರಶುರಾಮ ಸಮಾಜದಲ್ಲಿ ಅಕ್ರಮ ಶಿಶುವೆಂಬ ಅಪವಾದಕ್ಕೆ ಈಡಾಗಬೇಕಾಗುತ್ತದೆ. ಅದರಿಂದ ಪಾರಾಗಲು ತಂದೆ ಯಾರೆಂದು ತಿಳಿಯಲು ಕಾತರಿಸುತ್ತಾನೆ. ತಾಯಿ ಅನೇಕ ಸಬೂಬುಗಳನ್ನು ಹೇಳಿ ತಪ್ಪಿಸಿಕೊಳ್ಳುತ್ತಾಳೆ. ಆದರೆ ಮುಂದೆ ಮಗ ಪರಶುರಾಮ ತಾಯಿಯ ಶೀಲವನ್ನು ಶಂಕಿಸಿ ಆಕೆಯ ಪಾವಿತ್ರ್ಯವನ್ನು ಅನುಮಾನಿಸುತ್ತಾನೆ. ಅನೇಕ ಪರೀಕ್ಷೆಗಳಿಗೆ ತಾಯಿಯನ್ನು ಗುರಿಪಡಿಸುತ್ತಾನೆ. ಆಕೆ ಎಲ್ಲಾ ಪರೀಕ್ಷೆಗಳಲ್ಲಿ ಜಯಿಸಿದರೂ ಪರಶುರಾಮ ತಾಯಿಯ ನಿಜಾಯತಿಯನ್ನು ಒಪ್ಪುವುದಿಲ್ಲ. ಕೊನೆಗೆ ಮಗನ ಹಿಂಸೆ ತಡೆಯಲಾರದೆ ಎಲ್ಲಮ್ಮ ತನ್ನ ಗಂಡ ಜಮದಗ್ನಿ ಎಂದು ಹೆಸರು ಹೇಳುತ್ತಾಳೆ. ತಂದೆಯನ್ನು ಹುಡುಕಿಹೋದ ಪರಶುರಾಮನಿಗೆ ಜಮದಗ್ನಿ ಕಾರ್ತೀಕ ರಾಜರ ಬೇಟೆಯಲ್ಲಿ ಕೊಲ್ಲಲ್ಪಟ್ಟ ಸಂಗತಿ ತಿಳಿದು ಮಾವಂದಿರ ಮ್ಯಾಲೆ ವ್ಯಗ್ರಗೊಂಡು, ಕಾರ್ತೀಕ ರಾಜರ ರಾಜ್ಯಕ್ಕೆ ಹೋಗಿ ಅವರನ್ನು ಕೊಂದು, ರಾಜ್ಯವನ್ನು ವಶಪಡಿಸಿಕೊಂಡು ತಂದೆಯ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳುತ್ತಾನೆ.

ಕಥನದ ಕೊನೆಯಲ್ಲಿ ರೇಣುಕಾ ತನ್ನ ಕಣ್ಣ ಮುಂದೆಯೇ ತನ್ನ ತವರು ಸರ್ವನಾಶವಾದದ್ದನ್ನು ಕಂಡು ತನ್ನ ಮಗನು ಮಾಡಿದ್ದು ಮಹಾ ಪಾಪ ಕಾರ್ಯವೆಂದು ಬಗೆದು, ಇಂಥ ಪಾಪಿಷ್ಟನ ತಾಯಿಯಾಗಿ ಬದುಕಬಾರದೆಂದು ತನ್ನನ್ನೇ ಶಪಿಸಿಕೊಂಡು ಭೂಮಿಗಿಳಿದು ಹೋಗುತ್ತಾಳೆ.

ಇಲ್ಲಿ ಇಡೀ ಕಥನವು ಮಾತೃ ಪ್ರಧಾನ ಸಮಾಜವು ಆರ್ಯರಿಂದ ಪಿತೃಪ್ರಧಾನಕ್ಕೆ ಪರಿವರ್ತನೆಯಾದ ನಂತರ ಪುರುಷ ಮೌಲ್ಯಗಳನ್ನು ಜನಪದ ಜೀವನ ಕ್ರಮಗಳು ಒಪ್ಪಿಕೊಂಡಿಲ್ಲದ ನೆಲೆಯನ್ನು ಕಟ್ಟಿಕೊಡುತ್ತವೆ. ಜನಪದರ ಜೀವನ ಮೌಲ್ಯಗಳು, ಸ್ಮೃತಿಗಳು ಇನ್ನೂ ಮಾತೃ ಪರಂಪರೆಯಲ್ಲಿಯೇ ತಮ್ಮ ಗುರುತುಗಳನ್ನು ಉಳಿಸಿಕೊಂಡಿರುವುದರ ಸಾಕ್ಷಿಯಾಗಿ ಇವನ್ನು ನೋಡಬಹುದು.

ಓದಿನ ಗ್ರಹಿಕೆಗಳು :

ಎಲ್ಲಮ್ಮ ರೇಣುಕಾ ಕಥನವನ್ನು ಓದುವಾಗಿನ ನನ್ನ ಗ್ರಹಿಕೆಗಳನ್ನು ಪ್ರೊ. ಎ. ಕೆ. ರಾಮಾನುಜನ್ ಅವರ ಮಾತೊಂದನ್ನು ಉಲ್ಲೇಖಿಸುವುದರ ಮೂಲಕ ಆರಂಭಿಸಬಹುದು. ಕಥೆಗಳು ಭಾರತದ ಘೋಷಿತ ಮೌಲ್ಯಗಳಿಗಿಂತ ಭಿನ್ನವಾದ ಸತ್ಯವನ್ನು ಅನಾವರಣಗೊಳಿಸುತ್ತವೆ.

ಈ ಮಾತು ಎಲ್ಲಮ್ಮ ರೇಣುಕಾ ಕಥನದಲ್ಲಿ ಅಂತಸ್ಥಗೊಳಿಸಿಕೊಂಡಿರುವ ಸಂಗತಿಗಳನ್ನು ಹೆಕ್ಕಿ ತೋರಲು ಸೂಕ್ತ ಮನೋಭೂಮಿಕೆಯನ್ನು ಒದಗಿಸುತ್ತದೆ.

ಎಲ್ಲಮ್ಮ ರೇಣುಕಾ ಕಥನವನ್ನು ವೈದಿಕ ಪರಂಪರೆ ಹಾಗೂ ಜನಪದ ಪರಂಪರೆಗಳೆರಡೂ ದಾಖಲಿಸಿವೆ. ಈ ಎರಡೂ ಪರಂಪರೆಗಳು ಈ ಕಥನವನ್ನು ಮಂಡಿಸಿರುವ, ಸೃಷ್ಟಿಸಿರುವ ಕ್ರಮಗಳು ಭಾರತೀಯ ಸಂಸ್ಕೃತಿಯ ಅನೇಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ. ವೈದಿಕ ಪರಂಪರೆಯ ರೇಣುಕಾ ಕಥನ ಪಿತೃ ಕುಟುಂಬದ ಶ್ರೇಷ್ಠತೆಯನ್ನು ಪ್ರತಿಪಾದಿಸುವ ನೆಲೆಯದಾಗಿದ್ದರೆ, ಜನಪದ ಕಥನವು ಮಾತೃವಂಶ ವಿಚಾರಧಾರೆಯ ಪರವಾಗಿದೆ ಹಾಗೂ ಪಿತೃಕುಟುಂಬ ವ್ಯವಸ್ಥೆಯ ವಿರುದ್ಧ ನಡೆಸಿರುವ ಹೋರಾಟವನ್ನು, ಪ್ರತಿರೋಧವನ್ನು ದಾಖಲಿಸಿದೆ.

ಮೇಲುನೋಟಕ್ಕೆ ಎರಡು ಪರಂಪರೆಗಳ ಕಥನಗಳಲ್ಲಿ ನಡೆವ ಪ್ರಧಾನ ಘಟನೆ ರೇಣುಕಾ ಹತ್ಯೆ. ವೈದಿಕ ಪುರಾಣಗಳು ರೇಣುಕಾ ಹತ್ಯೆಯನ್ನು ಸಮರ್ಥಿಸುವಂತೆ ಚಿತ್ರಿತವಾಗಿದೆ. ಅಲ್ಲಿ ರೇಣುಕಾ ಒಂದರಘಳಿಗೆ ಪರ ಪುರುಷನಲ್ಲಿ ಅನುರಕ್ತಳಾಗಿ ಸತಿಧರ್ಮವನ್ನು ನಷ್ಟಗೊಳಿಸಿಕೊಂಡಿದ್ದರಿಂದ ಶಿರಚ್ಛೇದನಕ್ಕೆ ಗುರಿಯಾಗುತ್ತಾಳೆ. ಜನಪದ ಕಥನದಲ್ಲಿ ಆಕೆ ಗಂಡನ ಗುರುತನ್ನು ಹೇಳದ ಕಾರಣಕ್ಕಾಗಿ ಕೊಲ್ಲಲ್ಪಡುತ್ತಾಳೆ. ಮತ್ತು ಹೆತ್ತ ಮಗನ ಮುಂದೆ ಪಾತಿವ್ರತ್ಯವನ್ನು ಸಾಬೀತು ಮಾಡುವ ಪರೀಕ್ಷೆಗೆ ಒಳಗಾಗುತ್ತಾಳೆ. ತಾಯ್ತನಕ್ಕೆ ಆದ ಅವಮಾನದಿಂದ ಆಕೆ ಸಾಯುತ್ತಾಳೆ.ಈ ಘಟನೆಯನ್ನು ಕಥನದ ದಾಟಿ ಖಂಡಿಸುತ್ತದೆ. ಎಲ್ಲಮ್ಮನ ಅವಸಾನವು ಭಾರತದಲ್ಲಿ ಮಾತೃ ಕುಟುಂಬಪದ್ಧತಿ ನಾಶಗೊಂಡಿದ್ದರ ದಾಖಲೆಯಾಗಿ ಕಂಡು ಬರುತ್ತದೆ.

ಎಲ್ಲಮ್ಮ ರೇಣುಕಾ ಕಥನವು ಭಾರತೀಯ ಸಮಾಜದ ಸಂಕ್ರಮಣಕಾಲದ ದಾಖಲೆಯಾಗಿದೆ. ಇಲ್ಲಿ ಒಂದೆಡೆ ಪುರುಷ ವ್ಯವಸ್ಥೆಯ ಮೌಲ್ಯಗಳು ಬಲ ಪ್ರಯೋಗದಿಂದ , ಆಕ್ರಮಣದಿಂದ ಸಮಾಜವನ್ನು ತನ್ನ ಅಧೀನತೆಗೆ ತೆಗೆದುಕೊಳ್ಳಲು ನಡೆಸುತ್ತಿರುವ ವಿವರಗಳು ಸಿಗುವಂತೆಯೇ ಸ್ತ್ರೀ ಪ್ರಧಾನ ವ್ಯವಸ್ಥೆಯ ಮಾತೃ ಮೌಲ್ಯಗಳು ಪುರುಷ ವ್ಯವಸ್ಥೆಯಿಂದ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು. ತಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳಲು ನಡೆಸಿರುವ ಸಂಘರ್ಷದ ವಿವರಗಳನ್ನು ಒದಗಿಸುತ್ತವೆ. ಚರಿತ್ರೆ ಮೌನವಹಿಸುವ ಇಂಥ ಅನೇಕ ಘಟನೆಗಳ ಬಗ್ಗೆ ಈ ಕಥನವು ಸೊಲ್ಲೆತ್ತಿ ನುಡಿಯುವುದನ್ನು ಗಮನಿಸಬಹುದು.

ಎಲ್ಲಮ್ಮ ರೇಣುಕಾ ಕಥನ ಅಂತಸ್ಥಗೊಳಿಸಿಕೊಂಡಿರುವ ಮುಖ್ಯವಾದ ವಲಯಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಶಿಥಿಲವಾಗುತ್ತಿರುವ ಪ್ರಕ್ರಿಯೆಯ ದಾಖಲೆ.

೨. ಪಿತೃ ಪ್ರಧಾನ ವ್ಯವಸ್ಥೆಯ ಆಕ್ರಮಣಕ್ಕೆ ತೋರಿರುವ ಪ್ರತಿಭಟನೆಯ ವಿವರಗಳು

೩. ಕ್ಷೇತ್ರ ಅಧಿಕೃತ ಪ್ರತಿಪಾದನೆ

೪. ಶರಣ ಚಳುವಳಿಯಲ್ಲಿ ಸ್ತ್ರೀಸ ಪುರುಷ ತಾರತಮ್ಯ

ಪ್ರಭುತ್ವ ಪರವಾದ ವೈದಿಕ ಚರಿತ್ರೆ ಮತ್ತು ಸಂಸ್ಕೃತಿ ಮರೆಮಾಚಿದ್ದ ಈ ಸಂಗತಿಗಳಿಗೆ ಜನಪದರ ಸಮಷ್ಟಿ ಪ್ರಜ್ಞೆಯು ಎಲ್ಲಮ್ಮ ರೇಣುಕಾ ಕಥನದ ಮೂಲಕ ಪ್ರತಿಕ್ರಿಯಿಸಿದೆ. ಪ್ರತಿಯೊಂದು

ಸಮಾಜದಲ್ಲಿ ಅಧಿಕೃತವಾದ ಪಠ್ಯಗಳಿಗೆ ವಿರುದ್ಧವಾಗಿ ಅಲಿಖಿತವಾದ ಅನಧಿಕೃತ ಪಠ್ಯಗಳು ಲಭ್ಯವಿದ್ದು ಅವು ಅಧಿಕೃತ ಪಠ್ಯಗಳು ನಿರ್ದೇಶಿಸುವ ಮೌಲ್ಯಗಳನ್ನು ಒಡೆದುಹಾಕುತ್ತಿರುತ್ತವೆ.ಅಂತಹ ಒಂದು ಉದಾಹರಣೆಯನ್ನು ಎಲ್ಲಮ್ಮ/ರೇಣುಕಾ ಕಥನ ಒಳಗೊಂಡಿದೆ. ಕೆಲ ಘಟನೆಗಳ ನೆರವಿನಿಂದ ಕಥನ ಮಂಡಿಸುವ ಚಾರಿತ್ರಿಕ ಆಯಾಮಗಳನ್ನು ಗಮನಿಸೋಣ.

೧. **ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಶಿಥಿಲವಾಗುತ್ತಿರುವ ಪ್ರಕ್ರಿಯೆಯ ದಾಖಲೆ:**

ಎಲ್ಲಾ ಪ್ರಾಚೀನ ಸಂಸ್ಕೃತಿಗಳು ತಮ್ಮ ಆರಂಭಿಕ ಕಾಲಗಳಲ್ಲಿ ಮಾತೃಪ್ರಧಾನ ಸಮಾಜಗಳಾಗಿದ್ದ ವಿಚಾರ ಎಲ್ಲರೂ ತಿಳಿದಿರುವುದೇ ಆಗಿದೆ. ಮನುಷ್ಯ ಬೇಟೆ, ಆಹಾರ ಸಂಗ್ರಹಣೆ, ಕೃಷಿ, ತಂತ್ರಜ್ಞಾನದ ಯುಗಗಳನ್ನು ದಾಟಿ ಬಂದಿದ್ದಾನೆ. ಆರಂಭದಿಂದಲೂ ನಿಸರ್ಗ ಮತ್ತು ಸ್ತ್ರೀ ನಡುವಿನ ಸಾಮ್ಯತೆಗಳ ಫಲವಾಗಿ ಸ್ತ್ರೀ ಸಮಾಜದಲ್ಲಿ ನಿರ್ಣಾಯಕ ಶಕ್ತಿಯಾಗಿ ಸ್ವೀಕಾರವಾಗಿದ್ದಳು ಮತ್ತು ಕೃಷಿ ಸ್ತ್ರೀಯ ಶೋಧನೆ ಎಂಬುದನ್ನು ನಾವು ಬಲ್ಲೆವು. ಭಾರತಕ್ಕೆ ಆರ್ಯರು ಆಗಮಿಸಿದ ನಂತರ ಕೃಷಿಯ ಸಂಪತ್ತು ಮತ್ತು ಆಸ್ತಿ ಹಕ್ಕು ಪುರುಷರ ಕೈವಶವಾಗುವ ಪ್ರಕ್ರಿಯೆ ಆರಂಭಗೊಂಡಿರುವುದನ್ನು ಕಾಣಬಹುದು. ಪುರುಷನ ಪರಮಾಧಿಕಾರವನ್ನು ಎತ್ತಿ ಹಿಡಿದಿರುವ ವೈದಿಕ ಗ್ರಂಥಗಳು ಗೋತ್ರಗಳ ಮೂಲಕ ಪಿತೃವಂಶದ ಗುರುತನ್ನು ದಾಖಲಿಸಿದವೂ ಕೂಡ. ದೇವತೆಗಳ ಮೂಲದ ಗುರುತುಗಳನ್ನು ಮಾತೃ ಮೂಲದಲ್ಲಿ ಹುದುಕಿಕೊಂಡಿರುವುದು, ಆರ್ಯಪೂರ್ವದಲ್ಲಿ ಇಲ್ಲಿ ಇದ್ದ ಸಮಾಜವು ಮಾತೃ ಪ್ರಧಾನ ಸಮಾಜವೇ ಆಗಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಆರ್ಯೀಕರಣದ ಪ್ರಕ್ರಿಯೆಯಲ್ಲಿ ಆಸ್ತಿಯ ಹಕ್ಕು ಒಡೆತನ ಸ್ತ್ರೀಯಿಂದ ಪುರುಷನಿಗೆ ಹಸ್ತಾಂತರಗೊಂಡಿರುವುದು ಅತ್ಯಂತ ಮುಖ್ಯ ಘಟ್ಟವಾಗಿದೆ. ಆದರೆ ಈ ಆಸ್ತಿ ಹಸ್ತಾಂತರ, ಹಕ್ಕುದಾರಿಕೆಗಳು ಸುಲಭವಾಗಿ ಪುರುಷನ ಕೈವಶವಾಗಿರುವ ಸಾಧ್ಯತೆ ಇಲ್ಲ. ಆಗ ಅನೇಕ ಬಗೆಯ ಹಿಂಸೆ, ಒತ್ತಾಯ, ಸಂಘರ್ಷಗಳು ನಡೆದಿರುವ ಸಾಧ್ಯತೆ ಇಲ್ಲದಿಲ್ಲ. ಪುರುಷ ವ್ಯವಸ್ಥೆ ನಿಧ ನಿಧಾನವಾಗಿ ಮಾತೃ ಸಮಾಜವನ್ನು ಹತ್ತಿಕ್ಕಲು ಪ್ರಾರಂಭಿಸಿದ್ದಂತೆ ಆಸ್ತಿಯ ವಾರಸುದಾರಿಕೆ ತಾಯಿಯಿಂದ ಮಗಳಿಗೆ ಬದಲಾಗಿ ಮಾವನಿಂದ ಸೋದರಳಿಯನಿಗೆ ಹಸ್ತಾಂತರವಾಗುವ ಪ್ರಕ್ರಿಯೆ ನಡೆದಿದೆ ಎಂದು ಭಾರತದ ಶ್ರೇಷ್ಠ ತತ್ವ ಚಿಂತಕರಾದ ದೇವಿ ಪ್ರಸಾದ್ ಚಟ್ಟೋಪಾಧ್ಯಾಯ ಅವರು ತಮ್ಮ ಸಂಶೋಧನೆಯಲ್ಲಿ ಹೀಗೆ ಗುರುತಿಸಿದ್ದಾರೆ:

ಮಾತೃ ಪ್ರಧಾನ ಕುಟುಂಬದಲ್ಲಿ ಮಾವ ಮತ್ತು ತಾಯಿ ಒಂದೇ ವಂಶದವರು. ಆದರೆ ಮಾವನ ಮಕ್ಕಳು ಆ ವಂಶದವರಲ್ಲ. ಏಕೆಂದರೆ ಮಾವ ಬೇರೆ ವಂಶದ ಹೆಣ್ಣನ್ನು ಮದುವೆಯಾಗಿದ್ದಾನೆ. ಮಾತೃ ಪ್ರಧಾನ ಸಮಾಜದಲ್ಲಿ ಮಕ್ಕಳು ತಾಯಿ ವಂಶಕ್ಕೆ ಸೇರಿದವರಾಗಿರುತ್ತಾರೆ. ಮಾವನ ಮಕ್ಕಳು ಅತ್ತೆ ವಂಶದವರಾಗಿರುತ್ತಾರೆ. ಹೀಗಾಗಿ ಮಾತೃ ಪ್ರಧಾನ ಸಮಾಜದ ಕಟ್ಟಳೆಯಂತೆ ಮಾವನ ಸಂಪತ್ತು ಅವನ ಮಕ್ಕಳು ಪಡೆಯುವುದು ಸಾಧ್ಯವಿಲ್ಲ. ಹಾಗಾದರೆ ಈ ಸಂಪತ್ತನ್ನು ಯಾರು ಪಡೆಯುತ್ತಾರೆ ? ಅವನ ಸೋದರಳಿಯ. ಏಕೆ ? ಏಕೆಂದರೆ ಮಾತೃಪ್ರಧಾನ ಸಮಾಜದಲ್ಲಿ ಸೋದರಳಿಯನ ವಂಶ ತಾಯಿಯ ಮನೆಯವಂಶ. ಮಾವನಿಂದ ಸೋದರಳಿಯ ಸಂಪತ್ತು ಪಡೆಯುವ ಈ ಪದ್ಧತಿಯು ಒಂದು ರೀತಿಯಲ್ಲಿ ಮಾತೃ ಪ್ರಧಾನ ಸಮಾಜ ಶಿಥಿಲಗೊಳ್ಳುತ್ತಿರುವುದರ ಲಕ್ಷಣ (ಮಾತೆಯರು ಮಾನ್ಯರಾಗಿದ್ದಾಗ ಪು. ೪೨) ಎಂದು ವಿವರಿಸಿದ್ದಾರೆ.

ಮಾನವ ಚರಿತ್ರೆಯನ್ನು ಗಮನಿಸಿದರೆ ಸಮಾಜದ ಆಸಕ್ತಿಯಲ್ಲಿ ಯಾವಾಗಲೂ ಆಸ್ತಿ

ಅಥವಾ ಸಂಪತ್ತಿನ ಒಡೆತನ ಮತ್ತು ಅಧಿಕಾರವನ್ನು ತನ್ನ ಸ್ವಾಮ್ಯದಲ್ಲಿ ಉಳಿಸಿಕೊಳ್ಳುವ ಸಲುವಾಗಿ ಅಥವಾ ಕಸಿದುಕೊಳ್ಳುವ ಸಲುವಾಗಿ ನಡೆಸುವ ನಿರಂತರ ಕ್ರಿಯಾತ್ಮಕ ಸಂಘರ್ಷವೊಂದರ ಹಾಜರಿಯಂತು ಇದ್ದೇ ಇರುತ್ತದೆ.

ಎಲ್ಲಮ್ಮನ ಕಥೆಯಲ್ಲಿ ಮಾತೃ ಪ್ರಧಾನ ವಿಚಾರಧಾರೆಗಳು ಮತ್ತು ಪಿತೃಪ್ರಧಾನ ವಿಚಾರಧಾರೆಗಳು ನಿರಂತರವಾಗಿ ಸಂಘರ್ಷಕ್ಕೆ ತೊಡಗಿರುವುದು ಗೋಚರವಾಗುತ್ತದೆ. ಕಥನದ ಆರಂಭದಲ್ಲೇ ಸ್ತ್ರೀ ಶಕ್ತಿ ವಿಜೃಂಭಿಸಿರುವುದನ್ನು ಪುರುಷ ಅಧಿಕಾರವು ಅದಕ್ಕೆ ತಲೆಬಾಗುವುದನ್ನು ಕಾಣಬಹುದು. ಆದರೆ ಪರಶುರಾಮನ ಹುಟ್ಟಿನೊಂದಿಗೆ ಸ್ತ್ರೀಯು ತಾಯಿಯ ಸ್ಥಾನಕ್ಕೆ ರೂಪಾಂತರಳಾದ ಮೇಲೆ ಪುರುಷ ಅಧಿಕಾರಗಳು ಸ್ತ್ರೀ ಶಕ್ತಿಯನ್ನು ನಿಗ್ರಹಿಸುವ, ಅಧೀನಕ್ಕೆ ಒಳಪಡಿಸಿಕೊಳ್ಳುವ ಮೂಲಕ, ಸಮಾಜ ಪ್ರವಾಹದಲ್ಲಿ ಮುಖ್ಯ ಪಲ್ಲಟವೊಂದು ಜರುಗುತ್ತದೆ. ಮಾತೃಮುಖಿಯಾಗಿದ್ದ ಸಮಾಜ ಪಿತೃಮುಖಿಯಾಗಿರುವ ನಡುವಿನ ಸಂಕರದ ಲಕ್ಷಣವನ್ನೇ ಶ್ರೀದೇವಿ ಪ್ರಸಾದ್ ಚಟೋಪಾಧ್ಯಾಯ ಅವರು ಆಸ್ತಿ (ಸಂಪತ್ತು) ಗೆ ಸೋದರಳಿಯನು ವಾರಸುದಾರನಾಗುವ ಪ್ರಕ್ರಿಯೆಯನ್ನು, ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಶಿಥಿಲಗೊಳ್ಳುವುದರ ಲಕ್ಷಣ ಎಂದು ವ್ಯಾಖ್ಯಾನಿಸಿದ್ದಾರೆ. ಎಲ್ಲಮ್ಮ ರೇಣುಕಾ ಕಥನದಲ್ಲಿ ಈ ಶಿಥಿಲತೆ ಮತ್ತಷ್ಟು ಉಲ್ಬಣಗೊಂಡಿರುವುದರ, ಪಿತೃಪ್ರಧಾನ ಕುಟುಂಬ ವ್ಯವಸ್ಥೆ ವೇಗವಾಗಿ ಸಮಾಜವನ್ನು ಆಕ್ರಮಿಸುತ್ತಿರುವುದರ ಅಪೂರ್ವ ವಿವರಗಳನ್ನು ಕಟ್ಟಿಕೊಡಲಾಗಿದೆ.

ಎಲ್ಲಮ್ಮನ ಅಡವಣಿಗೆ ಭಾಗ ಈ ಪರಿವರ್ತನೆಯ ರೂಪವನ್ನು ಸಶಕ್ತವಾಗಿ ಅಭಿನಯಿಸಿ ತೋರಿಸಿದೆ. ಇಂದಿಗೂ ಜನಪದರ ನಂಬಿಕೆಯಾಗಿ ಉಳಿದುಹೋಗಿರುವ 'ಸೋದರಳಿಯ ಹುಟ್ಟಿದರೆ ಮಾವನಿಗೆ ಮಗುವಿನ ಮುಖ ನೇರವಾಗಿ ತೋರಿಸಬಾರದು; ನೀರಿನಲ್ಲೋ, ಎಣ್ಣೆಯಲ್ಲೋ, ಪ್ರತಿಬಿಂಬ ತೋರಿಸಬೇಕು' ಎನ್ನುವ ನಂಬಿಕೆ ಪ್ರಕಟಿಸುವ ಅನುಮಾನ ಹಾಗೂ ಪುರಾಣಗಳಲ್ಲಿ ವಿನಾಕಾರಣ ಕಾಣಿಸಿಕೊಳ್ಳುವ ಕಂಸ ಮತ್ತು ಕೃಷ್ಣನ ತರಹದ ಮಾವ ಸೋದರಳಿಯ ನಡುವಿನ ಶತ್ರುತ್ವದ ಕಲ್ಪನೆಯ ಹಿಂದೆ ಬಲವಾದ ಸಾಮಾಜಿಕ ತಿಕ್ಕಾಟವೊಂದು ಕ್ರಿಯಾಶಾಲಿಯಾಗಿದ್ದ ಬಗ್ಗೆ ಎಲ್ಲಮ್ಮ ರೇಣುಕಾ ಕಥನವು ಮೊದಲ ಬಾರಿಗೆ ಕಾರಣವನ್ನು ಗುರುತಿಸಿದೆ. ಪುರಾಣಗಳಲ್ಲಿ ದಾಖಲುಗೊಂಡಿರುವಂತೆ ಅಶರೀರವಾಣಿಯೋ, ಕನಸೋ ಸೋದರಮಾವನಿಗೆ ತಂಗಿ ಗರ್ಭದಿಂದ ಹುಟ್ಟಲಿರುವ ಅಳಿಯನಿಂದ ಸಾವು ಎಂಬ ಎಚ್ಚರಿಕೆ ಅವರ ನಡುವಿನ ದ್ವೇಷಕ್ಕೆ ಕಾರಣವಾಗುವುದೆಂದು ಈವರೆಗೆ ತಿಳಿಯಲಾಗಿತ್ತು. ಆದರೆ ಸಾವಿನ ಭಯಕ್ಕಿಂತ ಸಂಪತ್ತಿನ ಒಡೆತನದ್ದೇ ಈ ದ್ವೇಷಕ್ಕೆ ಪ್ರಮುಖ ಕಾರಣ ಎನ್ನುವುದನ್ನು ಎಲ್ಲಮ್ಮ ರೇಣುಕಾ ಕಥನದ ಅಡವಣಿಗೆ ಭಾಗ ಬಯಲುಗೊಳಿಸಿದೆ.

ಪುರಾಣಗಳಲ್ಲಿ ಆದಂತೆ ಈ ಕಥನದಲ್ಲೂ ಎಲ್ಲಮ್ಮನ ಅಣ್ಣಂದಿರಲ್ಲಿ ಹಿರಿಯ ಕಾರ್ತೀಕ ರಾಜನಿಗೆ ಕನಸುಬಿತ್ತು. ತಂಗಿಯ ಮಗ ತನ್ನನ್ನು ಕೊಂದು ಪಟ್ಟವೇರಿದಂತೆ ಕನಸಾಯಿತು. (ಕನಸು ಕೂಡ ಆಸ್ತಿಯ ಒಡೆಯನಾದ ಹಿರಿಯ ಅಣ್ಣನಿಗೆ ಬಿದ್ದಿದೆ). ಕಾರ್ತೀಕ ರಾಜನಿಗೆ ಬಿದ್ದ ಕನಸನ್ನು ಕಾಕತಾಳೀಯವಾಗಿ ಪಂಚಾಂಗದ ನೆರವಿನಿಂದ ನಿರ್ವಚಿಸಿದವರು ಪುರೋಹಿತರು. 'ರೇಣುಕಾದೇವಿ ಪುತ್ರರಿಂದ ಕ್ವಾಟಿಪ್ಯಾಟಿ ನಾಸವಾಗಿ ಕಾರ್ತೀಕರಾಜರ ರುಂಡವು ಚಂಡಾಯ್ತವೆ' ಎಂದು ನಿರ್ಣಯ ಹೇಳುತ್ತಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಪಿತೃ ಪ್ರಧಾನ ವ್ಯವಸ್ಥೆಯ ಪೋಷಕರಾದ ಪುರೋಹಿತರು ಹಾಗೂ ಪಂಚಾಂಗ ಮುಂತಾದವು ಕಾರ್ತೀಕರಾಜರೊಂದಿಗೆ ಶಾಮೀಲಾಗಿ

ಮಾತೃವಂಶದ ನಾಶಕ್ಕೆ ಪ್ರಯತ್ನಿಸುತ್ತಿರುವುದು. ಮುಂದೆ ಈ ಕುತ್ತು ನಿವಾರಿಸಿಕೊಳ್ಳಲು ರೇಣುಕೆಯ ಅಣ್ಣಂದಿರು ಸೂಲಗಿತ್ತಿಯನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಾರೆ. ಪಟ್ಟಣದಲ್ಲಿ ಡಂಗೂರ ಸಾರಿ ಸಮರ್ಥ ಸೂಲಗಿತ್ತಿಯ ತಲಾಶ್ ನಡೆಸುತ್ತಾರೆ.

ಕಾರ್ತೀಕ ರಾಜರು ಏನೆಂದು ಮಾತಾಡಿ
ನಮ್ಮ ತಂಗಿ ಯಲ್ಲಮ್ಮನಿಗೆ ಅಡವಣೆಗೆ
ನಮ್ಮ ತಂಗಿ ಯಲ್ಲಮ್ಮನಿಗೆ ಅಡವಣೆಗೆ
ಪೋದಾರೆ ಅರ್ಧ ರಾಜ್ಯವ ಕೊಡುತೀವಿ
ಆನೆಮಟೆಗಳು ಕೊಡುತೀವಿ
ಮುತ್ತುರತ್ನವ ಕೊಡುತೀವಿ
ಅಂದಿನ್ನ ಡಂಗೂರ ವಯಿಸ್ಯಾನು॥

ಗಂಡು ಮಗುವಾದರೆ ಕೊಂದು ಹೆರಿಗೆ ಮಾಡಿಸಬೇಕಾದ ಷರತ್ತಿಗೆ ಒಪ್ಪಿ ಒಬ್ಬ ಸೂಲಗಿತ್ತಿಯೂ ಮುಂದೆ ಬಾರದಿರುವುದು ಮಾತೃ ಪ್ರಧಾನ ವ್ಯವಸ್ಥೆಯ ಮೌಲ್ಯವು ಸಮಾಜದಲ್ಲಿ ಪ್ರಭಾವಶಾಲಿಯಾಗಿದ್ದ ನೆಲೆಯನ್ನು ವಿವರಿಸುತ್ತದೆ. ಆಗ ಅಂಥ ಕ್ರೌರ್ಯಕ್ಕೆ ಒಬ್ಬ ಗಂಡಸು ಸೂಲಗಿತ್ತಿಯಂತೆ ವೇಷ ತೊಟ್ಟು ಸಿದ್ಧವಾಗುವುದು ಚರಿತ್ರೆಯಲ್ಲಿ ಮಾತೃವಂಶದ ಮೇಲೆ ನಡೆದಿರುವ ಹಿಂಸೆಯ ನಾಟಕೀಯ ಘಟನೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಪಟ್ಟ ಉಳಿಸಿಕೊಳ್ಳಲು, ಸಂಪತ್ತಿನ ಒಡೆತನ ಕಾಪಾಡಿಕೊಳ್ಳಲು ಅಣ್ಣಂದಿರು ಗಂಡಸನ್ನೇ ಸೂಲಗಿತ್ತಿಯ ರೂಪದಲ್ಲಿ ಹೆರಿಗೆ ಮಾಡಿಸಲು ಕಳುಹಿಸಿದ ಈ ಪ್ರಕರಣ ಮನುಷ್ಯರ ನಡುವಿನ ಪಾವಿತ್ರ್ಯದ ಕಲ್ಪನೆ, ರಕ್ತಸಂಬಂಧದ ಕಲ್ಪನೆಯು ಆಸ್ತಿಯ ಒಡೆತನದ ಮುಂದೆ ಎಷ್ಟು ತೆಳುವಾದದ್ದು ಎನ್ನುವುದನ್ನು ನಿರೂಪಿಸುತ್ತದೆ.

ಅಣ್ಣಂದಿರು ರೂಪಿಸಿದ ಷಡ್ಯಂತ್ರದ ಉದ್ದೇಶವು ಕೇವಲ ಸಾವಿನಿಂದ ಪಾರಾಗುವುದಲ್ಲ.ಬದಲಾಗಿ ತಂಗಿಯ ವಂಶವನ್ನು ನಾಶಗೊಳಿಸುವುದಾಗಿತ್ತು ಎಂಬುದು ಕಾರ್ತೀಕ ರಾಜನ ಮತ್ತು ಬಜ್ಜಣ್ಣನ ನಡುವಿನ ಸಂವಾದದಲ್ಲಿ ಸ್ಪಷ್ಟವಾಗಿಯೇ ಪ್ರಕಟವಾಗಿದೆ.

ಕಾರ್ತೀಕ ರಾಜರು : ಅಮ್ಮ ಸುಂದರಿ, ಸೂಲಗಿತ್ತಿ, ತಂಗಿ ಯಲ್ಲಮ್ಮನಿಗೆ ಎಣ್ಣು ಮಗ ವುಟ್ಟಿದರೆ ವುರಿಕೊಯ್ದು ಎರಿಗೆ ಮಾಡ್ಬಿಬಾ, ಗಂಡು ಮಗನೇನನ ವುಟ್ಟಿದ್ರೆ, ಸಿರಸನ ಕೊಯ್ದು ತಿಪ್ಪೆವಳಗೆ ಬೀಸಾಟಿಬಾ.

ಸೂಲಗಿತ್ತಿ : ಯಾಕಪ್ಪಾ ಗಂಡ್ಮಗ ವುಟ್ಟಿದ್ರೆ ಕೊಯ್ಬೇಕು, ಎಣ್ಮಗ ವುಟ್ಟಿದ್ರೆ, ವುರಿ ಕೊಯ್ದು ಎರಿಗೆ ಮಾಡ್ಬಿ ತೊಟ್ಲಿಗಾಕಿಬಾರಮ್ಮ ಅಂತಿರಲ್ಲ.

ಕಾರ್ತೀಕ ರಾಜರು : ಅಮ್ಮ ಗಂಡ್ಮಗ ವುಟ್ಟಿದ್ರೆ ನಮಗೆ ಸೆತ್ರುವಾದಾನು. ಪಟ್ಟಕ್ಕೆ ಬಂದು ರಾಜ್ಯ ನಮದೆಂದಾನು. ಎಣ್ಮಗ ವುಟ್ಟಿದ್ರೆ ರಾಜ್ಯ ಕೇಳದಿಲ್ಲ. ಪಟ್ಟವೇರುವಳಲ್ಲ. ಇನ್ನೇನು ಮಾವ್ ದಿರಾಗಿ ನಾವ್ ಪೋದ್ರೆ ಮಾವ ಬಂದಂತೇಳಿ ಒಂದು ಚರಿಗೆ ನೀರು ಕೊಟ್ಟು ಊಟ ಮಾಡೇಳು ಮಾವ ಅಂತಾಳೆ ಅಷ್ಟೆ. (ಪು. ೨೨೦) ಈ ಪ್ರಕರಣವು ಡಾ.ದೇವಿ ಪ್ರಸಾದ್ ಚಟ್ಟೋಪಾಧ್ಯಾಯ ಅವರು ಉಲ್ಲೇಖಿಸಿರುವಂತೆ ಸೋದರಳಿಯ ಪಟ್ಟಕ್ಕೆ, ಆಸ್ತಿಗೆ ವಾರಸುದಾರನಾಗುವ ವಿಚಾರದಂತೆಯೇ ಇದೆ. ಇಲ್ಲಿ ತಮ್ಮ ತಂಗಿಯ ಹೊಟ್ಟೆಯಲ್ಲಿ ಹುಟ್ಟಿದ ಗಂಡು ನಮ್ಮ ರಾಜ್ಯವನ್ನು ತನ್ನದೆಂದು ಹಕ್ಕು

ಸಾಧಿಸುತ್ತಾನೆ ಎನ್ನುವ ಭಯ ಮುಖ್ಯವಾಗಿ ತಂಗಿಯ ಮಗನನ್ನು ಕೊಲ್ಲಲು ರೇಣುಕೆಯ ಅಣ್ಣಂದಿರನ್ನು ಪ್ರಚೋದಿಸಿದೆ.ಇದರ ಜೊತೆಯಲ್ಲಿಯೇ ಮಾತೃ ಪರಂಪರೆಯ ಕೊನೆಯ ಕೊಂಡಿಯಾಗಿದ್ದ ಆಸ್ತಿ ಸೋದರಳಿಯನಿಗೆ ಹಸ್ತಾಂತರಗೊಳ್ಳುವ ನೆಲೆಯೂ ಕೂಡ ಮತ್ತಷ್ಟು ದುರ್ಬಲವಾಗಿದೆ. ಅಷ್ಟೇ ಅಲ್ಲದೆ ಮಾತೃ ಕುಟುಂಬದ ಶಿಥಿಲವು ಮುಂದುವರೆದು ಸಂಪೂರ್ಣವಾಗಿ ಪುರುಷಸಂಸ್ಕೃತಿಯ ಕೈವಶವಾಗಿರುವ ಸೂಕ್ಷ್ಮಗಳನ್ನು ಈ ಕಥನದ ವಿವರಗಳು ಧ್ವನಿಸುತ್ತವೆ. ಕಥನದ ಕೊನೆಯಲ್ಲಿ ತಂದೆಯ ಗುರುತನ್ನು ಸಾಧಿಸುವಂತೆ ಪರಶುರಾಮನು ತಾಯಿಯ ಗುರುತಿನಿಂದ ದೂರವಾಗುತ್ತಾನೆ. ತಾಯಿಯ ಕಣ್ಮುಂದೆಯೇ ಮಾತೃವಂಶವನ್ನು ನಾಶಪಡಿಸುತ್ತಾನೆ. ಈ ಘಟನೆ ಸಾಂಕೇತಿಕವಾಗಿ ಭಾರತದಲ್ಲಿ ಮಾತೃ ಪ್ರಧಾನ ವ್ಯವಸ್ಥೆಯು ಪಿತೃಪ್ರಧಾನ ವ್ಯವಸ್ಥೆಯಿಂದ ಹತ್ತಿಕ್ಕಲ್ಪಟ್ಟ ಸಂಗತಿಗಳನ್ನು ವಿವರಿಸುತ್ತದೆ.

ಕಥನದ ಕೊನೆಯಲ್ಲಿ ಜಮದಗ್ನಿಯ ಮಗನಾಗಿ, ಪುರುಷನಾಗಿ, ಮಾತೃ ಮೂಲಗಳನ್ನು ನಾಶಪಡಿಸಿ ಬಂದ ಪರಶುರಾಮನನ್ನು ನೋಡಿ ರೇಣುಕಾ 'ಇಂತ ಪಾಪಿಷ್ಟನ ಮೊಕ ನೋಡ್ಬಾರ್ದಂತೇಳಿ ಭೂಮಿ ಎರಡು ಪಾಲಾಗಲಿ, ನಾನು ಸತ್ತಿವಂತೆಯಾದರೆ ಅಂತೇಳಿ ಕೈ ಮುಗಿದ್ಲು; ಭೂಮಿ ಎರಡು ಪಾಲಾಯ್ತಿದ್ದಂತೆ ತಾಯಿ ಎಲ್ಲಮ್ಮ ಪಾತಾಳಕ್ಕೆ ಇಳಿದುಬಿಟ್ಲು (ಪು. ೨೪೩) ಮಾತೃ ಪ್ರಧಾನ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಹೋದ ಕತೆಯನ್ನು ಇದು ಪ್ರತಿಧ್ವನಿಸುವುದಿಲ್ಲವೇ?

೨. ಪಿತೃ ಪ್ರಧಾನ ವ್ಯವಸ್ಥೆಯ ಆಕ್ರಮಕ್ಕೆ ತೋರಿರುವ ಪ್ರತಿಭಟನೆಯ ವಿವರಗಳು

ಈ ಕಥನವು ಮಂಡಿಸುವ ಮತ್ತೊಂದು ಮುಖ್ಯ ಆಶಯವು ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಮುಖ್ಯವಾದದ್ದು ಆಗಿದೆ. ಎಲ್ಲಮ್ಮ ರೇಣುಕಾ, ಈ ಕಥನದೊಳಗೆ ಪಿತೃಪ್ರಧಾನ ವ್ಯವಸ್ಥೆಯ ಮುಖ್ಯ ಆಶಯಗಳಾದ ಕುಟುಂಬ, ವಿವಾಹ ಮತ್ತು ಪುರುಷ ಒಡೆತನದ ನೆಲೆಗಳನ್ನು ನಿರಾಕರಿಸುತ್ತಾಳೆ.

ಪುರುಷ ಪ್ರಧಾನ ಸಮಾಜದಲ್ಲಿ ಮದುವೆಯಲ್ಲಿ ತನ್ನ ಸಂಗಾತಿಯನ್ನು ಆಯ್ಕೆ ಮಾಡುವ ಹಕ್ಕು ಗಂಡಿಗೆ ಮಾತ್ರ ನೀಡಲ್ಪಟ್ಟಿದೆ. ಹೆಣ್ಣು ಇಲ್ಲಿ ಕೇವಲ ಪ್ರದರ್ಶನ ಪದಾರ್ಥದಂತೆ. ತನ್ನನ್ನು ವಿವಾಹವಾದ ವ್ಯಕ್ತಿಯ ಉನ್ನತಿಗಾಗಿ ತನ್ನ ಸರ್ವಸ್ವವನ್ನು ಧಾರೆ ಎರೆದು ಬದುಕುವ ಮೌಲ್ಯಗಳನ್ನು ಈ ವ್ಯವಸ್ಥೆಯು ಸ್ತ್ರೀಯ ಮುಂದೆ ಒಡ್ಡುತ್ತದೆ. ಹೆಂಡತಿ 'ವ್ಯಕ್ತಿ' ಎನ್ನುವ ನೆಲೆಗಿಂತ ಆಸ್ತಿಯಂತೆ, ಉತ್ಪನ್ನಗೊಳಿಸುವ ಪದಾರ್ಥದಂತೆ, ಅನುಭೋಗಕ್ಕೆ ಈಡಾಗುವ ಅಧೀನತೆಯನ್ನು ಜೀವನ ಪರ್ಯಂತ ಪಾಲಿಸಬೇಕಾಗುತ್ತದೆ. ಆದರೆ ಈ ಚೌಕಟ್ಟುಗಳು ರೇಣುಕಾ ದೇವಿಯ ಕಥನದಲ್ಲಿ ಕುಸಿದು ಬೀಳುತ್ತವೆ. ಇಲ್ಲಿ ರೇಣುಕಾದೇವಿ ತನ್ನ ಸಂಗಾತಿಯ ಆಯ್ಕೆ ವಿಚಾರದಲ್ಲಿ ಸ್ವಾತಂತ್ರ್ಯವನ್ನು ಉಳಿಸಿಕೊಂಡವಳು. ಮನೆಯವರು ದೇಶ ದೇಶಗಳಿಂದ ತರಿಸಿದ ವರರ ಭಾವ ಚಿತ್ರಗಳನ್ನು ಸಾರಾಸಗಟಾಗಿ ತಿರಸ್ಕರಿಸಿ 'ಮುರಿಯುವಂತ ಮೂಗುತಿಯ ನಾನು ಇಡಲಾರೆ, ಸಾಯುವಂತ ಗಂಡನ್ನ ನಾ ಆಗಲಾರೆ' (ಪು. ೨೪೩) ಎಂದು ಕುಟುಂಬದ ಚೌಕಟ್ಟು ಮುರಿದು ಗಂಡನ ಅನ್ವೇಷಣೆಗೆ ತಾನೇ ಹೋಗುತ್ತಾಳೆ.

ಕೊರವಂಜಿಯ ಸಲಹೆಯಂತೆ ಗೋಕರ್ಣ ಬೆಟ್ಟದಲ್ಲಿ ತಪಸ್ಸು ಮಾಡುತ್ತಿದ್ದ ವೈದಿಕ ಋಷಿ ಜಮದಗ್ನಿಯನ್ನು ವರನನ್ನಾಗಿ ಆರಿಸುತ್ತಾಳೆ. ಆಗ ಜಮದಗ್ನಿ ವಿವಾಹಕ್ಕೆ ಸಮ್ಮತಿಸಲು ಕೆಲವು

ಷರತ್ತುಗಳನ್ನು ವಿಧಿಸುತ್ತಾನೆ. ಆ ಷರತ್ತುಗಳು ವೈದಿಕ ಪುರಾಣಗಳಲ್ಲಿ ರೇಣುಕಾದೇವಿಗೆ ವಿಧಿಸಿದ್ದ ಷರತ್ತುಗಳೇ ಆಗಿವೆ ಎನ್ನುವುದು ಅಭ್ಯಾಸಯೋಗ್ಯ. ಈ ಷರತ್ತುಗಳು ಹೆಣ್ಣನ್ನು ಗಂಡನ ಗುಲಾಮಳಾಗಿರಬೇಕು ಎನ್ನುವ ಆಶಯಗಳನ್ನು ಪರೋಕ್ಷವಾಗಿ ನಿರ್ದೇಶಿಸುವಂತೆ ತೋರುತ್ತವೆ.

ನಾನು ಏಳೀದಂಗೆ ನೀನು ಕೇಳಬೇಕು.
ಅಣೆಯಲ್ಲಿ ಈಭೂತಿ ನೀ ಧರಿಸಬೇಕು
ಮಯ್ಯಾಕೆ ಕಾವು ನೀ ತೊಡಬೇಕು.
ಕೊರಳಲ್ಲಿ ರುದ್ರಾಕ್ಷಿಸರವಿರಬೇಕೆಂದ॥
ಅಂತಾ ಇಂತಾ ಮಾತು ನಾ ಕೇಳುವಾನಲ್ಲ
ವಳಿಯಾ ನೀರಿಗೆ ನೀನೋಗಬೇಕು
ಮಳುಲಾ ಕೊಡದಿಂದ ನೀರ ತರಬೇಕು
ತರುವಾಗ ಸರುಪಾನ ಸಿಂಬಿ ಇರಬೇಕು॥

ಈ ಮಾತುಗಳು ಹೆಂಡತಿ ಅಳವಡಿಸಿಕೊಳ್ಳಬೇಕಾದ ವಿನಯ, ವೇಷ ಹಾಗೂ ಪಾತಿವ್ರತ್ಯ ನಿಯಮಗಳನ್ನು ಕುರಿತವೇ ಆಗಿವೆ. ಇಲ್ಲಿ ಪ್ರತಿಯೊಂದು ಸಾಲಿನಲ್ಲಿಯೂ ಹೆಣ್ಣು ಗಂಡಿಗೆ ಅಧೀನಳಾಗಿರಬೇಕಾದ ಒತ್ತಾಯವನ್ನು ವಿವರಿಸಲಾಗಿದೆ. ಸ್ತ್ರೀಗೆ ಮದುವೆಯ ಮುಖ್ಯ ಉದ್ದೇಶ ತಾಯ್ತನದ ಅನುಭವ. ರೇಣುಕಾದೇವಿ ಈ ಭಾಗ್ಯವನ್ನು ಜಮದಗ್ನಿಯಿಂದ ಪಡೆಯಲು ವಿಫಲಳಾದಾಗ ಆ ವಿವಾಹವನ್ನೇ ಮುರಿದು ದೇವತೆಗಳನ್ನ ಪ್ರಸನ್ನಗೊಳಿಸಿಕೊಂಡು ಬಸಿರಾಗುವ ವಿವರಗಳು ಮಾತೃಪ್ರಧಾನ ಸಂಸ್ಕೃತಿಯ ಮೌಲ್ಯಗಳನ್ನು ಆಧರಿಸಿ ಪ್ರಕಟಗೊಂಡವೇ ಆಗಿವೆ.

ಎಲ್ಲಮ್ಮ ತನ್ನ ಬಸಿರ ಬಯಕೆಗಳನ್ನು ಪೂರೈಸಿಕೊಳ್ಳಲು ಕೈಗೊಳ್ಳುವ ಯಾತ್ರೆಯಲ್ಲಿ ಪುರುಷರು ಅಕ್ರಮವಾಗಿ ಜಲ ಮತ್ತು ನೆಲಗಳನ್ನು ತಮ್ಮ ಸ್ವಾರ್ಥಕ್ಕಾಗಿ ಸ್ವಾಧೀನಪಡಿಸಿಕೊಂಡು ಸ್ತ್ರೀಯನ್ನು ಅವುಗಳಿಂದ ದೂರ ಮಾಡಲು ಯತ್ನಿಸುತ್ತಾರೆ. ಮಡಿವಾಳನು ಹೊಳೆಯ ನೀರಿನಲ್ಲಿ ಎಲ್ಲಮ್ಮನ ಬಟ್ಟೆಗಳನ್ನು ಒಗೆಯಲು ನಿರಾಕರಿಸುವುದು ಹಾಗೂ ಪೊನ್ನಸೆಟ್ಟಿ ಸರ್ಪದ ಕಾವಲಿನಲ್ಲಿ ತೋಟದಲ್ಲಿ ಬೆಳೆ ತೆಗೆದು ಭೋಗ ಜೀವನ ನಡೆಸುವುದನ್ನು ಎಲ್ಲಮ್ಮ ಛಿದ್ರಿಸುತ್ತಾಳೆ. ಇಲ್ಲಿ ಮುಖ್ಯವಾಗಿ ಪ್ರಕೃತಿದತ್ತವಾದ ನೆಲ, ಜಲಗಳ ಒಡೆತನವನ್ನು ವೈಯುಕ್ತಿಕ ಆಸ್ತಿಯಾಗಿರಿಸಿಕೊಳ್ಳುವ ವೈದಿಕ ಪರಂಪರೆಯ ಹಕ್ಕನ್ನು ಎಲ್ಲಮ್ಮ ತಿರಸ್ಕರಿಸುವ ನೆಲೆಯನ್ನು ಕಥೆ ಒಳಗೊಂಡಿದೆ. ಇದೇ ಕಥನವು ಪುರುಷಪ್ರಧಾನ ಮೌಲ್ಯಗಳು ಇಡೀ ಸಮಾಜವನ್ನು ಆವರಿಸಿಕೊಂಡು, ಬೇರೆ ಬೇರೆ ಸಂಸ್ಥೆಗಳ ಮೂಲಕ ಸ್ತ್ರೀಯನ್ನು ಅಧೀನತೆಗೆ ಒಳಪಡಿಸುವ ಪ್ರಕ್ರಿಯೆಗಳನ್ನು ಪ್ರತಿಭಟಿಸಿದೆ. ಪುರುಷ ಪ್ರಧಾನ ವ್ಯವಸ್ಥೆಯ ಆಧಾರ ಸ್ತಂಭಗಳಾದ ವಿವಾಹ, ಕುಟುಂಬ, ಪಾತಿವ್ರತ್ಯ, ಆಸ್ತಿಯ ಹಕ್ಕುಗಳ ನೆಲೆಗಳನ್ನು ಕಥನವು ತಿರಸ್ಕರಿಸುವ ವಿವರಗಳನ್ನು ಗಮನಿಸಬಹುದು.

೩. ಕ್ಷೇತ್ರದ ಅಧಿಕೃತತೆಯ ಪ್ರತಿಪಾದನೆ :

ಬೀಜ ಮತ್ತು ಕ್ಷೇತ್ರ ಕೃಷಿಸಂಬಂಧಿತ ಪದಗಳು. ಇವು ಲೈಂಗಿಕವಾದ ಅರ್ಥಗಳನ್ನು ಕೂಡ ಹೊರಡಿಸುವ ಸಂಕೇತಗಳಾಗಿವೆ. ಜನಪದ ಪರಂಪರೆಯು ಸೃಷ್ಟಿಕ್ರಿಯೆಯಲ್ಲಿ ಕ್ಷೇತ್ರ ಪರವಾದ

ನಿಲುವನ್ನು ತಾಳಿದ್ದರೆ ಶಿಷ್ಟ ಪರಂಪರೆ ಬೀಜ ಪರವಾದ ನಿಲುವನ್ನು ತಾಳಿದೆ. ಇಲ್ಲಿ ಸಂಕ್ಷಿಪ್ತವಾಗಿ ಈ ಕಥನದಲ್ಲಿನ ಆ ಆಶಯವನ್ನು ಪ್ರತಿಪಾದಿಸಲು ಪ್ರಯತ್ನಿಸಲಾಗಿದೆ.

ಸಮಾಜದಿಂದ ಬಂಜೆ ಎಂಬ ನಿಂದೆಗೆ ವಿನಾ ಕಾರಣ ಗುರಿಯಾದ ಎಲ್ಲಮ್ಮ ವಿವಾಹೇತರ ಸಂಬಂಧದಿಂದ ಬಸಿರಾಗಿ ಪರಶುರಾಮನ ತಾಯಿಯಾಗುತ್ತಾಳೆ. ಆದರೆ ಆ ವೇಳೆಗಾಗಲೇ ಬೀಜ ಪ್ರಧಾನತೆಯನ್ನು ಒಪ್ಪಿಕೊಂಡ ಸಮಾಜದಲ್ಲಿ ಬೀಜದ ಗುರುತು ಅನಿವಾರ್ಯ ಎನ್ನುವುದು ಸಾಮಾಜೀಕರಣದ ಭಾಗವಾಗಿ ಪರಶುರಾಮನಿಗೆ ದತ್ತವಾಗಿರುತ್ತದೆ. ಪರಶುರಾಮ ತನ್ನ ತಂದೆಯ ಅನ್ವೇಷಣೆಯನ್ನು ತಾಯಿಯನ್ನು ಹಿಂಸಿಸುವ ಮೂಲಕ ಶೋಧಿಸುತ್ತಾನೆ. ಎಲ್ಲಮ್ಮನು ಮಗನಿಗೆ ಜಮದಗ್ನಿಯನ್ನು ತಂದೆ ಎಂದು ಹೇಳುವುದು ಸುಳ್ಳೆಂದು ಗೊತ್ತಿತ್ತು .ಹಾಗಾಗಿ ಆತನ ಹೆಸರ ಹೇಳದೆ ಹೆರುವ ಹಕ್ಕು, ಮಗುವಿನ ಗುರುತು ತಾಯಿಯಿಂದಲೇ ಎಂದು ಏನೆಲ್ಲಾ ಪವಾಡಗಳಿಂದ ಸಾಧಿಸಲು ಪ್ರಯತ್ನಿಸುತ್ತಾಳೆ. ಆದರೆ ಪರಶುರಾಮ ಅವುಗಳನ್ನ ನಂಬುವುದಿಲ್ಲ. ಕೊನೆಗೆ ತಾಯಿಯನ್ನು ಕೊಲ್ಲುವ ಮಟ್ಟಕ್ಕೂ ಮಗನು ಪುರುಷನಾಗಿ ಬೆಳೆದಾಗ ಅಸಹಾಯಕಳಾಗಿ ಗಂಡನಾದ ಜಮದಗ್ನಿಯ ಹೆಸರನ್ನು ಹೇಳುತ್ತಾಳೆ. ರೇಣುಕಾ ಕೊನೆಯಲ್ಲಿ ವಿವಾಹವಾದ, ಸಮಾಜ ಒಪ್ಪಿತ ಗಂಡನ ಹೆಸರು ಹೇಳುವುದು, ಪರಶುರಾಮ ಜಮದಗ್ನಿಯ ಬೀಜದ ಗುರುತಿನ ಮೂಲಕ ತನ್ನನ್ನು ಗುರುತಿಸಿಕೊಂಡು ತಾಯಿವಂಶವನ್ನು ನಾಶಗೊಳಿಸಿದ್ದು ಈ ದೇಶದ ಚರಿತ್ರೆಯಲ್ಲಿ ಬೀಜವು ಕ್ಷೇತ್ರವನ್ನು ಬಲತ್ಕಾರವಾಗಿ ವಶಪಡಿಸಿಕೊಂಡ ಪ್ರಕ್ರಿಯೆಯನ್ನು ವಿವರಿಸುತ್ತದೆ.

೪. ಸ್ತ್ರೀ ಪುರುಷ ತಾರತಮ್ಯ ಶರಣಚಳುವಳಿಯ ಒಂದು ನೋಟ :

ಈ ಕಥನವು ಕೇವಲ ಪಿತೃಪರಂಪರೆ ಮತ್ತು ಮಾತೃಪರಂಪರೆಯ ಸಂಘರ್ಷದ ನೆಲೆಗಳನ್ನು ಮಾತ್ರ ದಾಖಲಿಸಿಕೊಂಡಿಲ್ಲ. ಜನಪದರ ಪ್ರಜ್ಞೆ ಕಾಲ ದೇಶಗಳಿಗೆ ನಿರಂತರವಾಗಿ ಸ್ಪಂದಿಸುತ್ತದೆ ಎನ್ನುವುದಕ್ಕೆ ಶರಣ ಚಳುವಳಿಯನ್ನು ಕುರಿತಂತೆ ಕಥನದಲ್ಲಿ ನಿರೂಪಗೊಂಡಿರುವ ಇವರ ಗ್ರಹಿಕೆ ಸಾಕ್ಷಿಯಾಗಿದೆ. ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿ ಬಸವಣ್ಣ ಆರಂಭಿಸಿದ ಸಾಮಾಜಿಕ ಚಳುವಳಿಯ ಬಗ್ಗೆ ಅನೇಕ ಶಿಷ್ಟ ದಾಖಲೆಗಳು ನಮಗೆ ದೊರಕಿವೆ. ಜನಪದ ಪರಿಕರಗಳು ದಾಖಲಿಸಿಕೊಂಡಿರುವ ಶರಣ ಚಳುವಳಿಯ ಅನೇಕ ಸಂಗತಿಗಳನ್ನು ಇನ್ನೂ ಕ್ರೋಢೀಕರಿಸಿ ಅಧ್ಯಯನ ಮಾಡುವ ಕಡೆ ಈ ಕಥನವು ಆಧಾರಸಹಿತವಾಗಿ ಒತ್ತಾಯಿಸುತ್ತದೆ. ಎಲ್ಲಮ್ಮ ಕಥನದಲ್ಲಿ ಓರಗಲ್ಲು ಪಟ್ಟಣದ ಪ್ರಕರಣ ಶರಣ ಚಳುವಳಿಯ ಮುಖ್ಯವಾದ ಸಮಸ್ಯೆಯೊಂದರತ್ತ ನಮ್ಮ ಗಮನ ಸೆಳೆಯುತ್ತದೆ.

ಶರಣ ಚಳುವಳಿಯು ನಂಬಿದ್ದ ಜಾತಿ, ಲಿಂಗ (Sex) ತಾರತಮ್ಯವಿಲ್ಲದ ಸಮಾಜ ರಚನೆಯನ್ನು ಕುರಿತಂತೆ ಈ ಕಥನವು ಬಲವಾದ ಅನುಮಾನವೊಂದನ್ನು ಪ್ರಕಟಿಸುತ್ತದೆ. ಎಲ್ಲಮ್ಮ ತನ್ನ ಸಂಚಾರಣೆ ಕಾಲದಲ್ಲಿ ಓರೆಗಲ್ಲು ಪಟ್ಟಣಕ್ಕೆ ಬಂದು ಹಸಿದು ಊರಿನ ಶ್ರೀಮಂತ ಲಿಂಗವಂತನಾದ ಪೊನ್ನಶೆಟ್ಟಿಯ ತೋಟಕ್ಕೆ ಬರುತ್ತಾಳೆ. ಬಂದು ಭಿಕ್ಷೆಯನ್ನು ಕೇಳುತ್ತಾಳೆ. ಆಗ ಪೊನ್ನಶೆಟ್ಟಿ ಮತ್ತು ಎಲ್ಲಮ್ಮನ ನಡುವೆ ನಡೆದ ಸಂವಾದವನ್ನು ಗಮನಿಸಿ.

ಪೊನ್ನಸೆಟ್ಟಿ : ಆಹಾ ನೀನು ಯಾವ್ ಕುಲದ ಎಂಗ್ಸೋ ಏನೋ ತ್ವಾಟದೊಳಿಕೆ ಬಂದು ಬಿಕ್ಸಾ ಕೇಳ್ತಿದಿಯೆ. ನಾವು ನೂರೊಂದು ಲಿಂಗವಂತ್ರು. ನಮ್ಮತ್ರ ಬರಬ್ಯಾಡ, ವರಿಕೋಗಿ ನಿಂತು ಮಾತಾಡು.

ರೇಣುಕಾ : ಅಪ್ಪಾ ನನ್ನ ಮಗ ಪರಸುರಾಮ, ಬಿಕ್ಷಾವಾಸರು ಬ್ಯಾಡ, ಒಂದಿಡಿ ಅರಿವೇ ಸೊಪ್ಪ, ಒಂದು ಉಳ್ಳಾ ಗಡ್ಡಿ, ಒಂದು ಬದನೇಕಾಯಿ ಕೊಡಪ್ಪ. ನಾನೇನು ನಿಮ್ಮ ಬೆಳ್ಳಿ, ಬಂಗಾರ ಕೇಳುವುಳ್ಳಲ್ಲ. ಪಟೇಲರಂತ ಮಗನಿಗೆ ಮೂರೊಸ್ತು ಬಿಕ್ಷ ಕೊಡಿರಪ್ಪ .

ಪೊನ್ನಸೆಟ್ಟಿ : ಅಮ್ಮ ಅಜ್ಜಮ್ಮ, ನಾವು ಗಂಡು ದೇವರೊಕ್ಕಲು. ನಿನ್ನಂತ ಎಂಗ್ಸಿರ್ಗೆಲ್ಲಾ ಬಿಕ್ಷ ಆಕುವವರಲ್ಲ. ಮುಂಗಾರ್ದಿಲಿಂದ ತ್ವಾಟ ಬಿಟ್ಟೋರುಡುವಳಾಗು. ಬೆಕ್ಕಿನ ಕೊಳ್ಳಿಗೆ ಬೆಳ್ಳಿ ಲಿಂಗ, ನಾಯಿಗೆ ನಾಕು ಲಿಂಗ, ಎತ್ತಿನ ಕೊಂಬಿಗೆಂಟು ಲಿಂಗ, ಕುಂಬಾರ ಗುಂಡಣ್ಣಂಗೊಂಬತ್ತು ಲಿಂಗ, ಪಡಪೆದ್ದಣ್ಣಂಗತ್ತು ಲಿಂಗ, ಕುರುಬರ ಬೀರಣ್ಣಂಗನ್ನೊಂದು ಲಿಂಗ ಈತರ ನೂರೊಂದು ಲಿಂಗದವ್ರು ನಾವು. ನಿನ್ಗೆ ಬಿಕ್ಷೆ ನೀಡಮುಂಟು, ನಡಿ ಪರಿಕೆ.(ಪುಟ-೨೨೩)

ಇಲ್ಲಿ ಲಿಂಗವಂತರು ಗಂಡು ದೇವರ ಒಕ್ಕಲು ಎನ್ನುವ ಅಹಮಿಕೆಯಿಂದ ಎಲ್ಲಮ್ಮನನ್ನು ಹೆಂಗಸೆಂದು ನಿಷ್ಕಾರಣವಾಗಿ ನಿಂದಿಸುತ್ತಾರೆ. ಈ ಭಾಗವು ಧ್ವನಿಸುವ ಒಳನೋಟವು ಶರಣ ಚಳುವಳಿಯಲ್ಲಿ ಸ್ತ್ರೀ ಮತ್ತು ಪುರುಷರು ಸಮಾನರು ಎನ್ನುವ ಆಶಯವನ್ನು ಛಿದ್ರಿಸುತ್ತದೆ. ಅಲ್ಲದೆ ಎತ್ತು, ಎಮ್ಮೆ, ಬೆಕ್ಕು ಹೀಗೆ ಜೀವ ಜಾಲದಲ್ಲಿನ ಪ್ರಾಣಿಗಳಿಗೂ ಹೆಣ್ಣು ಸಮನಲ್ಲ ಎಂಬ ಧೋರಣೆಯು ವೈದಿಕ ಪರಂಪರೆಯದೇ ಆಗಿದೆ. ಶರಣ ಚಳುವಳಿಯು ವೈದಿಕ, ಜೈನ, ಬೌದ್ಧ ಮುಂತಾದ ಧರ್ಮಗಳ ಕಾಠಿಣ್ಯದಿಂದ ತಾತ್ವಿಕವಾಗಿ ಬಿಡಿಸಿಕೊಂಡರೂ ಶರಣರಲ್ಲಿ ಅಂತರ್‌ಗತವಾಗಿದ್ದ ಸ್ತ್ರೀ ಪುರುಷಭೇಧ ಕಲ್ಪನೆ ನಷ್ಟಗೊಂಡಿರಲಿಲ್ಲ ಎನ್ನುವ ಸೂಕ್ಷ್ಮವನ್ನು ಈ ಕಥನ ಕಟ್ಟಿ ಕೊಡುತ್ತದೆ. ಲಿಂಗವಂತರ ತೋಟದಲ್ಲಿ ಕಲ್ಲಾಗಿ ಬಿದ್ದಿದ್ದ ಬಸವಣ್ಣನ ವಿವರವು ಶರಣ ಚಳುವಳಿ ಹಿಡಿದ ದಾರಿಯನ್ನು ಸಂಕೇತಿಸುವಂತೆ ಚಿತ್ರಿತವಾಗಿದೆ. (ಪು.೨೨೪)

ರೇಣುಕಾ ಎಲ್ಲಮ್ಮ ಕಥನವನ್ನು ಒಂದು ಸಾಂಸ್ಕೃತಿಕ ಪಠ್ಯವಾಗಿ ಸ್ವೀಕರಿಸಿ ಅಧ್ಯಯನಕ್ಕೆ ತೊಡಗಿದರೆ ಇಂಥ ಅನೇಕ ಸಾಂಸ್ಕೃತಿಕ ವಾಗ್ವಾದಗಳನ್ನು, ಮಾನವ ಚರಿತ್ರೆ ಮತ್ತು ಭಾರತೀಯ ಸಮಾಜ ಜೀವನದ ಅನೇಕ ಪಲ್ಲಟಗಳನ್ನು ತೋರುವ ಸಾಧ್ಯತೆಯನ್ನು ನಿರಾಕರಿಸುವಂತಿಲ್ಲ.

ಜಾನಪದ ಪಠ್ಯ ಎಂಬುದು ಹೇಗೆ ಚಾರಿತ್ರಿಕವಾಗಿ ನಡೆದ ಮಹತ್ವದ ಘಟನೆಗಳನ್ನು ಕಥನ ಶಿಲ್ಪದೊಳಗೆಯೇ ಕಟ್ಟಿಕೊಂಡಿರುತ್ತದೆ ಎಂಬುದನ್ನು ತೋರುವ ಸಲುವಾಗಿ ಈ ಟಿಪ್ಪಣಿಯನ್ನು ಸಿದ್ಧಮಾಡಲಾಗಿದೆ. ಕನ್ನಡ ಜಾನಪದ ಪರಿಕರಗಳನ್ನು ಸಂಸ್ಕೃತಿ ಪಠ್ಯಗಳನ್ನಾಗಿ ಸ್ವೀಕರಿಸಿ ಅಧ್ಯಯನ ಮಾಡುವುದರಿಂದ ಕನ್ನಡದ ಸಾಂಸ್ಕೃತಿಕ ಚರಿತ್ರೆಯನ್ನು ಆ ಮೂಲಕ ಭಾರತೀಯ ಸಂಸ್ಕೃತಿಯ ಚರಿತ್ರೆಯನ್ನು ರಚಿಸಲು ಅವಕಾಶವಾಗಬಹುದೆನ್ನುವ ಮಹತ್ವಾಕಾಂಕ್ಷೆಯು ಈ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿದೆ ಎಂದು ಮಾತ್ರ ಹೇಳಬಲ್ಲೆ.

❑

✤ ಡಾ|| ಕೆ. ವೈ. ನಾರಾಯಣಸ್ವಾಮಿ, ಕನ್ನಡ ಅಧ್ಯಾಪಕರು,
ಬಾಲಕರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ.

ಅಣ್ಣಾ ಹಜಾರೆ : ಒಂದು ಚಿಂತನೆ

– ಆರ್. ವಿಜಯರಾಘವನ್

'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' ಚಳುವಳಿಗೆ ೧೯೯೨ ರಲ್ಲಿ ಐವತ್ತು ವರ್ಷ ತುಂಬಿದ್ದರ ನೆನಪಿಗೆ ಮಹಾರಾಷ್ಟ್ರ ಸರ್ಕಾರ ಆದರ್ಶ ಗ್ರಾಮ ಯೋಜನೆ ಪ್ರಾರಂಭಿಸಿತು. ತಾಲ್ಲೂಕಿಗೆ ಒಂದರಂತೆ ಆದರೂ ಅಣ್ಣಾ ಹಜಾರೆಯ ರಾಲೇಗಾಂವ್ ಸಿದ್ದಿಯಂತೆ ಸ್ವಯಂ ಸಂತೃಪ್ತ ಅಭಿವೃದ್ಧಿ ಹೊಂದಿದ ಗ್ರಾಮಗಳು ಉದಯವಾಗಬೇಕು ಎಂಬುದು ಯೋಜನೆಯ ಹಿಂದಿನ ಉದ್ದೇಶ.

ರಾಲೇಗಾಂವ್ ಸಿದ್ದಿ ಸದಾ ಬರಪೀಡಿತ ಅಹಮದ್ ನಗರ ಜಿಲ್ಲೆ (ಮಹಾರಾಷ್ಟ್ರ) ಯಲ್ಲಿನ ಒಂದು ಹಳ್ಳಿ. ಕೇವಲ ೧೦-೧೨ ವರ್ಷಗಳಲ್ಲಿ ಇಲ್ಲಿ ಉಂಟಾದ ಬದಲಾವಣೆ ಗಾಂಧಿಯಲ್ಲಿ ಕೂಡ ಸಂಕೋಚ ಹುಟ್ಟಿಸುವಷ್ಟು ಶಕ್ತವಾದದ್ದು. ಯಾವುದನ್ನು ಸಾಧಿಸಲು ಏನು ಬೇಕು ಎಂಬುದರ ಪರಿಜ್ಞಾನವಿರದೆ ಯೋಜನೆ ನೇಯುವವರಿಗೆ ಒಂದು ಕಲಿಕೆಯ ಸಾಮಗ್ರಿಯನ್ನಾಗಿ ಅದನ್ನು ರೂಪಿಸಿದರು, ಆ ಮಾಜಿ ಯೋಧ ಅಣ್ಣಾ ಹಜಾರೆ.

ಸ್ವಾವಲಂಬಿಯಾದ, ಸ್ವತಃ ತಮ್ಮ ಅಗತ್ಯಗಳನ್ನು ತಾವೇ ಬಹುಪಾಲು ಪೂರೈಸಿಕೊಳ್ಳಬಲ್ಲ ಗ್ರಾಮಗಳು ಭಾರತದ ಅರ್ಥ ವ್ಯವಸ್ಥೆಗೆ ಭಿನ್ನವಾದ ತಿರುವನ್ನು ಕೊಡಬಲ್ಲವು. ಅದು ಸಾಧ್ಯವಾಗಲು ಹಳ್ಳಿಗರಿಗೆ ಜ್ಞಾನ ಮೂಲವಾದ ವಿದ್ಯೆಯು ದೊರೆಯಬೇಕು. ಅವರು ತಮ್ಮ ದೇಹ ಸ್ವಾಸ್ಥ್ಯವನ್ನು ಹೆಚ್ಚಿಸಿಕೊಂಡು ತಮ್ಮ ಜಾನಪದ ವಿವೇಕ ಹಾಗೂ ಕರ್ತೃತ್ವ ಶಕ್ತಿಯನ್ನು ಬಳಸಿಕೊಂಡು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಬೇಕು. ವಿಜ್ಞಾನ, ತಂತ್ರಜ್ಞಾನ ಹಾಗೂ ಅನ್ಯಜ್ಞಾನ ಶಿಸ್ತುಗಳ ಲಾಭವನ್ನು ಗ್ರಾಮೀಣ ಸಮಾಜವು ಸಾಮೂಹಿಕ ಅಭಿವೃದ್ಧಿಗೆ ಬಳಸಿಕೊಳ್ಳುವಂತಾಗಬೇಕು. ಹಳ್ಳಿಯ ಆಡಳಿತ ವ್ಯವಸ್ಥೆ. ನ್ಯಾಯ ಪರಿಪಾಲನೆಯ ಜವಾಬ್ದಾರಿ ಹಳ್ಳಿಗರಲ್ಲಿ ನಿಕ್ಷೇಪಗೊಳ್ಳಬೇಕು. ಸ್ವಾರ್ಥರಹಿತರಾದ, ಸಮುದಾಯವನ್ನು ಪ್ರೀತಿಸುವ ಸಮಾಜ ಸೇವಕರು ಇವುಗಳ ಆಡಳಿತ ಚುಕ್ಕಾಣಿ ಹಿಡಿಯಬೇಕು. ಈ ಸ್ಥಿತಿಯಿರುವ ಗ್ರಾಮ ಗಾಂಧೀಜಿಯ ಆದರ್ಶ ಗ್ರಾಮದ ಕಲ್ಪನೆಗೆ ಸರಿ ಹೊಂದುತ್ತದೆ.

ಒಂದು ರಾಷ್ಟ್ರದ ಪಾಲಿಗೆ ಐವತ್ತು ವರ್ಷಗಳು ದೊಡ್ಡ ಅವಧಿಯೇನಲ್ಲ. ಆದರೆ ಅಭಿವೃದ್ಧಿಯ ತಹತಹ ಎದೆಯಲ್ಲಿ ತುಂಬಿಕೊಂಡವರಿಗೆ ಕ್ಷಣ ಕ್ಷಣವೂ ಅಮೂಲ್ಯವೆ. ಗಾಂಧಿಯನ್ನು ಪಡೆದ ದೇಶವಾದರೂ ಹಳ್ಳಿಗರ ಬದುಕನ್ನು ಹಸನು ಮಾಡುವ ದಿಕ್ಕಿನಲ್ಲಿ ನಾವು ಕಳೆದ ೫೦ ವರ್ಷಗಳನ್ನು ಆಲಸ್ಯದಿಂದ ಕಳೆದ ರೀತಿಯನ್ನು ಗಮನಿಸಿದರೆ ನಾವು ಮರೆತದ್ದು ಏನೆಂಬುದು ಅರಿವಾದೀತು. ಹಳ್ಳಿಗಳು ಬಹುತೇಕ ಹಾಗೇ ಉಳಿದು ಹೋದವು.

ಗರೀಬಿ ರಾಷ್ಟ್ರವೊಂದರಲ್ಲಿ ಸಂಪತ್ತು ಅಮೂಲ್ಯ ಎಂಬುದನ್ನು ಮರೆತು ಖರ್ಚು ಮಾಡಿದ ಹಣ ಹೊಳೆಯಲ್ಲಿ ತೊಳೆದ ಹುಣಸೆಯಂತೆ ಯಾರಿಗೆ ತಲುಪಬೇಕಿತ್ತೋ, ಯಾವ ಬದಲಾವಣೆಯನ್ನು ತರಬೇಕಿತ್ತೋ ಅದು ಆಗದೆ ವ್ಯರ್ಥವಾಯಿತು.

ತಡವಾಗಿಯಾದರೂ ಮಹಾರಾಷ್ಟ್ರ ಸರ್ಕಾರ ರಾಲೇಗಾಂವ್ ಸಿದ್ಧಿಯನ್ನು ಆದರ್ಶ ಗ್ರಾಮದ ಮಾದರಿಯನ್ನಾಗಿ ಮುಂದಿರಿಸಿಕೊಂಡಿದೆ. ಈವರೆಗಿನ ತಪ್ಪುಗಳನ್ನು ಸರಿಪಡಿಸುವತ್ತ ಇಟ್ಟ ಹೆಜ್ಜೆ ಇದು.

ಅಭಿವೃದ್ಧಿಯ ನಿರ್ವಚನೆ

ಇಷ್ಟಕ್ಕೂ 'ಅಭಿವೃದ್ಧಿ'ಯನ್ನು ಹೇಗೆ ನಿರ್ವಚಿಸಬೇಕು? ನಾವು ಲಾಗಾಯ್ತಿನಿಂದಲೂ ಪರಿಸರವನ್ನು ಶೋಷಿಸುವುದಕ್ಕೆ ಬೇಕಾದ ತಂತ್ರಜ್ಞಾನವನ್ನು ರೂಡಿಸಿಕೊಳ್ಳುವುದನ್ನು, ಕೊಳ್ಳುಬಾಕ ಸಂಸ್ಕೃತಿಯ ಹಸಿವೆಯನ್ನು, ನೀಗಿಸಲು ಬೇಕಾದ ವಸ್ತುಗಳ ಉತ್ಪಾದನೆಯಲ್ಲಿ ಬಳಕೆಯಾಗುವ ತಂತ್ರಜ್ಞಾನದ ಆವಿಷ್ಕಾರವನ್ನು ಅಂತಹ ವಸ್ತುಗಳ ಉತ್ಪಾದನೆಯನ್ನು ಅಭಿವೃದ್ಧಿಗೆ ಪರ್ಯಾಯ ಪದವನ್ನಾಗಿ ಬಳಸುತ್ತಿದ್ದೇವೆ. ಈಗ ವಿನಾಶಗೊಂಡಿರುವ ಪರಿಸರವನ್ನು ಪುನಃ ಮೂಲ ಸ್ಥಿತಿಗೆ ತರುವ ಯತ್ನಗಳನ್ನು, ಉಳಿದಿರುವಷ್ಟು ಪರಿಸರವನ್ನು ಸಂರಕ್ಷಿಸುವ ವಿಧಾನಗಳನ್ನು, ಮನುಷ್ಯನ ಮೂಲಭೂತ ಅಗತ್ಯಗಳನ್ನು ನಮ್ಮ ನೆಲ, ಜಲ, ಗಾಳಿ, ಆಕಾಶಗಳಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಿ ಪಡೆದುಕೊಳ್ಳುವುದನ್ನು ಅಭಿವೃದ್ಧಿಯೆಂಬ ವ್ಯಾಖ್ಯಾನಕ್ಕೆ ಒಳಪಡಿಸಬೇಕಾಗಿದೆ. ಈ ಅನಿವಾರ್ಯತೆಯನ್ನು ನಿಸರ್ಗವೇ ನಮ್ಮ ಮುಂದೆ ಒಡ್ಡುವಷ್ಟು ನಾವು ಅದನ್ನು ರೊಚ್ಚಿಗೆಬ್ಬಿಸಿದ್ದೇವೆ. ಬೆಳೆಯುತ್ತಿರುವ ಜನಸಂಖ್ಯೆ, ವಿಜ್ಞಾನದ ದುರ್ಬಳಕೆಯಿಂದ ಉತ್ಪನ್ನವಾದ ಕಸಕೊಳೆಗಳ ಅಸಮರ್ಪಕ ವಿಲೇವಾರಿ, ಇವುಗಳಿಂದ ಪರಿಸರದ ಮೇಲೆ ದಿನೇ ದಿನೇ ಒತ್ತಡ ಹೆಚ್ಚಾಗುತ್ತಿದೆ. ಕಡಿಮೆ ಭೂ ಭಾಗದಲ್ಲಿ ತಲೆಯೆತ್ತಿರುವ ಬೃಹತ್ ಉಪಭೋಕ್ತೃ ನಗರ ಜೀವನದಿಂದ ಉಂಟಾಗುತ್ತಿರುವ ಇವುಗಳ ನೇರ ಪರಿಣಾಮವು ಹಳ್ಳಿಗಳಿಂದ ಸಾಗರದವರೆಗೂ ಪ್ರಸಾರಗೊಳ್ಳುತ್ತಿದೆ. ಹಾಸಿ ಉಂಡು ಬೀಸಿ ಒಗೆದ ಯೋಜನೆಗಳು, ವಿಷವಸ್ತುಗಳು, ಜೀವನ ಕ್ರಮಗಳು ಆವರಿಸಿಕೊಂಡಿರುವ ಹಳ್ಳಿಗಳಿಗೆ ಶುದ್ಧಗಾಳಿಯ ಉಸಿರು ತುಂಬುವ ಪರ್ಯಾಯ ಮಾರ್ಗಗಳನ್ನು ಹಳ್ಳಿಗರೇ ಹುಡುಕಿಕೊಳ್ಳಬೇಕಾಗಿದೆ.

ಇದರ ಅಗತ್ಯಗಳನ್ನು ಕುರಿತು ಯೋಚಿಸೋಣ.

ಮನುಷ್ಯನ ದುರಾಸೆಯೇ ಮೂಲವಾಗಿ ಹಳ್ಳಿಗಳ ನೆಲ ಜಲಗಳು ತಮ್ಮ ಸ್ವಾಭಾವಿಕವಾದ ಗುಣ ಪ್ರಮಾಣಗಳನ್ನು ಕಳೆದುಕೊಂಡ ಕಾರಣವಾಗಿ ಆಳ ಆಳದ ಕೊಳವೆ ಬಾವಿಗಳೂ, ಬತ್ತಿದ ಬಾವಿ ಕೆರೆಗಳೂ, ರಸಗೊಬ್ಬರ ಬಳಕೆಯಿಂದ ಸತ್ವಹೀನವಾದ ನೆಲವೂ ಕೀಟನಾಶಕಗಳನ್ನೂ ಅರಗಿಸಿಕೊಂಡ ಕ್ರಿಮಿಕೀಟಗಳೂ ಅಣಕಿಸಿ ರೈತ ಕಂಗಾಲಾಗಿ ಕೀಟನಾಶಕಗಳನ್ನು ತಾನೇ ಸೇವಿಸಿ ಜೀವ ತೆಗೆದುಕೊಳ್ಳುತ್ತಿದ್ದಾನೆ. ರೈತ ಕುಟುಂಬಗಳು ಕಂಗಾಲಾಗಿವೆ. ಬೀಜ ಮತ್ತು ಕೀಟನಾಶಕಗಳನ್ನು ತಯಾರು ಮಾಡುವ ಬಹುರಾಷ್ಟ್ರೀಯ ಕಂಪನಿಗಳು ಮಾತ್ರ ಅಗಾಧ ಪ್ರಮಾಣದ ಲಾಭವನ್ನು ಗಂಟು ಮಾಡಿಕೊಳ್ಳುತ್ತಿವೆ.

ಇವತ್ತು ನಮ್ಮ ಮುಂದಿರುವ ದೊಡ್ಡ ಸವಾಲೆಂದರೆ ಕೃಷಿ ಕ್ಷೇತ್ರದ ಕಾಯಕಲ್ಪ. ಕೃಷಿ ಕ್ಷೇತ್ರಕ್ಕೆ Sustainable ಆಗಿರುವ ಪದ್ಧತಿಗಳನ್ನು ಅಳವಡಿಸಬೇಕಾಗಿದೆ. ಜಲಾನಯನ ಪ್ರದೇಶದ ಅಭಿವೃದ್ಧಿಯಿಂದಲು, ಅಭಿವೃದ್ಧಿ ಹೊಂದಿದ ಪ್ರದೇಶಗಳನ್ನು ಹಾಗೇ ಕಾಯ್ದುಕೊಳ್ಳುವುದರಿಂದಲೂ ಭೂಸಾರ ಸಂರಕ್ಷಣೆ, ಅಂತರ್ಜಲದ ಮಟ್ಟವನ್ನು ಹೆಚ್ಚಿಸುವುದು ಹಾಗೂ ನೆಲದ ಮೇಲಿನ ಹಸಿರು ಕವಚವನ್ನು ಹೆಚ್ಚುಮಾಡುವುದು ಸಾಧ್ಯ. ಆದರೆ ಸಮಾಜದ ಸ್ವಭಾವ ಪರಿವರ್ತನೆಯಾಗದೆ, ಸಮಾಜ ತಾನು ಈಗ ನಿಂತಿರುವುದೆಲ್ಲಿ ಎಂಬುದನ್ನು ಅರಿಯದೆ ಇವು ಸಾಧ್ಯವಾಗಲಾರವು.

ಇಂತಹ ದೀರ್ಘಕಾಲೀನ ಲಾಭಕರ ಯೋಜನೆಗಳಿಂದ ತಕ್ಷಣದ ಲಾಭಕೋರ ಪ್ರವೃತ್ತಿಯನ್ನು ತಣಿಸಲಾಗದು. ಮೊದಲಿಗೆ ನಾವು ರೂಢಿಸಿಕೊಳ್ಳಬೇಕಾದ್ದೆಂದರೆ ಆತ್ಮನಿಗ್ರಹದ ವಿಧಾನಗಳು. ಅವು ಮಾತ್ರ ನಮ್ಮನ್ನು ಸರಿದಾರಿಯಲ್ಲಿ ಕೊಂಡೊಯ್ಯಬಲ್ಲವು. ಆತ್ಮನಿಗ್ರಹವೆಂಬುದು ಸಮಾಜಪರವಾದ ಪ್ರವೃತ್ತಿಯಾಗಿ ಹೇಗೆ ಪರಿಣಮಿಸಬಲ್ಲುದು ಎಂಬುದಕ್ಕೆ ಪುರಾವೆಯಾಗಿ ಈ ಕೆಳಕಂಡ ವಿಚಾರಗಳನ್ನು ಗಮನಿಸಬಹುದು.

೧. ನಾನು ನನ್ನ ಮಕ್ಕಳ ಸಂಖ್ಯೆಯನ್ನು ಒಂದು ಮಗುವಿಗೆ ಮಿತಗೊಳಿಸಿಕೊಳ್ಳುತ್ತೇನೆ. ಅದು ಹೆಣ್ಣಾದರೆ ನನ್ನ ಆಸ್ತಿ ಅದಕ್ಕೆ ಸಲ್ಲಲಿ; ಅದು ಗಂಡಾದರೆ ಅದಕ್ಕೆ ಸಲ್ಲಲಿ. ವಂಶದ ಪರಿಕಲ್ಪನೆಯು, ಅದನ್ನು ಕುರಿತ ಅತಿ ವ್ಯಾಮೋಹವು ಇತರೆ ಜೀವ ಸಂಕುಲದ ಬಗ್ಗೆಯ ನಮ್ಮ ಗೌರವವನ್ನು ಕಡಿಮೆ ಮಾಡುತ್ತದೆ.

೨. ನಾನು ನನ್ನ ಅಗತ್ಯಗಳೇನು ಎಂಬುದನ್ನು ಸುತ್ತಲಿನ ಸಮಾಜದೊಂದಿಗೆ ನನ್ನನ್ನು ಸಂಬಂಧಿಸಿ ನೋಡಿ ಗುರುತಿಸಿಕೊಳ್ಳುತ್ತೇನೆ. ಸುತ್ತಲಿನ ಸಮಾಜದಲ್ಲಿ ಅತೃಪ್ತಿ ಮೂಡಿಸುವ ಯಾವುದಾದರೂ ಸರಿ, ಅದಿಲ್ಲದೆಯೂ ನಾವು ಗೌರವದಿಂದ ಬದುಕಬಹುದಾದರೆ, ಅದನ್ನು ಅಗತ್ಯವೆಂದು ನಾನು ಭಾವಿಸುವುದಿಲ್ಲ.

೩. ನೆಲವನ್ನು, ನನ್ನ ನೆಲದೊಳಗಿನ ಜಲವನ್ನು, ನಾನು ಉಸಿರಾಡುವ ಗಾಳಿಯನ್ನು ಪ್ರೀತಿಸುತ್ತೇನೆ. ಅದರ ರಕ್ಷಣೆಗೆ ನಾನು ಜಲಸಂರಕ್ಷಣೆಯ ಉಪಾಯಗಳನ್ನು, ಸಾವಯವ ಗೊಬ್ಬರದ ಬಳಕೆಯನ್ನು, ಜೈವಿಕ ಕೀಟನಿವಾರಣೋಪಾಯಗಳನ್ನು, ಭೂಸಾರ ಸಂರಕ್ಷಣೆಯ ವಿಧಾನಗಳನ್ನು ಅಳವಡಿಸಿಕೊಳ್ಳುತ್ತೇವೆ. ಅಲ್ಲದೆ ನನ್ನ ನೆಲದಲ್ಲಿ ಸಾಧ್ಯವಾದಷ್ಟು ಗಿಡ ಮರಗಳನ್ನು ನೆಟ್ಟು ಬದುಗಳ ಮೇಲೆ, ಕಾಲುವೆಗಳ ಬದಿಯಲ್ಲಿ ಹುಲ್ಲು ಬೆಳೆಸಿ ಈ ನೆಲಕ್ಕೆ ಹಸಿರು ಕವಚ ತೊಡಿಸುತ್ತೇನೆ ಮತ್ತು ಭೂ ತಾಯಿಯ ವಸ್ತ್ರಾಪಹರಣ ಮಾಡಿದ ಪಾಪದಿಂದ ವಿಮುಕ್ತಿ ಹೊಂದುತ್ತೇನೆ.

೪. ಈ ಗ್ರಾಮ ನನ್ನದು. ನಾನು ಈ ಗ್ರಾಮಕ್ಕೆ ಸಲ್ಲುವವನು. ಇಲ್ಲಿನ ಕೆರೆ, ಕುಂಟೆ, ಬಾವಿ, ದಾರಿ, ಗೋಮಾಳ, ಮುಂತಾದ ಎಲ್ಲದರ ಸಂರಕ್ಷಣೆಯ ಜವಾಬ್ದಾರಿ ನನ್ನ ಮೇಲಿದೆ. ಅದು ಅಳಿಲು ಸೇವೆಯಷ್ಟಾದರೂ ಸರಿಯೆ, ನನ್ನ ಶಕ್ತಿ ವ್ಯಯಿಸಿ ಶ್ರಮದಾನ ಮಾಡುತ್ತೇನೆ.

೫. ಇಲ್ಲಿನ ಆಗುಹೋಗುಗಳು ಇವತ್ತಿನ ನನ್ನ ಮೇಲೂ, ಮುಂದಿನ ಪೀಳಿಗೆಗಳ ಮೇಲೂ ಪ್ರಭಾವ ಬೀರುವಂಥವು. ಆದ್ದರಿಂದ ಹಳ್ಳಿಯ ಬೇಕು-ಬೇಡಗಳ ವಿಚಾರ ಅರಿತು ತಪ್ಪದೆ ನನ್ನ ಅಭಿಪ್ರಾಯ ಮಂಡಿಸುತ್ತೇನೆ. ಗ್ರಾಮ ಸಭೆಗಳಲ್ಲಿ ಭಾಗವಹಿಸುತ್ತೇನೆ.

೬. ಈ ದೇಹ ಒಂದು ದೇಗುಲ. ಇದರ ಮೂಲಕವೇ ಇದನ್ನು ಸಹಜ ಸ್ಥಿತಿಯಲ್ಲಿ ಕಾಯ್ದುಕೊಳ್ಳುವುದರಿಂದಲೇ ಏನನ್ನಾದರು ಸಾಧಿಸಲು ಸಾಧ್ಯ. ಅದಕ್ಕೆ ಮಾರಕವಾದ ತಂಬಾಕು, ಮದ್ಯಪಾನ ಮುಂತಾದ ದುಶ್ಚಟಗಳಿಂದ ವಿಮುಕ್ತನಾಗುತ್ತೇನೆ.

೭. ನನ್ನ ಶಕ್ತಿ ಅಪರಿಮಿತವಾದದ್ದು. ಅದರಲ್ಲಿ ನನಗೆ ಪೂರ್ಣ ವಿಶ್ವಾಸವಿದೆ.

೮. ನನ್ನ ಪರಂಪರೆಯಲ್ಲಿ ಸಂಸ್ಕೃತಿಯ ಒಳಸುಳಿಗಳಿವೆ. ಅವುಗಳನ್ನು ಗುರುತಿಸಿ ಅವುಗಳ ವ್ಯಕ್ತ ಮಾಧ್ಯಮದಲ್ಲಿ ಅವನ್ನು ಪ್ರಕಟಪಡಿಸುತ್ತೇನೆ.

ಇವು ಹಳ್ಳಿಗರನ್ನು ಎತ್ತ ಒಯ್ಯುತ್ತವೆ ಎಂಬುದು ಖಚಿತವಾಗಿರಬೇಕು. ಅರಿವು ನಿರ್ಧಾರಕ್ಕೆ ದಾರಿ ಮಾಡಿಕೊಟ್ಟ ಕೂಡಲೇ ಅಭಿವೃದ್ಧಿಯ ಸಸಿ ಫಲ ಕೊಡಲಾರಂಭಿಸುತ್ತದೆ. ಸರ್ಕಾರೀ ಮೂಲದಿಂದ ಎತ್ತೆತ್ತಲೋ ಹರಿದು ಹೋಗುವ ಅಭಿವೃದ್ಧಿಯ ಹಣವನ್ನು ಅಭಿವೃದ್ಧಿಯ ನಿಜವಾದ ಉದ್ದೇಶಕ್ಕೆ ತಿರುಗಿಸಬೇಕಾಗುತ್ತದೆ.

ಆರ್ಥಿಕ ಪುನಶ್ಚೇತನವು ಫಲ ಕೊಡಲು ಶುರು ಮಾಡಿದ ಮೇಲೆ ಒಂದನ್ನಂತೂ ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಅದರ ಫಲವನ್ನು ಹಳ್ಳಿಗರ ಜೀವನಮಟ್ಟವನ್ನು ಉತ್ತಮಗೊಳಿಸಿಕೊಳ್ಳಲು ಬಳಸಬೇಕಾಗಿ ಬರುತ್ತದೆ. ಅದನ್ನು ಹಳ್ಳಿಗರು ತಾವೇ ನಿರ್ಧರಿಸಿಕೊಳ್ಳಬೇಕಾಗುತ್ತದೆ. ಗ್ರಾಮೀಣ ಅಭಿವೃದ್ಧಿಯು ಸಮರ್ಪಕವಾಗಿ ನೆರವೇರಲು ತಮ್ಮ ಅಗತ್ಯಗಳ ಬಗ್ಗೆ ಬೇರೆಲ್ಲರಿಗಿಂತಲೂ ಹೆಚ್ಚು ಬಲ್ಲವರಾದ ಹಳ್ಳಿಗರೇ ಗ್ರಾಮ ಸಭೆಗಳಲ್ಲಿ ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

ಅಭಿವೃದ್ಧಿಗಿರುವ ಆತಂಕಗಳು:

ಓದುವ ಅಭ್ಯಾಸವಿದ್ದವರೆಲ್ಲರಿಗೂ ಅಣ್ಣಾ ಹಜಾರೆಯ ಪರಿಚಯ ಆಗಿರಬೇಕು ಎಂಬಷ್ಟು ಅವರ ಬಗ್ಗೆ ಲೇಖನಗಳು ಪ್ರಕಟವಾಗಿವೆ. ಆದರೆ ಅವರ ಶ್ರಮದ ಹಿಂದಿನ ತತ್ವವನ್ನು ಜನರವರೆಗೆ ದಾಟಿಸುವ ಇರಾದೆಯುಳ್ಳ, ಅವರ ಹೆಜ್ಜೆಯ ಗುರುತಿನಲ್ಲಿ ದಾರಿಯನ್ನು ಹುಡುಕಿಕೊಳ್ಳುವ ಮನಸ್ಸುಗಳು ಯಾಕೆ ಹುಟ್ಟುತ್ತಿಲ್ಲ ಎಂಬ ಪ್ರಶ್ನೆ ಬಹಳ ಸಮಸ್ಯೆಗಳಿಗೆ ಮೂಲವನ್ನು ಗುರುತಿಸಬಲ್ಲುದು. ಅರ್ಥಶಾಸ್ತ್ರದ ಅರ್ಥವಾಗದ ಆಧುನಿಕ ಪರಿಭಾಷೆಯನ್ನು ದೂರವಿರಿಸಿ ಸಂತೃಪ್ತ ಬದುಕಿಗೆ ಅಗತ್ಯವಾದ ಸರಳ ಮಾದರಿಗಳನ್ನು ಆಯ್ದುಕೊಂಡರೆ ಮಾತ್ರ ಸಂಕೀರ್ಣಗೊಂಡಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವೆಂಬ ಗಾಂಧೀಜಿಯ ನಂಬಿಕೆಯೂ ಹಾಗೂ ಹಜಾರೆಯ ನಿಸ್ವಾರ್ಥ ಕಾಯಕದ ಮಾರ್ಗವೂ ಒಟ್ಟುಗೂಡದಿದ್ದರೆ ಎಲ್ಲವೂ ತಿಪ್ಪೆ ಸಾರಿಸಿದಂತೆ ಆಗುವುದನ್ನು ಎಲ್ಲರೂ ಬಲ್ಲೆವು. ಆದರೆ ಯಾರೂ ಯಾಕೆ ಏನನ್ನೂ ಕೈಗೆತ್ತಿಕೊಳ್ಳುತ್ತಿಲ್ಲ?

ಆದರ್ಶ ಗ್ರಾಮಗಳನ್ನು ಕಟ್ಟುವ ಕಾರ್ಯಕ್ರಮದಲ್ಲಿ ಸರ್ಕಾರೀ ವ್ಯವಸ್ಥೆಯ ಪಾತ್ರ ಇನ್ನೊಂದು. ಅದು ತನ್ನ ಜವಾಬ್ದಾರಿಯನ್ನು ಮರೆತಂತೆ ಸಂಪನ್ಮೂಲಗಳನ್ನು ದಾಟಿಸುವ ಆ ಪ್ರಕ್ರಿಯೆಯಲ್ಲಿ ಹಿಂಡಿಕೊಳ್ಳುವ ಕಾರ್ಯದಲ್ಲಿ ತೊಡಗಿದೆ. ಹಾಗಾಗದೆ ಅದೇ ಗ್ರಾಮೀಣ ಸ್ವಯಂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಪೂರಕವಾಗಿರುವಂತೆ ಜನರ ಜೊತೆಗೂಡಬೇಕು. ಹಳ್ಳಿಯ ಜನರಿಗೆ ಏನು ಮಾಡಲು ಸ್ವಯಂ ಶಕ್ತಿಯಿಲ್ಲವೋ ಅಲ್ಲಿ ತನ್ನ ಪಾತ್ರವಿದೆ ಎಂದು ಸರ್ಕಾರ ಅರಿಯಬೇಕಿದೆ. ಗ್ರಾಮೀಣ ಯೋಜನೆಗಳಿಗೆ ತಾಂತ್ರಿಕ ಸಹಕಾರವೂ, ಅಗತ್ಯವಿರುವಷ್ಟು ಆರ್ಥಿಕ ಬೆಂಬಲವೂ, ಆರೋಗ್ಯ, ಶಿಕ್ಷಣ, ಸಂಪರ್ಕವೇ ಮುಂತಾದ ಸೌಲಭ್ಯಗಳೂ ಒದಗಿಬರಬೇಕು. ಹಳ್ಳಿಯನ್ನು ಕಟ್ಟುವ ಕೆಲಸದಲ್ಲಿ ಸ್ವಾತಂತ್ರ್ಯ ಹಳ್ಳಿಗರದ್ದು ಆಗಿರಬೇಕು. ತಮ್ಮ ಅಭಿವೃದ್ಧಿಯಲ್ಲಿ ಯಾವುದು ಮುಖ್ಯವೆಂದು ಗ್ರಾಮಸ್ಥರು ಭಾವಿಸುವರೋ ಅದಕ್ಕೆ ಪ್ರಾಶಸ್ತ್ಯ ದೊರೆಯಬೇಕು. ಯೋಜನೆಗಳನ್ನು ಹೇರಿ ಅಭಿವೃದ್ಧಿ ಸಾಧಿಸಲು ಸಾಧ್ಯವಿಲ್ಲವೆಂಬುದನ್ನು ಮನಗಾಣದೆ ಅಥವಾ ಯಾವ ಯೋಜನೆಯಿಂದ ಏನು ಲಾಭ ಎಂಬುದು ಗ್ರಾಮಸ್ಥರಿಗೆ ಮನವರಿಕೆಯಾಗದೆ ಹೋದರೆ ಹಳ್ಳಿಗರ ಜೊತೆ ಕೈಗೂಡಿಸಲು ಸಾಧ್ಯವಾಗುವುದಿಲ್ಲ.

ಪರಮಗುರಿ ಸಾಧನೆಯತ್ತ ಮನಸ್ಸು-ಮೈ:

ಅಭಿವೃದ್ಧಿ ಪೂರ್ವ ರಾಲೇಗಾಂವ್ ಸಿದ್ದಿಯ ಭೌತಿಕ ವಿವರಗಳು ಯಾವುದೇ ಇತರ ಭಾರತೀಯ ಹಳ್ಳಿಯದಕ್ಕಿಂತ ಭಿನ್ನವಲ್ಲ. ಭಿನ್ನತೆಯಿರುವುದು ಆ ಹಳ್ಳಿ ಬೇರೆ ಹಳ್ಳಿಗಳಿಗಿಂತ ಭಿನ್ನವಾಗಿ ಹೋಯಿತು ಎಂಬುದರಲ್ಲಿ; ಅಲ್ಲಿ ಅಣ್ಣಾ ಹಜಾರೆಯಂಥ ಮನುಷ್ಯನೊಬ್ಬ ಹುಟ್ಟಿದ ಎನ್ನುವುದರಲ್ಲಿ; ಅಲ್ಲಿನ ಜನರಲ್ಲಿ ಆತ ಸಹಿಸಿಕೊಳ್ಳುವಂತೆ ಮಾಡಲು ಅಗತ್ಯವಾದ ಮನಸ್ಥಿತಿ ರೂಢಿಸಿದ ಎಂಬುದರಲ್ಲಿ.

ರಾಲೇಗಾಂವ್ ಎಂಬ ಆ ಕುಗ್ರಾಮದಲ್ಲಿ ಹುಟ್ಟಿದ ಅಣ್ಣಾ ಹಜಾರೆಯ ಕಾರ್ಯ ಅಭಿವೃದ್ಧಿಯ ಪರಿಕಲ್ಪನೆಯು ಹುಸಿ ಆದರ್ಶವಲ್ಲ ಎಂಬುದನ್ನು ತೋರಿದೆ. ಕೇವಲ 25 ವರ್ಷಗಳ ಕೆಳಗೆ ಭಾರತದ ಯಾವುದೇ ಕುಗ್ರಾಮದ ಪ್ರಾತಿನಿಧಿಕ ಸ್ವರೂಪವೆಂಬಂತೆ ಇದ್ದುದು ಈ ಹಳ್ಳಿ. ಕಿತ್ತು ತಿನ್ನುವ ಬಡತನ, ಮಳೆಯನ್ನೇ ನಂಬಿ ಮೋಸ ಹೋಗುತ್ತಲಿದ್ದ ಜನ, ಮಾರವಾಡಿಗಳ ಕಪಿಮುಷ್ಠಿ, ನಿರಕ್ಷರತೆ, ಒಳಜಗಳಗಳು, ಮದ್ಯಪಾನ ತಂಬಾಕಿನ ದಾಸ್ಯ, ಜೂಜು-ಕಳ್ಳಬಟ್ಟಿ ಧಂದೆ, ರಾಜಕೀಯದ ದಾಳ ಎಲ್ಲವೂ ಅಲ್ಲಿದ್ದವು. ಇಂದು ನಳನಳಿಸುವ ಬೆಳೆ, ಎಲ್ಲಿ ನೋಡಿದರೂ ಮರ, ಸಮೃದ್ಧ ಜಲ ಅಲ್ಲಿ ಕಂಡು ಬರುತ್ತದೆ. ಮಾರವಾಡಿಗಳ ಹೆಸರಿಲ್ಲ. ಮದ್ಯ ತಂಬಾಕು ಮಾರುವ ಅಂಗಡಿಗಳಿಲ್ಲ; ಒಳಜಗಳಗಳಿಲ್ಲ. ಎಲ್ಲ ಮಕ್ಕಳೂ ಶಾಲೆಗೆ ಹೋಗುತ್ತಾರೆ. ಎಲ್ಲ ವಯಸ್ಕರೂ ದುಡಿಯುತ್ತಾರೆ. ಕದಿಯುವುದಿಲ್ಲ, ಮೋಸ ಮಾಡುವುದಿಲ್ಲ. ಅಲ್ಲಿನ ಸರಕು ಖರೀದಿ ಮಾಡಲು ಬರುವ ವರ್ತಕರು ರೈತರು ತುಂಬಿಟ್ಟ ವಸ್ತುಗಳ ಮರುಅಳತೆ ಮಾಡುವುದಿಲ್ಲ ಎಂದು ಅಲ್ಲಿಗೆ ಹೋಗಿ ಬಂದ ನನ್ನ ಗೆಳೆಯರೊಬ್ಬರು ಹೇಳುತ್ತಿದ್ದರು.

ಇನ್ನು ಇಲ್ಲಿನ ಹರಿಜನ ಕುಟುಂಬಗಳು ಅಭಿವೃದ್ಧಿ ಕಾರ್ಯಗಳಲ್ಲಿ ಸಮಾಜದ ಉಳಿದವರೊಂದಿಗೆ ಬೆರೆತು ದುಡಿಯುವುದರಿಂದ ಸಾಮಾಜಿಕ ಕಟ್ಟು ಪಾಡುಗಳು

ಸಬಲಗೊಂಡಿವೆ. ಹೆಣ್ಣು ಮಕ್ಕಳು ಗಂಡಸರೊಂದಿಗೆ ಹೆಗಲೆಣೆಯಾಗಿ ದುಡಿಯುತ್ತಾರೆ. ಗ್ರಾಮದ ಆಗುಹೋಗಿನ ನಿರ್ಧಾರಗಳಲ್ಲಿ ಭಾಗವಹಿಸುತ್ತಾರೆ.

ಫಲಾಪೇಕ್ಷೆಯು, ಸದ್ಗತಿಯ ಆಕಾಂಕ್ಷೆಯು ಎಲ್ಲರಲ್ಲೂ ಇರುವಂಥದ್ದೇ. ಅದನ್ನು ಸ್ವಲ್ಪ ಹೊರಳಿಸಿನೋಡುವ ಅಗತ್ಯವಿದೆ. ತಾನು ಮಾಡುವ ಕೆಲಸದಿಂದ ಎಲ್ಲರಿಗೂ ಅನುಕೂಲವಾಗಲಿ ಎಂಬ ಫಲಾಪೇಕ್ಷೆ, ತನ್ನ ಸುತ್ತಲಿನ ಎಲ್ಲಕ್ಕೂ ಸದ್-ಗತಿ ಎಂಬ ಅಪೇಕ್ಷೆ ಈ ಹೊರಳು ನೋಟದ ಕಾಣ್ಕೆ. ಯಾರಿಗಾದರೂ ನೆರಳಾಗಲಿ ಎಂದು ಸಾಲು ಮರ ನೆಡುವವರದು - ಏನಾದರೂ, ಯಾರಾದರೂ ಉಣ್ಣಲಿ ಎಂದು ಹಣ್ಣು ಬಿಡುವ ಮರ ಬೆಳೆಸಿದವರದು ಈ ಕಾಣ್ಕೆ. ಈ ನೋಟ ಕಂಡವರಿಗೂ ಲಾಭವಿದೆ. ಮರ ಬೆಳೆದು ನೆರಳಿತ್ತಾಗ, ಹೂ ಬಿಟ್ಟು ಹಣ್ಣು ಹೊತ್ತಾಗ, ಜನ, ಪಕ್ಷಿ, ಪ್ರಾಣಿ ಅವುಗಳ ಲಾಭ ಪಡೆದಾಗ ಸಿಗುವ ಸಂಭ್ರಮವೆ ಆ ಲಾಭ. ತಮ್ಮ ಹಳ್ಳಿಯ ಸಾಧನೆಗೆ ಕಾರಣರಾದವರಿಗೂ ಈ ಸಂಭ್ರಮ ದತ್ತವಾಗುತ್ತದೆ.

ಅಭಿವೃದ್ಧಿಯ sustainability ಯು ಮರ ಬೆಳೆಸಿ ಸಂಭ್ರಮಿಸಿದ ಜನರ ಮನಸ್ಥಿತಿಯನ್ನು ಬಯಸುತ್ತದೆ. ಅದು ಮೂಲಪ್ರೇರಣೆಯಾಗಿ ಅಭಿವೃದ್ಧಿಯು ಜನರ ಸಂಭ್ರಮವನ್ನು ಬಳಸಿಕೊಂಡು ಬೆಳೆಯತೊಡಗುತ್ತದೆ. ದುಡ್ಡು ಖರ್ಚು ಮಾಡುವುದನ್ನು ಲಕ್ಷ್ಯವಾಗಿರಿಸಿಕೊಂಡ ಮುಖಹೀನ ಯೋಜನೆಯನ್ನು ಅಭಿವೃದ್ಧಿಯೆಂದು ಕರೆಯುವುದರ ಬದಲಿಗೆ ಅಭಿವೃದ್ಧಿ ಎನ್ನುವುದನ್ನು ನಿರಂತರ ಸಂತೋಷದ ಒಂದು ಸಾಧನವನ್ನಾಗಿ ನೋಡುವ ಕ್ರಮವನ್ನು ನಾವು ಅಭ್ಯಾಸ ಮಾಡಿಕೊಳ್ಳಬೇಕಾಗಿದೆ. ಹಾಗಾದಾಗ ಅಭಿವೃದ್ಧಿಗೂ ಅದರ ಸಾಧನೆಗೆ ಬಳಕೆಯಾಗುವ ಸಂಪತ್ತಿಗೂ ಆತ್ಮವೊಂದು ದತ್ತವಾಗುತ್ತದೆ. ಇಂತಹ ಆತ್ಮವನ್ನು ಹೊಂದುವುದೆಂದರೆ ಸಾರ್ಥಕತೆಯ ನಿರಂತರತೆಯನ್ನು ಪಡೆದುಕೊಳ್ಳುವುದು ಎಂದೇ ಅರ್ಥ. ಅಣ್ಣಾ ಹಜಾರೆಯ ನಂತರವೂ ರಾಲೇಗಾವ್ ಸಿದ್ಧಿ ಹಾಗೇ ಉಳಿಯುವುದಾದರೆ ಅದು ಅದರಿಂದಲೇ. ಸ್ವಾವಲಂಬನೆಯ, ಆತ್ಮಗೌರವ ಜೀವಪ್ರೀತಿಯ ಮಾದರಿ ಇದು. ಇದು ಎಲ್ಲ ಕಡೆಯೂ ಸುಪ್ತವಾಗಿರುವಂಥದ್ದೇ. ಸ್ವಾರ್ಥರಹಿತ, ಪ್ರೇಮಮಯಿ ಸಮಾಜ ಸೇವಕರು ಈ ಬೀಜ ನೆಟ್ಟು, ನೀರುಣಿಸಿ, ಮೊಳೆಯಿಸಿ ಬೆಳೆಸಬೇಕು. ಅದರ ನೆರಳಿನ ತಂಪೇ ನಾವು ಯಾವುದನ್ನು sustainable ಎಂದು ಕರೆಯುತ್ತೇವೆಯೋ ಆ ಅಭಿವೃದ್ಧಿ.

❑

✚ ಆರ್. ವಿಜಯರಾಘವನ್, ಸೀನಿಯರ್ ಮ್ಯಾನೇಜರ್,
ಕೋಲಾರ ಗ್ರಾಮೀಣ ಬ್ಯಾಂಕ್, ಕೇಂದ್ರ ಕಛೇರಿ, ಕೋಲಾರ.

ಸೌಂದರ್ಯದ ಆತ್ಯಂತಿಕ ಅನ್ವೇಷಣೆ : ಕೋನಾರ್ಕ್

- ಬಾಲು

"ಜಗನ್ನಾಥ್ ಬಳಿ ಸೂರ್ಯನಿಗಾಗಿ ನಿರ್ಮಿಸಿರುವ ದೇಗುಲವೊಂದಿದೆ. ಆ ಪ್ರಾಂತ್ಯದ ಹನ್ನೆರಡು ವರುಷಗಳ ಆದಾಯದಿಂದ ಅದನ್ನು ನಿರ್ಮಿಸಲಾಗಿದೆಯಂತೆ. ಎಲ್ಲವನ್ನೂ ಟೀಕಿಸುವವರೂ, ಯಾವುದನ್ನೂ ಒಪ್ಪದೇ ಇರುವವರೂ ಸಹ ಆ ಭವ್ಯ ದೇಗುಲವನ್ನು ನೋಡಿ ಬೆರಗಾಗುವರು. ಆ ದೇಗುಲದ ಎತ್ತರ ೧೫೦ ಮೊಳ ಹಾಗೂ ಅಗಲ ೧೯ ಮೊಳವಿದೆ... ಸುಮಾರು ೭೩೦ ವರುಷಗಳ ಹಿಂದೆ ರಾಜ ನರಸಿಂಗದೇವನು ಆ ಅದ್ಭುತ, ಭವ್ಯ ದೇಗುಲವನ್ನು ನಿರ್ಮಿಸಿ ಅದನ್ನು ಮುಂದಿನ ಪೀಳಿಗೆಗೆ ಬಳುವಳಿಯಾಗಿ ಬಿಟ್ಟನೆಂದು ಹೇಳಲಾಗಿದೆ". ಎಂದು ಮುಘಲ್ ದೊರೆ ಅಕ್ಬರನ ಆಸ್ಥಾನ ವೃತ್ತಾಂತಕಾರ ಅಬುಲ್ ಎ-ಫಜಲ್ (ಕ್ರಿ.ಶ. ೧೫೫೬-೧೬೦೫) 'ಐನ್-ಎ. ಅಕ್ಬರಿ' ಯಲ್ಲಿ ದಾಖಲಿಸಿದ್ದಾನೆ.

ಕ್ರಿ.ಶ. ೧೨೨೫ ರಲ್ಲಿ ನಿರ್ಮಿತವಾದ, ಯೂರೋಪಿನ ನಾವಿಕರು 'ಕಪ್ಪು ಪಗೋಡ' ಎಂದು ಕರೆದ ಆ ಸೂರ್ಯ ದೇಗುಲ ಇಂದಿಗೂ ನೋಡುಗರನ್ನು ಬೆರಗುಗೊಳಿಸುತ್ತದೆ. ಅದರ ಅಗಾಧತೆ, ಕುಸುರಿಯಂಥ ಕೆತ್ತನೆ, ಶಿಲ್ಪ ಸೌಂದರ್ಯ ಮಂತ್ರ ಮುಗ್ಧಗೊಳಿಸುತ್ತದೆ. ಆದರೆ ಇಂದು ಅಬುಲ್ ಫಜಲ್ ಕಂಡಿದ್ದ ಮುಖ್ಯ ದೇಗುಲ ಇಲ್ಲ. ಕಾಲನ ಹೊಡೆತಕ್ಕೆ ಬಲಿಯಾಗಿ ಎಂದೋ ಕುಸಿದು ಬಿದ್ದಿದೆ. ಉಳಿದಿರುವ ಜಗಮೋಹನ ದೇಗುಲವನ್ನು ಸಹ ಕಲ್ಲು, ಕಬ್ಬಿಣ, ಶಿಲ್ಪಗಳ ಚೋರರು, ವಿಗ್ರಹ ಭಂಜಕರು ನಾಶಗೊಳಿಸಿದ್ದಾರೆ. ಉಳಿದಿರುವ ಪಾಳು ದೇಗುಲಗಳ ಸಮುಚ್ಚಯವನ್ನು ಕೌತುಕದಿಂದ ನೋಡುವಾಗ, ನಮಗೆ ಕಾಲವನ್ನು ಹಿಂದೆ ಸರಿಸಲು ಸಾಧ್ಯವಾಗುವುದಿದ್ದರೆ ಅಥವಾ ನಾವೇ ಕಾಲಯಂತ್ರದಲ್ಲಿ ಭೂತಕ್ಕೆ ಹೋಗಿ ಆ ಸೂರ್ಯ ದೇಗುಲದ ಮೊದಲಿನ ಭವ್ಯತೆಯನ್ನು ಕಣ್ಣಾರೆ ಕಾಣಲು ಸಾಧ್ಯವಾಗುವ ಹಾಗಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತೆಂದು ಅನ್ನಿಸುತ್ತದೆ.

ಒರಿಸ್ಸಾ ರಾಜ್ಯದ ಪುರಿ ಜಿಲ್ಲೆಯಲ್ಲಿ ಬಂಗಾಳಕೊಲ್ಲಿಯಿಂದ ಮೂರು ಕಿ.ಮೀ. ದೂರವಿರುವ ಕೊನಾರ್ಕ್ ಒಂದು ಹಳ್ಳಿ. ಕೊನಾರ್ಕದ ಕಡಲ ತಡಿ ಮೊದಲಿನಿಂದಲೂ ಅರ್ಕ (ಸೂರ್ಯ) ಕ್ಷೇತ್ರವೆಂದು ಪ್ರಸಿದ್ಧಿ ಪಡೆದಿದೆ. ಕೊನಾರ್ಕ ಎಂಬ ಹೆಸರು ಬಹುಶಃ 'ಅರ್ಕ' ಹಾಗೂ 'ಕೋನ' ಎಂಬುದರಿಂದ ಬಂದಿದೆಯೆಂದು ನಂಬಲಾಗಿದೆ. ಕೊನಾರ್ಕ್‌ನ ನೈರುತ್ಯ ದಿಕ್ಕಿಗೆ ಒಂಭತ್ತು ಕಿ.ಮೀ. ದೂರದಲ್ಲಿ ಕುಶಾಭದ್ರ ನದಿಯ ದಂಡೆಯ ಮೇಲೆ ತ್ರಿಕೋನ ಎಂಬ ಸ್ಥಳವಿದೆ. ಗಂಗ ರಾಜರ ತಾಮ್ರ ಪಟಗಳು ಮೂರನೇ ಅನಂಗ ಭೀಮನ ಮಗ ಗಂಗರ ರಾಜ ನರಸಿಂಹದೇವ (ರಾಜ್ಯಭಾರ ಕ್ರಿ.ಶ. ೧೨೩೮-೧೨೬೪) ತ್ರಿಕೋಣದ ಮೂಲೆಯೊಂದರಲ್ಲಿ ಉಷ್ಣ ರಶ್ಮಿಗೆ (ಸೂರ್ಯ) ಮಹತ್ ಕುಟೀರ ನಿರ್ಮಿಸಿದನೆಂದು ಹೇಳುತ್ತದೆ.

ಅಂಥ ಬೃಹತ್ ದೇಗುಲ ಏಕೆ ನಿರ್ಮಿಸಿದನೆಂದು ಹೇಳಲಾಗದು. ಬಹುಶಃ ಎಲ್ಲಾ ರೋಗಗಳ ನಿವಾರಕ ಸೂರ್ಯನೆಂದು ನಂಬಲಾಗಿರುವುದರಿಂದ ಒಬ್ಬ ಪ್ರಬಲ ದೊರೆ ತನ್ನ ಯಾವುದಾದರೂ ಇಚ್ಛೆ ಈಡೇರಿದುದರಿಂದ ಸೂರ್ಯದೇವನಿಗೆ ವಂದನೆ ಸಲ್ಲಿಸಲು ದೇಗುಲ ನಿರ್ಮಿಸಿರಬಹುದು. (ರಾಜ ನರಸಿಂಹದೇವ ತನ್ನ ಮಗನಿಗೆ ಭಾನುದೇವನೆಂದೇ ಹೆಸರಿಟ್ಟಿದ್ದ) ಹಿಂದೆ ಯಾರೂ ನಿರ್ಮಿಸದ ಅಥವಾ ತನ್ನ ಸಮಕಾಲೀನ ರಾಜರ್ಯಾರೂ ನಿರ್ಮಿಸಲಾಗದ ಅಮೋಘ ದೇಗುಲದ ನಿರ್ಮಾಣ ಮಾಡಿ ತನ್ನ ಹೆಸರು ಚಿರಸ್ಥಾಯಿಯಾಗಬೇಕೆಂಬ ಮಹತ್ವಾಕಾಂಕ್ಷೆಯುಳ್ಳ ಪ್ರಬಲ ರಾಜನೊಬ್ಬನ ಕೃತ್ಯವಿರಬಹುದು.

ಕೊನಾರ್ಕ್‌ನ ಸೂರ್ಯ ದೇಗುಲವನ್ನು ಅರುಣನ ಸಾರಥ್ಯದಲ್ಲಿ ನಭೋಮಂಡಲದಲ್ಲಿ ಸಾಗುವ ಬೃಹತ್ ರಥದೋಪಾದಿಯಲ್ಲಿ ನಿರ್ಮಿಸಲಾಗಿದ್ದು ದೇಗುಲದ ಸುತ್ತ ಸುಮಾರು ಹತ್ತು ಅಡಿ ಎತ್ತರದ ಚಿತ್ತಾರದ ಚಕ್ರಗಳಿವೆ. ಒಂದ ಜೊತೆ ಚಕ್ರ ಒಂದು ತಿಂಗಳನ್ನು ಸಂಕೇತಿಸುತ್ತವೆಂದು ಹೇಳಲಾಗಿದೆ. ಆ ರಥವನ್ನು ಎಳೆದೊಯ್ಯಲು ಏಳು ಸುಂದರ ಕುದುರೆಗಳನ್ನು ಕೆತ್ತಲಾಗಿದ್ದು ಆ ಏಳು ಕುದುರೆಗಳು ವಾರದ ಒಂದೊಂದು ದಿನವನ್ನು ಸಂಕೇತಿಸುತ್ತವೆ. ಕ್ರಿ.ಶ. ಏಳನೇ ಶತಮಾನದಲ್ಲಿ ಆರಂಭವಾದ ಒರಿಸ್ಸಾದ ವಿಶಿಷ್ಟ ವಾಸ್ತುಕಲೆಯ ಅತ್ಯುನ್ನತ ಸಾಧನೆ ಈ ಸೂರ್ಯ ದೇಗುಲ; ನಂದಿ ಹೋಗುವ ದೀಪದ ಅಂತಿಮ ಕ್ಷಣಗಳ ಉಜ್ವಲ ಜ್ವಾಲೆ ಈ ಕಲಾ ಮಂದಿರ.

ಈ ಸೂರ್ಯದೇಗುಲದ ಸಮುಚ್ಚಯದಲ್ಲಿ ಮೂರು ಮುಖ್ಯ ಮಂದಿರಗಳಿವೆ. ಸೂರ್ಯ ದೇವನ ವಿಗ್ರಹವಿದ್ದ 'ದೇವಳ', ಅದರ ಮುಂದೆ 'ಜಗಮೋಹನ' ಹಾಗೂ ಅದರ ಮುಂದೆ 'ಭೋಗಮಂಟಪ' ಅಥವಾ 'ನಾಟ್ಯ ಮಂದಿರ'. ಸೂರ್ಯದೇವನ ಪ್ರತಿಮೆಯಿದ್ದ ಮುಖ್ಯದೇವಳ ಕುಸಿದುಬಿದ್ದು ನೂರಾರು ವರುಷಗಳಾಗಿವೆ. ವಿದ್ವಾಂಸರ ಪ್ರಕಾರ ಅದರ ಅಂದಾಜು ಎತ್ತರ ೧೬೦ ಅಡಿಗಳಷ್ಟಿತ್ತು. ಆ ದೇಗುಲದ ಶಿಖರ ಕುಸಿದುಬೀಳಲು ಹಲವಾರು ಊಹೆಗಳನ್ನು ವಾಸ್ತುವಿಜ್ಞಾನಿಗಳು ಮಂಡಿಸಿರುತ್ತಾರೆ. ಕೆಲವರು ಅದರ ಅಡಿಪಾಯ ಕುಸಿತವೇ ಕಾರಣವೆಂದರೆ, ಇನ್ನೂ ಕೆಲವರು ಭೂಕಂಪ ಅಥವಾ ಸಿಡಿಲು ಕಾರಣವಾಗಿರಬಹುದೆನ್ನುತ್ತಾರೆ. ಇನ್ನೂ ಕೆಲವರು ಆ ದೇಗುಲದ ನಿರ್ಮಾಣ ಸಂಪೂರ್ಣವಾಗಿರಲೇ ಇಲ್ಲವೆನ್ನುತ್ತಾರೆ. ವಿದ್ವಾಂಸ ಪರ್ಸಿಬ್ರೌನ್‌ರ ಪ್ರಕಾರ "ದೇವಳದ ನಿರ್ಮಾಣ ಸಂಪೂರ್ಣವಾಗುವ ಮೊದಲೇ ಅದರ ಶಿಖರ ಕುಸಿದುಬಿದ್ದಿರಬೇಕು. ಆ ದೇಗುಲದ ನಿರ್ಮಾಣದ ಕಲ್ಪನೆ ಒಬ್ಬ ಮೇಧಾವಿಯದೇ ಆಗಿದ್ದರೂ ಸಹ ಅದರ ಬೃಹದಾಕಾರ ಅದರ ನಿರ್ಮಾಣ ಕಾರ್ಯವನ್ನು ಮೀರಿಸುವಂತಿತ್ತು. ಅಂಥ ಅತ್ಯದ್ಭುತ ಅಮೋಘ ಮಹಾಕಾಯದ ನಿರ್ಮಾಣ ವಾಸ್ತು ಶಿಲ್ಪಿಗಳ ಕೌಶಲತೆಯಲ್ಲಿರಲಿಲ್ಲ.ಅದರ ಅಗಾಧ ಪ್ರಮಾಣ ಅವರ ಶಕ್ತಿಯನ್ನು ಮೀರಿತ್ತು. ಅದರ ನಿರ್ಮಾಣ ಹಂತದಲ್ಲಿ ಆ ವಾಸ್ತು ಶಿಲ್ಪಿಗಳು ಸೋತರು. ಆದರೂ ಅವರ ಸೋಲು ಮಹಾವೈಭವದ ಸೋಲು " ಎಂದು ತಮ್ಮ 'ಇಂಡಿಯನ್ ಆರ್ಕಿಟೆಕ್ಚರ್' ಪುಸ್ತಕದಲ್ಲಿ ಹೇಳಿದ್ದಾರೆ. ಆದರೆ ಆ ದೇವಳ ಸಂಪೂರ್ಣವಾಗಿಲ್ಲ ಎನ್ನುವುದಕ್ಕೆ ಯಾವುದೇ ಆಧಾರಗಳಿಲ್ಲ. ಅದು ಸಂಪೂರ್ಣವಾಗಿ ಅಲ್ಲಿ ಪೂಜೆಪುನಸ್ಕಾರಗಳು ನಡೆಯುತ್ತಿದ್ದವು ಎನ್ನುವುದಕ್ಕೆ ಪ್ರಾಚೀನ ಶೋಧನ ಶಾಸ್ತ್ರದ ಹಾಗೂ ಸಾಹಿತ್ಯದ ಆಧಾರಗಳಿವೆ.

ವಿದ್ವಾಂಸರಾದ ಸ್ಟರ್ಲಿಂಗ್ ಆ ದೇಗುಲ ಸಮುಚ್ಚಯವನ್ನು ೧೮೨೫ ಕ್ಕೂ ಮೊದಲು ಕಂಡಾಗ , ಸುಮಾರು ೧೨೦ ಅಡಿ ಎತ್ತರದ ಶಿಖರದ ಒಂದು ಭಾಗ ಇನ್ನೂ ಉಳಿದಿತ್ತು ಹಾಗೂ ಅದು ದೂರದಿಂದ ಹಡಗಿನ ಹಾಯಿಯಂತೆ ಕಾಣುತ್ತಿತ್ತು ಎಂದಿದ್ದಾರೆ. ೧೮೩೭ ರಲ್ಲಿ ಜೇಮ್ಸ್

ಫರ್ಗ್ಯೂಸನ್ ಎಂಬಾತ ಆ ದೇಗುಲನ್ನು ಸಂದರ್ಶಿಸಿ ಅದರ ಮುರಿದ ತುಣುಕಿನ ಭಾಗವನ್ನೊಳಗೊಂಡಂತೆ ಚಿತ್ರವನ್ನೂ ಸಹ ರಚಿಸಿದ್ದಾರೆ. ಆದರೆ ಆ ಶಿಖರದ ಆ ಚೂರೂ ಸಹ ೧೮೪೮ ರ ಅಕ್ಟೋಬರ್‌ನಲ್ಲಿ ಬಿರುಗಾಳಿಗೆ ಬಲಿಯಾಗಿ ಕುಸಿದುಬಿತ್ತು. ೧೮೬೮ ರಲ್ಲಿ ರಾಜೇಂದ್ರ ಲಾಲ್ ಎಂಬ ವಿದ್ವಾಂಸ ಭೇಟಿಕೊಟ್ಟಾಗ ಅಲ್ಲಿ ಮರಗಿಡಗಳು ಬೆಳೆದಿದ್ದ ಕಲ್ಲುಗಳ ಪರ್ವತವೇ ಇತ್ತು ಎಂದು ದಾಖಲಿಸಿದ್ದಾರೆ.

ಕ್ರಿ.ಶ. ೧೫೧೦ರಲ್ಲಿ ಕವಿಡಿಂಡಿಮ ಜೀವದೇವಾಚಾರ್ಯ ರಚಿಸಿರುವ ಸಂಸ್ಕೃತ ಕೃತಿ "ಭಕ್ತಿ ಭಾಗವತ" ದಲ್ಲಿ ಕೋನಾರ್ಕ್ ದೇವಾಲಯದ ಉಲ್ಲೇಖವಿದ್ದು ಅದರ ಶಿಖರದ ಧ್ವಜ ಸ್ವರ್ಗವನ್ನು ಮುಟ್ಟುತ್ತಿತ್ತು ಎಂದಿದ್ದಾನೆ. ೧೩ನೇ ಶತಮಾನದ ನಂತರ ರಚಿತವಾಗಿರುವ ಬ್ರಹ್ಮ ಪುರಾಣದಲ್ಲಿ ಭಕ್ತ ಯಾತ್ರಿಕರು ಸೂರ್ಯ ದೇಗುಲವನ್ನು ಮೌನವಾಗಿ ಮೂರುಸುತ್ತು ಹಾಕಿ, ನಂತರ ಹೂಗಳಿಂದ ಒಳಗಿರುವ ಸೂರ್ಯ ದೇವನನ್ನು ಪೂಜಿಸಬೇಕೆಂಬ ನಿರ್ದೇಶನವಿದೆ.

ಸ್ಥಳೀಯ ನಂಬಿಕೆಗಳ ಪ್ರಕಾರ ಒರಿಸ್ಸಾದ ಮುಘಲ್ ಗವರ್ನರ್ ಆಗಿದ್ದ ಬಾಖರ್ ಖಾನ್ ಸೂರ್ಯ ದೇಗುಲವನ್ನು ಅಪವಿತ್ರಗೊಳಿಸಿದ್ದರಿಂದ ಸೂರ್ಯದೇವನ ವಿಗ್ರಹವನ್ನು ಪುರಿಯ ಜಗನ್ನಾಥ ಮಂದಿರಕ್ಕೆ ಸಾಗಿಸಲಾಯಿತು. (ಈ ಘಟನೆ ಬಹುಶಃ ೧೭ ನೇ ಮಾರ್ಚ್ ೧೬೨೮ಕ್ಕೆ ಮೊದಲೇ ನಡೆದಿರಬೇಕು. ಏಕೆಂದರೆ ಖುರ್ದಾದ ಬೋಯಿ ವಂಶದ ದೊರೆ ನರಸಿಂಗದೇವ ದೇಗುಲಕ್ಕೆ ಆ ದಿನ ಭೇಟಿ ನೀಡಿದಾಗ ಅಲ್ಲಿ ಸೂರ್ಯನ ವಿಗ್ರಹವಿರಲಿಲ್ಲ) ಅಲ್ಲಿ ಪ್ರಚಲಿತವಿರುವ ದಂತ ಕತೆಯ ಪ್ರಕಾರ ದೇವಳದ ಶಿಖರದ ತಾಮ್ರದ ಕಳಸಕ್ಕೆ ಅಯಸ್ಕಾಂತ ಶಕ್ತಿಯಿದ್ದು ಅದು ಸಮುದ್ರದಲ್ಲಿ ಹಾದು ಹೋಗುವ ಹಡಗುಗಳನ್ನು ದಡಕ್ಕೆ ಆಕರ್ಷಿಸುತ್ತಿತ್ತಂತೆ. ಇದರಿಂದ ರೋಸಿದ ಕೆಲನಾವಿಕರು ಶಿಖರವನ್ನೇರಿ ಕಳಸವನ್ನು ತೆಗೆದುಬಿಟ್ಟರಂತೆ. ಈ ರೀತಿ ಅಪವಿತ್ರಗೊಂಡದ್ದರಿಂದ ಸೂರ್ಯನವಿಗ್ರಹವನ್ನು ಪುರಿಯ ಜಗನ್ನಾಥಮಂದಿರಕ್ಕೆ ಸಾಗಿಸಿದರೆಂದು ಹೇಳುತ್ತಾರೆ.

ಅದಾದ ನಂತರ ದೇವಳದಲ್ಲಿ ಪೂಜೆ ಪುನಸ್ಕಾರಗಳು ನಡೆಯದೆ ದೇವಾಲಯ ಶಿಥಿಲಗೊಂಡು ಹಾಗೂ ನಂತರ ಯಾವುದೇ ಜೀರ್ಣೋದ್ಧಾರ ಕಾರ್ಯಗಳು ನಡೆಯದೆ ದೇವಾಲಯ ಹಾಳು ಬಿದ್ದು ಕ್ರಮೇಣ ಕುಸಿದಿರಬಹುದು. ಪ್ರಕೃತಿಯ ವಿಕೋಪಗಳಿಗೆ ದೇಗುಲ ಒಂದಷ್ಟು ಬಲಿಯಾದರೆ ಮನುಷ್ಯನ ದುರಾಸೆ, ಬುದ್ಧಿ ಗೇಡಿತನಕ್ಕೆ ಮತ್ತಷ್ಟು ಬಲಿಯಾಯಿತು. ಹತ್ತಿರದ ಖುರ್ದಾದ ರಾಜ ತನ್ನ ಕೋಟೆಯಲ್ಲಿ ತಾನು ಕಟ್ಟಿಸುವ ದೇವಾಲಯಕ್ಕೆ ಬೇಕೆಂದು ದೇಗುಲದ ಕ್ಲೋರೈಟ್ ಕಲ್ಲುಗಳನ್ನು ಹಾಗೂ ವಿಗ್ರಹಗಳನ್ನು ಕದ್ದು ಕೊಂಡೊಯ್ದ. "ಜಗಮೋಹನದ ಮೂರು ಸುಂದರ ಕೆತ್ತನೆಯ ದ್ವಾರಗಳನ್ನು ಖುರ್ದಾದ ರಾಜ ಹಾಳುಗೆಡವಿದ ಹಾಗೂ ಕಲ್ಲು, ವಿಗ್ರಹಗಳನ್ನು ಪುರಿಗೆ ಸಾಗಿಸಿದ. ಆತನ ಜನ ವಿಗ್ರಹಗಳನ್ನು ಮುರಿದು ದೇವಾಲಯದ ಮೇಲಿನಿಂದ ಕೆಳಕ್ಕೆಸೆಯುತ್ತಿದ್ದರು.ಆಗ ಮುರಿಯದೇ ಇದ್ದ ವಿಗ್ರಹಗಳನ್ನು ಕೊಂಡೊಯ್ಯುತ್ತಿದ್ದರು ಹಾಗೂ ಮುರಿದು ಹಾಳಾದ ವಿಗ್ರಹಗಳನ್ನು ಅಲ್ಲೇ ಬಿಟ್ಟು ಹೋಗುತ್ತಿದ್ದರು" ಎಂದು ಆಂಗ್ಲ ವಿದ್ವಾಂಸ ಕಿಟ್ಟೋ ದಾಖಲಿಸಿದ್ದಾರೆ. ಖುರ್ದಾದ ರಾಜ ಅತ್ಯಂತ ಸುಂದರ ದ್ವಾರವಾದ ನವಗ್ರಹವನ್ನೂ ಸಹ ಸಾಗಿಸುವ ಯತ್ನದಲ್ಲಿದ್ದಾಗ ಆಗಿನ ಬಂಗಾಳದ ಸರ್ಕಾರಕ್ಕೆ ತಿಳಿದು ಅವುಗಳನ್ನು ಸಾಗಿಸದಂತೆ ಆತನಿಗೆ ಕಟ್ಟೆಚ್ಚರಿಕೆ ನೀಡಿತು. ಖುರ್ದಾ ರಾಜನ ಜೊತೆಗೆ ಸ್ಥಳೀಯ ಜನರೂ ಸಹ ಕಲ್ಲು ಹಾಗೂ ಕಬ್ಬಿಣಕ್ಕಾಗಿ ಶಿಥಿಲ ದೇಗುಲವನ್ನು ಇನ್ನಷ್ಟು ಹಾಳು ಗೆಡವಿದರು.

ಅಷ್ಟೊಂದು ಶಿಥಿಲವಾಗಿದ್ದ ದೇವಾಲಯದ ಜೀರ್ಣೋದ್ಧಾರಕಾರ್ಯಎಷ್ಟೊಂದು ವ್ಯಾಪಕವಾಗಿತ್ತೆಂದರೆ ಅದೂ ಸಹ ದೇವಾಲಯದ ಚರಿತ್ರೆಯ ಒಂದು ಭಾಗವೇ ಆಗಿದೆ. ೧೮೦೬ರಲ್ಲಿ

ಆರಂಭವಾದ ಅದರ ಜೀರ್ಣೋದ್ಧಾರ ಕಾರ್ಯ ೧೯೫೦ನೇ ಇಸವಿಯವರೆಗೂ ನಡೆಯುತ್ತಲೇ ಇತ್ತು. ಮಂದಗತಿಯಲ್ಲಿ ಸಾಗುತ್ತಿದ್ದ ಜೀರ್ಣೋದ್ಧಾರ ಕಾರ್ಯ ೧೯೦೦ ನೇ ಇಸವಿ ಡಿಸೆಂಬರ್‌ನಲ್ಲಿ ಬಂಗಾಳದ ಲೆಫ್ಟಿನೆಂಟ್ ಗವರ್ನರ್ ಸರ್ ಜಾನ್ ವುಡ್‌ಬರ್ನ್‌ರ ಭೇಟಿಯೊಂದಿಗೆ ತೀವ್ರವಾಯಿತು. ಪಾಳುಬಿದ್ದ ದೇಗುಲಕ್ಕೆ ಜೀರ್ಣೋದ್ಧಾರದ ತೀರಾ ಅವಶ್ಯಕತೆ ಕಂಡ ಆತ ಕೂಡಲೆ ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿದ. ೧೯೧೦ನೇ ಇಸವಿಯ ಹೊತ್ತಿಗೆ ಸುಮಾರು ೧ ಲಕ್ಷರೂಪಾಯಿ ಖರ್ಚಾಗಿತ್ತು. ಜಗಮೋಹನದ ಛಾವಣಿಯೂ ಕುಸಿಯುತ್ತಿದ್ದುದರಿಂದ ಅದನ್ನು ಶಾಶ್ವತವಾಗಿ ಉಳಿಸಲು ಅದರ ಒಳಭಾಗವನ್ನು ಸಂಪೂರ್ಣವಾಗಿ ಮುಚ್ಚಿಬಿಡಲಾಯಿತು. ಇಂದು ನಾವು ದೇಗುಲ ಸಮುಚ್ಚಯದ ಹೊರಭಾಗ ಮಾತ್ರ ನೋಡಬಹುದು. ಜಗಮೋಹನದ ಮುಂದಿರುವ ನಾಟ್ಯ ಮಂಟಪಕ್ಕೆ ಛಾವಣಿಯೇ ಇಲ್ಲ, ಬರೇ ಪೀಠ ಹಾಗೂ ಕಂಬಗಳು ಉಳಿದಿವೆ.

ಶ್ರೀಲಂಕಾದ ಖ್ಯಾತ ಕಲೆ, ಸಂಸ್ಕೃತಿಯ ವಿದ್ವಾಂಸ ಆನಂದ ಕೂಮಾರಸ್ವಾಮಿ ಹೇಳುವಂತೆ ಆ ದೇಗುಲ ಸೂರ್ಯದೇಗುಲವಾಗಿರುವುದಷ್ಟೆ ಅದರ ವಿಶಿಷ್ಟತೆಯಲ್ಲ, ಅದರ ವಾಸ್ತುಕಲೆ ಹಾಗೂ ಶಿಲ್ಪಕಲೆಯಿಂದಾಗಿ ಭಾರತದ ಮಧ್ಯಯುಗದ ಕಲೆಯ ಅತ್ಯಂತ ಶ್ರೇಷ್ಠ ಸ್ಮಾರಕವಾಗಿದೆ.

ದೇಗುಲದ ನಿರ್ಮಾಣಕ್ಕೆ ಕ್ಲೋರೈಟ್, ಲ್ಯಾಟರೈಟ್ ಹಾಗೂ ಕೊಂಡಲೈಟ್ ಶಿಲೆಗಳನ್ನು ಬಳಸಲಾಗಿದೆ. ವಿಶೇಷವೆಂದರೆ ಈ ಮೂರು ರೀತಿಯ ಶಿಲೆಗಳು ಕೋಣಾರ್ಕದ ಸಮೀಪದಲ್ಲೆಲ್ಲೂ ಲಭ್ಯವಿಲ್ಲದಿರುವುದು. ಈಗ ಬತ್ತಿ ಹೋಗಿರುವ ಬಹುಶಃ ಆಗ ಸಮೃದ್ಧವಾಗಿ ಹರಿಯುತ್ತಿದ್ದ ಚಂದ್ರ ಭಾಗಾ ನದಿಯ ಮೂಲಕ ದೂರದ ಪ್ರದೇಶಗಳಿಂದ ತೆಪ್ಪಗಳಲ್ಲಿ ಆ ಶಿಲೆಗಳನ್ನು ಸಾಗಿಸಿರಬಹುದೆಂಬುದು ವಿದ್ವಾಂಸರ ಊಹೆ. ಆ ಬೃಹತ್ ಶಿಲೆಗಳನ್ನು ಈಗಿನಂಥ ಯಾವುದೇ ಯಂತ್ರೋಪಕರಣಗಳಿಲ್ಲದೆ ಸುಮಾರು ೬೧ ಮೀಟರ್ ಎತ್ತರದವರೆಗೂ ಏರಿಸಿರುವುದು ವಿಸ್ಮಯವೇ ಸರಿ. ದೇಗುಲದ ನಿರ್ಮಾಣದಲ್ಲಿ ಶಿಲೆಗಳ ನಡುವೆ ಯಾವುದೇ ಗಾರೆಯಂಥ ವಸ್ತುವನ್ನು ಉಪಯೋಗಿಸಿಯೇ ಇಲ್ಲ. ಶಿಲೆಗಳನ್ನು ಒಂದಕ್ಕೊಂದು ಸರಿಯಾಗಿ ಜೋಡಿಸಿ ಇರಿಸಿದ ನಂತರ ಅಲ್ಲೇ ಕೆತ್ತನೆ ಕಾರ್ಯ ನಡೆಸಲಾಗಿದೆಯೆಂದು ವಾಸ್ತು ಶಿಲ್ಪಿಗಳು ಹೇಳುತ್ತಾರೆ. ದೈತ್ಯರ ಹಾಗೆ ದೇಗುಲದ ಕಟ್ಟಡ ನಿರ್ಮಿಸಿ, ಚಿನಿವಾರರ ಹಾಗೆ ಕುಸುರಿ ಕೆತ್ತನೆ ಕೆಲಸ ಮಾಡಿದ್ದಾರೆ.!!

ಈಗ ಶಿಖರವೇ ಇಲ್ಲದಿರುವ ಮುಖ್ಯ ದೇವಳದ ಪಶ್ಚಿಮ , ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಕ್ಲೋರೈಟ್ ಶಿಲೆಯಿಂದ ನಿರ್ಮಿಸಿರುವ ಸೂರ್ಯನ ಮೂರು ಪಾರ್ಶ್ವದೇವತಾ ವಿಗ್ರಹಗಳಿವೆ. ಅವುಗಳ ಸಂತೃಪ್ತ ಹಾಗೂ ಗಾಂಭೀರ್ಯ ಮುಖಭಾವ ಶಿಲ್ಪಕಲೆಯಲ್ಲಿಯೇ ಅತ್ಯುತ್ತಮವಾದುದೆಂದು ಹೇಳಲಾಗಿದೆ. ಆ ಪಾರ್ಶ್ವ ದೇವತೆಗಳು ಧರಿಸಿರುವ ಒಡವೆ ಆಭರಣಗಳ ಕುಸುರಿ ಕಲೆಯಂತೂ ಚಿನಿವಾರನ ಕುಸರಿ ಕಲೆಯಷ್ಟೇ ಸೂಕ್ಷ್ಮ ಹಾಗೂ ಸುಂದರವಾಗಿವೆ. ವಿಶೇಷವೆಂದರೆ ಈ ಪಾರ್ಶ್ವ ದೇವತೆಗಳು ಬೂಟುಗಳನ್ನು ಧರಿಸಿವೆ. ಅವುಗಳ ಶಿಲ್ಪಿಗಳು ಪರ್ಷಿಯಾ (ಈಗಿನ ಇರಾನ್) ಪ್ರದೇಶದವರಾಗಿದ್ದು ಅವರ ಸಂಸ್ಕೃತಿಯ ಪ್ರಭಾವ ಈ ಶಿಲ್ಪಗಳಲ್ಲಿವೆಯೆಂದು ನಂಬಲಾಗಿದೆ.

ಏಷಿಯಾ ನಾಗರಿಕತೆಗಳ ವಿದ್ವಾಂಸ ಎ.ಎಲ್.ಬಾಶಂ "ಒರಿಸ್ಸಾ ಶಿಲ್ಪಕಲೆಯ ಅತ್ಯಂತ ಸುಂದರ ಮಾದರಿಗಳು ಕೊನಾರ್ಕ್‌ನ ಸೂರ್ಯ ದೇಗುಲದಲ್ಲಿವೆ. ಅಲ್ಲಿನ ಬಲಶಾಲಿ ಕುದುರೆಗಳು ದೈತ್ಯಾಕಾರದ ಆನೆ ವೈರಿಯೊಬ್ಬನನ್ನು ಸೊಂಡಿಲಿನಲ್ಲಿ ಹಿಡಿದಿರುವುದು ಹಾಗೂ ಅಲ್ಲಿನ ಇನ್ನಿತರ ಪ್ರಾಣಿ ಶಿಲ್ಪಗಳ ಸುಂದರ ಕಲೆ ಪ್ರಪಂಚದ ಬೇರೆಡೆ ಇರುವುದು ತೀರಾ ಅಪರೂಪ. ಅವು ಚೀನಾದ ಟಾಂಗ್ ವಂಶದ ಶಿಲ್ಪಕಲೆ ಹಾಗೂ ಸೆರಾಮಿಕ್ ಕಲೆಯನ್ನು ನೆನಪಿಗೆ ತರುತ್ತವೆ. ಖಜುರಾಹೋ

ಹಾಗೂ ಇನ್ನಿತರ ಉತ್ತರ ಭಾರತದ ದೇಗುಲಗಳಲ್ಲಿ ಸುಂದರ ದೈವ ಪ್ರತಿಮೆಗಳು ಹಾಗೂ ಮಿಥುನ ಶಿಲ್ಪಗಳಿವೆ. ಆದರೆ ಅವೆಲ್ಲ ಒರಿಸ್ಸಾದ ಶಿಲ್ಪಕಲೆಯ ಮುಂದೆ ಏನೇನೂ ಅಲ್ಲ" ಎಂದಿದ್ದಾರೆ.

ಮಿಥುನ ಶಿಲ್ಪಗಳು

ಕೋನಾರ್ಕ್‌ನ ಸೂರ್ಯ ದೇವಾಲಯದ ಮಿಥುನ ಶಿಲ್ಪಗಳು ಮಡಿವಂತರನ್ನು ಬೆಚ್ಚಿ ಬೀಳಿಸುತ್ತವೆ. ಪರಸ್ಪರ ಆಲಿಂಗನದಲ್ಲಿರುವ ಹಾಗೂ ಸಂಭೋಗ ಕ್ರಿಯೆಯಲ್ಲಿರುವ ಶಿಲ್ಪಗಳು ಭಾರತದ ಹಲವಾರು ದೇವಾಲಯಗಳಲ್ಲಿದ್ದರೂ ಸಹ ಕೋನಾರ್ಕ್‌ನ ಮಿಥುನಶಿಲ್ಪಗಳು ಹೆಚ್ಚು ಸ್ಫುಟವಾಗಿವೆ. ಈ ಮಿಥುನ ಶಿಲ್ಪಗಳು 'ಕಪ್ಪು ಪಗೋಡ'ಕ್ಕೆ 'ಕುಪ್ರಸಿದ್ಧತೆ'ಯನ್ನು ತಂದಿವೆಯೆಂದು ಎ.ಎಲ್. ಬಾಶಂ ಹೇಳುತ್ತಾರೆ. ಪೂಜಾಸ್ಥಾನಗಳಲ್ಲಿನ ಮಿಥುನ ಶಿಲ್ಪಗಳ ಪ್ರಾಮುಖ್ಯತೆ ಅಥವಾ ಅವಶ್ಯಕತೆಯ ಬಗ್ಗೆ ಹಲವಾರು ವಿವರಣೆಗಳಿವೆ. ಕೆಲವರ ಪ್ರಕಾರ ದೇಗುಲಗಳಲ್ಲಿನ ದೇವದಾಸಿಗಳ ರಂಜನೀಯ ಬದುಕನ್ನು ಪ್ರಕಟಿಸುವುದು ಅಂಥ ಶಿಲ್ಪಗಳ ಉದ್ದೇಶವಾಗಿದ್ದರೆ ಇನ್ನು ಕೆಲವರ ಪ್ರಕಾರ ದೇವಾಲಯದ ಒಳಗಿನ ಪಾರಮಾರ್ಥಿಕ ಪ್ರಪಂಚಕ್ಕೆ ತದ್ವಿರುದ್ಧವಾಗಿ ದೈಹಿಕ ಸುಖಭೋಗಗಳ ಬಗ್ಗೆ ತಿಳಿಯಪಡಿಸುವುದಾಗಿತ್ತು. ಇನ್ನೂ ಕೆಲವರ ಪ್ರಕಾರ ಅಂಥ ಶಿಲ್ಪಗಳು ಸ್ವರ್ಗದಲ್ಲಿ ಸಿಗಬಹುದಾದ ಸುಖ ಭೋಗಗಳ ಪರಿಚಯ ಮಾಡಿಸುವುದಾಗಿದ್ದಿರಬಹುದು. ಕೊನಾರ್ಕ್‌ನ ಸೂರ್ಯ ದೇವಾಲಯ ತಂತ್ರ ಹಾಗೂ ಶಾಕ್ತ್ಯಾರಾಧನೆಯ ಕೇಂದ್ರವಾಗಿದ್ದಿರಬಹುದೆಂದೂ, ಅದರಿಂದಾಗಿ ಆ ದೇವಾಲಯದಲ್ಲಿ ಯಥೇಚ್ಚವಾಗಿ ಮಿಥುನಶಿಲ್ಪಗಳಿವೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಆ ದೇವಾಲಯದಲ್ಲಿ ತಂತ್ರ ಹಾಗೂ ಶಾಕ್ತ್ಯಾರಾಧನೆಯಿದ್ದ ಯಾವುದೇ ಕುರುಹುಗಳಿಲ್ಲ . ಕೆಟ್ಟ ಕಣ್ಣಿನ 'ದೃಷ್ಟಿ' ಆಗದಿರಲೆಂದೂ ಅಥವಾ ದೈವಭಕ್ತರ ಮನೋಬಲವನ್ನು ಪರೀಕ್ಷಿಸಲೋಸುಗ ಅಂಥಶಿಲ್ಪಗಳಿರುತ್ತಿದ್ದುವೆಂಬ ಕೆಲವರ ವಾದವನ್ನು ಕೋನಾರ್ಕ್ ಸೂರ್ಯದೇವಾಲಯದ ಬಗ್ಗೆ ಅಧ್ಯಯನ ನಡೆಸಿರುವ ದೇಬಾಲ ಮಿತ್ರ ಒಪ್ಪುವುದಿಲ್ಲ. ಅವರ ಪ್ರಕಾರ ಆ ಮಿಥುನ ಶಿಲ್ಪಗಳು ಯಾವುದೇ ಕಾಮಶಾಸ್ತ್ರದ ವಿವರಣೆಯಲ್ಲ ಅಥವಾ ತಂತ್ರಾರಾಧನೆಯ ಸಂಕೇತಗಳಲ್ಲ. ಶಿಲ್ಪಿ ದೇವಾಲಯದಲ್ಲಿನ ಇನ್ನಿತರ ಶಿಲ್ಪಗಳನ್ನು ರಚಿಸಿದ ರೀತಿಯಲ್ಲಿಯೇ ಮಿಥುನ ಶಿಲ್ಪಗಳನ್ನು ಸಹ ರಚಿಸಿದ್ದಾನೆ. ಮಿಥುನ ಶಿಲ್ಪಗಳನ್ನೇನೂ ಆತ ಉನ್ನತ ಮಟ್ಟದ ಅಥವಾ ಕೀಳಟ್ಟದ ದೃಷ್ಟಿಯಿಂದ ಕಂಡಿರಲಿಕ್ಕಿಲ್ಲ. ಬಹುಶಃ ಅದೇ ಭಾವನೆಯೇ ಆಗಿನ ಸಮಾಜದ್ದು ಸಹ ಆಗಿದ್ದಿರಬಹುದು. ಆಧುನಿಕ ನೋಟಕ್ಕೆ ಬೆಚ್ಚಿ ಬೀಳಿಸುವ ಆ ಮಿಥುನ ಶಿಲ್ಪಗಳು ಆಗಿನ ಸಮಾಜಕ್ಕೆ ಪ್ರಾಕೃತಿಕ ಕ್ರಿಯೆಯಾದ ಲೈಂಗಿಕತೆಯ ಸಹಜ ಅಭಿವ್ಯಕ್ತಿಯಾಗಿರಬಹುದು.

ಮಿಥುನ ಚಿತ್ರಗಳು, ಶಕ್ತಿಯ ಸಂಕೇತ. ಎರಡು ಶಕ್ತಿಗಳು ಒಂದೇ ದೇವರಲ್ಲಿ ಮಿಲನವಾಗಿ ದೇವನ ಏಕತೆಯನ್ನು ಸೂಚಿಸುತ್ತದೆ. ಹಾಗೂ ಯೋನಿ-ಲಿಂಗ ಇವು ಪ್ರಪಂಚ ಸೃಷ್ಟಿಗೆ ಸಂಕೇತ; ಅವೆರಡರ ಕೂಡುವಿಕೆಯು ಕರ್ಮವನ್ನು ನಿರೂಪಿಸುತ್ತದೆ ಎಂಬುದು ಪ್ರಾಚೀನ ಆಧ್ಯಾತ್ಮಿಕರ ವಿವರಣೆ.

ಖ್ಯಾತ ಸಮಾಜವಾದಿ, ದಾರ್ಶನಿಕ ರಾಜಕಾರಣಿ ಡಾ. ರಾಮಮನೋಹರ ಲೋಹಿಯಾ ತಮ್ಮ ಲೇಖನ Meaning in stone ನಲ್ಲಿ ಕೋನಾರ್ಕ್‌ನ ಮಿಥುನ ಶಿಲ್ಪಗಳ ಬಗ್ಗೆ ಈ ರೀತಿ ಹೇಳಿದ್ದಾರೆ: ದೆಲ್‌ವಾರ, ಚಿತ್ತೋರ್ ಮತ್ತು ವಾರಂಗಲ್‌ಗಳು ಕೂಡ ಇಷ್ಟೇ ಸಮೃದ್ಧವಾಗಿವೆಯಾದರೂ ಅವುಗಳಲ್ಲಿ ಖಜುರಾಹೋ ಕೋನಾರ್ಕ್‌ಗಳ ಲೈಂಗಿಕ ಸಮೃದ್ಧಿ

ಕಾಣಸಿಗುವುದಿಲ್ಲ. ಈ ಲೈಂಗಿಕ ಸಮೃದ್ಧಿಗೆ ಧಾರ್ಮಿಕ ವಿವರಣೆಗಳಿರುವುದರ ಜೊತೆಗೆ ಇಂದ್ರಿಯಾಸಕ್ತಿಯ ಮೂಲ ಪ್ರವೃತ್ತಿಯೂ ಇದ್ದಿರಬಹುದು. ಆಲಿಂಗನದ ಚಿತ್ರಣವಂತೂ ಇಂಡಿಯಾದ ಆರಂಭಿಕ ಕಲೆಯ ಮೂಲಕ್ಕೇ ಹೋಗುತ್ತದೆ. ಇಂಡಿಯಾದ ಶಿಲ್ಪಿಗಳೂ, ಸಂತರೂ ಸೌಂದರ್ಯವೆನ್ನುವುದು ಲೈಂಗಿಕತೆಗೆ ಸಂಬಂಧವುಳ್ಳದ್ದೆಂಬುದನ್ನೂ ಗಂಡಸಿನ ದೃಷ್ಟಿಗಂತೂ ಈ ಭೂಮಿಯಲ್ಲಿ ಅತ್ಯಂತ ಸುಂದರವಾದದ್ದೆಂದರೆ ಸ್ತ್ರೀ ದೇಹವೇ ಎಂಬುದನ್ನೂ ಚೆನ್ನಾಗಿ ತಿಳಿದಿದ್ದರು. ಬೇರೆ ಬೇರೆ ಕಡೆಗಳಲ್ಲಿನ ವಿಧವಿಧವಾದ ಆಲಿಂಗನ ಭಂಗಿಗಳಲ್ಲಿ ದೇಹದ ಬಾಗು ಬಳುಕುಗಳು ಆಗಲೇ ಚಿತ್ರಿತವಾಗಿದ್ದರೂ ಖಜುರಾಹೊ ಮತ್ತು ಕೋಣಾರ್ಕ್‌ನ ರತಿಕ್ರೀಡೆಗಳಲ್ಲಿ ಸ್ತ್ರೀ ದೇಹಕ್ಕೆ ಸಾಧ್ಯವಾಗಬಹುದಾದ ಸಮಸ್ತ ಭಂಗಿಗಳೂ, ಸಮಸ್ತ ಅಂಗೋದ್ರೇಕಗಳೂ ಮೈದಾಳಿಬಿಟ್ಟಿವೆ. ಇದು "ಸೌಂದರ್ಯದ ಆತ್ಯಂತಿಕ ಅನ್ವೇಷಣೆ"ಯೇ ಇದ್ದೀತು.

ಒರಿಸ್ಸಾದ ದೇವಾಲಯಗಳ ಹೊರ ಭಾಗದಲ್ಲಿ ಯಥೇಚ್ಛವಾಗಿ ಶಿಲ್ಪಕಲೆ ಇರುವಂತೆ ಅದಕ್ಕೆ ತದ್ವಿರುದ್ಧವಾಗಿ ದೇವಾಲಯಗಳ ಒಳಭಾಗ ಭಣ ಭಣಗುಟ್ಟುವಂತೆ ಖಾಲಿಯಾಗಿರುತ್ತದೆ. ಇದನ್ನು ಗಮನಿಸಿದ ಆನಂದ ಕೂಮಾರಸ್ವಾಮಿ 'ಬದುಕೆಂಬುದು ಒಂದು ಮಾಯಾ ಪರದೆ. ಅದರ ಹಿಂಭಾಗದಲ್ಲಿ ದೇವರಿದ್ದಾನೆ. ದೇವಾಲಯದ ಹೊರ ಭಾಗದಲ್ಲಿ ನಮ್ಮ ಬದುಕಿನ ಸಂಸಾರದ ಚಿತ್ರಣವಿರುತ್ತದೆ. ಅಲ್ಲಿನ ಕೆತ್ತನೆ, ಚಿತ್ರಣಗಳು ಬದುಕೆಂಬ ಮಾಯಾ ಲೋಕವನ್ನೂ, ಹುಟ್ಟು ಸಾವುಗಳ ಬದುಕಿನ ಚಕ್ರಕ್ಕೆ ಮನುಷ್ಯನನ್ನು ಬಂಧಿಸಿರುವ ಆತನ ಆಸೆ, ಆಕಾಂಕ್ಷೆಗಳನ್ನೂ, ನೋವು ನಲಿವುಗಳನ್ನೂ ಪ್ರತಿಬಿಂಬಿಸುತ್ತವೆ. ಅದೇ ದೇವಾಲಯದ ಒಳಗೆ, ಸಣ್ಣ ದೀಪಗಳ, ಮಬ್ಬಿನ ಕೋಣೆಯಲ್ಲಿ ದೇವರ ಪ್ರತಿಮೆ ಒಂಟಿಯಾಗಿ ದೂರದಿಂದ ಖಾಲಿ ಕೋಣೆಗಳ ಮೂಲಕ ಹಾದು ಬರುವ ಭಕ್ತರಿಗೆ ಕಾಣುತ್ತದೆ. ಈ ರೀತಿ ದೇವರನ್ನು ಕಾಣಬೇಕಾದಲ್ಲಿ ಬದುಕೆಂಬ ಮಾಯಾ ಪರದೆಯ ಮೂಲಕ ಮನುಷ್ಯ ಹಾದು ಬರಬೇಕೆನ್ನುವುದನ್ನು ಸಾಂಕೇತಿಕವಾಗಿ ತೋರಿಸಬೇಕೆಂಬುದನ್ನು ದೇವಾಲಯದ ವಾಸ್ತುಶಿಲ್ಪಿಗಳು ಮೊದಲಿನಿಂದಲೂ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ತಿಳಿದಿದ್ದರು ಎಂದಿದ್ದಾರೆ.

ದೇವಾಲಯದ ಹೊರಮೈ ಆವರಣದಲ್ಲಿ ಮನುಷ್ಯನ ಬದುಕಿನ ನೋವು ನಲಿವುಗಳ, ಆಸೆ ಆಕಾಂಕ್ಷೆಗಳ ಚಿತ್ರಣವಿದೆ ಎಂದಾದಲ್ಲಿ ಸಹಜವಾಗಿ ಅವುಗಳಲ್ಲಿ ಪ್ರೀತಿ ಪ್ರೇಮಗಳ, ಮೈಥುನಗಳ ಚಿತ್ರಣವಿರಲೇಬೇಕು. ಮನೋವಿಜ್ಞಾನ ಹಾಗೂ ಮನೋವಿಶ್ಲೇಷಣೆಯ ಪಿತಾಮಹ ಸಿಗ್ಮಂಡ್ ಫ್ರಾಯ್ಡ್ ಪ್ರಕಾರ ಲೈಂಗಿಕತೆಯೇ ಮನುಷ್ಯನ ಬದುಕಿನ ಮೂಲಭೂತ ಚಾಲನ ಶಕ್ತಿ (Libido).

ಮನುಷ್ಯ ಪ್ರಾಚೀನ ಕಾಲದಿಂದಲೂ, ಚಿತ್ರ ಹಾಗೂ ಶಿಲ್ಪ ರಚಿಸಲು ಆರಂಭಿಸಿದಾಗಲಿಂದಲೂ ಸಹ ತನ್ನ ಕಲೆಯಲ್ಲಿ ಲೈಂಗಿಕ ವಿಷಯಗಳನ್ನು ಅಭಿವ್ಯಕ್ತಿಸುತ್ತಲೇ ಬಂದಿದ್ದಾನೆ. ಪ್ರಾಚೀನ ಸಾಹಿತ್ಯದಲ್ಲಿಯೂ ಸಹ ಲೈಂಗಿಕತೆಯ ಬಗ್ಗೆ ಮುಚ್ಚುಮರೆ ಇರಲಿಲ್ಲ. ೧೨ನೇ ಶತಮಾನದಲ್ಲಿ ರಚಿತವಾಗಿರುವ ಜಯದೇವನ 'ಗೀತಗೋವಿಂದ'ದಲ್ಲಿ ರಾಧಾ ಮಾಧವರ ಸುರತ ವರ್ಣನೆಯಿದೆ. ಕಲಾವಿದರಿಗೆ ಬೆತ್ತಲೆ ಹಾಗೂ ಮಿಥುನ ಶಿಲ್ಪಗಳು ಬರೇ ವಸ್ತುಗಳಾಗಿರಲಿಲ್ಲ, ಅವು ಕಲೆಯ ಸಾಕ್ಷಾತ್ಕಾರಗಳಾಗಿದ್ದವು. ಕಲಾವಿದನಿಗೆ ಕಲೆಯಲ್ಲಿ ಅಶ್ಲೀಲತೆ ಎಂಬುದಿಲ್ಲ.

ಬೆತ್ತಲೆ ಕಲೆಗೂ ಮಾನವನ ಕಾಮಾಸಕ್ತಿಗೂ ನಿಕಟವಾದ ಸಂಬಂಧವುಂಟು. ಬೆತ್ತಲೆ ಚಿತ್ರ-ಶಿಲ್ಪಗಳು ಪ್ರೇಕ್ಷಕರಲ್ಲಿ ವಿಷಯಾಸಕ್ತಿಯನ್ನು ಮೂಡಿಸಿದರೆ ಅದು ಕೆಟ್ಟ ಕಲೆ ಮತ್ತು ಅನೈತಿಕ ಎಂದು ಪ್ರೊ|| ಅಲೆಕ್ಸಾಂಡರ್ ಎಂಬ ವೇದಾಂತಿ ಹೇಳಿದರೆ ಅದನ್ನು ವಿರೋಧಿಸಿದ ಕಲಾ

ವಿಮರ್ಶಕ ಕ್ಲರ್ಕ್ ಅವರು ಯಾವುದೇ ಬೆತ್ತಲೆ ಚಿತ್ರ-ಶಿಲ್ಪ ಅದು ಅಮೂರ್ತವಾಗಿದ್ದರೂ ಸಹ ಪ್ರೇಕ್ಷಕನಲ್ಲಿ ಕಿಂಚಿತ್ ರಾಗವನ್ನೂ ಉಂಟು ಮಾಡದಿದ್ದರೆ ಅದು ಕೆಟ್ಟ ಕಲೆ ಮತ್ತು ಅದು ಸುಳ್ಳು ನೈತಿಕತೆ ಎಂದಿದ್ದಾರೆ. ಮಾನವನ ಲೈಂಗಿಕತೆಯನ್ನು ಪ್ರಚೋದಿಸದೆ, ಲೈಂಗಿಕ ಆಕಾಂಕ್ಷೆಯನ್ನು ಉನ್ನತ ಮಟ್ಟಕ್ಕೆ ಒಯ್ಯಬಲ್ಲ ಬೆತ್ತಲೆ ಕಲೆ ತನ್ನದೇ ಆದ ಜೀವನ ವೇದಾಂತವನ್ನು ಒಳಗೊಂಡಿದೆ. ಕೊನಾರ್ಕ್ ಸೂರ್ಯದೇವಾಲಯದಲ್ಲಿನ ಮಿಥುನ ಶಿಲ್ಪಗಳು ಇದಕ್ಕೆ ನಿದರ್ಶನವಾಗಬಲ್ಲವು.

'ಅರ್ಕಕ್ಷೇತ್ರ': ಪುರಾಣ ಹಿನ್ನೆಲೆ

ಕೊನಾರ್ಕ್ ಪ್ರದೇಶ ಮೊದಲಿನಿಂದಲೂ ಅರ್ಕ (ಸೂರ್ಯ) ಕ್ಷೇತ್ರವೆಂದು ಪ್ರಸಿದ್ಧಿ ಪಡೆದಿದೆ. ಆ ರೀತಿ ಹೆಸರು ಪಡೆಯಲು ಕಾರಣ ಮಹಾಭಾರತದಲ್ಲಿನ ಒಂದು ದೃಷ್ಟಾಂತ. ಶ್ರೀಕೃಷ್ಣನ ಮಗ ಸಾಂಬ ಅತ್ಯಂತ ಸ್ಪುರದ್ರೂಪಿಯಾಗಿದ್ದ ಹಾಗೂ ತನ್ನ ಸೌಂದರ್ಯದ ಬಗ್ಗೆ ಆತನಿಗೆ ಅತಿಯಾದ ಗರ್ವವಿತ್ತು. ಅದರಿಂದಾಗಿಯೇ ಒಮ್ಮೆ ಆತ ತ್ರಿಲೋಕ ಸಂಚಾರಿ ನಾರದನನ್ನು ಲೇವಡಿ ಮಾಡಿದ. ಇದರಿಂದ ಸಿಟ್ಟಿಗೆದ್ದ ನಾರದ ಸಾಂಬನಿಗೆ ತಕ್ಕ ಪಾಠ ಕಲಿಸಬೇಕೆಂದು ನಿಶ್ಚಯಿಸಿ, ತನ್ನ ಕುಟಿಲತೆಯಿಂದಾಗಿ ಶ್ರೀಕೃಷ್ಣನ ಪತ್ನಿಯರು ಸ್ನಾನ ಮಾಡುವ ಸ್ಥಳಕ್ಕೆ ಸಾಂಬ ಬರುವಂತೆ ಮಾಡುತ್ತಾನೆ. ಅಲ್ಲಿ ಶ್ರೀಕೃಷ್ಣನ ಪತ್ನಿಯರು ಸಾಂಬನ ಸ್ಪುರದ್ರೂಪಿತನವನ್ನು ನೋಡಿ ಮೆಚ್ಚುಗೆ ಸೂಸುವ ಸಮಯಕ್ಕೆ ಸರಿಯಾಗಿ ಶ್ರೀಕೃಷ್ಣನು ಅಲ್ಲಿಗೆ ಬರುವಂತೆ ನಾರದ ಸನ್ನಿವೇಶವನ್ನು ಸೃಷ್ಟಿಸುತ್ತಾನೆ. ಆ ಸ್ಥಳಕ್ಕೆ ಸಾಂಬನು ಬಂದಿರುವುದನ್ನು ಕಂಡು ಕುಪಿತನಾಗಿದ್ದು ಅಲ್ಲದೆ ಅವನ ಸ್ಪುರದ್ರೂಪಿತನವನ್ನು ಕಂಡು ತನ್ನ ಪತ್ನಿಯರು ಮೆಚ್ಚುತ್ತಿದ್ದುದರಿಂದ ಸಾಂಬನಿಗೆ ಕುಷ್ಠರೋಗ ಬರಲೆಂದು ಶಾಪ ನೀಡುತ್ತಾನೆ. ನಂತರ ಸಾಂಬನ ಮೇಲೆ ಕನಿಕರ ಬಂದು ಶಾಪದಿಂದ ವಿಮೋಚನೆ ಪಡೆಯಬೇಕಾದರೆ ಚಂದ್ರಭಾಗ ನದಿಯ ಬಳಿ ಸರ್ವರೋಗ ನಿವಾರಕನಾದ ಸೂರ್ಯದೇವನನ್ನು ಆರಾಧಿಸುವಂತೆ ತಿಳಿಸುತ್ತಾನೆ. ಸಾಂಬ ಚಂದ್ರಭಾಗ ನದಿಯ ಬಳಿ ಹನ್ನೆರಡು ವರುಷ ಸೂರ್ಯದೇವನನ್ನು ಆರಾಧಿಸಿದ ನಂತರ ಶಾಪದಿಂದ ವಿಮೋಚನೆ ಪಡೆಯುತ್ತಾನೆ. ಸೂರ್ಯ ದೇವನಿಗೆ ವಂದನೆ ಸಲ್ಲಿಸಲು ಆ ಪ್ರದೇಶದಲ್ಲಿ ಆತನಿಗೆ ದೇವಾಲಯವನ್ನು ನಿರ್ಮಿಸಲು ನಿರ್ಧರಿಸುತ್ತಾನೆ. ಅಲ್ಲಿನ ಸ್ಥಳೀಯ ಬ್ರಾಹ್ಮಣರು ಸೂರ್ಯನನ್ನು ಪೂಜಿಸಲು ನಿರಾಕರಿಸಿದುದರಿಂದ ಶಕ ದ್ವೀಪದಿಂದ 'ಮಾಗ' ಕುಂಟುಂಬದವರನ್ನು (ಇರಾನಿನ ಸೂರ್ಯರಾಧಕರು ಮಾಗಿಗಳು) ಕರೆಸಿ ದೇವಾಲಯವೊಂದನ್ನು ನಿರ್ಮಿಸಿದನಂತೆ. ಕೊನಾರ್ಕ್‌ನ ಸೂರ್ಯದೇಗುಲದ ಸೂರ್ಯನ ಪಾರ್ಶ್ವದೇವತೆಗಳಲ್ಲಿನ ವಿಶಿಷ್ಟತೆಗಳಾದ ಬೂಟು ಮುಂತಾದವು ಈ ಯವನರದೇ ಪ್ರಭಾವವೆಂದು ಹೇಳಲಾಗಿದೆ.

ಸಿಬಿ ಸಂತಾರ ಮತ್ತು ಧರ್ಮ: ಎರಡು ದಂತಕಥೆಗಳು

ಕೊನಾರ್ಕ್‌ನ ಸೂರ್ಯದೇವಾಲಯವನ್ನು ನಿರ್ಮಿಸಿದ ವಾಸ್ತು ಶಿಲ್ಪಿಗಳ ಬಗ್ಗೆ ಚರಿತ್ರೆಯಲ್ಲಿ ಎಲ್ಲಿಯೂ ಉಲ್ಲೇಖವಿಲ್ಲ ಕೆ.ಬಿ. ದಾಸ್ ಹಾಗೂ ಎಲ್.ಕೆ. ಮಹಾಪಾತ್ರರವರ Folklore of Orissa ದಲ್ಲಿ ಸೂರ್ಯದೇಗುಲಕ್ಕೆ ಸಂಬಂಧಿಸಿದ ಎರಡು ದಂತಕಥೆಗಳಿವೆ.

ಗಂಗರ ರಾಜ ನರಸಿಂಹದೇವ ಸೂರ್ಯದೇಗುಲವೊಂದ ನಿರ್ಮಿಸುವಂತೆ ತನ್ನ ಖ್ಯಾತವನ್ನು ವಾಸ್ತುಶಿಲ್ಪಿ ಸಿಬಿ ಸಂತಾರನಿಗೆ ತಿಳಿಸುತ್ತಾನೆ. ದೇವಾಲಯದ ಅಡಿಪಾಯ ಹಾಕುವ ತಾಣ ಚಂದ್ರಭಾಗ

ನದಿಯ ಮಧ್ಯಭಾಗದಲ್ಲಿರುತ್ತದೆ. ಶಿಬಿ ಸಂತಾರ ನೂರಾರು ಗಾಡಿ ಕಲ್ಲು, ಮಣ್ಣು ನದಿಗೆ ಹಾಕಿಸಿದರೂ ಸಹ ಅಡಿಪಾಯ ನಿಲ್ಲುವುದಿಲ್ಲ. ಆ ನೀರಿನಲ್ಲಿನ ದೈತ್ಯ ಮೀನೊಂದು ಆ ಕಲ್ಲು ಮಣ್ಣನ್ನು ನುಂಗುತ್ತಿರುತ್ತದೆ. ಒಂದು ದಿನ ಬಳಲಿಕೆ, ಬೇಸರದಿಂದಾಗಿ ಶಿಬಿ ಸಂತಾರ ನಡೆದು ಹೋಗುತ್ತಿದ್ದಾಗ ಹಾದಿಯಲ್ಲಿ ಮುದುಕಿಯೊಬ್ಬಳು ಆತನನ್ನು ಊಟಕ್ಕೆ ಕರೆಯುತ್ತಾಳೆ ಹಾಗೂ ಆತನಿಗೆ ಉಣ್ಣಲು ಬಿಸಿಬಿಸಿ ಗಂಜಿ ಕೊಡುತ್ತಾಳೆ. ಆ ಅಜ್ಜಿಗೆ ಆತನೇ ಖ್ಯಾತ ವಾಸ್ತುಶಿಲ್ಪಿ ಶಿಬಿ ಸಂತಾರ ಎಂದು ತಿಳಿದಿರುವುದಿಲ್ಲ. ಗಂಜಿ ಬಿಸಿ ಬಿಸಿ ಇದ್ದುದರಿಂದ ಅದನ್ನು ಅಂಚಿನಿಂದ ತಿನ್ನದೆ ಅದರ ಮಧ್ಯ ಭಾಗಕ್ಕೆ ಕೈ ಇಟ್ಟು ಸುಟ್ಟುಕೊಳ್ಳುತ್ತಾನೆ. ಅದನ್ನು ನೋಡಿ ನಕ್ಕ ಅಜ್ಜಿ ಶಿಬಿ ಸಂತಾರನ ಹಾಗೆ ಆಡಬೇಡವೆಂದು ಹೇಳುತ್ತಾಳೆ. ಆತನಿಗೆ ಕುತೂಹಲವಾಗಿ ತಾನೇ ಶಿಬಿ ಸಂತಾರನೆಂದು ಹೇಳದೆ, ಶಿಬಿ ಸಂತಾರನ ನ್ಯೂನತೆಗಳೇನೆಂದು ಕೇಳುತ್ತಾನೆ. ಅದಕ್ಕೆ ಅಜ್ಜಿ 'ಆತ ಎಷ್ಟೇ ಮೇಧಾವಿಯಾದರೂ, ವಾಸ್ತು ಶಿಲ್ಪದ ಪರಿಣತಿ ಹೊಂದಿದ್ದರೂ ಸಹ ಆತನಿಗೆ ಸಾಮಾನ್ಯ ಜ್ಞಾನವೇ ಇಲ್ಲವೆಂದು ಹೇಳುತ್ತಾಳೆ. ನದಿಯ ಅಂಚಿನಿಂದ ಅಡಿಪಾಯ ಹಾಕದೆ, ನೀನು ಬಿಸಿ ಗಂಜಿಯ ಮಧ್ಯಭಾಗಕ್ಕೆ ಕೈ ಹಾಕಿ ಸುಟ್ಟುಕೊಂಡ ಹಾಗೆ ನೇರ ನದಿಯ ಮಧ್ಯಭಾಗದಲ್ಲಿ ಅಡಿಪಾಯ ಹಾಕಲು ಆತ ಯತ್ನಿಸುತ್ತಿರುವುದರಿಂದ ಸೋಲುತ್ತಿದ್ದಾನೆ, ಎಂದೂ ಹೇಳುತ್ತಾಳೆ. ಶಿಬಿ ಸಂತಾರನಿಗೆ ತನ್ನ ತಪ್ಪಿನ ಅರಿವಾಗಿ ಅಜ್ಜಿ ಹೇಳಿದ ರೀತಿಯಲ್ಲಿ ಅಡಿಪಾಯ ಹಾಕಿ ದೇವಾಲಯ ನಿರ್ಮಿಸಿದನೆಂದು ಒಂದು ಕತೆ ಹೇಳುತ್ತದೆ.

ಮತ್ತೊಂದು ಕತೆ ಧರ್ಮ ಎನ್ನುವ ಬಾಲಕನ ಬಲಿದಾನದ ಬಗ್ಗೆ ಇದೆ. ಸಾವಿರದ ಇನ್ನೂರು ಜನ ವಾಸ್ತುಶಿಲ್ಪಿಗಳು ಹನ್ನೆರಡು ವರ್ಷ ಸತತ ನಿರ್ಮಿಸಿದರೂ ದೇವಾಲಯದ ನಿರ್ಮಾಣ ಕಾರ್ಯ ಪೂರ್ತಿಯಾಗಿರುವುದಿಲ್ಲ. ಇದರಿಂದ ಬೇಸತ್ತು ತಾಳ್ಮೆ ಕಳೆದುಕೊಂಡ ರಾಜ, ಇನ್ನೊಂದು ದಿನದಲ್ಲಿ ದೇಗುಲದ ನಿರ್ಮಾಣ ಕಾರ್ಯ ಸಂಪೂರ್ಣಗೊಳಿಸದಿದ್ದಲ್ಲಿ ಎಲ್ಲ ವಾಸ್ತು ಶಿಲ್ಪಿಗಳ ತಲೆ ತೆಗೆಯುವುದಾಗಿ ಎಚ್ಚರಿಕೆ ನೀಡಿದ. ಆಗ ಧರ್ಮ ಎಂಬ ಹನ್ನೆರಡು ವರ್ಷದ ಬಾಲಕ ತನ್ನ ತಂದೆ ಬಿಸು ಕೊನಾರ್ಕ್‌ಗೆ ಬಂದಾಗ ಇನ್ನೂ ತನ್ನ ತಾಯಿಯ ಹೊಟ್ಟೆಯಲ್ಲಿದ್ದಂಥವನು, ರಾಜನ ಆಜ್ಞೆಯನ್ನು ಕೇಳಿ ತಾನೇ ಮುಂದೆ ಬಂದು ಒಂದೇ ದಿನದಲ್ಲಿ ದೇವಾಲಯದ ನಿರ್ಮಾಣ ಕಾರ್ಯವನ್ನು ಸಂಪೂರ್ಣಗೊಳಿಸುತ್ತಾನೆ. ಆ ವಾಸ್ತುಶಿಲ್ಪಿಗಳು ಸಂತೋಷಗೊಳ್ಳುವುದು ಬಿಟ್ಟು ರಾಜ ಆ ಬಾಲಕನನ್ನು ಸನ್ಮಾನಿಸಿ ತಮ್ಮನ್ನು ಶಿಕ್ಷಿಸಬಹುದೆಂದು ಹೆದರುತ್ತಾರೆ. ಆದುದರಿಂದ ಧರ್ಮನ ತಂದೆ ಬಿಸುವಿಗೆ ತನ್ನ ಮಗನನ್ನು ಕರೆದುಕೊಂಡು ಎಲ್ಲಾದರೂ ದೂರ ಹೋಗುವಂತೆ ತಿಳಿಸುತ್ತಾರೆ ಅಥವಾ ಧರ್ಮನನ್ನು ಬಲಿಕೊಡುವಂತೆ ಸೂಚಿಸುತ್ತಾರೆ. ಇದನ್ನು ತಿಳಿದ ಧರ್ಮ ತಾನೇ ಪ್ರಾಣ ತ್ಯಾಗ ಮಾಡಲು ನಿರ್ಧರಿಸಿ ತನ್ನ ತಂದೆಯನ್ನು ಒಪ್ಪಿಸಿ, ಆ ದೇಗುಲದ ಮೇಲಿನಿಂದ ಸಮುದ್ರಕ್ಕೆ ಹಾರಿ ಪ್ರಾಣ ಬಿಡುತ್ತಾನೆ.

ಒರಿಸ್ಸಾ ವಾಸ್ತುಕಲೆ

ಒರಿಸ್ಸಾವನ್ನು 'ಉತ್ಕಲ' - ಸುಂದರ ಕಲೆಗಳ ನಾಡು ಎಂದೂ ಕರೆಯಲಾಗುತ್ತದೆ. ಅಲ್ಲಿನ ದೇವಾಲಯಗಳು ತಮ್ಮ ವಾಸ್ತುಶೈಲಿ ಹಾಗೂ ಶಿಲ್ಪಕಲೆಯಿಂದಾಗಿ ವಿಶ್ವವಿಖ್ಯಾತವಾಗಿವೆ. ಆ ದೇಗುಲಗಳ ಕಲಾ ಸಿರಿವಂತಿಕೆಗೆ ಹಾಗೂ ತಾಂತ್ರಿಕ ಅದ್ಭುತಕ್ಕೆ ಸರಿಸಾಟಿಯಾದುದಿಲ್ಲ. ಸುಮಾರು ಕ್ರಿ.ಶ. ೬-೭ ನೇ ಶತಮಾನದಲ್ಲಿ ಆರಂಭವಾದ ದೇವಾಲಯದ ವಾಸ್ತು ಕಲಾ ನಿರ್ಮಾಣ ೧೧ನೇ ಶತಮಾನದಲ್ಲಿ ಲಿಂಗರಾಜ ದೇವಾಲಯದ ನಿರ್ಮಾಣದ ಹೊತ್ತಿಗೆ ಉತ್ತುಂಗಕ್ಕೇರಿತ್ತು. ಆ ವಾಸ್ತು

ನಿರ್ಮಾಣ ೧೩ನೇ ಶತಮಾನದ ನಂತರ ಕ್ರಮೇಣ ಕಡಿಮೆಯಾಗುತ್ತಾ ಬಂತು.ಆದುದರಿಂದಲೇ ಕೋನಾರ್ಕ್ ಸೂರ್ಯ ದೇಗುಲವನ್ನು ಆರಿಹೋಗುವ ದೀಪದ ಅಂತಿಮ ಕ್ಷಣಗಳ ಉಜ್ವಲ ಜ್ವಾಲೆ ಎಂದು ಕರೆಯುತ್ತಾರೆ. ಒರಿಸ್ಸಾಕ್ಕೆ ಮಾತ್ರ ಸೀಮಿತವಾಗಿರುವ ಈ ವಿಶಿಷ್ಟ ವಾಸ್ತುಶೈಲಿಯನ್ನು ಕಳಿಂಗ ಶೈಲಿಯೆಂದು ಕರೆಯಲಾಗಿದೆ. ಈ ವಾಸ್ತು ಶೈಲಿಯ ಪ್ರಭಾವ ಬಂಗಾಳ, ಆಂಧ್ರ ಪ್ರದೇಶಗಳಲ್ಲದೆ ಭಾರತವನ್ನು ದಾಟಿ ಜಾವಾ ದ್ವೀಪಗಳಿಗೂ ಹರಡಿದೆ. ಬಳ್ಳಾರಿ ಜಿಲ್ಲೆಯಲ್ಲಿನ ಅಮೃತೇಶ್ವರ ದೇವಾಲಯ ಮುಖಮಂಟಪವೊಂದರ ಶಾಸನದಲ್ಲಿ ನಾಗರ, ದ್ರಾವಿಡ ಹಾಗೂ ವೇಸರ ಶೈಲಿಗಳ ಜೊತೆಗೆ ಕಳಿಂಗ ಶೈಲಿಯ ಉಲ್ಲೇಖವೂ ಇದೆ.

ಒರಿಸ್ಸಾ ಶಿಲ್ಪ ಶಾಸ್ತ್ರದ ಪ್ರಕಾರ ಮೂರು ವಿಧದ ದೇಗುಲಗಳ ನಿರ್ಮಾಣವಿದೆ. ರೇಖಾ, ಪೀಡಾ ಹಾಗೂ ಖಖರ ಶೈಲಿ. ಉದ್ದನೆ ಬಾಗಿರುವ ಶಿಖರ (ಉದಾ : ಭುವನೇಶ್ವರದ ಲಿಂಗರಾಜದೇಗುಲ) ರೇಖಾಶೈಲಿಯದಾದರೆ ಅದರ ಮುಂದಿರುವ ಪಿರಮಿಡ್ ಶಿಖರದ ಜಗಮೋಹನ ಪೀಡಾ ದೇಗುಲ. ಈಗ ಕೋನಾರ್ಕ್‌ನಲ್ಲಿ ಉಳಿದಿರುವ ಕಪ್ಪು ಪಗೋಡ ಇದೇಶೈಲಿಯದು. ರೇಖಾ ಶೈಲಿಯ ಮುಖ್ಯ ಶಿಖರ ಕುಸಿದು ಬಿದ್ದು ನೂರಾರು ವರ್ಷಗಳಾಗಿವೆ.

ಒರಿಸ್ಸಾದ ವಾಸ್ತುಶಿಲ್ಪಿಗಳು ದೇಗುಲಗಳನ್ನು ದೇವರ (cosmic being) ಅಥವಾ ಮಾನವನ ದೇಹಕ್ಕೆ ಹೋಲಿಸಿದ್ದರು. ಆದುದರಿಂದಲೇ ದೇಗುಲದ ವಿವಿಧ ಭಾಗಗಳಿಗೆ ದೇಹದ ಅಂಗಗಳ ಹೆಸರುಗಳನ್ನೇ ನೀಡಿದ್ದಾರೆ. ಪಾಭಗ (ಪಾದ), ಜಂಘ (ಮೊಣಕಾಲು) ಗಂಡಿ, ಮಸ್ತಕ ಮುಂತಾದವು. ಒರಿಸ್ಸಾದ ದೇಗುಲಗಳಲ್ಲಿ ವಾಸ್ತುಕಲೆ ಹಾಗೂ ಶಿಲ್ಪಕಲೆಯನ್ನು ಬೇರೆ ಬೇರೆ ನೋಡುವುದು ಸಾಧ್ಯವೇ ಇಲ್ಲ. ಆದುದರಿಂದಲೇ ಸ್ಟೆಲ್ಲಾ ಕ್ರಮರೀಷ್ ಒರಿಸ್ಸಾದ ವಾಸ್ತುಕಲೆ ದೈತ್ಯಾಕಾರದ ಶಿಲ್ಪಕಲೆ ಎಂದಿದ್ದಾರೆ.

❑

✚ ಜಿ. ಬಾಲಕೃಷ್ಣ, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವ ವಿದ್ಯಾಲಯ, ಹೆಬ್ಬಾಳ, ಬೆಂಗಳೂರು - ೫೬೦ ೦೨೪.

ಬಿಳುಮನೆ ಕಥನಲೋಕ

- ರಾಮಲಿಂಗಪ್ಪ. ಟಿ. ಬೇಗೂರು

ಬಿಳುಮನೆ ರಾಮದಾಸ್ ಅವರು ಪ್ರಬಂಧ, ಕತೆ, ಕಾದಂಬರಿ ಹೀಗೆ ಭಿನ್ನ ಪ್ರಕಾರಗಳಲ್ಲಿ ಕಥನವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡಿರುವ ಲೇಖಕರು. ಬಾಲ್ಯದಲ್ಲಿ ಮಲೆನಾಡಿನಲ್ಲಿ ಬೆಳೆದು, ನಂತರ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸರ್ಕಾರಿ ಸೇವೆ ಸಲ್ಲಿಸಿರುವ ರಾಮದಾಸರ ಕಥನ ಪ್ರಧಾನವಾಗಿ ಬಾಲ್ಯದ ಮಲೆನಾಡಿನ ಅನುಭವ ಲೋಕಕ್ಕೇ ಹೆಚ್ಚು ನಿಷ್ಠವಾಗಿದೆ.

ಇವರ ಕತೆ, ಕಾದಂಬರಿಗಳು ನಮ್ಮ ಗಂಭೀರ ಮತ್ತು ಜನಪ್ರಿಯ ಇವೆರೆಡರ ನಡುಪಿನ ಧಾಟಿಯವು. ಇವರ ಅನುಭವ ಕಥನ ಮತ್ತು ನಾಗರಿಕ ಜಗತ್ತಿನ ವಿವರಗಳು ಕುವೆಂಪು ಜೊತೆಗೆ ತೇಜಸ್ವಿಯನ್ನು ನೆನಪಿಸುತ್ತವೆ.ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ ೧) ಕಥನದಲ್ಲಿ ಜನಮುಖಿಯಾಗುವ ಧಾಟಿ ೨) ಕುವೆಂಪುಗಿಂತ ಭಿನ್ನವಾದ ನಗರ ಗ್ರಾಮ ಘರ್ಷಣೆ.

ಪ್ರಬಂಧ ಶರೀರ ಮತ್ತು ಶಿರೋನಾಮೆಗಳಲ್ಲಿ ಸರಳತೆ ಮತ್ತು ನೇರತೆ ಇದ್ದರೆ, ಕತೆಗಳಲ್ಲಿ ನುರಿತ ಕತೆಗಾರನೊಬ್ಬನ ಚಿಂತನಶೀಲತೆ ಇದೆ. ಲಾಲಿತ್ಯ, ವಿಚಾರ ಮತ್ತು ಅನುಭವ ಈ ಮೂರೂ ಮುಪ್ಪುರಿಗೊಂಡಂತೆ ಇವರ ಪ್ರಬಂಧಗಳಿವೆ. ಗ್ರಾಮೀಣ ಸಂಸ್ಕೃತಿಯಲ್ಲಿ ಅನುಭವ ಮತ್ತು ಜ್ಞಾನ ಎರಡೂ ಒಂದೇ. ಅಥವಾ ಇಲ್ಲಿನ ಜ್ಞಾನ ಅನುಭವಜನ್ಯವಾದದ್ದು. ಇಂಥ ಸಂಸ್ಕೃತಿಯನ್ನು ಹಿಡಿದಿಡುವ ಬಿಳುಮನೆಯವರ ಪ್ರಬಂಧ ಮತ್ತು ಕಾದಂಬರಿಗಳಲ್ಲಿ ಅನುಭವ ಮತ್ತು ಜ್ಞಾನ ಒಂದೇ ಆಗಿದೆ. ಬಾಲ್ಯದ ನೆನಪುಗಳನ್ನು ಹೆಚ್ಚು ಇಷ್ಟ ಪಡುವ ರಾಮದಾಸ್‌ರು ತಮ್ಮ ಪ್ರಬಂಧಗಳಲ್ಲಿ ಆ ನೆನಪುಗಳನ್ನು ಸವಿಯುತ್ತಾ ರಂಜಕತೆ, ಕಲ್ಪನೆಗಳನ್ನು ಸೋಕದ ವಸ್ತುಸ್ಥಿತಿಯಾಗಿ ಅನುಭವಗಳನ್ನು ಹಿಡಿದಿಡುತ್ತಾರೆ. ಇವರ ಕಥನದಲ್ಲಿ ಕಲ್ಪನೆ ಇದ್ದರೂ ಅದು ವಾಸ್ತವಕ್ಕೆ, ವಸ್ತುನಿಷ್ಠತೆಗೆ ಹೆಚ್ಚು ಹತ್ತಿರವಾಗಹೊರಡುವ ಶೈಲಿಯದು. ಸಾಮಾಜಿಕ ವಾಸ್ತವದ ಕಡೆಗೆ ಇವರ ಕತೆ ಕಾದಂಬರಿಗಳು ಹೆಚ್ಚು ವಾಲಿದರೆ ಅನುಭವ ಕಥನದ ಕಡೆಗೆ ಇವರ ಪ್ರಬಂಧಗಳು ಹೆಚ್ಚು ಕೇಂದ್ರೀಕೃತಗೊಂಡಿವೆ.

ವಸ್ತುನಿಷ್ಠತೆಯ ಇಮ್ಮುಖ

ಯಾವುದೇ ಕಥನದಲ್ಲಿ ಎರಡು ರೀತಿಯ ವಸ್ತುನಿಷ್ಠತೆ ಇರುತ್ತದೆ.

೧. ಕಾಲ್ಪನಿಕ ವಸ್ತು ನಿಷ್ಠತೆ   ೨. ವಾಸ್ತವ ವಸ್ತುನಿಷ್ಠತೆ

ಆದರೆ ಯಾವುದೇ ಕಥನದಲ್ಲಿ ಕಾಲ್ಪನಿಕ ವಸ್ತುನಿಷ್ಠತೆ ಯಾವುದು ವಾಸ್ತವಿಕ ವಸ್ತುನಿಷ್ಠತೆ ಯಾವುದು ಎಂದು ಬೇರ್ಪಡಿಸಲು ಆಗುವುದಿಲ್ಲ. (ಆದರೆ ಅದು ಲೇಖಕನಿಗೆ ಗೊತ್ತಿರುತ್ತದೆ) ಹೀಗೆ ಬೇರ್ಪಡಿಸಲಾಗದಂತೆ ಬೆಸೆದುಕೊಂಡ ಕಥನವೇ ಉತ್ತಮ ಕಥನವಾಗಿರುತ್ತದೆ. ಬಿಳು ಮನೆ

ಕೃತಿಗಳಲ್ಲಿ ಅನುಭವ ಬದ್ದತೆಗೆ ತಮ್ಮನ್ನು ಹೆಚ್ಚು ತೆತ್ತುಕೊಂಡು ಕಥನವು ವಾಸ್ತವ ವಸ್ತುನಿಷ್ಠತೆಗೆ ಹೆಚ್ಚು ನಿಷ್ಠವಾಗಿರುವಂತೆ ಕಾಯ್ದುಕೊಂಡಿದ್ದಾರೆ.

ನಿಜಲೋಕದ ಪಾತ್ರಗಳು ಕೃತಿಲೋಕದಲ್ಲಿನ ತಮ್ಮ ಪ್ರತಿರೂಪದ ಬಗ್ಗೆ ಆಕ್ಷೇಪ ಎತ್ತಬಹುದೆಂಬ ಮುಲಾಜಿಗೆ ಲೇಖಕ ಒಳಗಾದಾಗ ಕತೆಯು ತನಗಿರಿಪಿಲ್ಲದೆಯೇ ವಾಸ್ತವ ವಸ್ತುನಿಷ್ಠತೆಗೆ ಸಂಪೂರ್ಣ ಬದ್ಧವಾಗುತ್ತಾ ಹೋಗುತ್ತದೆ. ಇಂಥಕಡೆ ಕಥನವು ಕಲಾಕೃತಿಯಾಗದೇ ಕೇವಲ ವಾಸ್ತವದ ಪ್ರತಿಕೃತಿಯಾಗುವ ಸಾಧ್ಯತೆಗಳಿರುತ್ತವೆ. ಅಥವಾ ನಿರ್ಲಿಪ್ತ ಮೃದುತನವು ಆವರಿಸುವ ಸಾಧ್ಯತೆಯಿರುತ್ತದೆ. ಈ ಅಪಾಯವನ್ನು ಬಿಳುಮನೆ ಹಲವೆಡೆ ಎದುರಿಸಿರುವಂತೆ ಕಾಣುತ್ತದೆ.

ಉದಾಹರಣೆಗೆ 'ವ್ಯಾಮೋಹ' ಕಾದಂಬರಿಯ ದ್ವಿತೀಯಾರ್ಧದಲ್ಲಿನ ಶ್ರೀನಿವಾಸ ಮತ್ತು ಬ್ರಾಹ್ಮಣ ವಿಧವೆ ಲಕ್ಷ್ಮಿಯರ ಸಮಾಗಮ ಕಾದಂಬರಿಗೊಂದು ಬೇರೆಯದೇ ತಿರುವು ನೀಡುವ ಹಾಗೆ ತೋರುತ್ತದೆ. ಆದರೆ ಲಕ್ಷ್ಮಿಯ ಆತ್ಮಹತ್ಯೆಯ ಮೂಲಕ ಕಾದಂಬರಿ ಮುಗಿದುಬಿಡುವುದರಿಂದ ಶ್ರೀನಿವಾಸನ ಪ್ರಯತ್ನ ಮತ್ತು ತಳಮಳ ಹಾಗೂ ಲಕ್ಷ್ಮಿಯ ಒಳಗುದಿ ಮತ್ತು ಹೋರಾಟ ಇವ್ಯಾವೂ ಕಥನದಲ್ಲಿ ತಲೆಯನ್ನೇ ಹಾಕದಿರುವುದರಿಂದ ಇವರಿಬ್ಬರ ಪಾತ್ರ ಪೋಷಣೆಯೂ ಸರಿಯಾಗಿ ಆಗದೇ ಕಾದಂಬರಿಗೆ ಒದಗಿ ಬರಬಹುದಿದ್ದ ಕಥನ ತಲ್ಲಣವೊಂದು ಇಲ್ಲವಾಗುತ್ತದೆ.

ಕಾಲ್ಪನಿಕ ವಸ್ತುನಿಷ್ಠತೆ ಮತ್ತು ವಾಸ್ತವ ವಸ್ತುನಿಷ್ಠತೆಗಳನ್ನು ಹದಕ್ಕೆ ತಕ್ಕಂತೆ ಬೆಸೆಯದೇ ಹೋದಾಗ, ಪಾತ್ರ ಮತ್ತು ಸನ್ನಿವೇಶಗಳು ಬೇಡುವ ವಿಸ್ತಾರ ಮತ್ತು ವ್ಯಾಪ್ತಿಯನ್ನು ಅವುಗಳಿಗೆ ನೀಡದೇ ಹೋದಾಗ ಕಥನದ ಪಾತ್ರ, ಕೇಂದ್ರ, ತಾತ್ವಿಕತೆ ಎಲ್ಲವೂ ಸೊರಗುತ್ತವೆ. ಹಾಗೇ ಕಥನದಲ್ಲಿ ಯಾವುದು ಮುಖ್ಯ ಯಾವುದು ಅಮುಖ್ಯ ಎಂಬ ಭೂಮಿಕೆಯೊಂದು ನಿರ್ಧಾರವಾಗದಿದ್ದರೆ ಸಾಂಸ್ಕೃತಿಕ ಲೋಕದ ಬಗೆಗಿನ ಅಪಾರ ಪ್ರೇಮವೊಂದೇ ಪ್ರಧಾನವಾಗಿ ಬಿಡುತ್ತದೆ.

'ನಂಬಿ ಕೆಟ್ಟವರಿಲ್ಲವೋ' ಕಾದಂಬರಿಯಲ್ಲಿ ಹೀಗೇ ಆಗಿದೆ. ಕಾದಂಬರಿಯು ಅರ್ಧಭಾಗದವರೆಗೆ ಪೀಠಿಕೆಯ ಹಾಗೆ ಇದೆ. ಸುಮಾರು ೧೯೦ ನೇ ಪುಟದವರೆಗೆ ಕಾದಂಬರಿಯ ಕೇಂದ್ರವಸ್ತುವಿಗೆ ಪ್ರವೇಶ ಸಿಗುವುದಿಲ್ಲ. ತಿಳಿಯಾದ ನೀರಿನಲ್ಲಿ ಮೀನು ಫಳ್ ಎಂದು ಆಡಿದ ಹಾಗೆ ಅಲ್ಲೊಂದು ಇಲ್ಲೊಂದು ಕತೆಯ ನಿರ್ಲಿಪ್ತತೆಯನ್ನು ಕಲಕುವ ಘಟನೆಗಳು ನಡೆಯುತ್ತವೆ. ಆದರೂ ಅವು ಇನ್ನೊಂದು ಕ್ಷಣಕ್ಕೆ ನೀರಿನ ಆಳದಲ್ಲಿ ಮರೆಯಾಗುತ್ತವೆ. ಇಲ್ಲೆಲ್ಲೂ ಕಥಾಹಂದರ ಮತ್ತು ಘಟನೆಗಳ ಮೂಲಕ ತಾತ್ವಿಕ ಜಿಜ್ಞಾಸೆಯೊಂದು ಹುಟ್ಟಿ ಬೆಳೆಯಲು ಅವಕಾಶವಾಗಿಲ್ಲ. ಇದರಲ್ಲಿ ವಿಷಮದಾಂಪತ್ಯ, ಸೋದರದ್ರೋಹ, ವಿದ್ಯೆ ಮತ್ತು ಮುಗ್ಧತೆ, ಸ್ವಾರ್ಥ ಮತ್ತು ಮನುಷ್ಯತ್ವ ಹೀಗೆ ಭಿನ್ನ ಎಳೆಗಳು ಇದ್ದರೂ ಅವ್ಯಾವಕ್ಕೂ ಒಂದು ಗಟ್ಟಿನೆಲೆ ದೊರಕುವುದಿಲ್ಲ. ಇದಕ್ಕೆ ಬಹುಶಃ ಲೇಖಕರು ವಾಸ್ತವ ವಸ್ತುನಿಷ್ಠತೆಗೆ ಹೆಚ್ಚು ಬದ್ಧವಾಗಿರುವುದೇ ಕಾರಣ ಎನಿಸುತ್ತದೆ.

ಮನುಷ್ಯ ಸಂಬಂಧಗಳ ಶೋಧ

ಬಿಳುಮನೆಯವರ ಕಥನಲೋಕದಲ್ಲಿ ಶಿಥಿಲಗೊಳ್ಳುತ್ತಿರುವ ಊಳಿಗಮಾನ್ಯ ವ್ಯವಸ್ಥೆಯಿದೆ. ಮಲೆನಾಡಿನ ಇಡೀ ಸಾಮಾಜಿಕ ವ್ಯವಸ್ಥೆ ಶಿಥಿಲಗೊಳ್ಳುತ್ತಿದೆ. ಈ ವ್ಯವಸ್ಥೆಯ ಶಿಥಿಲೀಕರಣ ಪ್ರಕ್ರಿಯೆಯಲ್ಲಿ ಮನುಷ್ಯ ಸಂಬಂಧಗಳು ಮತ್ತು ಸಾಮೂಹಿಕ ಮೌಲ್ಯಗಳು ಸಿಕಷಕ್ಕೆ ಒಡ್ಡಲ್ಪಡುತ್ತವೆ.

ಇವರ ಕಥನದಲ್ಲಿ ಮನುಷ್ಯ ಸಂಬಂಧಗಳ ಶೋಧವು ಒಂದು ಗುಪ್ತಗಾಮಿನಿಯಾದ ತಾತ್ವಿಕತೆಯಾಗಿದೆ. ಈ ಶೋಧವು ಎರಡು ನೆಲೆಯದ್ದಾಗಿದೆ.

೧. ಕೌಟುಂಬಿಕ ನೆಲೆಯ ಶೋಧ ೨. ಸಾಮಾಜಿಕ ನೆಲೆಯ ಶೋಧ

ಕೌಟುಂಬಿಕ ನೆಲೆಯಲ್ಲಿ ರಕ್ತ ಸಂಬಂಧಗಳು ಮತ್ತು ಸಾಮಾಜಿಕ ನೆಲೆಯಲ್ಲಿ ರಕ್ತ ಸಂಬಂಧ ಹಾಗೂ ಸಾಮಾಜಿಕ ಸಂಬಂಧಗಳ ಜೊತೆಗೆ ಮಾನವೀಯ ಮೌಲ್ಯಗಳು ಬಿಕ್ಕಟ್ಟಿನ ಸಂದರ್ಭದಲ್ಲಿ ಪರೀಕ್ಷೆಗೆ ಗುರಿಯಾಗುತ್ತವೆ.ತಮ್ಮ ಕಥನದಲ್ಲಿ ಆಸ್ತಿ, ಹಣ ಮತ್ತು ಸಂಬಂಧಗಳ ಘರ್ಷಣೆ, ಸ್ವಾರ್ಥ ಮತ್ತು ನ್ಯಾಯಪರತೆಗಳ ಘರ್ಷಣೆ, ಅಂತಸ್ತು-ನಡವಳಿಗಳ ಘರ್ಷಣೆ, ಸಂಪ್ರದಾಯ ಮತ್ತು ಮಾನವೀಯತೆ ನಡುವಿನ ಘರ್ಷಣೆ, ಹೀಗೆ ಹಲವಾರು ಘರ್ಷಣೆಗಳ ಮೂಲಕ ಮನುಷ್ಯ ಸಂಬಂಧಗಳ ಶೋಧಕ್ಕೆ ಬಿಳುಮನೆ ತೊಡಗುತ್ತಾರೆ.

'ಹತ್ತಿರ ಬಂದು ದೂರ ಸರಿದವರು' ಕತೆಯ ಸಾವಿತ್ರಿಯ ಸುತ್ತ ಹಣಕ್ಕಾಗೇ ಸುತ್ತುವ ಭಾವ, ಅತ್ತೆ ಮೈದುನರು, 'ಪ್ರಶ್ನೆ' ಕತೆಯ ನಿರೂಪಕನ ಸುತ್ತ ಆಸ್ತಿಗಾಗಿ ಇರುವ ಚಿಗವ್ವ, ತಾಯಿ, ಚಿಗಪ್ಪ, ನೇರಲುಮನೆ ಮಾವ ಮುಂತಾದವರು-ಇಲ್ಲೆಲ್ಲ ಹಣ, ಆಸ್ತಿ, ಪ್ರೀತಿ, ವಿಶ್ವಾಸಗಳ ಘರ್ಷಣೆಯಲ್ಲಿ ಹಣ, ಆಸ್ತಿಗಳೇ ಮೇಲುಗೈಯಾಗಿವೆ. 'ನಂಬಿ ಕೆಟ್ಟವರಿಲ್ಲವೊ' ಕಾದಂಬರಿಯ ತಮ್ಮಯ್ಯ ಗೌಡ ಮತ್ತು ಪುಟ್ಟಪ್ಪಗೌಡರ ವರ್ತನೆಗಳಲ್ಲಿ ತಂದೆ, ಮಗ, ಅಣ್ಣ, ತಮ್ಮನೆಂಬ ರಕ್ತ ಸಂಬಂಧಗಳು ಹಣ ಆಸ್ತಿಯ ಎದುರಿಗೆ ಉದುರಿ ಹೋಗುತ್ತವೆ. 'ತಲೆಮಾರು' ಕಾದಂಬರಿಯಲ್ಲಿನ ಶ್ರೀನಿವಾಸ ಮತ್ತು ಸಾವಿತ್ರಿಯ ವಿವಾಹದ ಸಂದರ್ಭವು ಸಂಪ್ರದಾಯ ಮತ್ತು ಮನುಷ್ಯತ್ವದ ಘರ್ಷಣೆಯನ್ನು ಹೇಳುತ್ತದೆ. ಕಾಲದ ಓಟದಲ್ಲಿ ಪ್ರತಿಷ್ಠೆ, ಸಂಪ್ರದಾಯ, ನೀತಿಗಳೆಲ್ಲವೂ ಆನುಷಂಗಿಕ ಮತ್ತು ಮನುಷ್ಯ ಸಂಬಂಧಗಳೇ ದೊಡ್ಡವು ಎಂಬ ಧ್ವನಿ ಇಲ್ಲಿದೆ.

ಶಿಕ್ಷಣ ಮತ್ತು ನಗರೀಕತೆ, ಸಾಮಾಜಿಕ ಸಂಬಂಧ ಮತ್ತು ರಕ್ತ ಸಂಬಂಧಗಳಲ್ಲಿ ಏನೆಲ್ಲ ಬದಲಾವಣೆಗಳನ್ನು ತರಬಲ್ಲವು ಎಂಬುದಕ್ಕೆ 'ವ್ಯಾಮೋಹ' ದ ಶ್ರೀನಿವಾಸ ಮತ್ತು 'ನಂಬಿಕೆಟ್ಟವರಿಲ್ಲವೋ' ದ ಬೊಮ್ಮಯ್ಯ ಈ ಪಾತ್ರಗಳು ಬಹಳ ಉತ್ತಮ ಉದಾಹರಣೆಗಳು. ಇಲ್ಲಿ ಇಬ್ಬರೂ ನಾಗರಿಕ ಜಗತ್ತಿಗೆ ತೆರೆದುಕೊಂಡಂತೆಲ್ಲ ಸಾಂಪ್ರದಾಯಿಕ ಜಗತ್ತಿನಿಂದ ದೂರವಾಗುತ್ತಾರೆ. ತಮ್ಮಯ್ಯ ಮತ್ತು ಸೇಸಿ ತಮ್ಮ ಓದಿದ ಮಗ ಬೊಮ್ಮಯ್ಯನನ್ನು ಎಷ್ಟು ಅಪಾರವಾಗಿ ಪ್ರೀತಿಸುತ್ತಾರೊ ಅಷ್ಟೇ ತೀವ್ರವಾಗಿ ಬೊಮ್ಮಯ್ಯನಿಂದ ಅನಾದರಕ್ಕೆ ಒಳಗಾಗುತ್ತಾರೆ. ಗ್ರಾಮ್ಯ ಮತ್ತು ನಾಗರಿಕ ಲೋಕಗಳ ನಡುವಿನ ಸಾಂಸ್ಕೃತಿಕ ಕಂದರವು ಕೌಟುಂಬಿಕ ಮತ್ತು ಸಾಮಾಜಿಕ ಸಂಬಂಧಗಳ ನಡುವಿನ ಕಂದರಕ್ಕೂ ಇಲ್ಲಿ ಕಾರಣವಾಗುತ್ತದೆ. ಸಂಪತ್ತಿನ ಲೋಭವು ವ್ಯಕ್ತಿತ್ವಕ್ಕೆ ಘಾತುಕತನವನ್ನೂ ಸಂಬಂಧಗಳಲ್ಲಿ ವಿಘಟನೆಯನ್ನೂ ಉಂಟು ಮಾಡುತ್ತದೆ. ಇದೊಂದು ಸಾಂಸ್ಕೃತಿಕ ಅಂತರ ಕೂಡ ಎರಡು ಸಾಂಸ್ಕೃತಿಕ ಲೋಕಗಳು ಒಟ್ಟಿಗೇ ಇರಲಾರವೆಂಬ ಸತ್ಯಾಂಶ

'ವ್ಯಾಮೋಹ' ಕೃತಿಯಲ್ಲಿ ಓದಿದ ಶ್ರೀನಿವಾಸನನ್ನು ಜನ ಹುಚ್ಚ ಎಂದು ಆಡಿಕೊಳ್ಳುತ್ತಾರೆ. ಸಾಂಪ್ರದಾಯಿಕತೆಯ ಸುಧಾರಣೆಗೆ ಶ್ರೀನಿವಾಸ ಯತ್ನಿಸಿದಂತೆಲ್ಲ ಸಮುದಾಯದಿಂದ ದೂರವಾದಂತೆ ಆತನಿಗೆ ಅನ್ನಿಸುತ್ತದೆ. ಕಾಡಮ್ಮ ಹೆಗ್ಗಡತಿ ಶ್ರೀನಿವಾಸನಿಗೆ ದೈವಭಕ್ತಿ ಬರಲು ಹರಕೆ ಹೊರುತ್ತಾಳೆ. ಘಟ್ಟದ ಕೆಳಗಿನ ಮಂಜುನಾಥನಿಗೆ ಮುಡಿಪು ಕಟ್ಟುತ್ತಾಳೆ. ಇಲ್ಲಿ ರೂಢಿ, ಆಚರಣೆ, ನಂಬಿಕೆಗಳ ಬಗೆಗೆ ಶಿಕ್ಷಣವು ಅಪನಂಬಿಕೆಯನ್ನು ಹುಟ್ಟಿಸುವುದೇ ಸಾಮಾಜಿಕ ಸಂಬಂಧಗಳು ಹದಗೆಡಲು

ಕಾರಣವಾಗುತ್ತದೆ. ಹೀಗೆ ಬಿಳುಮನೆಯವರ ಕಥನದಲ್ಲಿ ಸಂಪತ್ತು, ಸಂಪ್ರದಾಯ ಮತ್ತು ವಿದ್ಯೆಗಳಿಗೂ, ಮನುಷ್ಯ ಸಂಬಂಧಗಳಿಗೂ ಒಂದು ದೊಡ್ಡ ಘರ್ಷಣೆಯಿದೆ.

ವಿಕೇಂದ್ರೀಕರಣ:

ಬಿಳುಮನೆಯವರ ಕಥನಗಾರಿಕೆಯ ನಿಧಾನಗತಿಯು ಎಲ್ಲೂ ಸಾಂದ್ರಗೊಳ್ಳದೆ ಎಲ್ಲ ಕಡೆಗೂ ವ್ಯಾಪಿಸಿಕೊಳ್ಳುವಂಥದ್ದು. ಮನೆ ಮತ್ತು ಕೃಷಿಗಳೆರಡೂ ಕಾಡೊಳಗೇ ಇರುವ ಮಲೆನಾಡಿನ ಚಿತ್ರಣದಲ್ಲಿ ಮಾನವ ಬದುಕಿನ ಚಿತ್ರಣಕ್ಕೆ ಕೊಟ್ಟಷ್ಟೇ ಪ್ರಾಧಾನ್ಯತೆಯನ್ನು ಮಾನವೇತರ ಕಾಡು ಲೋಕಕ್ಕೂ ಕೊಟ್ಟಿದ್ದಾರೆ. ಇಲ್ಲಿ ಬದುಕಿನೊಳಗೆ ಕಾಡೂ ಕಾಡಿನೊಳಗೆ ಬದುಕೂ ಒಂದಾಗಿದೆ. ಕೋಳಿ, ಹಂದಿ, ನಾಯಿಗಳ ಬಗೆಗಿನಷ್ಟೇ ಕಾಳಜಿಪೂರ್ಣ ತಾದಾತ್ಮ್ಯವನ್ನು ಬಾಲ್ಯದ ಅನುಭವಗಳಿಗೂ ಮನುಷ್ಯ ಸಂಬಂಧಗಳ ಚಿತ್ರಣಕ್ಕೂ ನೀಡಿದ್ದಾರೆ.

ಇವರ ಕಥನಲೋಕದಲ್ಲಿ ಕುಂಜನಂಥ ಕಲಾವಿದನಿದ್ದಾನೆ. ಮುತ್ತನಂಥ ನಿಸ್ವಾರ್ಥ ಸೇವಕನಿದ್ದಾನೆ. ತಮ್ಮಯ್ಯನಂಥ ನಿಷ್ಕಪಟ ಶ್ರಮಿಕನಿದ್ದಾನೆ. ಬೊಮ್ಮಯ್ಯನಂಥ ತಿಂದ ಮನೆಯ ಜಂತೆ ಎಣಿಸುವವನಿದ್ದಾನೆ. ಕಿಟ್ಟಯ್ಯನಂಥ ಮಾನವತಾವಾದಿ, ರೈಮನ್ ಸಾಬಿಯಂಥ ಅವಕಾಶವಾದಿ ಮುಗ್ಧೆ ಲಕ್ಷ್ಮಿ ಮತ್ತಿತರ ನಿಷ್ಪಾಪಿ ಹೆಣ್ಣುಗಳೂ ಇದ್ದಾರೆ. ಇವರೊಂದಿಗೆ ನಾಯಿ, ಬೆಕ್ಕು, ಹಾವು, ಹಂದಿ, ಕೋಳಿ, ಕುರ್ಕ, ಹುಲಿ, ಮೀನು, ಮಳೆ , ಕಾಡು, ತೋಟ ಇತ್ಯಾದಿ ಎಲ್ಲವೂ ಇವೆ. ಎಲ್ಲಕ್ಕೂ ಬಿಳುಮನೆ ಸಮಾನ ಪೋಷಣೆ ನೀಡುತ್ತಾರೆ. ಇಲ್ಲಿ ಎಲ್ಲವೂ ಮುಖ್ಯ ಹಾಗೇ ಎಲ್ಲವೂ ಸರಳ.

'ಕುಂಜ' ಕಾದಂಬರಿಯ ಬೆನ್ನುಡಿಯಲ್ಲಿ ಶ್ರೀ ಚಂದ್ರಶೇಖರ ನಂಗಲಿಯವರು ಕೊಳಲು ವಾದನವು ಅಪವರ್ಗೀಕರಣಕ್ಕೊಳಗಾಗಿರುವುದನ್ನು ಪ್ರಸ್ತಾಪಿಸಿದ್ದಾರೆ. ಈ ಅಪವರ್ಗೀಕರಣವು ಕೇವಲ ಕೊಳಲು ವಾದನಕ್ಕಷ್ಟೇ ಅಲ್ಲ, ಬಿಳುಮನೆಯವರ ಕಥನಲೋಕದ ಅನೇಕ ವಿವರಗಳಲ್ಲಿ ಇದು ವಿಕೇಂದ್ರೀಕರಣಕ್ಕೆ ಒಳಗಾಗಿದೆ. ಬಿಳುಮನೆಯವರ ಸಮಾನ ಪೋಷಣೆಯು ಅನೇಕ ಪಾತ್ರ ವಿವರಗಳಲ್ಲಿ ಆಳು-ಒಡೆಯ, ಮೇಲು-ಕೀಳು ಪ್ರಧಾನ-ಅಪ್ರಧಾನ ಈ ರೀತಿಯ ವರ್ಗೀಕರಣವನ್ನು ಶಿಥಿಲಗೊಳಿಸುತ್ತದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಇಲ್ಲೆಲ್ಲ ಅಪವರ್ಗೀಕರಣದ ವಿಕೇಂದ್ರೀಕರಣವಾಗಿದೆ.

ಬಾಲ್ಯದ ಅನುಭವಗಳ ಮೂಲಕ ಜಗತ್ತನ್ನು ಅರ್ಥೈಸುವ ಹಾಗೂ ಪ್ರಾದೇಶಿಕ ಭಾಷೆ ಮತ್ತು ವಸ್ತುವಿನ ಮೂಲಕ ಜಗತ್ತನ್ನು ವ್ಯಾಖ್ಯಾನಿಸುವ, ಈ ಎರಡೂ ಕ್ರಿಯೆಗಳ ಮೂಲಕ ಬಿಳು ಮನೆ ಕಥನದಲ್ಲಿ ಅನುಭವ ಮತ್ತು ತತ್ವಜ್ಞಾನಗಳ ಒಮ್ಮುಖತೆಯನ್ನು ಸಾಧಿಸುವ ಪ್ರಯತ್ನಗಳನ್ನು ಮಾಡುತ್ತಾರೆ. ಆದರೆ ಇದು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ ಎಂಬುದು ಚರ್ಚಾರ್ಹ.

ಅಪವರ್ಗೀಕರಣದ ವಿಕೇಂದ್ರೀಕರಣದಂತೆಯೇ ಬಿಳುಮನೆಯವರು ತತ್ವಜ್ಞಾನದ ವಿಕೇಂದ್ರೀಕರಣವನ್ನೂ ಮಾಡಿದ್ದಾರೆ.ಇವರ ಕತೆಕಾದಂಬರಿಗಳಲ್ಲಿ ಕೆಲವೊಮ್ಮೆ ಸನ್ನಿವೇಶದಿಂದ ತಾತ್ವಿಕ ಜಿಜ್ಞಾಸೆಯು ಮೂಡಿದರೆ, ಕೆಲವೊಮ್ಮೆ ಸನ್ನಿವೇಶ ಬಲದಿಂದ ಪಾತ್ರಗಳೇ ತಾತ್ವಿಕ ಜಿಜ್ಞಾಸೆಗೆ ತೊಡಗುತ್ತವೆ. ಉದಾಹರಣೆಗೆ 'ವ್ಯಾಮೋಹ' ಕಾದಂಬರಿಯ ಆರಂಭದಲ್ಲಿ ಸನ್ನಿವೇಶ ಸಿಕ್ಕಾಗಲೆಲ್ಲ ತತ್ವಜ್ಞಾನವನ್ನು ನಿರೂಪಕನಿಂದ ಹೇಳಿಸುವ ಬಿಳುಮನೆ, ಕಾದಂಬರಿ ಬೆಳೆದಂತೆಲ್ಲ ತತ್ವಜ್ಞಾನ

ಹೇಳುವ ಕೆಲಸವನ್ನು ಶ್ರೀನಿವಾಸ, ಲಕ್ಷ್ಮಿ, ಸೀತು, ನರ್ಸ್, ಚೌಡ, ಕಾಡಮ್ಮ ಹೆಗ್ಗಡತಿ ಹೀಗೆ ಕೆಲಸದಾಳಿನಿಂದ ಹೆಗ್ಗಡತಿಯವರೆಗೆ ಎಲ್ಲರಿಗೂ ಹಚ್ಚುತ್ತಾರೆ. ಇಂಥಲ್ಲಿ ತಾತ್ತ್ವಿಕತೆಯು ಕಥನದಲ್ಲಿ ಉತ್ಪನ್ನವಾಗದೇ ಸರಕಾಗಿ ಮಾತ್ರ ತುಂಬಲ್ಪಟ್ಟಿದೆ.

ಹೀಗಾಗಿ ಅಪವರ್ಗೀಕರಣದ ವಿಕೇಂದ್ರೀಕರಣವು ಇವರ ಕೃತಿಗಳ ಒಂದು ಮುಖ್ಯ ಹೆಗ್ಗಳಿಕೆಯಾದರೆ, ತತ್ತ್ವಜ್ಞಾನದ ವಿಕೇಂದ್ರೀಕರಣವು ಒಂದು ಮುಖ್ಯ ದೌರ್ಬಲ್ಯವಾಗಿದೆ.

ಲೈಂಗಿಕ ನಿಷ್ಠೆ ಮತ್ತು ನಿರ್ಲಿಪ್ತತೆ:

ದಾಂಪತ್ಯದಾಚೆಗಿನ ಸಂಬಂಧಗಳ ಬಗೆಗೆ ಅಥವಾ ನೀತಿ ಬಾಹಿರ ಸಂಬಂಧಗಳ ಬಗೆಗೆ ಬಿಳುಮನೆ ಆಕ್ರೋಶವಾಗಲೀ ಉಪದೇಶವಾಗಲೀ ಏನನ್ನೂ ವ್ಯಕ್ತಪಡಿಸದೇ ನಿರ್ಲಿಪ್ತವಾಗಿ ಆ ಘಟನೆಗಳನ್ನು ಚಿತ್ರಿಸುತ್ತಾರೆ. ಉದಾಹರಣೆಗೆ 'ಯಾರು ದೊಡ್ಡವರು' 'ನ್ಯಾಯಾಂಗದ ಹೊರಗೆ' ಇಂಥ ಕತೆಗಳಲ್ಲಿ ಲೈಂಗಿಕ ಸಂಬಂಧಗಳ ಕಾರ್ಯಕಾರಣ ಗೋಜನ್ನೂ ವಿವರಿಸದೆ ನಿರುದ್ವಿಗ್ನವಾಗಿ ಬರೆದಿದ್ದಾರೆ. ಈ ನಿರ್ಲಿಪ್ತತೆಯು 'ವ್ಯಾಮೋಹ' ಕಾದಂಬರಿಯ ಶ್ರೀನಿವಾಸ, ಲಕ್ಷ್ಮಿಯರ ಕೂಡುವಿಕೆ ಮತ್ತು 'ಕುಂಜ' ಕಾದಂಬರಿಯ ಕಾವೇರಿ, ನರಸಿಂಹರ ಕೂಡುವಿಕೆಯಲ್ಲಿಯೂ ಇದೆ. ಕಥನದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡಬಹುದೆಂಬ ಓದುಗರ ನಿರೀಕ್ಷೆಯನ್ನು ಸಪ್ಪೆಗೊಳಿಸುವಷ್ಟು ಈ ಪ್ರಸಂಗಗಳು ನಿರ್ಲಿಪ್ತವಾಗಿವೆ.

ವಿವಾಹಪೂರ್ವ, ವಿವಾಹೋತ್ತರ ಅನ್ಯ ಸಂಬಂಧಗಳು ಇವರ ಕಥಾ ಲೋಕದಲ್ಲಿ ಸಹಜ, ಮಾಮೂಲಿಯೆನ್ನಿಸುವ ಘಟನೆಗಳಂತೆ ಚಿತ್ರಿತವಾಗಿವೆ. ವಿದ್ಯಾವಂತ ಸಮುದಾಯ ಮಾತ್ರ ಇದನ್ನು ಬೆರಗುಗಣ್ಣಿಂದ ಕಾಣುತ್ತದೆ. ಏನೇ ಆದರೂ ಬಿಳುಮನೆಯವರ ಎಲ್ಲ ಲೈಂಗಿಕ ಸಂಬಂಧಗಳೂ ಒಂದಲ್ಲ ಒಂದು ರೀತಿಯ ಸ್ತ್ರೀ ಶೋಷಣೆಯನ್ನೇ ಪರೋಕ್ಷವಾಗಿ ಬಿಚ್ಚಿಡುವುದು ಮಾತ್ರ ನಿಜ. ಇಂಥ ಲೈಂಗಿಕ ಪ್ರಸಂಗಗಳೆರಡು ಇಲ್ಲಿ ಚರ್ಚಾರ್ಹವಾಗಿವೆ.

'ವ್ಯಾಮೋಹ' ಕಾದಂಬರಿಯ ಶ್ರೀನಿವಾಸ ಮತ್ತು ಬ್ರಾಹ್ಮಣ ವಿಧವೆ ಲಕ್ಷ್ಮಿಯವರ ಮೊದಲ ಭೇಟಿಯಲ್ಲೇ ಆಗುವ ಸಮಾಗಮವು 'ಕುಂಜ' ಕಾದಂಬರಿಯಲ್ಲಿನ ಕಾವೇರಿ ಮತ್ತು ನರಸಿಂಹರ ಸಮಾಗಮವನ್ನು ನೆನಪಿಗೆ ತರುತ್ತದೆ. ಹೀಗೆ ಎರಡು ಭಿನ್ನ, ಹೋಲಿಕೆಯಿಲ್ಲದ ಸಮಾಗಮಗಳು ಒಂದರೊಡನೊಂದು ನೆನಪಾಗಲು ಕಾರಣ ಇವರೆಡೂ ಪೂರ್ವ ಭೂಮಿಕೆ ಸಿದ್ಧವಾಗದೆ ಆಗುವ ಸಮಾಗಮಗಳಾಗಿರುವುದು, ಹಾಗೆಯೇ ಇವುಗಳಿಗೆ ಉತ್ತರ ಭೂಮಿಕೆಯೂ ಇಲ್ಲದಿರುವುದೇ ಆಗಿದೆ.

ಕಥನದ ಪ್ರತಿಯೊಂದು ಘಟನೆಗೂ ಒಂದೊಂದು ಚರಿತ್ರೆಯೂ ಹಾಗೇ ಭವಿಷ್ಯವೂ ಇರುತ್ತದೆ. ಚಾರಿತ್ರಿಕ ಭೂಮಿಕೆಯಿಲ್ಲದೆ ಒಂದು ಘಟನೆ ಘಟಿಸಿದರೆ ಅದು ಆಕಸ್ಮಿಕ ಅನ್ನಿಸಿಕೊಳ್ಳುತ್ತದೆ. ಆದರೆ ಈ ಎರಡೂ ಸಮಾಗಮಗಳು ಆಕಸ್ಮಿಕಗಳಲ್ಲ. ಹಾಗೇ ಚಾರಿತ್ರಿಕ ಭೂಮಿಕೆ ಇರುವಂಥವೂ ಅಲ್ಲ. ಅದೇ ರೀತಿ ಕಥನದ ಭವಿಷ್ಯದಲ್ಲಿ ಇವಕ್ಕೆ ಪ್ರಾಮುಖ್ಯತೆಯಾಗಲೀ ಫಲಿತಗಳಾಗಲೀ ಇಲ್ಲ. ಆದರೆ 'ತಲೆಮಾರು' ಕಾದಂಬರಿಯ ಶ್ರೀನಿವಾಸ ಸಾವಿತ್ರಿಯರ ಸಮಾಗಮವಾಗಲೀ 'ನ್ಯಾಯಾಂಗದ ಹೊರಗೆ' ಕತೆಯ ನಾಗೇಶ ಸರಸ್ವತಿಯರ ಸಂಬಂಧವಾಗಲೀ ಹೀಗಲ್ಲ. ಇವೆರಡು ಪ್ರಸಂಗಗಳು ಚಾರಿತ್ರಿಕ ಭೂಮಿಕೆಯನ್ನು ಹೊಂದಿವೆ. ಭವಿಷ್ಯದ ಫಲಿತಗಳನ್ನೂ ಹೊಂದಿವೆ. ಹಾಗಾಗಿ ಈ ಘಟನೆಗಳು ನಿರ್ಲಿಪ್ತತೆಯೊಳಗೂ ಓದುಗನನ್ನು ಸೆಳೆಯುತ್ತವೆ. ಕಾಡುತ್ತವೆ.

ಕುವೆಂಪು - ಬಿಳುಮನೆ:

ಕುವೆಂಪು ಮತ್ತು ಬಿಳುಮನೆಯವರನ್ನು ಹೋಲಿಸಬಾರದು. ಆದರೂ ಕೆಲವಂಶಗಳನ್ನಿಲ್ಲಿ ಪ್ರಸ್ತಾಪಿಸಬಹುದು. ಕುವೆಂಪು ಕಥನದಲ್ಲಿರುವ ಮಲೆನಾಡು ಮತ್ತು ಬಿಳುಮನೆ ಕಥನದಲ್ಲಿರುವ ಮಲೆನಾಡುಗಳ ನಡುವೆ ಸಾಕಷ್ಟು ಹೋಲಿಕೆ ಇರುವಂತೆಯೇ ಸಾಕಷ್ಟು ಬೆಳವಣಿಗೆಯೂ ಇದೆ. ಇದಕ್ಕೆ ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು. ೧) ಇವರಿಬ್ಬರೂ ಸಾಮಾಜಿಕ ವಾಸ್ತವದ ಚಿತ್ರಣಕ್ಕೆ ಪ್ರಾಧಾನ್ಯತೆ ನೀಡಿದ್ದಾರೆ. ೨). ಹಾಗೇ ಇಬ್ಬರ ಸಾಮಾಜಿಕ ಅನುಭವವೂ ಸರಿಸುಮಾರು ಒಂದೇ ಆಗಿದೆ. ೩) ಇಬ್ಬರೂ ಬಾಲ್ಯದಲ್ಲಿ ಮಲೆನಾಡಿನ ದಟ್ಟ ಅನುಭವವನ್ನು ಪಡೆದು ಮಲೆನಾಡಿನೊಂದಿಗೆ ನಾಸ್ಟಾಲಿಜಿಕ್ ಆಗಿ ಇದ್ದಾರೆ. ೪) ಇವರಿಬ್ಬರ ಕಥನಗಳು ಘಟಿಸುವ ಕಾಲದ ನಡುವೆ ಸಾಕಷ್ಟು ಅಂತರವಿದೆ.

'ಮದುಮಗಳು' ಕಾದಂಬರಿಯ ಬೈರನ ವಾಲಗ ಮತ್ತು 'ಕುಂಜ' ಕಾದಂಬರಿಯ ಕುಂಜನ ಕೊಳಲು ಇವರೆಡರ ನಡುವೆ ಒಂದು ಬೆಳವಣಿಗೆ ಇದೆ. 'ಚೋಮನ ದುಡಿ' ಮತ್ತು 'ಅಮಾಸ'ನ ಕುಣಿತಗಳ ನಡುವೆ ಇರುವ ಬೆಳವಣಿಗೆಗೂ , ಬೈರನ ವಾಲಗ ಮತ್ತು ಕುಂಜನ ಕೊಳಲಿನ ನಡುವಿನ ಬೆಳವಣಿಗೆಗೂ ಒಂದುಹೋಲಿಕೆ ಇದೆ. ಇದೇ ರೀತಿ ಕುವೆಂಪು ಕಥನದಲ್ಲಿನ ವಸೂಲಿ ಸಾಬರ ಕಾಟ ಮತ್ತು ಹೊನ್ನಾಳಿ ಹೊಡ್ತ ಹಾಗೂ ಬಿಳುಮನೆಯವರ ವಸೂಲಿ ಸಾಬರ ಕಾಟ ಮತ್ತು ಹೊನ್ನಾಳಿ ಹೊಡ್ತಗಳ ನಡುವೆಯೂ ಒಂದು ಬೆಳವಣಿಗೆ ಇದೆ. ಇದಕ್ಕೆ ಕಾರಣವು ಸಾಮಾಜಿಕ ವಾಸ್ತವದಲ್ಲಿ ಆಗಿರುವ ಬದಲಾವಣೆ ಮತ್ತು ವರ್ಗ ಚಿಂತನೆಯಲ್ಲಿ ಆಗಿರುವ ಬೆಳವಣಿಗೆಯೇ ಆಗಿದೆ.

ಇದನ್ನು ಇನ್ನೊಂಚೂರು ವಿವರಿಸುವುದಾದರೆ 'ಮದುಮಗಳ'ಲ್ಲಿ ಬೈರನ ವಾಲಗವನ್ನು ಗೆಳೆಯರೊಂದಿಗೆ ಕೇಳುತ್ತಿದ್ದ ತಿಮ್ಮುವಿಗೆ ವಾಲಗ ಎಷ್ಟು ಚಂದ ಬಾರಿಸುತ್ತಿದ್ದಾನೆ ಅನ್ನಿಸುತ್ತದೆ. ಆಮೇಲೆ ವಾಲಗ ಬಾರಿಸುವವನು ಹೊಲೆಯ, ಬಾಡು ತಿನ್ನುವ ಜೀತದಾಳು ಬೈರ ಎಂದು ತಿಳಿದಾಗ ತಿಮ್ಮುವಿನ ಮುಖ ಅವಮಾನದಿಂದ ಕುಗ್ಗಿ ಬಿಡುತ್ತದೆ. ಇಲ್ಲಿ ಹೊಲೆಯರ ಕಲೆ ಮೆಚ್ಚುಗೆಗೆ ಹೊರತು ಎಂಬ ಭಾವನೆ ಸಣ್ಣ ಮಕ್ಕಳಲ್ಲೂ ಇರುವುದು ಜಮೀನ್ದಾರಿ ಕ್ರೌರ್ಯದ ಪರಾಕಾಷ್ಠೆಯಾಗಿದೆ. ಆದರೆ 'ಕುಂಜ' ಕಾದಂಬರಿಯಲ್ಲಿ ಕುಂಜನ ಕೊಳಲನ್ನು ಜಮೀನ್ದಾರರಾದಿಯಾಗಿ ಎಲ್ಲರೂ ಕೇಳಿ ಸವಿದು ಆನಂದಿಸುತ್ತಾರೆ. ಕುಂಜನ ಕಲೆಯೇ ಇಲ್ಲಿ ಕುಂಜನಿಗೊಂದು ಅಂತಸ್ತನ್ನು ಕಟ್ಟಿಕೊಡುತ್ತದೆ.

ಕುವೆಂಪು ಕಾದಂಬರಿಗಳಲ್ಲಿ ಹೊನ್ನಾಳಿ ಹೊಡ್ತದ ಚಿತ್ರಣ ಕ್ರೂರ, ಭಯಂಕರವಾಗಿದ್ದರೆ, ಬಿಳುಮನೆ ಕೃತಿಗಳಲ್ಲಿ ಹೊನ್ನಾಳಿ ಹೊಡತಕ್ಕೊಂದು ಇಳಿಕೆ ಉಂಟಾಗಿದೆ. ಇಲ್ಲಿ 'ಕುಂಜ' 'ವ್ಯಾಮೋಹ' ಕಾದಂಬರಿಗಳಲ್ಲಿ ಹೊಡೆತ ಹೊಡೆಯುವ ಸಾಬರಿಗೇ ಹೊಡೆತಬೀಳುವ ಪ್ರಸಂಗಗಳಿವೆ. ಕೆಲಸದಾಳುಗಳಿಗೆ ಹೊಡೆದು ಬಡಿದು ಹದ್ದು ಬಸ್ತಿನಲ್ಲಿಟ್ಟುಕೊಳ್ಳುವ ಕಾಲ ಇದಲ್ಲ. ಈಗ ಕಾಲ ಬದಲಾಗಿದೆ ಎಂಬ ತಿಳುವಳಿಕೆ ಇಲ್ಲಿನ ಗೌಡರುಗಳಿಗೆ ಇದೆ. ಈ ರೀತಿ ಒಬ್ಬರೊಬ್ಬರಿಗೆ ಹೋಲಿಸಬಾರದಾದರೂ, ಈ ಪ್ರಸ್ತಾಪವು ಲೇಖಕರ ನಿರ್ಮಾಣ ಪ್ರತಿಭೆ ಮತ್ತು ಸಾಮಾಜಿಕ ಅನುಭವಗಳ ನಡುವಿನ ಸಂಬಂಧಗಳನ್ನು ತಿಳಿಸುವುದರಿಂದ ಆಕ್ಷೇಪಕವಲ್ಲ ಅನಿಸುತ್ತದೆ.

ಇದೇ ರೀತಿ ಶಾಂತರಸರ ಕತೆಗಳ ಹೈದ್ರಬಾದ್ ಪ್ರದೇಶದ ಸಾಮಾಜಿಕ ವಾಸ್ತವ ಚಿತ್ರಣಕ್ಕೂ ಅಮರೇಶ ನುಗಡೋಣಿ ಕತೆಗಳ ಸಾಮಾಜಿಕ ವಾಸ್ತವಕ್ಕೂ ನಡುವಿನ ಹೋಲಿಕೆ ಮತ್ತು

ಬೆಳವಣಿಗೆಯನ್ನೂ ಕಾರಂತರ 'ಬೆಟ್ಟದ ಜೀವ', 'ಮರಳಿ ಮಣ್ಣಿಗೆ' ಯಂಥ ಕಾದಂಬರಿಗಳಲ್ಲಿನ ದಕ್ಷಿಣ ಕನ್ನಡ ಲೋಕಕ್ಕೂ ನಾಗವೇಣಿಯವರ ಕತೆಗಳು ಮತ್ತು 'ಗಾಂಧಿ ಬಂದ'ದಲ್ಲಿನ ದಕ್ಷಿಣ ಕನ್ನಡ ಲೋಕಕ್ಕೂ ಇರುವ ಹೋಲಿಕೆ ಮತ್ತು ಬೆಳವಣಿಗೆಗಳನ್ನೂ ತಿಳಿಯಬಹುದು.

ಕುವೆಂಪು ಮತ್ತು ಬಿಳುಮನೆ ಇವರ ಮಲೆನಾಡಿನ ಕಥನಗಳಲ್ಲಿ ಬದಲಾವಣೆ, ಬೆಳವಣಿಗೆ ಏನೂ ಇಲ್ಲದ ಒಂದೇ ಒಂದು ಲೋಕವೆಂದರೆ ಅದು ಸ್ತ್ರೀಲೋಕ. ಇದನ್ನು ಇನ್ನೊಂಚೂರು ವಿವರಿಸುವುದಾದರೆ, 'ಮದುಮಗಳಲ್ಲಿ'ನ ಗುತ್ತಿ ಮದುವೆಯಲ್ಲಾಗುವ ಬೆಟ್ಟಳ್ಳಿ-ಸಿಂಭಾವಿ ಗೌಡರಲ್ಲಾಗುವ ಪೈಪೋಟಿ ತಾವು ತಮ್ಮ ಒಂದು ಆಳನ್ನು ಕಳಕೊಳ್ಳಬಾರದು ಎಂಬುದೇ ಆಗಿದೆ. ಇಲ್ಲಿ ಜೀತದಾಳುಗಳ ಮದುವೆ, ಖಾಸಗಿ ಪ್ರೀತಿ, ಪ್ರೇಮಗಳೂ ಗೌಡರಿಂದಲೇ ನಿರ್ಧಾರವಾಗಬೇಕು. ಈಗಾಗಲೇ ಒಬ್ಬ ತಾಳಿ ಕಟ್ಟಿರುವ ಹೆಂಗಸನ್ನು ಎಳೆತರಿಸಿ, ತನಗೆ ಬೇಕಾದ ಆಳಿನಿಂದ ತಾಳಿ ಕಟ್ಟಿಸುವ ದಾರ್ಷ್ಟ್ಯ ಜಮೀನ್ದಾರರಿಗೆ ಇರುವುದನ್ನು ಕುವೆಂಪು ಚಿತ್ರಿಸುತ್ತಾರೆ. ಇಲ್ಲಿ ಕೆಳವರ್ಗದ ಸಂಪ್ರದಾಯ, ಸಂಸ್ಕೃತಿಗಳ ಮೇಲೂ ದಾಳಿ ಮಾಡುವ, ತಿದ್ದುವ ಅಧಿಕಾರ ಮೇಲ್ವರ್ಗಕ್ಕಿದ್ದದ್ದನ್ನು ಕಾಣಬಹುದು. ಇಲ್ಲಿ ಸಂಸ್ಕೃತಿಯೂ ಹೇಗೆ ಹಣ, ಅಧಿಕಾರದ ಕೆಳಗೆ ಜೀತದಾಳಾಗಬಲ್ಲದೆಂಬುದನ್ನು ಕಾಣಬಹುದು.

ಇದೇ ರೀತಿ ಕುಂಜ ಮತ್ತು ಕಾವೇರಿಯರ ಮದುವೆ ಕೂಡ ಒಡೆಯರ ಹಂಗಿಗೆ ಒಳಗಾಗಿದೆ. ಆಳು ಮಕ್ಕಳ ಮದುವೆ, ಬದುಕು ನಿರ್ಧಾರವಾಗುವುದು ಜಮೀನ್ದಾರರುಗಳಿಂದ. ಗೌಡರುಗಳ ಮನೆಯ ಹೆಂಗಸರ ಸ್ಥಿತಿಯೂ ಆಳುಗಳ ಮನೆಯ ಹೆಂಗಸರ ಸ್ಥಿತಿಯೂ ಅಂಥಾ ಬೇರೆಯೇನೂ ಅಲ್ಲ. ಕುವೆಂಪು, ಬಿಳುಮನೆ ಇಬ್ಬರಲ್ಲೂ ಹೆಣ್ಣು ಕೇವಲ ದುಡಿಮೆಯ ಇಲ್ಲವೆ ಲೈಂಗಿಕ ಉಪಕರಣವಾಗಿ ಮಾತ್ರ ಕಾಣುತ್ತಾಳೆ. ಮಾತಾಡಿದರೆ ಸಾಕು, ಗಂಡನಿಂದ ಒದೆ ತಿನ್ನುವ, ಸಂಘರ್ಷರಹಿತ ಶರಣಾಗತಿಯೇ ಇಲ್ಲಿನ ಹೆಣ್ಣಿನ ಸ್ಥಿತಿ. ಇಬ್ಬರಲ್ಲೂ ಹೆಗ್ಗಡತಿಯಾಗಿ , ಯಜಮಾನಿಯಾದವಳಿಗೆ ಮಾತ್ರ ಸ್ವಲ್ಪ ಸ್ವಾತಂತ್ರ್ಯವಿರುತ್ತದೆ. ಮಿಕ್ಕಂತೆ ಹೆಣ್ಣು ಗುಲಾಮಳೇ.

ರೂಢಿಯ ಭದ್ರತೆ :

ಬಿಳುಮನೆಯವರ ಕಾದಂಬರಿಗಳು ಕಾದಂಬರಿಯ ರೂಢಿಗತ ಸ್ವರೂಪವನ್ನು ಅನುಕರಿಸುವುದಿಲ್ಲ. ಅವು ತಮ್ಮದೇ ಆದ ನಿರೂಪಣೆ, ಘಟನಾವಳಿಗಳನ್ನು ಒಳಗೊಂಡಿವೆ. ಮಲೆನಾಡಿನ ವಾಸ್ತವ ಬದುಕಿನ ಚಿತ್ರಣ ಇವುಗಳ ಮೂಲೋದ್ದೇಶ. ಯಾವುದೇ ತಾತ್ವಿಕ ಸಾಂಸ್ಕೃತಿಕ ಚಿಂತನೆ ಇಲ್ಲಿ ಆನುಷಂಗಿಕ. 'ವ್ಯಾಮೋಹ'ದಲ್ಲಿ ಒಂದು ಮಹತ್ವದ ಹೊಸತನವಿದೆ. ಅದು ಕಾದಂಬರಿಗಿರಬಹುದಾದ ಲಕ್ಷಣಗಳನ್ನು ಮುರಿದು ತನ್ನದೇ ಆದ ಒಂದು ಹೊಸ ಸಂಪ್ರದಾಯಕ್ಕೆ ಬಗ್ಗಿದಂತೆ ಕಾಣುತ್ತದೆ. ನಾಯಕ, ನಾಯಕಿ, ತಾತ್ವಿಕತೆ, ಕಥಾಕೇಂದ್ರ ಇವ್ಯಾವೂ ಪ್ರಾಧಾನ್ಯತೆ ಪಡೆಯದ ಸಹಜ ಬದುಕಿನ ಮಲೆನಾಡಿನ ತುಣುಕೊಂದನ್ನು ಚಿತ್ರಿಸಲು ಇಲ್ಲಿ ಯತ್ನಿಸಲಾಗಿದೆ. ಬಿಳು ಮನೆಯವರ ಇತರ ಕಾದಂಬರಿಗಳಿಗೂ ಸರಿಸುಮಾರಾಗಿ ಈ ಮಾತನ್ನು ಅನ್ವಯಿಸಬಹುದು. ಕತೆಗಳು ಧಾಟಿಯಲ್ಲಿ ಕಾದಂಬರಿಗಳಂತಲ್ಲ. ಇವು ಪ್ರಗತಿಶೀಲ ಧಾಟಿಯ ಜನಪ್ರಿಯ ಮಾದರಿಯವು. ಥಣ್ಣಗೆ ಹರಿಯುವ ನದಿಯಹಾಗೆ ಇವರ ಕಾದಂಬರಿಗಳು ಇದ್ದರೆ ಪ್ರತ್ಯೇಕಿಸಲ್ಪಟ್ಟ ಚಿಕ್ಕ ಚಿಕ್ಕ ಹೊಂಡಗಳಂತೆ ಕತೆಗಳಿವೆ.

ಓದುಗುಣ ಮತ್ತು ಯಾನ:

ಇವರ ಬಹುತೇಕ ಎಲ್ಲ ಕತೆ, ಪ್ರಬಂಧ, ಕಾದಂಬರಿಗಳಲ್ಲೂ ಓದುಗನನ್ನು ಸೆಳೆದು ಓದಿಸಿಕೊಳ್ಳುವ ಗುಣ ಇದೆ. 'ವ್ಯಾಮೋಹ'ವೊಂದು ಅಪವಾದ. ಕತೆ ಸಾಗುವುದೇ ಇಲ್ಲ ಎಂಬಷ್ಟು ನಿಧಾನ. (ಅದರ ಮುದ್ರಣ ವಿನ್ಯಾಸ ಮತ್ತು ಅಕ್ಷರಗಳ ಗಾತ್ರವೂ ಇದಕ್ಕೆ ಕಾರಣವಿರಬಹುದು) ಇವರ ಪ್ರಬಂಧ ಮತ್ತು ಕಾದಂಬರಿಗಳಲ್ಲಿ ಅಪ್ಪಟ ಮಲೆನಾಡಿನ ಒಂದು ಯಾನ ದೊರೆಯುತ್ತದೆ. ಮಲೆನಾಡಿಗನಲ್ಲದ ಓದುಗನೊಬ್ಬ ಅಕ್ಷರಗಳಲ್ಲಿ ಇಲ್ಲಿ ಮಲೆನಾಡಿನ ಜನಜೀವನವನ್ನು ಕಾಣಬಹುದು. ಈ ಓದುಗುಣ ಮತ್ತು ಯಾನ ಸಾಧ್ಯತೆ ಬಿಳುಮನೆ ಕಥನದ ಮುಖ್ಯ ಲಕ್ಷಣವಾಗಿದೆ.

ಬಿಳುಮನೆಯವರಿಗೆ ಈಗ ೬೦ ವರ್ಷಗಳು ತುಂಬಿವೆ. ಇವರಿಗೆ ೬೦ ತುಂಬಿದ ಸಂದರ್ಭಕ್ಕೆ ಈ ಲೇಖನ ಬರೆಯಲಾಗಿದೆ. ಇವರ ತಲೆಯಲ್ಲಿ ಇನ್ನಷ್ಟು ಕತೆಗಳಿವೆ. ಅವುಗಳೆಲ್ಲ ಆಕೃತಿಗಿಳಿದರೆ ಈ ಲೇಖನದ ಮಾತುಗಳಿಗೆ ಇನ್ನೂ ಭಿನ್ನ ತಿರುವುಗಳು ಸಿಗಬಹುದು. ಹಾಗಾಗಲೆಂದೇ ಹಾರೈಸೋಣ.

✤ **ಟಿ. ರಾಮಲಿಂಗಪ್ಪ ಟಿ. ಬೇಗೂರು,** ನಂ. ೨೨೬/೨, ೨ನೇ ಬ್ಲಾಕ್, ೨ನೇ ಮೈನ್, ಬೈರಪ್ಪ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು-೨೮.

ಬೌದ್ಧಿಕ ವಿಲಾಸದಾಚೆಗಿನ ದೇಸೀ ಕಾವ್ಯ

- ಜಿ. ವಿ. ಆನಂದಮೂರ್ತಿ

ಮರುಜೇವಣಿ : ಎಸ್.ಜಿ. ಸಿದ್ಧರಾಮಯ್ಯ

೨೦೦೦: ಬೆಲೆ : ೪೦ ರೂ.ಗಳು.

ಶುಭದ ಪ್ರಕಾಶನ , 'ಅಣ್ಣನ ಮನೆ', ಜರಗನಹಳ್ಳಿ,

ಜೆ.ಪಿ. ನಗರ, ಬೆಂಗಳೂರು - ೫೬೦ ೦೭೮.

ಈಚಿನ ದಿನಗಳಲ್ಲಿ ಬಂದಿರುವ 'ಮರು ಜೇವಣಿ ' ಎಸ್.ಜಿ. ಸಿದ್ಧರಾಮಯ್ಯನವರ ಕವನ ಸಂಕಲನ. ನವ್ಯದ ಏಕಾಕಿತನ, ಅಂತರ್ಮುಖತೆ, ವ್ಯಕ್ತಿನಿಷ್ಠತೆಗಳು ಮೆರೆಯುತ್ತಿದ್ದ ಸೊಕ್ಕಿನ ದಿನಗಳಿಂದ ಕಾವ್ಯ ರಚನೆಯನ್ನು ಆರಂಭಿಸಿ ಬಂಡಾಯದ ಬಹಿರಂಗದ ಅಬ್ಬರದ ಅಗ್ನಿಕೊಂಡವನ್ನು ಮೌನವಾಗಿ ಹಾದು ಬಂದವರು ಸಿದ್ಧರಾಮಯ್ಯ. ಈ ಎರಡೂ ಮಾರ್ಗಗಳನ್ನು ಕ್ರಮಿಸಿ ಬಂದರೂ ತಮ್ಮದೇ ಆದ ಸ್ವಂತಿಕೆಯ ಮಾರ್ಗದ ಹುಡುಕಾಟದಲ್ಲಿರುವ ಕವಿ. ಬಹುಮುಖೀ ದೇಸೀ ಸಂಸ್ಕೃತಿಗಳ ಮಣ್ಣು ಮಡಿಕೆಗಳಲ್ಲಿರುವ ಒಗರು ಭಾಷೆ, ಕೃಷಿ ಕಾಯಕದ ನುಡಿಗಟ್ಟಿನ ಜೀವದ್ರವ್ಯಗಳು ಸಿದ್ಧರಾಮಯ್ಯನವರ ಕಾವ್ಯದ ವಿಶಾಲ ಆವರಣದಲ್ಲಿ ಮೈ ಪಡೆದು, ಗ್ರಾಮ ಸಂಸ್ಕೃತಿಯ ಒಳ ಮೊರಗುಗಳನ್ನು ಅನಾವರಣಗೊಳಿಸುತ್ತ, ತಾವೇ ಕವಿತೆಗಳಾಗಿ ಬಿಡುತ್ತವೆ. ಇಂದಿನ ಇತರ ಕವಿಗಳಲ್ಲಿ ವಿರಳವಾಗುತ್ತಿರುವ ಈ ಬಗೆಯ ಪ್ರಾದೇಶಿಕ ಭಾಷೆಯ ಒಳ ವಿನ್ಯಾಸ , ಸಿದ್ಧರಾಮ್ಯಯನವರ ಕವಿತೆಗಳಿಗೆ ಒಂದು ಪ್ರಭಾವಳಿಯನ್ನೇ ನಿರ್ಮಿಸಿದೆ.

ಗ್ರಾಮೀಣ ಜಗತ್ತಿನ ಚೈತನ್ಯವೇ ಸಿದ್ಧರಾಮಯ್ಯನವರ ಕವಿತೆಗಳನ್ನು ನಿರಂತರವಾಗಿ ಕೈ ಹಿಡಿದು ನಡೆಸಿವೆ. ಇವರ ಕವಿತೆಗಳಲ್ಲಿ ಮನುಷ್ಯ ಕುಟುಂಬ - ಗ್ರಾಮೀಣ ಸಮಾಜ - ಕೃಷಿ - ಪ್ರಕೃತಿ - ಚರಿತ್ರೆ - ಪುರಾಣಗಳ ನಡುವಿನ ಸಂಬಂಧಗಳು, ಪರಿಸರದ ಪ್ರತಿಮೆಗಳು ದೇಸಿ ಛಂದೋಲಯಗಳಲ್ಲಿ ರೂಪು ತಳೆದಿವೆ. ಆದರೆ ಇವೆಲ್ಲ ಕೇವಲ ಸೌಂದರ್ಯಾತ್ಮಕ ಅಭಿವ್ಯಕ್ತಿಯಾಗಷ್ಟೇ ಉಳಿದಿಲ್ಲ ! ಜೀವ ವೈವಿಧ್ಯತೆಗಳು, ಕೃಷಿ ವೈವಿಧ್ಯತೆ ಹಾಗೂ ಭಾಷಾ ವೈವಿಧ್ಯತೆಗಳನ್ನು ದಮನ ಮಾಡುತ್ತಿರುವ ಜಾಗತೀಕರಣದ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಈ ಕವಿತೆಗಳು ಒಂದು ವಿಶೇಷ ಚಾರಿತ್ರಿಕ ಮಹತ್ವದ ಸಂದರ್ಭದಲ್ಲಿ ಹುಟ್ಟು ಪಡೆಯುತ್ತಿವೆ ಎನ್ನುವುದೇ ಇವರ ಕವಿತೆಗಳಿಗೆ ಮಹತ್ವ ಒದಗಿಸಿದೆ. ಸಿದ್ಧರಾಮಯ್ಯನವರಿಗೆ ದೇಸೀ ಸಂಸ್ಕೃತಿಯ ಬಗೆಗೆ ಇರುವ ಅಕ್ಕರೆ ಕೇವಲ ಬೌದ್ಧಿಕ ವಿಲಾಸದಿಂದ ಬಂದದ್ದಲ್ಲ ! ಅದು ಅವರ ಜೀವನ ಕ್ರಮ ಮತ್ತು ಚಿಂತನಾ ಕ್ರಮಗಳಲ್ಲಿ ಹಾಸು ಹೊಕ್ಕಾಗಿರುವ ಭಾವನಾ ಪ್ರಪಂಚ.

'ಮರು ಜೇವಣಿ 'ಸಂಕಲನದ 'ಕುಲದೇವಿ' ದಟ್ಟ ಅರಣ್ಯದ ಬೇಡರ ಹುಡಗ ಏಕಲವ್ಯನ ದುರಂತವನ್ನು ಸಮಕಾಲೀನತೆಯ ಪ್ರಖರ ಬೆಳಕಿನಲ್ಲಿ ಪುನಸ್ಸೃಷ್ಟಿಸಿರುವ ಕವಿತೆ. ಸಾಧನೆಯ ಶಿಖರ

ತಲುಪಿದ ಏಕಲವ್ಯ ವೈದಿಕ ಗುರುಪರಂಪರೆಯ ಕ್ರೌರ್ಯಕ್ಕೆ ತುತ್ತಾಗಿ ದುರಂತಕ್ಕೆ ಒಳಗಾದವನು. ಈ ನಾಡಿನ ಎಲ್ಲ ತಬ್ಬಲಿ ಹಾಗು ಅಪಮಾನ, ಅಭದ್ರತೆಯ ನೆರಳಿನಲ್ಲಿ ಬದುಕುವ ಜನಾಂಗಗಳ ಪ್ರತಿನಿಧಿಯಾದ ಏಕಲವ್ಯನನ್ನು ಕುರಿತಾದ ಕವಿತೆ. ಏಕಲವ್ಯನ ತಾಯಿಯ ಭಾವನಾತ್ಮಕ ಮೊರೆತದಿಂದ ಆರಂಭವಾಗುವ ಕವಿತೆ, ಗುರುವಿನ ನೀಚತನಕ್ಕೆ ಬಲಿಯಾಗಿ ಹೆಬ್ಬೆರಳು ಕಳೆದುಕೊಂಡ ತನ್ನ ಮುಗ್ಧ ಮಗನ ಸ್ಥಿತಿಗಾಗಿ ಮರುಗುವ ಆರ್ತನಾದದ ಪ್ರಾರ್ಥನೆಯಿಂದ ಮುಗಿಯುತ್ತದೆ.

ಅವರಪ್ಪ ಅವನಜ್ಜ ಅಜ್ಜನಜ್ಜನ ಸಾಲು
ಒಬ್ಬರೊಬ್ಬರ ಮೀರಿಸಿದ ಬಿಲ್ಲುಗಾರರೆ ಎಲ್ಲ
ಬಳಿ ಸಾಲಿನಲ್ಲಿ ಇವರೆಲ್ಲರನು ಮೀರಿಸಿದ
ಎದೆಗಾರ ನನಕಂದ....

ನಾಡ ನಡುವಿನ ಕೇಡು ಮರುಳು
ಮಾಡಿತು ಹೇಗೆ ನನ್ನೊಡಲ ಕುಡಿಯ ?
ಕರುಳ ಸಂಕಟವೆಲ್ಲ ಕಾಡೊಡಲ ಉರಿಯಾಗಿ
ಹೊಟ್ಟೆಕಿಚ್ಚಿನ ಕರುಳ ಸುಟ್ಟು ಹಾಕಲಿ ಶಿವನೆ....

ಎಲ್ಲಿರುವೆ ನನ್ನವ್ವೆ
ಮರುಜೇವಣಿ ಅಡ್ಡಿಕೆಯೇ
ಅಡ್ಡದಾರಿಗೆ ಬಿದ್ದ ಕರುಳ ಕಾಯುವ ಅರಿವೇ.....

ತಾಯಿಯ ಅಂತಃಕರಣದ ಈ ವಿಷಾದ ಪ್ರಾರ್ಥನೆ ಏಕಲವ್ಯನನ್ನು ಒಳಗೊಂಡು ವೈದಿಕ ಪರಂಪರೆಯ ವ್ಯವಸ್ಥಿತ ಕ್ರೌರ್ಯಕ್ಕೆ ಒಳಗಾದ ಇಂತಹ ಸಾವಿರದ ಪ್ರತಿಭೆಗಳಿಗಾಗಿ, ಸಮಷ್ಟಿಯ ಹಿತಕ್ಕಾಗಿ, ರಾಜಕಾರಣದ ಪಾವಿತ್ರ್ಯತೆಗಾಗಿ ತುಡಿಯುತ್ತದೆ. ಹಾಗೆಯೇ ಕೇಂದ್ರೀಕೃತ ವ್ಯವಸ್ಥೆಯ ಹಿಂಸೆ, ನಗರ ಸಂಸ್ಕೃತಿಯ ಕೇಡನ್ನು ಈ ಕವಿತೆ ಸೂಕ್ತ ನೆಲೆಗಳಲ್ಲಿ ಪ್ರತಿರೋಧಿಸುತ್ತದೆ.

ಕನ್ನಡದ ಸೃಜನಶೀಲ ಕಾವ್ಯ ಪ್ರಜ್ಞೆಯಂತೂ ಪ್ರತಿಭಾ ಸಂಪನ್ನ ಏಕಲವ್ಯನನ್ನು ಕುರಿತಾಗಿ ಮಹತ್ವದ ಕಾಣ್ಕೆಗಳನ್ನೇ ಕೊಟ್ಟಿದೆ. ಕುಮಾರವ್ಯಾಸ ತನ್ನ ಕಾವ್ಯದಲ್ಲಿ ರಾಜಸೂಯಾ ಯಾಗದ ಅಗ್ರ ಪೂಜೆಯನ್ನು "..... ಚಾಪಧರರೊಳಗೇಕಲವ್ಯ ನೃಪ" ನಿಗೇ ಸಲ್ಲಿಸಿ ಎಂದು ಹೇಳುತ್ತಾನೆ. ಇದೇ ಧಾರೆ ಮುಂದೆ ಕುವೆಂಪು, ಸುಜನಾ ಮೂಲಕ ಈಗ ಸಿದ್ಧರಾಮಯ್ಯನವರ ಸೃಜನಶೀಲತೆಯಲ್ಲಿ, ಏಕಲವ್ಯ ಅಸಾಧಾರಣ ಪ್ರತಿಭಾ ಸಂಪನ್ನನಾಗಿ ಮಾನವೀಯ ಗುಣಗಳಿಂದ ಮೂಡಿಬಂದಿದ್ದಾನೆ. ಹೀಗೆ 'ಕುಲದೇವಿ' ಕವಿತೆ ಪುರೋಹಿತಶಾಹಿ-ಪ್ರಭುತ್ವ-ನಗರದ ಕೇಡಿಗೆ ಬಲಿಯಾದ ದೇಸೀ ಪ್ರತಿಭೆಗಳ ದುರಂತವನ್ನು ತನ್ನ ವಿಶಿಷ್ಟ ಭಾಷಾಲಯಗಳ ಐಕ್ಯತೆಯಿಂದ ಧ್ವನಿಪೂರ್ಣವಾಗಿ ಪ್ರಕಟಿಸಿದೆ.

ಪ್ರೇಮರೂಪದ ಸೂಫಿ ಅನುಭಾವಿ 'ರಾಬಿಯಾ ' ಇದೇ ಸಂಕಲನದ ಇನ್ನೊಂದು ಮುಖ್ಯ ಕವಿತೆ. ಕಾಲದೇಶಗಳ ಗಡಿದಾಟಿ ನಮ್ಮ ಪ್ರಜ್ಞೆಯನ್ನು ಅಪರಿಸಿಕೊಳ್ಳುವ ಕವಿತೆ. ಸಮಕಾಲೀನ ಸಾಮಾಜಿಕ, ರಾಜಕೀಯದ ಸಣ್ಣತನಗಳನ್ನು, ಸಾಮ್ರಾಜ್ಯಶಾಹಿಯ ರಕ್ತದಾಹವನ್ನು ಪಾರದರ್ಶಕತೆಯ ಅನುಭಾವದ ಕಾಣ್ಕೆಯಲ್ಲಿ ಕಟ್ಟಿರುವ ಯಶಸ್ವಿ ಕವಿತೆ. ವೈಯಕ್ತಿಕ ತಲ್ಲಣಗಳನ್ನು ಮೀರಿ ಸಮಾಜಮುಖಿಯಾಗುವತ್ತ ಕವಿತೆ ಹರಿಯುತ್ತದೆ. ಇದೇ ನಿಟ್ಟಿನಲ್ಲಿ ಎಚ್.ಎಸ್. ಶಿವಪ್ರಕಾಶರು

ಚರಿತ್ರೆ-ಪುರಾಣ-ಅನುಭಾವದ ದರ್ಶನಗಳನ್ನು ಸಮಕಾಲೀನತೆಯ ಚೌಕಟ್ಟಿಗೆ ಎರಕಹುಯ್ದು ನಿರ್ಮಿಸಿರುವ ಅನನ್ಯ ಕಲೆಗಾರಿಕೆ ನಮ್ಮ ಸದ್ಯದ ಕಣ್ಣೆದುರಿಗಿದೆ. ಸಿದ್ದರಾಮಯ್ಯ ಕೂಡ ಇದೇ ದಾರಿಯನ್ನು ಕ್ರಮಿಸುತ್ತಿರುವ ಪಯಣಿಗ. ಹತ್ತನೆ ಶತಮಾನದ ಇರಾಕಿನ ಬಸ್ರಾ ಪಟ್ಟಣದಿಂದ ಆರಂಭವಾಗುವ ಈ ಕವಿತೆ, ಮನುಕುಲದ ಎಲ್ಲ ಕಾಲದ ಹಂಬಲ, ಕನಸು, ಪ್ರಾರ್ಥನೆಗಳನ್ನು ಹೊತ್ತು ಕನ್ನಡದ ತೀರದವರೆಗೆ ಪ್ರೇಮರೂಪದ ಗಂಗೆಯಾಗಿ ಹರಿದು ಬಂದಿದೆ.

ಪ್ರಭುತ್ವದ ಕ್ರೌರ್ಯ, ಹಸುಮಕ್ಕಳ ಆಸೆಗಣ್ಣಿನ ನೋಟ, ಸ್ವರ್ಗದ ಅಟ್ಟಹಾಸ, ನರಕದ ಮಡುಗಟ್ಟಿದ ರೋದನ ; ಹೀಗೆ ಕಣ್ಣೆದುರಿನ ಲೌಕಿಕದ ಎಲ್ಲ ಕಿಚ್ಚನ್ನು ನಂದಿಸಲು ಪ್ರೇಮರೂಪದ ರಾಬಿಯಾಳನ್ನು ಪವಿತ್ರ ಗಂಗಾದೇವಿಯ ರೂಪಕದಲ್ಲಿ ಕನ್ನಡದ ಕಾವ್ಯ ಸಮಾಜಕ್ಕೆ ತಂದಿದ್ದಾರೆ. ಈ ಕವಿತೆಯ ಪ್ರಾರ್ಥನೆಯು ವ್ಯಕ್ತಿನಿಷ್ಠೆಯ ಲಕ್ಷ್ಮಣರೇಖೆಯನ್ನು ದಾಟಿ ನಮ್ಮ ವಚನಗಳಲ್ಲಾಗುವಂತೆ ಸಮೂಹದ ಪ್ರಾರ್ಥನೆಯಾಗಿ ರೂಪಾಂತರಗೊಂಡಿದೆ.

ಮಧುರ ಚೆನ್ನರ 'ದೇವತಾ ಪೃಥಿವಿ' ಕವಿತೆಯೊಳಗಡೆ '... ಏಳಮ್ಮ ಮಲಗಿರುವ ತಾಯಿ ಪೃಥಿವೀ' ಎಂದು ಭೂಮಿಯನ್ನು ತಾಯಿ ಎಂದು ಕರೆಯಲಾಗಿದೆ. ಹಾಗೆಯೇ ನಮ್ಮ ಜನಪದ ಗೀತೆಗಳಲ್ಲಿ '.... ಎಳ್ಳು ಜೀರಿಗೆ ಬೆಳೆವಂಥ ಭೂಮಿ ತಾಯ ಎದ್ದೊಂದು ಗಳಿಗೆ ನೆನೆದೇನ ' ಎಂದು ಭೂಮಿಯನ್ನು ತಾಯಿ ಎಂದೇ ಕರೆಯಲಾಗಿದೆ. ಆದರೆ ನಮ್ಮ ಪರಂಪರೆಯುದ್ದಕ್ಕೂ ಬಂದ ಈ ಸಿದ್ಧ ಚೌಕಟ್ಟಿನ ಗ್ರಹಿಕೆಯನ್ನು ಮುರಿದು ಕಟ್ಟಿದ ಲಂಕೇಶರ 'ಅವ್ವ' ಕವಿತೆಯೊಳಗಡೆ 'ನನ್ನವ್ವ ಫಲವತ್ತಾದ ಕಪ್ಪುನೆಲ ' ಎಂದು ಪಲ್ಲಟಿಸಿ ತಾಯಿಯನ್ನು ಭೂಮಿ ಎಂದು ಕರೆಯಲಾಗಿದೆ. ಈ ಕವಿತೆಗಳಲ್ಲಿ ಮಾನವೀಯ ಅಂತಃಕರಣದ ತಾಯಿ ; ಆಕಾಶದ ಕೆಳಗಿನ ಎಲ್ಲ ಜೀವವೈವಿಧ್ಯತೆಗಳನ್ನೂ ತನ್ನೊಳಗೆ ಅಕ್ಕರೆಯಿಂದ ಪೊರೆಯುವ ಭೂಮಿಯ ದೈವಿಕ ಗುಣಗಳನ್ನು ಕುರಿತ ಉತ್ಕಟ ಆರಾಧನೆ ಇದೆ.

ಸಿದ್ದರಾಮಯ್ಯನವರ 'ಅವ್ವ ' ಕವಿತೆ ಕೂಡ ಇದೇ ಬಗೆಯ ಆರಾಧನೆಯಾಗಿದೆ.

ಹಸಿವು ಅವಮಾನಗಳ ಅಗ್ನಿಕುಂಡದ ಒಳಗೆ
ತಾಳಲಾರದು ಬಾಳು
ಹೇಳ ತೀರದ ಗೋಳು
ಹೇಗೆ ಮರೆಯಲಿ ಕಿಚ್ಚು ಅತ್ತು ಹಲವರಿದಿದ್ದು
ಎದೆ ಮೇಲೆ ಹರಿದಾಡಿ ಬೆವರಪದ ಹಾಡಿದ್ದು
ಇರುವೆಂಬತ್ತು ಕೋಟಿ ಜೀವ ಜಾಲದ ಬಳಗ
ನಿನ್ನೊಳಗೆ ಕಂಡದ್ದು ನೀನೆ ಅವು ಅಂದದ್ದು.

ನಮ್ಮ ಹಳ್ಳಿಗಾಡಿನ ಶ್ರಮಿಕ ಹಿನ್ನೆಲೆಯಿಂದ ಬಂದ ಯಾವುದೇ ಕವಿಗಳು ತಮ್ಮ ತಾಯಂದಿರನ್ನು ಕುರಿತು ಬರೆಯುವ ಕವಿತೆ ಶಬ್ದ-ಚಿತ್ರಗಳು ಧ್ವನ್ಯಾರ್ಥದಲ್ಲಿ ಇದೇ ಬಗೆಯ ಪ್ರಾಣಶಕ್ತಿ ಇರುವ ರೂಹುಗಳಾಗಿರುತ್ತವೆ. ಈ ಬಗೆಯ ಕವಿತೆಗಳ ನುಡಿಗಟ್ಟು, ವಿನ್ಯಾಸ, ಲಯ ಮುಂತಾದವುಗಳು ಕವಿಯಿಂದ ಕವಿಗೆ ಬೇರೆಯಾಗಿರಬಹುದು ! ಆದರೆ ಅವುಗಳ 'ಧ್ವನಿ' ಒಂದೇ ಬಗೆಯದು. ಲಂಕೇಶ, ಎಲ್. ಹನುಮಂತಯ್ಯ ಮತ್ತು ಸಿದ್ಧರಾಮಯ್ಯನವರ 'ಅವ್ವ' ಕವಿತೆಗಳು ಇದೇ ಸ್ವರೂಪದವು.

ಹೋದ ಬಾದೆಗಳಲ್ಲಿ ಬಯಲ ತಬ್ಬಿದ ಬೆಳಕು
ಅರಸಿದ್ದೆ ಅರಸಿದ್ದು ಎಲ್ಲಿತ್ತು ಆ ಬೆಳಕು
ಕಾಣುವಾ ಕಣ್ಣೊಳಗೊ
ಕಂಡ ವಸ್ತುವಿನೊಳಗೊ

ಆದರೆ ಇಲ್ಲಿ ಸಿದ್ಧರಾಮಯ್ಯನವರ ಕವಿತೆ ಮಾತ್ರ ವಸ್ತು ಪ್ರಪಂಚವನ್ನು ದಾಟಿ ತೆಳುವಾದ ಅನುಭಾವದ ಕಿರುಬೆಳಕಿನೆಡೆಗೆ ಆಕರ್ಷಿತವಾಗುತ್ತದೆ. ಗುರುವಿನ ನೆರವಿನಿಂದ ಪಡೆದ ಅನುಭಾವದ ಬೆಳಕನ್ನು ತನ್ನೊಳಗೆ ತುಂಬಿಕೊಳ್ಳಲು ಕವಿತೆ ಮನದೆರೆದು ಕೈ ಚಾಚುತ್ತದೆ.

ಕೃಷಿಯೇ ಆರ್ಥಿಕ ಉತ್ಪನ್ನವಾಗಿರುವ ಗ್ರಾಮೀಣ ಸಮಾಜದಲ್ಲಿ ಶ್ರಮಿಕರಿಗೆ ತಕ್ಕ ದುಡಿಮೆಯ ಫಲ ಕೈ ಹತ್ತದಿರುವ ಬಗೆಗೆ (ಹಾಗೆ ನೋಡಿದರೆ ಇಂದಿನ ಬದಲಾದ ಮುಕ್ತ ಆರ್ಥಿಕ ವ್ಯವಸ್ಥೆಯಲ್ಲಿ ಜಮೀನ್ದಾರ ಮತ್ತು ಕೂಲಿಕಾರ ಇಬ್ಬರೂ ವ್ಯವಸ್ಥೆಯ ತೊತ್ತಳ ತುಳಿತಕ್ಕೆ ಸಿಕ್ಕಿ ಸಮಾನವಾಗಿ ನುಜ್ಜುಗುಜ್ಜಾದವರು. ಇಂದಿನ ಜಾಗತೀಕರಣ ಉದಾರೀಕರಣದ ವ್ಯಾಪಕ ದಾಳಿಗೆ ಮೊದಲು ಬಲಿಯಾಗಿರುವುದು ನಮ್ಮ ಕೃಷಿ ವ್ಯವಸ್ಥೆಯೆ. ಆದ್ದರಿಂದ ಜಮೀನ್ದಾರ, ಕೃಷಿ ಕಾರ್ಮಿಕ ಎಂದು ಗೆರೆ ಎಳೆದು ವರ್ಗ ಹೋರಾಟದ ಸ್ವರೂಪವನ್ನು ನಿರ್ಧರಿಸಲು ಇದ್ದ ಬಲವಾದ ತಾತ್ವಿಕ ನೆಲೆ ಇಂದು ಮಸುಕಾಗುತ್ತಿದೆ) ಕುಲಾಂತರಿ ಬೀಜಗಳ ವಹಿವಾಟು, ದೇಶೀ ತಳಿಗಳ ವಿನಾಶ, ಶೋಷಕರ ಪರವಾದ ಮಾರುಕಟ್ಟೆ ವ್ಯವಸ್ಥೆಯ ಬಗೆಗೆ ಇಲ್ಲಿನ ಕೆಲವು ಕವಿತೆಗಳು ತಾತ್ವಿಕ ಚಿಂತನೆಯನ್ನು ನಡೆಸುತ್ತವೆ.

ಹಾರಕ ನವಣೆ ಬರಗು ಸಾವೆ ಕರೆ ಬಳಗದ ನೋವೆ.
ಅಕ್ಕಡಿ ಅಕ್ಕಡಿ ಸಾಲ ಸೆರಗಲಿ ಹುಚ್ಚೆಳ್ಳಿನ ಹೂವೆ
ಬಂಗದ ಬೀಳಿನ ಸಂಗದ ಜಲವೇ....
.....ಎಲ್ಲಿಂದ ಬಂತೋ ಯಾನಾಡಿ ತಂತೊ
ಕಿತ್ತರು ಸುಟ್ಟರು ರಕ್ತ ಬೀಜ ಶೂಲಿ

ಈ ಬಗೆಯ ಕವಿತೆಗಳಲ್ಲಿ ಕವಿ ಕೇವಲ ನಿರೂಪಕನಾಗಿರದೆ ಕೃಷಿ ಸಂಸ್ಕೃತಿಯ ಒಂದು ಭಾಗವೇ ಆಗಿರುವುದೂ ಕೂಡ, ಈ ಕವಿತೆಗಳಿಗೆ ಇನ್ನಷ್ಟು ಅಧಿಕೃತತೆ ಒದಗಿದೆ. ಈ ಸಂಕಲನದಲ್ಲಿರುವ ಈ ಬಗೆಯ ಕವಿತೆಗಳೆಲ್ಲ ಅಸಂಘಟಿತ ಕೃಷಿ ವ್ಯವಸ್ಥೆಯಲ್ಲಿ ಜಾಗತೀಕರಣದಂತಹ ಅಮೂರ್ತ ದೈತ್ಯ ಶಕ್ತಿಯ ಕೈಯಲ್ಲಿ ಸಿಲುಕಿ ಆತ್ಮಹತ್ಯೆಯ ದಾರಿ ಹಿಡಿದಿರುವ ಬೇಸಾಯಗಾರರ ಪ್ರತಿಭಟನೆಯ ಮೆಲುದನಿಗಳನ್ನು ತಣ್ಣಗಿನ ರೂಪಕಗಳಲ್ಲಿ ಹೇಳುತ್ತವೆ. ಈ ಅರ್ಥದಲ್ಲಿ ಈ ಕವಿತೆಗಳು ಗಾಂಧಿ ಚಿಂತನೆಯಂತೆ 'ನಗರಗಳು ಗ್ರಾಮ ಜೀವನದ ಜೀವ ಪೋಷಕವಾಗಿ ಸೇವೆ ಸಲ್ಲಿಸುವಂತಿರಬೇಕು" ಎಂಬ ಕಾಣ್ಕೆಯನ್ನು ಮನದಾಳದಲ್ಲಿ ಹೊಂದಿವೆ.

ಕುಲಾಂತರಿಗಳ ಕೋಟಲೆಯಲ್ಲಿ
ಕುಲಮೂಲದ ಸೆಲೆ ಕಣ್ಮರೆಯಾದೋ
ಮಾನವ ಬಾಂಬಿನ ಮೋದಕದಲ್ಲಿ
ನೆಲದಾಳದ ಜಲ ಬತ್ತಿಹೋದೋ

ಸಿದ್ಧರಾಮಯ್ಯನವರ ಕವಿತೆಗಳಲ್ಲಿ ಕರಗಿರುವ ಮತ್ತೊಂದು ಸಂಗತಿ ಎಂದರೆ ; ಗ್ರಾಮ ಪರವಾದ ಪರಿಸರ ಕಾಳಜಿ. ಆಧುನಿಕ ಪರಿಕಲ್ಪನೆಯ ಈ ಶಬ್ದ ರೂಕ್ಷವಾಗಿ ಇವರ ಕವಿತೆಗಳಲ್ಲಿ ಬಳಕೆಯಾಗಿಲ್ಲ. ಹಳ್ಳಿಗಾಡಿನ ಬದುಕು, ಅಲ್ಲಿನ ಮರವಳಿ, ಹೊಲ - ಗದ್ದೆ, ತೋಟ - ತುಡಿಕೆ , ಬೇಸಾಯ, ಜಲಸಂಪತ್ತು, ಗುಟ್ಟೆಗಳು, ಪಾರಂಪರಿಕ ಕೃಷಿ ಮುಂತಾದವುಗಳೆಲ್ಲ ಸಜೀವವಾಗಿ ತನ್ನೆಲ್ಲ ಲಯಗಾರಿಕೆಯೊಡನೆ ಇವರ ಕವಿತೆಗಳಲ್ಲಿ ಸಂಯೋಜನೆಗೊಂಡಿವೆ. ಇದರಿಂದಾಗಿಯೇ ಇವರ ಕವಿತೆಗಳ ಪ್ರಜ್ಞೆಯಲ್ಲಿ ಪರಿಸರ ಪ್ರೀತಿಯು ಸಾಮಾಜಿಕ ನ್ಯಾಯದ ಕಾಳಜಿಯೊಡನೆ ಬೆಸೆದುಕೊಂಡಿರುತ್ತದೆ. ನಿತ್ಯ ಜೀವಂತಿಕೆಯ ಪಂಚಭೂತಗಳನ್ನೂ ಒಳಗೊಂಡ ಪರಿಸರದ ವಿನಾಶವು ಮನುಕುಲದ ಬದುಕನ್ನು ಕಡು ಸಂಕಷ್ಟಕ್ಕೆ ತಳ್ಳುತ್ತದೆ ಎನ್ನುವ ಅರಿವಿನೊಂದಿಗೆ ಈ ಸಂಕಲನ ಕವಿತೆಗಳು ಹೃದಯಹೀನ ಆಧುನಿಕತೆಯನ್ನು ನೈತಿಕ ತೀವ್ರತೆಯಿಂದ ಪ್ರತಿಭಟಿಸುತ್ತವೆ.

ಸಿದ್ಧರಾಮಯ್ಯನವರ ಕವಿತೆಗಳಲ್ಲಿ ಕುಟುಂಬವೂ ಕೂಡ ತನ್ನ ಮುಖ್ಯ ಪಾಲನ್ನು ಪಡೆದುಕೊಂಡಿದೆ. ಕೂಡುಕುಟುಂಬದಲ್ಲಿದ್ದ ಸಮೃದ್ಧ ದಿನಗಳ ಕನವರಿಕೆ , ಅಲ್ಲಿನ ಸಂಕೀರ್ಣ ಸಂಬಂಧಗಳು, ವಿಘಟನೆಗಳು ಇವೆಲ್ಲವೂ ಕೂಡ ಮೋಹನ ಮುರಳಿಯ ರೂಪಕದೊಂದಿಗೆ ಪ್ರಕಟವಾಗಿವೆ. ಕೈಗಾರಿಕೀಕರಣ ಮತ್ತು ನಗರೀಕರಣದ ಅವಳೀ ದೈತ್ಯ ಶಕ್ತಿಗಳು ಸೃಷ್ಟಿಸುವ ಹುಸಿ ಮೌಲ್ಯಗಳ ಕಾಲವು ನಮ್ಮ ಸಮಾಜದಲ್ಲಿ ನೈತಿಕತೆಯಿಂದ ಕೂಡಿದ ಮಾನವೀಯ ಸಂಬಂಧಗಳನ್ನು ವಿಷಮಯವನ್ನಾಗಿ ಮಾಡುತ್ತದೆ ಎನ್ನುವ ಅರಿವು ಇವರ ಕವಿತೆಗಳಲ್ಲಿ ಸೂಚ್ಯವಾಗಿ ವಿನ್ಯಾಸಗೊಂಡಿದೆ. ಈ ಅರ್ಥದಲ್ಲೇ ಸಿದ್ಧರಾಮಯ್ಯನವರ ಕವಿತೆಗಳ ಆತ್ಮ ಗ್ರಾಮವೇ ಆಗಿದೆ.

ಸಿದ್ಧರಾಮಯ್ಯನವರ ಕವಿತೆಯೊಂದು 'ಕಣ್ಣುಮುಚ್ಚಿದರೂ ಇರಿಯುವ ನೋಟಗಳಿಗೆ ಉತ್ತರಗಳನ್ನೆಲ್ಲಿ ಹುಡುಕಲಿ ತಂದೆ !' ಎಂದು ಆರಂಭವಾಗುತ್ತದೆ. ಆತ್ಯಂತಿಕವಾಗಿ ನಮ್ಮ ಕಾಲದ ಎಲ್ಲ ಸೃಜನಶೀಲ ಲೇಖಕರ ಸಾಂಸ್ಕೃತಿಕ ಅನುಭವದ ಹುಡುಕಾಟವೇ ಇದು. ಸಿದ್ಧರಾಮಯ್ಯನವರೂ ಕೂಡ ಈ ಹುಡುಕಾಟಕ್ಕಾಗಿ ಚರಿತ್ರೆ, ಪುರಾಣವಸ್ತುಗಳಿಗೆ ಮೊರೆ ಹೋಗುತ್ತಾರೆ. ಈ ಬಗೆಯ ಕಾರಣಗಳಿಂದಾಗಿಯೇ ಇವರ ಕಾವ್ಯವನ್ನು ಕೇವಲ ಶುದ್ಧಾಂಗ ಕಾವ್ಯವನ್ನಾಗಿ ಗ್ರಹಿಸಲಾಗದು ! ಬದಲಿಗೆ ಮಾನವೀಯ ಸಂಬಂಧಗಳ; ಜೀವಪರವಾದ ಮೌಲ್ಯಗಳ ಅಂಗವಾಗಿರುವ ಗ್ರಾಮೀಣ ಸಂಸ್ಕೃತಿಯನ್ನು ಒಳಗೊಂಡಿರುವ ವೈವಿಧ್ಯಮಯ ಲೋಕಗಳನ್ನು ಭಾವನಾತ್ಮಕ ಐಕ್ಯತೆಯಿಂದ ಗ್ರಹಿಸಬಹುದಾಗಿದೆ.

ಈ ಅರ್ಥದಲ್ಲಿ ಸಿದ್ಧರಾಮ್ಯಯನವರ ಒಟ್ಟು ಕಾವ್ಯಲೋಕದ ಚಿತ್ರದ ರೂಹನ್ನು ಕಡೆಯಲು ಈ ಬಗೆಯ ವಿವಿಧ ಘಟಕಗಳ ಅಧ್ಯಯನವು ಸಹಾಯ ಮಾಡುತ್ತದೆ.

❑

✤ ಜಿ.ವಿ. ಆನಂದಮೂರ್ತಿ, ಅಧ್ಯಾಪಕ,
ವಾಟರ್ ಟ್ಯಾಂಕ್ ಹಿಂಭಾಗ, ವಿದ್ಯಾನಗರ, ತುಮಕೂರು ೫೭೨ ೧೦೩

ಲೇಖಕರಿಗೆ ವಿನಂತಿ

ಅಕಾಡೆಮಿಯ ತ್ರೈಮಾಸಿಕ ಪತ್ರಿಕೆ 'ಅನಿಕೇತನ'ದ ಸ್ವರೂಪದಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರಬೇಕೆಂಬ ಹಂಬಲವನ್ನು ತಾವು ಈ ಸಂಚಿಕೆಯ ಮೂಲಕ ಗಮನಿಸಬಹುದಾಗಿದೆ. ಕನ್ನಡದ ಶ್ರೇಷ್ಠ ಲೇಖಕರನ್ನೆಲ್ಲ ಒಳಗೊಳ್ಳುವಂತೆಯೂ ಹಾಗೂ ಹೊಸ ಸಂವಾದ, ಸಂವೇದನೆಗಳ ಶಕ್ತ ವೇದಿಕೆಯಾಗಿ ಪತ್ರಿಕೆ ಗಂಭೀರ ಸಾಹಿತ್ಯ ಚಿಂತನೆಗಳ ಅಭಿವ್ಯಕ್ತಿಯಾಗಿ ರೂಪುಗೊಳ್ಳಬೇಕೆಂಬುದೂ ನಮ್ಮ ಆಶಯವಾಗಿದೆ. ಕನ್ನಡದ ಹಿರಿಯ ಹಾಗೂ ಭರವಸೆಯ ಹೊಸ ಪೀಳಿಗೆಯ ಲೇಖಕರೆಲ್ಲರ ಭಾಗವಹಿಸುವಿಕೆಯೇ ಪತ್ರಿಕೆಗೆ ಜೀವದ್ರವ್ಯವಾದ್ದರಿಂದ ತಮ್ಮ ಅತ್ಯಮೂಲ್ಯ ಸಹಕಾರ ಅತ್ಯಗತ್ಯ.

ಅನ್ಯಭಾಷೆಯ ಶ್ರೇಷ್ಠ ಬರಹಗಳ ಅನುವಾದದೊಂದಿಗೆ, ಸ್ವತಂತ್ರ ಬರಹಗಳನ್ನು ಆಹ್ವಾನಿಸುತ್ತಿದ್ದೇವೆ. 'ಅನಿಕೇತನ'ಕ್ಕಾಗಿ ಕವಿತೆ/ಕಥೆ/ಕಿರುನಾಟಕ/ವಿಮರ್ಶಾತ್ಮಕ/ ವೈಚಾರಿಕ ಲೇಖನ/ಪ್ರಬಂಧ/ ಸಾಂಸ್ಕೃತಿಕ ಚಿಂತನೆ ಹಾಗೂ ಅನುವಾದಗಳನ್ನು ಕಳುಹಿಸಿಕೊಡುವುದರ ಮೂಲಕ ನಮ್ಮ ಪ್ರಯತ್ನಕ್ಕೆ ಸಹಕರಿಸಬೇಕೆಂದು ಕೋರುತ್ತಿದ್ದೇವೆ. ದಯವಿಟ್ಟು ಬರೆಯಿರಿ. ಪತ್ರಿಕೆಗೆ ಹೊಸ ರೂಪ ಕೊಡಬೇಕೆಂಬ ಪ್ರಯತ್ನಗಳು ನಮ್ಮೊಂದಿಗೆ ಸದಾ ನೀವಿರುತ್ತೀರೆಂಬುದೇ ನಮ್ಮ ಧೈರ್ಯ ಹಾಗೂ ವಿಶ್ವಾಸ.

ಅನುವಾದಗಳಾದರೆ ಮೂಲ ಲೇಖಕರ ಹೆಸರು, ವಿಳಾಸ, ಮೂಲ ಬರಹದ ಭಾಷೆಯ ವಿವರ ಅಗತ್ಯ. ಅನುಮತಿ ಪತ್ರದ ಜೆರಾಕ್ಸ್ ಪ್ರತಿ ಜೊತೆಯಲ್ಲಿರುವುದು ಅಪೇಕ್ಷಣೀಯ. ಬರವಣಿಗೆ ಹಾಳೆಯ ಒಂದೇ ಮಗ್ಗುಲಲ್ಲಿದ್ದು, ಸ್ಫುಟವಾಗಿ, ಓದಲು ಅನುಕೂಲವಾಗುವಂತಿರಲಿ.

ಬರಹಗಳನ್ನು ಕಳುಹಿಸಬೇಕಾದ ವಿಳಾಸ

ಸಂಪಾದಕರು, 'ಅನಿಕೇತನ', ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨

-ಸಂಪಾದಕರು

ಅರೆಬೆತ್ತಲೆ - ಅನಾಗರಿಕ

ಆದಿ ಮಾನವನೊಬ್ಬ
ಅವನೆಸೆದ ಕಲ್ಲು - ಅದು
ಎದುರಾಳಿಯ ತಲೆಯೊಡೆದು
ರಕ್ತ ಚಿಮ್ಮಿಸಿತು
ಆದರೆ, ಅದಷ್ಟಕ್ಕೆ ಆ ಕಲ್ಲು
ಆಮೇಲೆ ನೆಲಕ್ಕೆ ಬೀಳಲಿಲ್ಲ
ಹಾರಿಹೋಯಿತು - ಹಾಗೇ
ಕ್ಷಿತಿಜದಂಚನು ತಾಗಿ
ಸುಮ್ಮನದು ಮಾಯವಾಯಿತು



ಎಂದು ತಿಳಿಯಬೇಡ
ಅದು ಬಾಣವಾಯಿತು-ಮುಂದೆ
ಕತ್ತಿಯಾಯಿತು-ಕೋವಿಯಾಯಿತು
ಸಿಡಿಗುಂಡು-ಬಾಂಬು-ಗೋಲಿಯಾಯಿತು ನೋಡು
ಒಂದು ಭಾವದ ಹಾಗೆ-ಒಂದು ಚಿಂತೆಯ ಹಾಗೆ
ನಿಲ್ಲದೆಯೆ ಹಾರಿತ್ತು ಅದು, ಹಾಗೇನೆ
ಮುಂದೆ ಆಗುವ ತನಕ-ಆಟಂಬಾಂಬು...

■ ಅಲಿ ಕರೀಂ

Registration No. 45646/88 Price : 15/-